ಜೂನ್ 1998 ಪರಿಸರ ವಿಶೇಷ ರೂ. 10

ಐ.ಎ.ಎಸ್.
ಯಶಸ್ಸಿನ ಸೂತ್ರ

ಬಿಸಿಲ ಬದುಕು

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

ೀರು
ಮಗೆಷ್ಟು
ಗೊತ್ತು?

ಂತಾನ
ರೋಧ
ಧಾನ

ಪರಿಸರ ರಕ್ಷಣೆ
ನಮ್ಮೆಲ್ಲರ
ಹೊಣೆ

ಅವಿವೇಕದ
ಅಣುಪರೀಕ್ಷೆ!



ಮೇ ೧೯೯೮ ಸಂಪುಟ ೧ ಸಂಚಿಕೆ ೧೨

ಬಿಸಿಲ ಬದುಕು ಮಾಸಪತ್ರಿಕೆ

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

ಸಂಪಾದಕ
ಚಂದ್ರಕಾಂತ ವಡ್ಡು

ಸಂಪಾದಕೀಯ ನೆರವು.
ಎಚ್.ಎಂ. ಪಂಡಿತಾರಾಧ್ಯ

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ವೈ.ಬಿ. ವಿಜಯಕುಮಾರ

ಅಕ್ಷರ ಜೋಡಣೆ
ಜಿ. ಸುರೇಶ್
ಕೋಕಿಲ

ಲೇಖಕರು :

ಸ್ವಾಮಿ ಅಗ್ನಿವೇಶ್
ಮಾಧವ ಐತಾಳ್
ಎಂ. ಮೊಹ್ಮದ್ ಬಾಪ ಗೂಳ್ಯಂ
ನಾರಾಯಣ ಎಂ. ಭಟ್
ಡಾ. ಸುನಂದಾ ಕುಲಕರ್ಣಿ
ಉತ್ತನೂರು ವ್ಯಾನ್ಸ್
ಕೋ. ಚೆನ್ನಬಸಪ್ಪ
ಡಾ. ಎಸ್.ಸಿ. ಶರ್ಮಾ
ಉಷಾ ನವರತ್ನರಾಮ್
ಡಾ. ಆರತಿ ವೆಂಕಟೇಶ್
ಡಾ. ಹೆಚ್. ಚಂದ್ರಶೇಖರ
ಹುಳಿಯಾರು ಕಿರಣ್
ಡಾ. ವಸುಂಧರ ಭೂಪತಿ
ಹೆಚ್. ದಂಡಪ್ಪ
ಚಂದ್ರಗೌಡ ಕುಲಕರ್ಣಿ
ಮಲ್ಲಿಕಾರ್ಜುನ ಕುಂಬಾರ
ಶಂಕರಗೌಡ ವೈ. ಪಾಟೀಲ
ಗುರುರಾಜ ಬೆಣಕಲ್

ಮುಖಪುಟ ವಿನ್ಯಾಸ
ಚಂದ್ರಶೇಖರ ಗುಬ್ಬಿ

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ: 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Fax : 080 5091136 Pager : 9622 738638 Printed at M.N.S. Enterprises, Bhattarahalli, Old Madras Road, Bangalore - 49 Editor : Chandrakanta Vaddu

ಚಂದಾದಾರರಿಗೆ ವಿಶೇಷ ಸೂಚನೆ

ಬಿಸಿಲ ಬದುಕು ಮಾಸಪತ್ರಿಕೆಯನ್ನು ಆರಂಭದಿಂದಲೇ [ಅಂದರೆ ಜುಲೈ 97ರ ಸಂಚಿಕೆಯಿಂದ] ತರಿಸಿಕೊಳ್ಳುತ್ತಿರುವ ವಾರ್ಷಿಕ ಚಂದಾದಾರರ ಚಂದಾ ಅವಧಿ ಈ ಸಂಚಿಕೆಯೊಂದಿಗೆ ಮುಗಿಯುತ್ತದೆ.

ಇಂಥ ಚಂದಾದಾರರು ಈ ಬಾರಿ ತಮ್ಮ ಚಂದಾ ನವೀಕರಿಸಲು ಎಂದಿನಂತೆ ವಾರ್ಷಿಕ ಚಂದಾ ಹಣವಾದ 120 ರೂ. ಕಳಿಸಬೇಕಾಗಿಲ್ಲ. ಹಾಲಿ ಚಂದಾದಾರರಿಗೆ ವಿಶೇಷ ರಿಯಾಯಿತಿ ನೀಡಲು ನಿರ್ಧರಿಸಿರುವುದರಿಂದ **ಈ ಬಾರಿ ರೂ. 100ನ್ನು ಎಂ.ಓ. ಅಥವಾ ಅಂಕುರ ಪ್ರಕಾಶನದ ಹೆಸರಿನಲ್ಲಿ ಡಿ.ಡಿ. ಮೂಲಕ ಕಳಿಸಿದರೆ ಸಾಕು;** ಒಂದು ವರ್ಷ ಕಾಲ 'ಬದುಕು' ನಿಮ್ಮ ಮನೆ ಬಾಗಿಲಿಗೆ ಬಂದು ಬೀಳುತ್ತದೆ.

ಈ ರಿಯಾಯಿತಿ ಹೊಸದಾಗಿ ಚಂದಾದಾರರಾಗುವವರಿಗೆ ಅನ್ವಯವಾಗುವುದಿಲ್ಲ.

ಇದು ಹಳೆಯ ಚಂದಾದಾರರಿಗೆ ಮಾತ್ರ ನೀಡಿದ ವಿಶೇಷ ಸೌಲಭ್ಯ ಎಂಬುದನ್ನು ದಯವಿಟ್ಟು ಗಮನಿಸಿ.

ಡಿ.ಡಿ. ಅಥವಾ ಎಂ.ಓ. ಕಳಿಸಬೇಕಾದ ವಿಳಾಸ:

ಬಿಸಿಲ ಬದುಕು

ಮಾಸ ಪತ್ರಿಕೆ

ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ: 7951

ಬಸವೇಶ್ವರ ನಗರ, ಬೆಂಗಳೂರು - 560 079

✆ 080-3307810

ಟಪಾಲು

ಒಂದು ಪತ್ರ

'ಬಿಸಿಲ ಬದುಕು' ಮಾಸಿಕದ ಪ್ರತಿ ಸಂಚಿಕೆ ಓದುತ್ತಾ ಬಂದಿದ್ದೇನೆ. ಬಹಳ ಉಪಯುಕ್ತ ರೀತಿಯಲ್ಲಿ ಹೊರ ಬರುತ್ತಿದೆ. ಇತರ ನಿಯತಕಾಲಿಕೆಗಳಿಗಿಂತ ಭಿನ್ನವೂ ಆಗಿದೆ.

ಭಾರೀ ಬಂಡವಾಳ ಹೂಡುವ ಶಕ್ತಿ ಇರುವವರು ಮಾತ್ರ ಪತ್ರಿಕಾರಂಗದಲ್ಲಿ ಗೆಲ್ಲುವ ದಿನಗಳಿವು. ಬಲು ದುಬಾರಿ ವ್ಯವಹಾರ. 'ಸಾಹಿತ್ಯಸೇವೆ'ಯ ಹಣೆಪಟ್ಟಿ ಹೊತ್ತು ನಡೆಸುವ ವ್ಯಾಪಾರ. ನಿಮ್ಮಂತಹ ಮಧ್ಯಮ ವರ್ಗೀಯ (ಬಡತನದ ನಡುವೆಯೇ ಎದ್ದು ಬಂದ ಪ್ರತಿಭಾ ಕುಡಿ) ಹೊಸ ಪತ್ರಿಕೆಯೊಂದನ್ನು ಹೊರಡಿಸುತ್ತೇನೆಂದಾಗ, ಒಂದು ಬಗೆಯ ಗುಮಾನಿಯಿಂದಲೇ ಎಲ್ಲವನ್ನೂ ಗಮನಿಸುತ್ತಾ, ಶುಭ ಹಾರೈಕೆಯ 'ಸಂಪ್ರದಾಯ' ಪೂರೈಸಿದವರೇ ಅಧಿಕ. ಹುಲಿಯಂತೆ ಘರ್ಜಿಸುತ್ತಾ ಹುಟ್ಟಿ, ಮತ್ತೆ ಇಲಿಯಂತೆ ಸಾಯುವ ಪತ್ರಿಕೆಗಳಿಗೇನೂ ಕೊರತೆ ಇಲ್ಲ. ಯಾಕೆಂದರೆ ಇದು ರಿಸ್ಕೀ ಫೀಲ್ಡ್. ವಿಚಿತ್ರ ಜಾಲ; ಬಿಡಿಸಿಕೊಳ್ಳಲಾಗದ ಗಾಳ; ಸುತ್ತ ಮುತ್ತ ಹೊಂಚುಹಾಕುವ ಮಾರ್ಜಾಲ; ಬಿದ್ದಾಗ ಆಳಿಗೊಂದು ಕಲ್ಲು ತೂರುವವರಿಗೆ ಬೆಂಗಳೂರಿನಲ್ಲೇನೂ ಬರಗಾಲವಿಲ್ಲ.

ಆಶ್ಚರ್ಯದ ಸಂಗತಿ ಎಂದರೆ ನೀವು ಅಸದೃಶವಾದುದನ್ನು ಸಾಧಿಸಿದ್ದೀರಿ ಮತ್ತು ಮಾಹಿತಿಗಾಗಿ ಮೊರೆ ಹೋಗುವವರ ತೃಷೆ ಹಿಂಗಿಸುವಲ್ಲಿ ಅದ್ಭುತ ರೀತಿಯಲ್ಲಿ ಗೆದ್ದಿದ್ದೀರಿ.

ನಿಮ್ಮ ಪರಿಶ್ರಮ, ಪರದಾಟ, ನಿಟ್ಟುಸಿರು, ನಿದ್ರಾರಹಿತ ರಾತ್ರಿಗಳು, ನೋವಿನ ಕ್ಷಣಗಳು, ಆರ್ಥಿಕ ಅಡಚಣೆಗಳು.. ಎಲ್ಲವನ್ನು ನಾನು ಊಹಿಸಬಲ್ಲೆ. ಎಲ್ಲವನ್ನೂ ನುಂಗಿಕೊಂಡು 'ಬಿಸಿಲ ಬದುಕ'ನ್ನು ರೂಪಿಸುತ್ತಿರುವ ಅದ್ಭುತ ರೂವಾರಿಗೆ ಗೌರವದಿಂದ ತಲೆಬಾಗುತ್ತೇನೆ. ನಯವಾದ ಕಾಗದದಲ್ಲಿ ವರ್ಣ ಚಿತ್ರಗಳು ಬರುವಂತಾದರೆ ಚೆನ್ನಾಗಿತ್ತು. ಆದರೆ ಅದು ಬಲು ದುಬಾರಿ (ಹಾಗೂ ಅಪಾಯಕಾರಿ) ಯೋಜನೆ ಎಂಬುದೂ ಗೊತ್ತು. ಕ್ರಮೇಣ ಅದು ಸಾಧ್ಯವಾಗಲಿ ಎಂದು ಹಾರೈಸುತ್ತೇನೆ.

ದೊಡ್ಡ ಪತ್ರಿಕೆಗಳು ಕೆಲವೊಮ್ಮೆ 'ಗೌರವಧನ' ಕಳಿಸುವುದಿಲ್ಲ. 'ಗೌರವ ಪ್ರತಿ' ಕಳಿಸುವ ಸೌಜನ್ಯವೂ ಇರುವುದಿಲ್ಲ. 'ಶೋಷಣೆ'ಯ ಬಗೆಗೆ ಉಗ್ರ-ಅಗ್ರ ಲೇಖನ ಬರೆಯುತ್ತಲೇ ಇರುತ್ತಾರೆ. ಆದರೆ ಇಷ್ಟೆಲ್ಲಾ ಅಡಚಣೆಗಳ ನಡುವೆಯೂ ನೀವು ಕ್ಲುಪ್ತಕಾಲದಲ್ಲಿ ನನ್ನ ಕೆಲವು ಪ್ರಕಟಿತ ಬರಹಗಳಿಗೆ ಗೌರವಧನ ನೀಡಿರುತ್ತೀರಿ. ಇತರ ಲೇಖಕ ಗೆಳೆಯರೂ ಇದನ್ನು ನನ್ನ ಬಳಿ ಪ್ರೀತಿಯಿಂದ, ಅಭಿಮಾನದಿಂದ ಹೇಳುತ್ತಿರುತ್ತಾರೆ. ನೆಲದ ನೋವನ್ನು ಅರಿತ ಹುಡುಗ ಆದರ್ಶದ ಬಗೆಗೆ ಬೊಗಳೆ ಬಿಡುವುದಿಲ್ಲ. ಅದನ್ನು ಕೃತಿಗಿಳಿಸುತ್ತಾನೆ. ಸುಳ್ಳೇ?

-ಆರೂರು ಲಕ್ಷ್ಮಣ್ ಶೇಟ್, ಹುಬ್ಬಳ್ಳಿ

ಉಪಯುಕ್ತ

ಆಕರ್ಷಕ ಮುಖಪುಟದೊಂದಿಗೆ ಬಂದ ಮೇ ತಿಂಗಳ 'ಬದುಕು' ತುಂಬಾ ಉಪಯುಕ್ತವಾಗಿತ್ತು. 'ಸಿಝೇರಿಯನ್ ಶಸ್ತ್ರ ಚಿಕಿತ್ಸೆ ಬೇಕೆ? ಏಕೆ?' 'ಪಾಕಿಸ್ತಾನದ ಕ್ಷಿಪಣಿ ಘೋರಿ', 'ಅನಾರೋಗ್ಯದ ಮೂಲ ಆಲಸ್ಯ' ಲೇಖನಗಳು ಹಿಡಿಸಿದವು.

-ಎಂ. ಸಿದ್ದು, ಮಂಗಳೂರು

ನಾನರಿಯೆ

ಮೇ ಸಂಚಿಕೆಯ ಟಪಾಲು ವಿಭಾಗದಲ್ಲಿ ಬಳಗಾನೂರಿನ ಮ.ಶಿ. ನಿಂಬರಗಿಯವರು ಉಗಾದಿ ವಿಶೇಷಾಂಕದಲ್ಲಿ ಪ್ರಕಟವಾದ ನನ್ನ ಸಂಗ್ರಹ ಬರಹ 'ಸಮಯ ಪ್ರಜ್ಞೆಯ ಬಗ್ಗೆ ಟೀಕೆ ವ್ಯಕ್ತಪಡಿಸಿದ್ದಾರೆ. ನನಗೆ ತಿಳಿದ ಮಟ್ಟಿಗೆ ಈ ಘಟನೆ ಸರ್ ಎಂ. ವಿ. ಯವರ ಜೀವನದಲ್ಲಿ ನಡೆದದ್ದು ಎಂದು ಹೇಳಬಲ್ಲೆ (ನಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಓದಿದ ನೆನಪು). ಸುಭಾಷ್‌ಚಂದ್ರ ಬೋಸ್‌ರ ಜೀವನದಲ್ಲಿ ನಡೆದಿದೆಯೋ ಇಲ್ಲವೋ ನಾನರಿಯೆ. ಈ ಬಗೆಗೆ 'ಕಸ್ತೂರಿ'ಯಲ್ಲಿ ಬರೆದ ಸ್ವರ್ಣಮಾ ಅವರನ್ನೇ ಕೇಳಲಿ.

- ಶಂಕರಗೌಡ ವೈ. ಪಾಟೀಲ, ಬಾದಾಮಿ.

ಕನಸು ಕಂಡಿರಲಿಲ್ಲ

'ಬದುಕು' ಉಗಾದಿ ವಿಶೇಷಾಂಕ ಇಷ್ಟು ಸಮೃದ್ಧವಾಗಿ ಮೂಡಿಬರುವುದೆಂದು ನಾನು ಕನಸಲ್ಲೂ ಕಂಡಿರಲಿಲ್ಲ. ಅನಂತ ಧನ್ಯವಾದಗಳು

-ಪಿ. ಎಚ್. ದಯಾನಂದ, ಹೊನ್ನಾವರ.

ಸಹಕರಿಸಲು ಸಿದ್ಧ

ಪತ್ರಿಕೆ ಸರ್ವಾಂಗ ಸುಂದರವಾಗಿ ಮೂಡಿ ಬರುತ್ತಲಿದೆ, ಸಂತಸ. ಯಾವ ಗೋಜು-ಗೊಂದಲವಿಲ್ಲದೆ ಮುನ್ನಡೆಸುತ್ತಿರುವುದು ಹೆಮ್ಮೆಯ ವಿಷಯ. ನನ್ನಿಂದಾಗುವ ಸಹಕಾರ ನೀಡಲು ಸಿದ್ಧ.

- 'ಸಿಸು' ಸಂಗಮೇಶ, ಬಿಜಾಪುರ.

ಖಾಯಂ ಓದುಗ

ಸ್ನೇಹಿತರ ಮನೆಯಲ್ಲಿ ಅಕಸ್ಮಾತ್ ಆಗಿ 'ಬದುಕು' ಓದುವ ಅವಕಾಶ ಸಿಕ್ಕಿತು. ಹೆಸರೇ ವಿಚಿತ್ರವಾಗಿದೆಯಲ್ಲಾ ಎಂದುಕೊಳ್ಳುತ್ತಾ ಓದತೊಡಗಿದೆ. ಓದುತ್ತ ಹೋದಂತೆ ಬಿಡಲು ಮನಸ್ಸಾಗಲಿಲ್ಲ. ಎಲ್ಲ ವರ್ಗದ, ಎಲ್ಲಾ ಪ್ರಕಾರದ, ಎಲ್ಲ ವಯಸ್ಸಿನವರು ಓದಬೇಕಾದ ಪುಸ್ತಕ ಎನಿಸಿತು. ಈಗ ನಾನು 'ಬದುಕು' ಪತ್ರಿಕೆಯ ಖಾಯಂ ಓದುಗ.

- ಎಚ್. ಸಿ. ಅಶೋಕಶೆಟ್ಟಿ, ರಟ್ಟಿಹಳ್ಳಿ.

ಕುಂವೀ, ಚಂಪಾ

ವಿಶೇಷಾಂಕ ತುಂಬಾ ಆಕರ್ಷಕವಾಗಿ ಬಂದಿದೆ. ಮುಖಪುಟಕ್ಕೆ ಆರಿಸಿದ ಚೆಲುವೆಗಿಂತ ಆಕೆಯ ಸೀರೆಯ ಸೊಬಗು ಚೆನ್ನಾಗಿದೆ. 'ಸ್ವಯಂ ಸಂದರ್ಶನ' ಒಂದು

W ಮಹಾತ್ಮೆ

ಮೇ ಸಂಚಿಕೆಯ ೩೧ ನೇ ಪುಟದಲ್ಲಿ [ಕ್ಲಾಸ್ ರೂಂ] ಪ್ರಕಟವಾದ W ಮಹಾತ್ಮೆ ಕುರಿತು ಈ ಪತ್ರ. ಅದು Cow ಗೆ ಮುಂದೆ ಹಾಗೂ Woman ಗೆ ಹಿಂದೆ W ಇರುತ್ತೆ. ಎಂದಾಗಬೇಕಲ್ಲವೇ?

-ಆರ್.ಎಸ್. ಕುರಳೆ, ಗಜೇಂದ್ರಗಡ

ಆಭಾರಿ

ನಾನು ಬರೆದ 'ಜೆ. ಎಸ್. ಎಸ್. ಅಂಗವಿಕಲರ ಪಾಲಿಟೆಕ್ನಿಕ್ ಲೇಖನ ಪ್ರಕಟಿಸಿದ್ದಕ್ಕಾಗಿ ನಾನು ಆಭಾರಿ. ಈ ಲೇಖನ ಓದಿದ ಅನೇಕ ವಿದ್ಯಾರ್ಥಿಗಳು ಪ್ರವೇಶಾವಕಾಶದ ವಿವರ ಕೋರಿ ಪತ್ರ ಬರೆಯುತ್ತಿದ್ದಾರೆ. ಈ ಲೇಖನದಿಂದ ಅಂಗವಿಕಲ ವಿದ್ಯಾರ್ಥಿ ಸಮುದಾಯಕ್ಕೆ ಸಹಾಯವಾಗಿರುವುದು.

- ಕೆ.ಲೀಲಾವತಿ, ಮೈಸೂರು.

ಸತ್ತ ಡಿ.ಸಿ

'ಸತ್ತ ಡಿ.ಸಿ. ಮತ್ತೆ ಹುಟ್ಟಿ ಬಂದ ಕಥೆ!' ಓದಿ ತುಂಬಾ ಕುತೂಹಲ ಕೆರಳಿದೆ. ಆಸಕ್ತರು ತನಿಖೆ ನಡೆಸಿ ಅನುಮಾನಗಳನ್ನು ಪರಿಹರಿಸಲಿ.

- ಎಸ್. ಎಂ. ನಾಗರಾಜ, ಶಿರಿಗೇರಿ.

ಮುಖಪುಟದಲ್ಲಿ ಚೆನ್ನಾದ ನಟಿಯರ ಚಿತ್ರ ಪ್ರಕಟಿಸುವಿರಿ. ಆದರೆ ಯಾವ ನಟಿ ಅನ್ನೋದೇ ಗೊತ್ತಾಗಲ್ಲ. ದಯವಿಟ್ಟು ಇನ್ನು ಮುಂದೆ ಮುಖಪುಟದ ಚಿತ್ರ ಯಾರದು ಅನ್ನೋದು ಒಳಗೆ ಬರೆಯಿರಿ.

- ರೇಣುಕಾ, ಹೊನ್ನಾವರ.

ಹೊಸ ಪ್ರಯೋಗ. ಕುಂವೀ, ಚಂಪಾ ತಮ್ಮ ಅಂತ ರಂಗವನ್ನು ಪ್ರಾಮಾಣಿಕವಾಗಿ ಬಿಚ್ಚಿಕೊಂಡಿದ್ದಾರೆ. ಚಳ್ಳಕೆರೆಯಲ್ಲಿ 'ಬದುಕು' ಸಿಗದ್ದರಿಂದ ಮೂರು ತಿಂಗಳಿನಿಂದ ಓದಿರಲಿಲ್ಲ. ರಜೆಗೆಂದು ಧಾರವಾಡಕ್ಕೆ ಹೋಗುವ ಮಾರ್ಗದಲ್ಲಿ ರಾಣೆಬೆನ್ನೂರಿನಲ್ಲಿ ವಿಶೇಷಾಂಕ ಕೊಂಡೆ. ಏನ್ರೀ ಸಂಪಾದಕರೇ, ಮಾರ್ಚ್ ಸಂಚಿಕೆಯಲ್ಲಿ ನನ್ನ 'ಎರಡು ಹನಿ' ಪ್ರಕಟವಾಗಿವೆಯಂತೆ! ಮಿತ್ರರು ಪತ್ರ ಬರೆದು ತಿಳಿಸಿದರು. ಒಂದು ಗೌರವ ಪ್ರತಿ ಕಳಿಸಬಾರದೇ?

-ಪರಮೇಶ್ವರ ಎಸ್. ಕುದರಿ, ಚಳ್ಳಕೆರೆ

[ಪ್ರತಿಯೊಬ್ಬ 'ಬದುಕು' ಬರಹಗಾರರಿಗೂ ತಪ್ಪದೇ ಗೌರವಪ್ರತಿ ಕಳಿಸುತ್ತೇವೆ. ಅಂಚೆ ಅವಾಂತರದಿಂದ ಕೆಲವೊಮ್ಮೆ ಪ್ರತಿ ಮಾಯವಾಗುವುದುಂಟು. - ಸಂ]

ಪತ್ರಿಕೆ ಬರುತ್ತಿದೆಯೋ?

'ಬದುಕು' ಪ್ರತಿ ತಿಂಗಳು ಬಿಡುಗಡೆಯಾಗುತ್ತಿದೆಯೇ? ಇಲ್ಲವೇ? ಸ್ಪಷ್ಟವಾಗಿ ತಿಳಿಸಿ. ಹಾಗೂ ಈ ಪತ್ರಿಕೆಗೆ ಹಿರಿಯೂರಿನಲ್ಲಿ ಏಜೆಂಟರು ಇದ್ದಾರೆಯೇ ಇಲ್ಲವೋ? ಏಕೆಂದರೆ ನನಗೆ ಇಲ್ಲಿ ಪತ್ರಿಕೆ ದೊರೆಯುತ್ತಿಲ್ಲ. ಆದ್ದರಿಂದ ನೊಂದು ಬೇಜಾರು ಮಾಡಿಕೊಂಡು ಈ ಪತ್ರ ಬರೆಯುತ್ತಿದ್ದೇನೆ. ಪತ್ರಿಕೆಗೆ ಚಂದಾದಾರನಾಗಲು ಏನುಮಾಡಬೇಕು ತಿಳಿಸಿ.

-ಕೆ. ಮೂಡಲಗಿರಿ, ಗೌನಹಳ್ಳಿ

[ಕೆಲವೆಡೆ ಪ್ರಾಮಾಣಿಕ ಏಜೆಂಟರ ಕೊರತೆಯಿಂದ ಹೀಗಾಗಿದೆ. ನಿಮಗಾದ ಅನಾನುಕೂಲಕ್ಕೆ ವಿಷಾದಿಸುತ್ತೇವೆ. ಮುಂಬರುವ ದಿನಗಳಲ್ಲಿ ನಮ್ಮ ಏಜೆನ್ಸಿ ಜಾಲವನ್ನು ಕರ್ನಾಟಕದ ಮೂಲೆ ಮೂಲೆಗೂ ವಿಸ್ತರಿಸಲಿದ್ದೇವೆ. ನೀವು ರೂ. ೧೨೦ ನ್ನು ಎಂ. ಓ ಮೂಲಕ ಕಳಿಸಿ ಚಂದಾದಾರರಾದರೆ ಪತ್ರಿಕೆಯನ್ನು ಒಂದು ವರ್ಷ ಕಾಲ ಅಂಚೆ ಮೂಲಕ ನಿಮ್ಮ ಮನೆಗೆ ಕಳಿಸಲಾಗುವುದು. - ಸಂ]

'ಬದುಕು' ಹೊರತಲ್ಲ!

ಬೇರೆ ಪತ್ರಿಕೆಯ ಅರ್ಥ ವ್ಯತ್ಯಾಸವಿರುವ ಸಾಲುಗಳನ್ನು ಪ್ರಕಟಿಸುವ ನಿಮ್ಮ ಪತ್ರಿಕೆಯಲ್ಲಿ ಗಂಡು ಹೆಣ್ಣಾಗಿ, ಹೆಣ್ಣು ಗಂಡಾಗಿ ತುಂಬಾ ರಂಜಿಸಿದವು (ಮಾರ್ಚ್ ಸಂಚಿಕೆ, ಪುಟ ೩೬). ಅಲ್ಲದೆ ಎಂ. ಸಿ. ಮೆಟಗುಡ್‌ರ ಭಾವಚಿತ್ರ ಹಾಗೂ ಹನಿಗವನದ ಚಿತ್ರಗಳು ಅದಲು ಬದಲಾಗಿವೆ (ಪುಟ. ೩೪). ದಯವಿಟ್ಟು ಹೀಗಾಗದಂತೆ ನೋಡಿಕೊಳ್ಳಿರಿ.

-ಬಸವರಾಜ ಚ. ಶಾಬಾದಿ, ಮೋರಟಗಿ.

'ಮನೆ' ಯಾವಾಗ?

ರೀ..... ಮನೆ ಬೇಗನೆ ಬಿಡುಗಡೆ ಮಾಡುತ್ತೀರೋ ಇಲ್ಲವೋ? 'ಮನೆ' ಖರೀದಿಸಲು ನನ್ನೂರಿನಿಂದ ರಾಯಚೂರಿಗೆ ಹೋಗಿ ೫೦ ರೂಪಾಯಿ ಕಳೆದುಕೊಂಡು ನಿರಾಶಳಾಗಿ ಬಂದಿದ್ದೇನೆ. 'ಬದುಕು' ಖಾಯಂ ಓದುಗಳಾದ ನನಗೆ ಮನೆ ನೋಡುವ ತವಕ, ಕಾತರ. ಬೇಗ ಮಾರುಕಟ್ಟೆಗೆ ಕಳಿಸಿ.

-ಸ್ಫೂರ್ತಿ ಚೆಟ್ಟದೂರು, ಕಪಗಲ್.

ಸಂತಸದ ಮೇಲೆ ಸಂತಸ

ಕತೆಗೆ ಬಹುಮಾನ ಬರೋದಕ್ಕಿಂತ ಅದು ಪ್ರಕಟವಾಗಿ ಜನಮನ್ನಣೆಯನ್ನು ಗಳಿಸುವಲ್ಲಿ ಯಶಸ್ವಿಯಾದರೆ ಅದಕ್ಕಿಂತ ಸಂತಸದ ವಿಷಯ ಲೇಖಕನಿಗೆ ಬೇರೊಂದಿಲ್ಲ. ಅದರೊಂದಿಗೆ ನೀವು ಪ್ರತ್ಯೇಕವಾಗಿ ನಮ್ಮ ಭಾವಚಿತ್ರ, ವಿಳಾಸವನ್ನು ಪ್ರಕಟಿಸಿ 'ಬಿಸಿಲ ಬದುಕು' ಓದುಗರಿಗೆ ನಾವು ಎದ್ದು ಕಾಣುವ ಹಾಗೆ ಮಾಡಿದ್ದಲ್ಲದೆ ಅವರು ತಮ್ಮ ಅಭಿಪ್ರಾಯವನ್ನು ನೇರವಾಗಿ ನಮಗೆ ತಿಳಿಸುವಂತೆ ಮಾಡಿದ್ದೀರಿ. ನಿಮ್ಮ ಈ ವಿಶೇಷ ಅಭಿಮಾನಕ್ಕೆ ಕೃತಜ್ಞತೆಗಳು.

-ಯು. ಆರ್. ಲಲಿತಾ, ಬೆಂಗಳೂರು.

ಅರ್ಥ - ಅಪಾರ್ಥ

ಈಶಾನ್ಯ **ದೇಶ**ಗಳ ಅಭಿವೃದ್ಧಿ : ಈಶಾನ್ಯ ರಾಜ್ಯಗಳ ತ್ವರಿತ ಅಭಿವೃದ್ಧಿಗಾಗಿ ಪ್ರತ್ಯೇಕ ನಿಧಿ ಸ್ಥಾಪಿಸುವ ಕೇಂದ್ರ ಸರ್ಕಾರದ ಆಲೋಚನೆ ಸ್ವಾಗತಾರ್ಹವಾದುದು.
[***ಪ್ರಜಾವಾಣಿ***, ಸಂಪಾದಕೀಯ, ೧೧.೫.೯೮] **- ಶ್ರೀಹರ್ಷ ಕೆ. ಎಸ್.**, ಸಸರವಳ್ಳಿ

ತ್ರಿಕೋಣ ಸರಣಿ: **ಅಪಾಯರ್** ಯಾದಿ ಬಿಡುಗಡೆ.
[***ಉದಯವಾಣಿ***, ೧೦.೫.೯೮] **- ಎಸ್. ಪ್ರಭಾಕರ್**, ತುಮರಿ

ಚರ್ಚೆ ವಿಫಲವಾದರೆ ಮುಖ್ಯಮಂತ್ರಿಗಳ ಮನೆಗೆ **ಮುಕ್ತಿಗೆ** : ಅಂಗನವಾಡಿಗಳ ಎಚ್ಚರಿಕೆ.
[***ಜನತಾ ವಾಣಿ***, ೩೦.೪.೯೮] **-ಜಿ. ಇಮ್ತಿಯಾಜ್**, ಹರಪನಹಳ್ಳಿ

ಹಸಿ ರಹಿತ ಮತ ಪತ್ರಗಳು : ನಿನ್ನೆ ನಡೆದ ಮತ ಎಣಿಕೆ ಕಾರ್ಯದ ಸಮಯದಲ್ಲಿ ಮತಗಟ್ಟೆ ಅಧಿಕಾರಿಗಳ ಸಹಿ ರಹಿತ ಮತಪತ್ರಗಳು ಮುಂಬೈ ಲೋಕಸಭೆ ಕ್ಷೇತ್ರದ ಮತಗಟ್ಟೆಯಲ್ಲಿ ದೊರೆತಿವೆ.
[***ಸಂಜೆ ವಾಣಿ***, ೪.೩.೯೮] **- ಶಿವಪ್ಪ ಹುರಳಿಹಾಳ್**, ಅಡವಿಮಲ್ಲನಕೇರಿ.

ಉತ್ತಮ ಸಮಾಜ ನಿರ್ಮಾಣ ಕಾರ್ಯದಲ್ಲಿ ಶಿಕ್ಷಕರ, ವಿದ್ಯಾರ್ಥಿಗಳ ಹಾಗೂ ಪೋಷಕರ ಪಾತ್ರ **ಹಣನೀಯ** ಎಂದು ಜಿ. ಪಂ. ನ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷ ಹೆಚ್. ಬಿ.ರಾಮು ತಿಳಿಸಿದರು.

- ಕೆ. ಕೆಂಪಯ್ಯ, ಮಂಡ್ಯ.

ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರನ್ನು ಭೇಟಿ ಮಾಡಿ ಅರ್ಧ ತಾಸು ಕಾಲ ಚರ್ಚಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಮುಲಾಯಂ ಸಿಂಗ್ ಯಾದವ್.....
[***ಸಂಯುಕ್ತ ಕರ್ನಾಟಕ***, ೧೬.೩.೯೮]
- ನಾಗಪ್ಪ ಹಣಮಂತಗೋಳ, ಶಿಂದಿಕುರಬೇಟ

ಇದೊಂದು ಹೊಸ ಅಂಕಣ. ನೀವು ಓದುವ ದಿನಪತ್ರಿಕೆಗಳಲ್ಲಿ ವಾಕ್ಯದ ಅರ್ಥವನ್ನೇ ಕಳೆಯುವ ಇಂಥ ಹಲವು ಸಾಲುಗಳು ಆಗಾಗ ನುಸುಳುವುದುಂಟು. ಹೀಗೆ ಉಂಟಾಗುವ ದೋಷಗಳು ಮೇಲ್ನೋಟಕ್ಕೆ ತಮಾಷೆಯಾಗಿ ಕಂಡರೂ ಗಂಭೀರ ಪರಿಣಾಮ ಬೀರಬಲ್ಲವು. ಸ್ಥಳೀಯ ಪತ್ರಿಕೆಗಳಲ್ಲಿ, ರಾಜ್ಯ-ರಾಷ್ಟ್ರ ಮಟ್ಟದ ಪತ್ರಿಕೆಗಳಲ್ಲಿ ಇಂಥ ದೋಷಗಳನ್ನು ಹುಡುಕಿ ನಮಗೆ ಕಳಿಸಿಕೊಡಿ. ನಿಮ್ಮ ಹೆಸರಿನೊಂದಿಗೆ ಪ್ರಕಟಿಸಲಾಗುವುದು. ನೀವು ದೋಷ ಗಮನಿಸಿದ ಪತ್ರಿಕೆಯ ಅರ್ಥಾಂತರವಾದ ಭಾಗವನ್ನು ಕತ್ತರಿಸಿ ಕಳಿಸುವುದು ಅತ್ಯಗತ್ಯ. ಪತ್ರಿಕೆಯ ಹೆಸರು, ದಿನಾಂಕವೂ ಇರಬೇಕು. -ಸಂ.

ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ

○ ನಾರಾಯಣ ಎಂ. ಭಟ್

❑

ಜೂನ್ 5 ರಂದು ಪರಿಸರ ಸಂರಕ್ಷಣೆಯ ಮಾತು ಎಲ್ಲ ನಾಯಕರ ಹಾಗು ಮುಖಂಡರ ನಾಲಿಗೆ ಮೇಲೆ ಹರಿದಾಡುತ್ತದೆ. ಆದರೆ ಜನ ಸಾಮಾನ್ಯ ತನ್ನನ್ನು ಈ ಕಾರ್ಯದಲ್ಲಿ ತೊಡಗಿಸಿಕೊಳ್ಳದ ಹೊರತು 'ಪರಿಸರ ಸಂರಕ್ಷಣೆ' ಸಾಧ್ಯವಿಲ್ಲ. ಈ ಲೇಖನದಲ್ಲಿ ನಾವು-ನೀವೆಲ್ಲ ನಮ್ಮ ದೈನಂದಿನ ಜೀವನದಲ್ಲಿ ಮಾಡಬಹುದಾದ ಪರಿಸರಪರ ಕಾರ್ಯಗಳ ಬಗ್ಗೆ ತಿಳಿ ಹೇಳುವ ಪ್ರಯತ್ನ ಮಾಡಲಾಗಿದೆ.

❑

ಪರಿಸರ ಕುರಿತು ಕೊರೆಯುವುದು ಇವತ್ತಿನ ಫ್ಯಾಶನ್ ಆಗಿದೆ. ಆದರೆ, ಪರಿಸರಕ್ಕಾಗಿ ನೀವೇನು ಮಾಡುವಿರಿ? ಎಂದು ಕೇಳಿದರೆ, ಬರುವ ಉತ್ತರ ನಿರೀಕ್ಷಿತವೆ. ನಾನೇನು ಪರಿಸರ ವಿಜ್ಞಾನಿಯೇ? ನಾನು ಏನು ಮಾಡಬಲ್ಲೆ? ಅದೆಲ್ಲ ಸರಕಾರದ ಕೆಲಸ.... ಹೀಗೆ ಹಲವಾರು ಉತ್ತರಗಳು ಲಭ್ಯ.

ಆದರೆ, ನಮ್ಮಲ್ಲಿ ಪ್ರತಿಯೊಬ್ಬನೂ ಪರಿಸರ ಪ್ರೇಮಿಯಾಗುವ ಕೆಲಸವನ್ನು ಪ್ರತಿನಿತ್ಯ ಮಾಡುತ್ತಲೇ ಇರುತ್ತಾನೆ. ಆ ಬಗ್ಗೆ ನಿಮಗೆ ಗೊತ್ತೇ?

ಹೌದು, ನಾವು ಪ್ರತಿ ಬಾರಿ ರೂಮಿನಿಂದ ಹೊರ ನಡೆದಾಗ ಫ್ಯಾನ್ ಮತ್ತು ಲೈಟ್‌ನ ಸ್ವಿಚ್ ಆರಿಸಿದಾಗ, ಹಳೇ ಪೇಪರನ್ನು ರದ್ದಿಯವನಿಗೆ ಮಾರಿದಾಗ, ಪ್ಲಾಸ್ಟಿಕ್ ಬ್ಯಾಗಿನ ಬದಲಿಗೆ ಬಟ್ಟೆಯ ಚೀಲವನ್ನು ಉಪಯೋಗಿಸಿದಾಗ ಅಥವ ನಲ್ಲಿ ನೀರನ್ನು ಪೋಲು ಮಾಡದೇ ನಿಲ್ಲಿಸಿದಾಗ ನಾವೆಲ್ಲ ನಮಗೆ ಅರಿವಿಲ್ಲದಂತೆಯೇ 'ಪರಿಸರ ಪರ' ಕೆಲಸ ಮಾಡುತ್ತೇವೆ.

"Think global act local' ಎನ್ನುವುದು 'ಪರಿಸರ ಸಂರಕ್ಷಣೆಗೆ ಪಣ ತೊಡುವವರ ಮೂಲ ಮಂತ್ರವಾಗಬೇಕು. ಸ್ಥಳೀಯವಾಗಿ ಪರಿಸರದ ಬಗ್ಗೆ ಕಾಳಜಿ ತೋರುವುದು ಜನ ಸಾಮಾನ್ಯರಿಂದಲೇ ಆರಂಭವಾಗಬೇಕಿರುವ ಕೆಲಸ.

ಹಾಗಾದ್ರೆ ಬನ್ನಿ,'ಪರಿಸರ ಪ್ರೇಮಿ' ಯಾಗುವ ಕೆಲಸವನ್ನು ನಮ್ಮ ಮನೆಯಿಂದಲೇ ಆರಂಭಿಸೋಣ.

ಅಡುಗೆ ಮನೆಯಿಂದಲೇ ಆರಂಭಿಸಿ ಪರಿಸರ ಸಂರಕ್ಷಣೆ

ದೇಶದ ಒಟ್ಟು ಶಕ್ತಿ ಬಳಕೆಯ ಶೇ. 50 ರಷ್ಟು ಪಾಲು ನಮ್ಮ ಮನೆಯಲ್ಲಿ ಆಹಾರ ಬೇಯಿಸಲು ಉಪಯೋಗವಾಗುತ್ತದೆ ಎನ್ನುವುದು ನಿಮಗೆ ಗೊತ್ತೇ? ಹೀಗಾಗಿ, ಕಡಿಮೆ ಇಂಧನ ಬಳಕೆಯನ್ನು ಅಡಿಗೆ ಮನೆಯಿಂದಲೇ ಆರಂಭಿಸುವುದು ಸೂಕ್ತ. ಕಡಿಮೆ ಇಂಧನ ಬಳಸುವ ಕ್ರಮಗಳಿಂದ, ಅಡಿಗೆ ಬೇಯಿಸಲು ಬೇಕಾಗುವ ಕಟ್ಟಿಗೆ, ಉರುವಲುನಲ್ಲಿ ಉಳಿತಾಯ ಸಾಧ್ಯ. ಇದರಿಂದಾಗಿ ಮರಗಳನ್ನು ಕಡಿಯುವುದು ಕಮ್ಮಿಯಾಗುತ್ತದೆ. ಅಷ್ಟೇ ಅಲ್ಲ, ಸಗಣಿಯ ಪ್ರಮಾಣ ಭೂಮಿಗೆ ಪೆಟ್ಟಾಗಿ ಸೇರಿ ಮಣ್ಣಿನ ಫಲವತ್ತತೆಯು ವೃದ್ಧಿಸುತ್ತದೆ. ಮಿತವಾದ ಅಡಿಗೆ, ಗ್ಯಾಸ್‌ನ ಬಳಕೆಯಿಂದ ದೇಶಕ್ಕೆ ಇಂಧನ ಉಳಿತಾಯವಾಗುತ್ತದೆ. ದೇಶದ ಆರ್ಥಿಕ ಹೊರೆಯು ಕಮ್ಮಿಯಾಗುತ್ತದೆ.

ಇಲ್ಲಿ ಕೆಲವು ಸಲಹೆಗಳನ್ನು ನೀಡಲಾಗಿದೆ. ಇದರಿಂದ ಇಂಧನದ ಮಿತವ್ಯಯ ಸಾಧ್ಯವಾಗುತ್ತದೆ.

- ❑ ಬೇಯಿಸುವಾಗ ಪಾತ್ರೆಯ ಮೇಲೆ ಮುಚ್ಚಳ ಇರಿಸಿ. ಇದರಿಂದ ಪದಾರ್ಥಗಳು ಬೇಗ ಬೆಂದು ಇಂಧನ ಉಳಿತಾಯವಾಗುವುದು.
- ❑ ಹೆಚ್ಚು ಉರಿಯ ಮೇಲೆ ನಿರಂತರವಾಗಿ ಬೇಯಿಸಬೇಡಿ. ಕುದಿಯುವ ತಾಪಮಾನ ಬಂದ ಕೂಡಲೇ ಉರಿ ಕಮ್ಮಿಮಾಡಿ. ಇದರಿಂದ ನಿಮಗೆ ಶೇ. 40 ರಷ್ಟು ಇಂಧನ ಉಳಿಯುತ್ತದೆ.
- ❑ ಗ್ಯಾಸ್ ಬರ್ನರ್‌ಗಳಲ್ಲಿ ಚಿಕ್ಕದನ್ನು ಅಧಿಕ ಬಳಸಿ
- ❑ ಪ್ರೆಷರ್ ಕುಕ್ಕರ್‌ನ್ನು ಬಳಸಿ
- ❑ ಅಡಿಗೆ ಆರಂಭಿಸುವ ಮುನ್ನ (ಒಲೆ ಹೊತ್ತಿಸುವ ಮುನ್ನ) ಎಲ್ಲಾ ಸಾಮಾಗ್ರಿಗಳನ್ನು ಜೋಡಿಸಿಟ್ಟುಕೊಳ್ಳಿ
- ❑ ಮನೆಮಂದಿಯೆಲ್ಲ ಒಟ್ಟಿಗೆ ಕೂತು ಊಟ ಮಾಡಿ. ಇದರಿಂದ ಕೆಲಸ ಕಮ್ಮಿಯಾಗುವುದಷ್ಟೆ ಅಲ್ಲದೆ, ಪ್ರತಿ ಬಾರಿ ಬಿಸಿ ಮಾಡುವುದು ತಪ್ಪಿ ಇಂಧನ ಉಳಿತಾಯ ಸಾಧ್ಯವಾಗುವುದು.
- ❑ ದೊಡ್ಡ ತಳವಿರುವ ಸಮತಟ್ಟಾದ, ಪಾತ್ರೆಗಳಲ್ಲಿ ಶೀಘ್ರವಾಗಿ ಅಡಿಗೆ ಮಾಡಬಹುದು.
- ❑ ಹೊಗೆ ರಹಿತ ಒಲೆಗಳು (ಅಸ್ತ್ರ ಒಲೆ) ಕಟ್ಟಿಗೆ ಉರುವಲುನಲ್ಲಿ ಉಳಿತಾಯ ಸಾಧಿಸಲು ಸಹಾಯಕಾರಿ. ಅಲ್ಲದೇ 'ಹೊಗೆಯ ಪ್ರದೂಷಣೆಯೂ' ಆಗದು.
- ❑ 'ಸೋಲಾರ್ ಕುಕ್ಕರ್ ಬಳಸುವುದು ನಿಜಕ್ಕೂ ಪರಿಣಾಮಕಾರಿ ಹಾಗು ಸುಲಭ. ಸರ್ಕಾರದ ನೆರವು ಇದಕ್ಕೆ ಲಭ್ಯ.

ಪೇಪರ್ ಪುನರ್ಬಳಕೆ

ಮನೆ ಹಾಗು ಆಫೀಸುಗಳಲ್ಲಿ ಪೇಪರ್‌ನ ಬಳಕೆಯಲ್ಲಿ ಜಾಗರೂಕತೆ ವಹಿಸಿದರೆ, ಪರಿಸರಕ್ಕೆ ನಾವು ನಮ್ಮ ಕೈಯಿಂದ ಆದ ಸೇವೆಯನ್ನು ಮಾಡಿದಂತಾಗುತ್ತದೆ.

❑ ಮನೆ ಮತ್ತು ಆಫೀಸ್‌ನಲ್ಲಿರುವ ರದ್ದಿ ಕಾಗದವನ್ನು ರದ್ದಿಯವನಿಗೆ ಮಾರಿ. ಆ ರದ್ದಿ ಪೇಪರ್ ಕಾಗದವಾಗಿ ಮತ್ತೆ ಬಳಕೆಗೆ ಬರುತ್ತದೆ.

❑ ಶಾಲಾ ಪುಸ್ತಕಗಳನ್ನು ಚೆನ್ನಾಗಿಟ್ಟುಕೊಂಡು ನಿಮ್ಮ ತಂಗಿ ಮತ್ತು ತಮ್ಮಂದಿರಿಗೆ ನೀಡಿ. ಇಲ್ಲವೇ ಅಗತ್ಯವಿರುವವರಿಗೆ ದಾನಮಾಡಿ.

❑ ಲೆಕ್ಕ ಇತ್ಯಾದಿಗಳನ್ನು ಮಾಡಲು Slate (ಪಾಟಿ) ಬಳಸಿ.

❑ Xerox paper ನಲ್ಲಿ ಎರಡು ಬದಿಗಳನ್ನು ಬಳಸಿ.

❑ Computer paperನ ಹಿಂಬದಿಯನ್ನು ಬರೆಯಲು ಉಪಯೋಗಿಸಬಹುದು.

❑ ಪ್ರತಿಯೊಬ್ಬರಿಗೆ, ಪ್ರತ್ಯೇಕವಾಗಿ ಪ್ರತಿ ಕಳುಹಿಸುವ ಬದಲು ಆಫೀಸ್ ನೋಟಿಸ್ ಬೋರ್ಡ್ ನಲ್ಲಿ ಒಂದು ಪ್ರತಿ ಅಂಟಿಸಿ.

❑ ಹಳೆಯ ನೋಟ್ ಬುಕ್‌ನಿಂದ ರಫ್ ಪ್ಯಾಡ್‌ಗಳನ್ನು ತಯಾರು ಮಾಡುಬಹುದು.

❑ ಹೀಗೆ ಪೇಪರ ಬಳಕೆ'ಯನ್ನು ಮಿತವಾಗಿ ಬಳಸುವುದರಿಂದ ಮರಗಳ ಕಡಿತ ಕಡಿಮೆ ಮಾಡಲು ಸಾಧ್ಯ.

ವಾಹನಗಳನ್ನು ಸುಸ್ಥಿತಿಯಲ್ಲಿಡುವುದು

ಇಂದು ವಾಹನಗಳಿಂದ ಉಂಟಾಗುವ ವಾಯುಮಾಲಿನ್ಯ ಆತಂಕಕಾರಿ ಸ್ಥಿತಿ ತಲುಪಿದೆ. ಇದಕ್ಕೆ ಮುಖ್ಯ ಕಾರಣ ವಾಹನಗಳಿಂದ ಹೊರಗೆ ಬರುವ ಹೊಗೆ. ಇದನ್ನು ನಿಯಂತ್ರಿಸಲು ವಾಹನಗಳನ್ನು ಸುಸ್ಥಿತಿಯಲ್ಲಿಡಬೇಕಾದ್ದು ಅತೀ ಅಗತ್ಯ. ಇದರಿಂದ 'ಇಂಧನದ ಮಿತವ್ಯಯ'ವೂ ಸಾಧ್ಯ.

❑ ಒಂದೇ ಸಮಾನ ವೇಗದಲ್ಲಿ ಹೋಗಿ ಇದರಿಂದ ಹೊಗೆ ಉಗುಳುವಿಕೆಯೂ ಕಮ್ಮಿ ಯಾಗುವುದು. ಇಂಧನವೂ ಉಳಿಯುವುದು.

❑ ವಾಹನವನ್ನು ನಿಯಮಿತವಾಗಿ ಸರ್ವೀಸ್ (service)ಮಾಡಿಸಿಕೊಳ್ಳಿ.

❑ ಸ್ವಂತ ವಾಹನದ ಬದಲಿಗೆ ಸಾರ್ವಜನಿಕ ವಾಹನ ಬಳಸಲು (ಸಾಧ್ಯವಾದಗೆಲ್ಲ). ಸುರುಮಾಡಿ.

❑ ಹತ್ತಿರದ ಅಂಗಡಿಗೆ ಅಥವಾ ಸ್ಥಳಕ್ಕೆ ನಡೆದುಕೊಂಡೇ ಹೋಗಿ.

❑ ಚಕ್ರಗಳಲ್ಲಿ ಗಾಳಿಯನ್ನು ಸರಿಯಾದ ಪ್ರಮಾಣದಲ್ಲಿರಿಸಿ. ಇದರಿಂದ ಇಂಧನದ ಉಳಿತಾಯವಾಗುತ್ತವೆ. ಅಪಘಾತವೂ ತಪ್ಪುತ್ತದೆ.

❑ ಶಬ್ದ ಮಾಲಿನ್ಯ ಉಂಟುಮಾಡುವ ಹಾರ್ನ್ ಗಳನ್ನು ಉಪಯೋಗಿಸಬೇಡಿ.

❑ 4 ಜನಕ್ಕಿಂತ ಕಮ್ಮಿ ಇದ್ದರೆ ಕಾರು ಬಳಸಬೇಡಿ.


ವಿದ್ಯುತ್ ಮಿತ ಬಳಕೆ

ವಿದ್ಯುತ್‌ಚ್ಛಕ್ತಿಯನ್ನು ಪೋಲು ಮಾಡಬೇಡಿ. ಮಿತಬಳಕೆಯಿಂದ ಪರಿಸರದ ಮೇಲೆ ಆಗುವ ದುಷ್ಪರಿಣಾಮಗಳು ಕಡಿಮೆಯಾಗುತ್ತವೆ.

ಮಿತಬಳಕೆಗೆ ಕೆಲವು ಸಲಹೆಗಳು

❑ ನೈಸರ್ಗಿಕ ಬೆಳಕು' ಮನೆ ಹಾಗು ಆಫೀಸಿನಲ್ಲಿ ಅಧಿಕವಾಗಿರುವಂತೆ ವಿನ್ಯಾಸಮಾಡಿಸಿಕೊಳ್ಳಿ.

❑ ಓದುವ ಮೇಜನ್ನು ಕಿಟಕಿಯ ಬಳಿಯಿರಿಸಿ





ನೀರಿನ ಬಳಕೆಯನ್ನು ಮಿತವಾಗಿ ಮಾಡಲು :

❑ ನೀರಿನ ಕೊಳವೆಯಿಂದ 'ಧಾರೆ' ದಪ್ಪವಾಗಿ ಸುರಿಸುವ ಬದಲು ತೆಳ್ಳಗೆ ಸುರಿಸುವಂತೆ ಮಾಡಿ.

❑ ಹಲ್ಲು ಉಜ್ಜುವ ವೇಳೆಯಲ್ಲಿ 'ನಲ್ಲಿ'ಯನ್ನು ಬಂದ್ ಮಾಡಿರಿ

❑ 'ನಲ್ಲಿ'ಯಲ್ಲಿ leak ಇದ್ದರೆ ಕೂಡಲೇ ಸರಿ ಪಡಿಸಿಕೊಳ್ಳಿ,

❑ ಮನೆತೊಳೆದ ನೀರನ್ನು ಗಿಡ-ಮರಗಳಿಗೆ ಹಾಕಿ.

❑ ತರಕಾರಿಯನ್ನು 'ನಲ್ಲಿ'ಯ ಕೆಳಗೆ ತೊಳೆಯುವ ಬದಲು ಪಾತ್ರೆಯೊಳಗೆ ಹಾಕಿ ತೊಳೆಯಿರಿ.

❑ ಕುಡಿಯುವ ನೀರನ್ನು ಅಗತ್ಯಕ್ಕಿಂತ ಹೆಚ್ಚಾಗಿ ಸಂಗ್ರಹಿಸಿಟ್ಟುಕೊಳ್ಳಬೇಡಿ.

❑ Fridge ನಿಂದ de-frost ಆದ ನೀರನ್ನು ಗಿಡಗಳಿಗೆ ಸುರಿಯಿರಿ.

❑ ಮಳೆ ನೀರನ್ನು ಸಂಗ್ರಹಿಸಿ, ಬಳಸಿಕೊಳ್ಳಬಹುದು. (ಸ್ನಾನ, ಗಿಡಗಳಿಗೆ, ಇತ್ಯಾದಿಗಳಿಗೆ)

'ನೀರಿಲ್ಲದೆ ಬದುಕಿಲ್ಲ' ಎಂಬುದನ್ನು ಸದಾ ನೆನಪಿಟ್ಟುಕೊಂಡು ಬಳಸಿ.

ಪರಿಸರ ಪ್ರಜ್ಞೆ ಹರಡಿ

ಪರಿಸರ ಸಂಕ್ಷಣೆ ಕುರಿತು ನಿಮ್ಮ ಮನೆಯವರಿಗೆ, ಸ್ನೇಹಿತರಿಗೆ ತಿಳಿಹೇಳಿ ಅವರಲ್ಲೂ ಪರಿಸರ ಸಂರಕ್ಷಣೆಯ ಬಗ್ಗೆ ಹಲವಾರು ಉಪಯುಕ್ತ ಸಲಹೆಗಳಿರಬಹುದು.

ಪತ್ರಿಕೆಗಳಲ್ಲಿ ಪರಿಸರ ಕಾಳಜಿ ಕುರಿತು ಸಂಪಾಕದಕರಿಗೆ ಪತ್ರ ಬರೆದು, ಪ್ರಕಟಿಸಲು ಕೋರಿ.

ಸ್ಥಳೀಯ ಪರಿಸರದ ಸಮಸ್ಯೆಗಳನ್ನು ಸಾರ್ವಜನಿಕರ ಹಾಗು ಅಧಿಕಾರಿಗಳ ಗಮನಕ್ಕೆ ತರಲು ಇದು ತುಂಬಾ ಪ್ರಯೋಜನಕಾರಿ.

ನಿಮ್ಮ ಊರಿನಲ್ಲಿ 'ಪರಿಸರ ಸಂರಕ್ಷಣೆ'ಗಾಗಿ ಸಂಘ, ಸಂಸ್ಥೆಗಳನ್ನು ಕಟ್ಟಿ, ಬೆಳೆಸುವ ಬಗ್ಗೆ ಯೋಚಿಸಿ, ಇಂದೇ ಕಾರ್ಯ ಪ್ರವೃತರಾಗಿ.

ಕೊಳ್ಳಿ.

❑ 100 watt bulb ನ ಬದಲಿಗೆ 40 watt ನ ಟ್ಯೂಬ್‌ಲೈಟ್‌ನ್ನು ಬಳಸಿ ಅಷ್ಟೇ ಪ್ರಕಾಶ ಪಡೆಯಬಹುದು. ಇತ್ತೀಚೆಗೆ 11 watt ಹಾಗು 7 watt ಮತ್ತು 15 watt CFL ಸಾಧನಗಳು ಲಭ್ಯ.

❑ ಬಲ್ಬ್ ಹಾಗು Tube lightನ್ನು ಶುಚಿಯಾಗಿಟ್ಟುಕೊಳ್ಳಿ.

❑ Fridgeನ ಬಾಗಿಲನ್ನು ಅನಾವಶ್ಯಕವಾಗಿ ತೆರೆಯಬೇಡಿ.

❑ T.V. ಹಾಗು Radio ವನ್ನು ಯಾರೂ ನೋಡದ ಹಾಗು ಕೇಳದ ಸಮಯದಲ್ಲಿ OFF ಮಾಡಿ.

❑ Solar Water Heaterಗಳನ್ನು ಬಳಸಿ ಇದಕ್ಕೆ ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ.

❑ ನೀವು ಉಳಿಸಿದ ಪ್ರತಿಯೊಂದು ಯುನಿಟ್ಟು ನಿಮಗೆ ಕರಂಟ್ ಬಿಲ್‌ನಿಂದಾಗುವ 'ಶಾಕ್'ನಿಂದ ಮುಕ್ತಗೊಳಿಸುವುದು ಎನ್ನುವುದನ್ನು ನೆನಪಿಡಿ.

ನೀರು-ಅತ್ಯಮೂಲ್ಯ

'ನೀರು' ಜೀವರಾಶಿಗಳಿಗೆಲ್ಲಾ ಬೇಕಾದ ವಸ್ತು. ಕುಡಿಯುವ ನೀರಿಲ್ಲದೆ ಬದುಕು ಸಾಧ್ಯವಿಲ್ಲ.

ಮುಂದಿನ ಸಂಚಿಕೆಯೊಂದಿಗೆ


ವಿಶೇಷ ಉಚಿತ ಪುಸ್ತಕ

ವಿವಿಧ ವಿದ್ಯಾವಕಾಶಗಳ ಬಗ್ಗೆ ಮಾಹಿತಿ ಕೋರಿ 'ಮಾರ್ಗದರ್ಶಿ' ವಿಭಾಗಕ್ಕೆ ಬಂದಿರುವ ಪ್ರಶ್ನೆಗಳ ಸಂಖ್ಯೆ ಎಷ್ಟಿದೆಯೆಂದರೆ ಇನ್ನೂ ಹತ್ತು ವರ್ಷ ಕಳೆದರೂ ಈ ಕಡತ ಕರಗಲಾರದು. ಈ ಮಧ್ಯೆ ಸಕಾಲಕ್ಕೆ ಸರಿಯಾದ ಮಾಹಿತಿ ಸಿಗದ ಅನೇಕ ಓದುಗರು ನಿರಾಶರಾಗುವ, ದಾರಿ ತಪ್ಪುವ ಸಂಭವವಿದೆ. ಹಾಗಾಗಿ ಈ ಸಮಸ್ಯೆಯ ನಿವಾರಣೆ ಗೋಸ್ಕರವೇ ಬರುವ ಜುಲೈ ಸಂಚಿಕೆಯೊಂದಿಗೆ ಮಾರ್ಗದರ್ಶಿ ವಿಭಾಗದ ವಿಶೇಷ ಪ್ರತ್ಯೇಕ ಪುಸ್ತಕವನ್ನು ಉಚಿತವಾಗಿ ನೀಡಿ ಬಾಕಿ ಉಳಿದಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಒದಗಿಸಲು 'ಬದುಕು' ಮುಂದಾಗಿದೆ.

– ಸಂಪಾದಕ

ಜುಲೈ ಸಂಚಿಕೆ ಕಾಯ್ದಿರಿಸಲು ಮರೆಯಬೇಡಿ!

ಅವಿವೇಕದ ಅಣುಪರೀಕ್ಷೆ!




○ ಕೋ. ಚೆನ್ನಬಸಪ್ಪ
ನಿವೃತ್ತ ನ್ಯಾಯಾಧೀಶರು
೧೨೭, ಪಶ್ಚಿಮ ಕಾರ್ಡ್ ರಸ್ತೆ,
ಮಹಾಲಕ್ಷ್ಮೀಪುರ, ಬೆಂಗಳೂರು - ೮೬

ಬುದ್ಧ ಪೂರ್ಣಿಮೆಯ ಪವಿತ್ರ ದಿನ ಭಾರತ ಸರ್ಕಾರ ರಾಜಸ್ತಾನದ ಪೊಖ್ರಾನ್ ಎಂಬಲ್ಲಿ ಮೂರು ಪರಮಾಣು ಸಾಧನ ಪರೀಕ್ಷಾ ಸರಣಿ (ಪಸಾಪ)ಯನ್ನು ಸ್ಫೋಟಿಸಿ, ತನ್ನ ಪರಮಾಣು ಅಸ್ತ್ರ ಶಕ್ತಿ ಸಾಧ್ಯತೆಯನ್ನು ಜಗತ್ತಿಗೆ ಎತ್ತಿ ತೋರಿಸಿತು. ಅದಾದ ಎರಡು ದಿನಗಳ ನಂತರ ಬುಧವಾರ ಮತ್ತೆರಡು ಪಸಾಪಗಳನ್ನು ಅಲ್ಲಿಯೇ ಸ್ಫೋಟಿಸಿ ತನ್ನ ಪರಾಕ್ರಮವನ್ನು ಲೋಕಕ್ಕೆ ಬಿತ್ತರಿಸಿತು. ಈ ಪಸಾಪ ಸ್ಫೋಟನೆಗಳಿಂದ ಜಗತ್ತು ಬೆರಗಾಗಿ ಹೋಯಿತು. ಜಪಾನ್, ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್ ದೇಶಗಳು ತಕ್ಷಣ ತಮ್ಮ ವಿರೋಧವನ್ನು ವ್ಯಕ್ತಪಡಿಸಿದವು. ಚೀನಾ ಪಾಕಿಸ್ತಾನ ಹಿಂದೆ ಬೀಳಲಿಲ್ಲ. ರಷ್ಯಾ ಭಾರತದ ಶಸ್ತ್ರ ಬಲವನ್ನು ಪ್ರಶಂಸಿತು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಅಮೆರಿಕಾ ಭಾರತದ ಮೇಲೆ ಆರ್ಥಿಕ ಮತ್ತು ಮಿಲಿಟರಿ ಅಸಹಕಾರವನ್ನು ಘೋಷಿಸಿತು.

ಭಾರತ ಈ ಪಸಾಪ ಸ್ಫೋಟನೆ ಮಾಡಿದ್ದು ಸರಿಯೆ? ಎಂಬ ಸಮಸ್ಯೆ ಜಗತ್ತಿನ ಎಲ್ಲ ರಾಷ್ಟ್ರಗಳನ್ನು ಕಾಡುತ್ತಿದೆ. ಭಾರತ ಅಣ್ವಸ್ತ್ರ ಹೊಂದಿರಬೇಕೆ ಬೇಡವೆ ಎಂಬುದನ್ನು ವಾಷಿಂಗ್‌ಟನ್ ಇಲ್ಲವೆ ಲಂಡನ್ ಅಥವಾ ಟೋಕಿಯೋ ನಿರ್ಧರಿಸಬೇಕಾಗಿಲ್ಲ. ನಮ್ಮ ದೇಶದ ರಕ್ಷಣೆ ನಮ್ಮ ಸಮಸ್ಯೆ. ಆ ಪರದೇಶ ನಮಗೆ ಯಾವ ಬುದ್ಧಿವಾದವನ್ನೂ ಸಲಹೆಯನ್ನೂ ನೀಡಲಾಗದು. ಬೆದರಿಕೆಯನ್ನಂತೂ ಒಡ್ಡಲಾಗದು.

ಆ ಪರಕೀಯರ ಅಭಿಪ್ರಾಯ ಅಥವಾ ಭಾವನೆಗಳಿಗೆ ಭಾರತ ಮಣಿಯಬೇಕಾಗಿಲ್ಲ. ಇದು ಸತ್ಯ ಮತ್ತು ನ್ಯಾಯ. ಆದರೆ ಭಾರತ ಈ ಪ್ರಪಂಚದಲ್ಲಿ ಒಂಟಿಯಾಗಿ ನಿಂತು ಯಾರಗೊಡವೆಯೂ ಇಲ್ಲದವರಂತೆ ಬದುಕುವುದು ಸಾಧ್ಯವಿಲ್ಲ. ಈ ಜಗತ್ತು ಈಗೊಂದು ಜಾಗತಿಕ ಗ್ರಾಮ (Global village) ಒಂದು ಮನೆಯಲ್ಲಿ, ಒಂದು ಓಣಿಯಲ್ಲಿ ಆಗುವ ಘಟನೆ ಮತ್ತು ವಿದ್ಯಮಾನಗಳಿಂದ ಇಡೀ ಹಳ್ಳಿಯ ಜೀವನ, ವಾತಾವರಣ, ಆರೋಗ್ಯ ಪರಿಸರ, ಬೆಳವಣಿಗೆ, ಅಭಿವೃದ್ಧಿ, ಅವನತಿ.. ಅವಲಂಭಿಸಿದೆ. ಈ ದೃಷ್ಟಿಯಿಂದ ವಾಷಿಂಗ್‌ಟನ್ ಟೋಕಿಯೋ ಬೊಮ್ಮಪ್ಪಗಳನ್ನು ಕೇಳಿ ನಾವು ನಮ್ಮ ಬದುಕನ್ನು ನಿರ್ಧರಿಸಬೇಕಾಗಿಲ್ಲ ಎಂದು ಉಡಾಫೆ... ಹೊಡೆಯುವಂತಿಲ್ಲ ಎಂಬ ವಿವೇಕವೂ ನಮಗಿರಬೇಕು.



ಅಮೆರಿಕಾ ಆರ್ಥಿಕ ಅಸಹಕಾರ ಅಥವಾ ದಿಗ್ಬಂಧನ ಹೇರಿದ್ದಕ್ಕೆ ನಾವು ಅಂಜುವ ಮಾತಲ್ಲ, ಅವರ ನೆರವನ್ನು- ಅವರಿಗೆ ಮುಕ್ತ ಮಾರುಕಟ್ಟೆಯನ್ನು ತೆರೆದು ನಮ್ಮ ಉದ್ದಿಮೆಗಳನ್ನು ಅವರ ಬಹು ರಾಷ್ಟ್ರೀಯ ಕಂಪನಿಗಳಿಂದಲೆ ವೃದ್ಧಿಪಡಿಸಬೇಕೆಂದು ಅಂಗಲಾಚಿ, ಸೆರಗೊಡ್ಡಿ ಬೇಡಿಕೊಂಬ ಮನಮೋಹನ ಸಿಂಗರಿಂದ ನಮ್ಮ ಪ್ರಧಾನಿ ಅತುಲ್ ಬಿಹಾರ ವಾಜಪೇಯಿ ಅವರು ಪಸಾಪ ಸ್ಫೋಟವನ್ನು ಸಮರ್ಥಿಸಿಗೊಂಡದ್ದು ವಿಚಿತ್ರ. ಸ್ವಾವಲಂಬನೆ ಸ್ವದೇಶೀ ಮಂತ್ರೋಚ್ಚಾರ ಮಾಡುವ ಈ ಬಿಜೆಪಿಯ ಘಟಬಂಧನ (ಶ್ರದ್ಧ) (Coalition) ಸರ್ಕಾರದ ಕವಲು ನೀತಿಯಿಂದ ಆಶ್ಚರ್ಯವಾಗುತ್ತದೆ (Coalition govt, ಎಂಬುದನ್ನು ಭಾಜಪ ಘಟಬಂಧನ ಸರ್ಕಾರ ಎಂದು ಕರೆಯುತ್ತದೆ.)

ಈ ಪಸಾಪ ಪರಾಕ್ರಮವನ್ನು ಬಹುಶಃ ಸಿಪಿಎಂ ಹೊರತಾಗಿ ಎಲ್ಲ ರಾಜಕೀಯ ಪಕ್ಷಗಳೂ ಮೆಚ್ಚಿ ಪರಾಕು ಹಾಡಿದ್ದಾರೆ. ಸಿಪಿಐನ ಬರ್ಧನ್ ಕೂಡ ತಮ್ಮ ಮೆಚ್ಚಿಗೆ ವ್ಯಕ್ತಪಡಿಸಿದ್ದು ಆಶ್ಚರ್ಯ. ಹೀಗೆ ಎಲ್ಲರೂ ಪರಾಕು ಹಾಕುವವರೆ!

ಆದರೆ ಈ ಘಟನೆಯ ಬಗ್ಗೆ ಅಸಲು, ಮೂಲಭೂತ ಸಮಸ್ಯೆಯನ್ನು ಈ ರಾಜಕೀಯ ಮುಖಂಡರು ಆಳವಾಗಿ ಯೋಚಿಸಿದ್ದಾರೆಯೆ? ಈಗಿನ ಸರ್ಕಾರ ಈ ಸ್ಫೋಟನೆಗೆ ಆರಿಸಿದ ದಿನ ಮತ್ತು ಕಾರಣಗಳ ಔಚಿತ್ಯವನ್ನು ಕುರಿತು ಗಂಭೀರವಾಗಿ ಚಿಂತನೆಮಾಡಿದ್ದಾರೆಯೆ?

ಬುದ್ಧಪೂರ್ಣಿಮೆಯ ದಿನವೆ ಈ ಪರಮಾಣು ಸಾಧನಾ ಸಾಮರ್ಥ್ಯವನ್ನು ಪ್ರದರ್ಶಿಸಿದ್ದು ಬುದ್ಧನನ್ನು, ಅವನು ಸಾರಿದ ಶಾಂತಿ ಅಹಿಂಸೆಯ ತತ್ವವನ್ನು ಮೂದಲಿಸುವಂತೆ ಅಣುಕಿಸುವಂತೆ ಆಗಿದೆ. ಹಿಂದೆ ೧೯೭೪ರಲ್ಲಿಯೂ ಇಂದಿರಾ ಗಾಂಧಿ ಇದೇ ಬುದ್ಧ ಪೂರ್ಣಿಮೆಯಂದೇ ಪಸಾಪ ಸ್ಫೋಟಿಸಿರಲಿಲ್ಲವೆ? ಹೌದು. ಅಂದು ಆ ಸ್ಫೋಟ ನಡೆಸಿದ್ದ ಕಾರಣವೆ ಇಂದು ಬಿಜೆಪಿ ಸರ್ಕಾರದ ನಿರ್ಧಾರವೂ ಇದೆ.

೧೯೭೪ರಲ್ಲಿ ಇಂದಿರಾ ಗಾಂಧಿ ಅಧಿಕಾರ ಕಳೆದುಕೊಳ್ಳುವ ಅಪಾಯದ ಅಂಚಿಗೆ ತಲುಪಿದ್ದರು. ಗುಜರಾತ್‌ನಲ್ಲಿ ನವನಿರ್ಮಾಣ ಆಂದೋಲನ ನಡೆದು ಕಾಂಗ್ರೆಸ್ಸು ನಶಿಸಿಹೋಗುವದರಲ್ಲಿತ್ತು. ಜಯಪ್ರಕಾಶ ನಾರಾಯಣರು ಗುಜರಾತ ನವ ನಿರ್ಮಾಣ ಆಂದೋಲನದ ನಾಯಕತ್ವ ವಹಿಸಿ ಮಹಾಕ್ರಾಂತಿಯ ಕಿಡಿಯನ್ನೆ ಹೊತ್ತಿಸಿದ್ದರು. ಆಗ ಇಂದಿರಾಗಾಂಧಿ, ಜನರ ಅಂದಿನ ಕಠಿಣ ಸಮಸ್ಯೆಗಳನ್ನು ಮರೆಯುವಂತೆ ಮಾಡಲು, ಜನರ ಮನಸ್ಸು ಬೇರೆ ದಿಕ್ಕಿಗೆ ತಿರುಗುವಂತೆ ಮಾಡಲು ಪಸಾಪದ ಪರಾಕ್ರಮದ ಘಟನೆಯನ್ನು ಮಾಡಿತೋರಿಸಿದರು.

ಇಂದಾದರೂ, ಬಿಜೆಪಿ ಭಾರತ ಸರ್ಕಾರ ೧೯ ಪಕ್ಷಗಳ ತೇಪೆ ಸರಕಾರವನ್ನು ನಡೆಸುತ್ತಿದೆ. ಇದೆಷ್ಟು ಅತಂತ್ರವಾಗಿದೆ ಎಂದರೆ ಯಾವ ಘಳಿಗೆ ಯಲ್ಲಾದರೂ ಈ ಸರ್ಕಾರ ಬಿದ್ದು ಹೋಗುವ ಭಯ ಇದ್ದೇ ಇದೆ. ಎರಡು ವರ್ಷಗಳಲ್ಲಿ ಮೂರು ಲೋಕಸಭಾ ಚುನಾವಣೆಗಳನ್ನು ಎದುರಿಸಿದ ಲೋಕ ಸಭಾಸದಸ್ಯರು ತಮ್ಮ ಸ್ಥಾನ ಉಳಿಸಿಕೊಳ್ಳಲಿಕ್ಕಾಗಿ ಈ ಸರ್ಕಾರಕ್ಕೆ ಬೆಂಬಲಕೊಡುತ್ತಿದ್ದಾರೆಯೆ ಹೊರತು, ಜಯಲಲಿತಾಳಂತೆ ತಮ್ಮ ಮೇಲಿರುವ ಕ್ರಿಮಿನಲ್ ಮೊಕದ್ದಮೆಗಳಿಂದ ಆದುಷ್ಟು ಕಾಲ ತಪ್ಪಿಸಿ ಕೊಳ್ಳುವುದಕ್ಕಾಗಿ ಬೆಂಬಲ ಕೊಡುತ್ತಿದ್ದಾರೆಯೆ ಹೊರತು ಈ ಸರ್ಕಾರದ ಧ್ಯೇಯ ಧೋರಣೆಗಳನ್ನು ಮೆಚ್ಚಿ ಅಲ್ಲ. ಹಾಗೆ ಈ ಸರ್ಕಾರ ಬಿದ್ದು ಹೋದರೆ ಮುಂದಿನ ಚುನಾವಣೆಯಲ್ಲಿ ಜಯಭೇರಿ ಹೊಡೆಯಲು ಬಿಜೆಪಿ ಜನರ ಉದ್ವೇಗವನು ಕೆರಳಿಸುವ ಈ ಹುಚ್ಚು ಪಸಾಪ ನಡೆಸಿದೆ. ಈ ಮಾತು ನಿರ್ಧಾರವಲ್ಲ ಎಂಬುದಕ್ಕೆ, ಪಸಾಪ ನಡೆದ ಒಂದೇ ಒಂದು ಘಂಟೆಯ ಒಳಗಾಗಿ ಆರ್. ಎಸ್. ಎಸ್. ಮುಖವಾಣಿ 'ಆರ್ಗನೈಜರ್' ತನ್ನ ಪ್ರಶಂಸೆಯ ಸಂಚಿಕೆಯನ್ನು ಬಿಡುಗಡೆ ಮಾಡಿತು!

ಇಂದಿನ ಸರ್ಕಾರ ಈ ಭೀಕರ ಘಟನೆಯನ್ನು ನಡೆಸಿದ್ದು ತನ್ನ ರಾಜಕೀಯ ಉದ್ದೇಶಗಳಿಗಾಗಿಯೆ ಎಂಬುದು ಸ್ವಲ್ಪ ಆಳವಾಗಿ ಆಲೋಚಿಸಿದರೆ ಹೊಳೆದೀತು.

ಈ ಘಟನೆಗೆ ಕಳೆದ ತಿಂಗಳು ಪಾಕಿಸ್ತಾನ ತನ್ನ ಬಾಲ ಅಲ್ಲಾಡಿಸಿದರೆ ಅದನ್ನು ಕತ್ತರಿಸಿ ಸುಣ್ಣ ಹಚ್ಚುವ ಸಾಮರ್ಥ್ಯ ಭಾರತಕ್ಕಿದೆ ಎಂಬುದನ್ನು ಈ ಘಟನೆ ತೋರಿಸುತ್ತದೆ ಎಂದು ವಾದಿಸುವವರು ಇದ್ದಾರೆ. ಮೇಲ್ನೋಟಕ್ಕೆ ಹಾಗೆಯೆ ಕಾಣುತ್ತದೆ. ನಾವು ಪಸಾಪ ನಡೆಸದೆ ಇದ್ದಿದ್ದರೂ, ಭಾರತ ಪಾಕೀಸ್ತಾನಕ್ಕಿಂತ ಎಷ್ಟೋ ಬಲಶಾಲಿ ಎಂಬುದು ಪಾಕಿಸ್ತಾನಕ್ಕೇ ಗೊತ್ತಿದೆ. ಜಗತ್ತಿಗೂ ಗೊತ್ತಿದೆ. ನಾವು ಅಣುಅಸ್ತ್ರಗಳನ್ನು ತಯಾರಿಸಬಲ್ಲೆವು: ಅಗತ್ಯ ಬಿದ್ದರೆ ಯಶಸ್ವಿಯಾಗಿ, ಮಾರಕ ಪರಿಣಾಮದಿಂದ ಪ್ರಯೋಗಿಸಲೂ ಬಲ್ಲೆವೆಂಬುದು ಪಾಕಿಸ್ತಾನಕ್ಕೂ ಗೊತ್ತು; ಜಗತ್ತಿಗೂ ಗೊತ್ತು. ನಾವು ಯಾವುದನ್ನು ಬಹು ರಹಸ್ಯ ಎಂದು ಕದದ ಹಿಂದೆ ಕತ್ತಲಲ್ಲಿ ಮುಚ್ಚಿಟ್ಟ ರಹಸ್ಯ ಎಂದು ತಿಳಿದು ಕೊಂಡಿದ್ದೇವೆಯೋ ಅದು ಲೋಕಕ್ಕೆಲ್ಲ ಗೊತ್ತು. ನಮ್ಮ ಅಣುವಿಜ್ಞಾನಿಗಳ ಸಾಮರ್ಥ್ಯವನ್ನು ಈ ಘಟನೆಯಿಂದಲೆ ಸಾರಿಹೇಳಬೇಕಾಗಿರಲಿಲ್ಲ.

ಹಾಗಾದರೆ ಈ ಪಸಾಪ ಸ್ಫೋಟನೆಯನ್ನು ಯಾಕೆ ಆಕ್ಷೇಪಿಸಬೇಕು. ಮೊಟ್ಟ ಮೊದಲನೆ ಯದಾಗಿ ಇದು ನಮ್ಮ ದೇಶದ ಪ್ರಥಮ ಪ್ರಾಶಸ್ತ್ಯವಲ್ಲ (First priority) ಅಲ್ಲ. ಶಿಕ್ಷಣ, ಆರೋಗ್ಯ, ಅನ್ನ ನಮ್ಮ ದೇಶದ ಜನರ ಅತ್ಯಾವಶ್ಯಕತೆ. ಈ ಪ್ರಥಮ ಜೀವನ ಅವಶ್ಯಕತೆಗಳನ್ನು ಪೂರೈಸಿದರೆ ಸಾಮಾಜಿಕ ಸರಿಸಮಾನತೆ ಹಿಂಬಾಲಿಸುತ್ತದೆ. ಈ ಪ್ರಾಥಮಿಕ ಅವಶ್ಯಕತೆಗಳನ್ನು ಪೂರೈಸುವ ರಾಜಕೀಯ ಇಚ್ಛೆಯಿಲ್ಲದೆ, ಶಕ್ತಿಯಿಲ್ಲದೆ, ತಲ್ಲಣಿ ಸುತ್ತಿರುವ ಬಡಜನರ ದೃಷ್ಟಿಯನ್ನು ಪಾಕಿಸ್ತಾನದ ಗುಮ್ಮನ ಕಡೆ ತಿರುಗಿಸಿದ್ದು ಅಕ್ಷಮ್ಯಅಪರಾಧ. ಪಾಕಿಸ್ತಾನಕ್ಕೂ ಗೊತ್ತಿದೆ. ಭಾರತದ ಮೇಲೆ ಯಾವ ಅಣ್ವಸ್ತ್ರಹಾಕಿದರೂ ಅದನ್ನು ಬಗ್ಗು ಬಡಿಯುವುದು ಜಗತ್ತಿನ ಯಾವ ರಾಷ್ಟ್ರಕ್ಕೂ ಸಾಧ್ಯವಿಲ್ಲ. ಈ ದೇಶದ ವಿಸ್ತಾರ, ಜನಸಂಖ್ಯೆ, ಅಗಣಿತ ಮಾನವ ಶಕ್ತಿಯ ಯಾವ ಶತ್ರುವನ್ನಾದರೂ, ಎಷ್ಟು ವರ್ಷಗಳ ಕಾಲವಾದರೂ ಎದುರಿಸಬಲ್ಲದು. ಅದಕ್ಕೆ ಪಸಾಪ ಪ್ರದರ್ಶನ ಅಗತ್ಯವಿಲ್ಲ.

ಕೋಚ್ಚೆ ಚಿಂತನ

ಈ ಪ್ರಯೋಗವನ್ನು ಬಹುವಾಗಿ, ಎಲ್ಲ ದೇಶಗಳಿಗಿಂತ ಹೆಚ್ಚಾಗಿ, ಕಟುವಾಗಿ ಖಂಡಿಸಿದ್ದು ಜಪಾನ್ ಎಂಬುದನ್ನು ಗಮನಿಸಬೇಕು. ದ್ವಿತೀಯ ಮಹಾಯುದ್ಧದಲ್ಲಿ ಅಣುಬಾಂಬ್ ಮಹಾ ವಿಪತ್ತಿಗೆ ಈಡಾದ ಏಕೈಕ ದೇಶ ಜಪಾನ್. ೧೯೪೫ರಲ್ಲಿ ನಿರ್ನಿಮಿತ್ತವಾಗಿ ಆಗಲೇ ಶರಣಾಗತಿಯ ಸೂಚನೆಯನ್ನು ಕಳಿಸಿ ಸೋತಿದ್ದ ಜಪಾನಿನ ಮೇಲೆ ಹಿರೋಷಿಮಾ ನಾಗಸಾಕಿ ನಗರಗಳ ಮೇಲೆ ಅಣು ಬಾಂಬ್ ಹಾಕಿ ಈ ಲೋಕವನ್ನೇ ದುಃಖ ಸಾಗರದಲ್ಲಿ ಆಗ ಮುಳುಗಿಸಿತು ಅಮೆರಿಕಾ. ಈಗಲೂ ಆಗಿನ ಆ ಅಣುಬಾಂಬ್ ಸ್ಫೋಟಗಳ ವಿಕಿರಣ ಪರಿಣಾಮ ವನ್ನು ಜಪಾನಿನಲ್ಲಿ ಈಗ ಹುಟ್ಟುವ ಮಕ್ಕಳೂ ಅನುಭವಿಸುತ್ತಿದ್ದಾರೆ. ಆಗ ಸತ್ತ, ಘಾಯಗೊಂಡ ಜನರ ಲೆಕ್ಕ ಯಾರಿಗಾದರೂ ನೆನಪಿದೆಯೆ?

ಹಿರೋಷಿಮಾ ಶಹರದಲ್ಲಿ ನಾಗಸಾಕಿಯಲ್ಲಿ, ಟೋಕಿಯೋ ಶಹರಗಳಲ್ಲಿ ಸತ್ತವರು ಮತ್ತು ಕಾಣದೆ ಹೋದವರು ಕ್ರಮವಾಗಿ ೭೦ ರಿಂದ ೮೦ ಸಾವಿರ, ೩೫ ರಿಂದ ೪೦ ಸಾವಿರ, ೮೩,೬೦೦. ಘಾಯ ಗೊಂಡವರು ಕ್ರಮವಾಗಿ ೭೦,೦೦೦, ೪೦,೦೦೦ ಮತ್ತು ಒಂದುಲಕ್ಷ ಜನರು. ಆಗ ಸತ್ತವರು, ನಾಪತ್ತೆ ಆದವರು ಘಾಯಗೊಂಡವರು ಸತ್ತೇ ಹೋದರು. ಅವರ ನರಳಿಕೆ ಈಗ ಮರೆತ ಮಾತು. ಆದರೆ ಅಣುವಿಕಿರಣ ಪರಿಣಾಮ ಜಪಾನಿನಲ್ಲಿ ಈಗಲೂ ಹುಟ್ಟುವ ಮಕ್ಕಳ ಮೇಲೆ ಆಗುತ್ತಲೆ ಇರುವುದನ್ನು ಪ್ರತಿವರ್ಷವೂ ಪ್ರಕಟಿಸುತ್ತಲೆ ಇದ್ದಾರೆ!

ಈಗ ನಮ್ಮ ದೇಶದಲ್ಲಿ ನಡೆದ ಈ ಪಸಾಪದ ಘಟನೆ ಇಲ್ಲಿಗೇ ನಿಲ್ಲುವುದಿಲ್ಲ. ಅದರ ದುಷ್ಪರಿಣಾಮ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಈಗಲೇ ಮನೆಗಳು ಬಿರುಕು ಬಿಟ್ಟು ಕಾಣಿಸಿಕೊಂಡಿದೆ. ಅವರಿಗೆ ಪರಿಹಾರ ಕೊಡಲು ಪ್ರಧಾನಿ ಆಜ್ಞೆ ಮಾಡಿದ್ದಾರೆಂದು ಪ್ರಚಾರ. ಆ ಮನೆಗಳ ಹಾನಿ, ವಾತಾವರಣ,ಪರಿಸರ, ಆರೋಗ್ಯದ ಮೇಲೆ ತಲೆ ತಲಾಂತರ ಮಾಡುವ ಪರಿಣಾಮಕ್ಕೆ ಹೋಲಿಸಿದರೆ ತೃಣಸಮಾನ. ನಮ್ಮ ಆಕ್ಷೇಪಣೆ ಇಂದಿನ ಆಸ್ತಿ ಹರಣದ ನಷ್ಟದ ಕಾರಣದಿಂದಲ್ಲ.

ಇದಕ್ಕಿಂತ ಘೋರವಾದ ಇನ್ನೊಂದು ಪರಿಣಾಮವೂ ಇದರಿಂದ ಆದೀತು. ಈ ದೇಶ ಇತರ ದೇಶಗಳೊಡನೆ ಒಂದಾಗಿ ಬಾಳಬೇಕೆ? ಅಥವಾ ಈ ಜಗತ್ತು ಶಾಂತಿಯತ್ತ ಧಾವಿಸಬೇಕೆ? ಅಥವಾ ಮಾರಕಾಸ್ತ್ರಗಳ ಮಾರಣ ಹೋಮದತ್ತ ನುಗ್ಗಬೇಕೆ? ಈ ಮಾತನ್ನು ಅಮೆರಿಕಾ, ಚೀನಾ ಪಾಕಿಸ್ತಾನಕ್ಕೆ ಯಾಕೆ ಹೇಳಬಾರದು? ಜಗತ್ತಿನಲ್ಲಿ ಶಾಂತಿ ನೆಲಸಬೇಕಾದರೆ ಎಲ್ಲ ರಾಷ್ಟ್ರಗಳೂ ಈ ಮಾರಕಾಸ್ತ್ರವನ್ನು ಕೈ ಬಿಡಲೇಬೇಕು. ಆತ್ಮರಕ್ಷಣೆಗಾಗಿ ಪ್ರಯೋಗಿಸಲೂ ಬಹುದು. ಆದರೆ ಒಂದು ಮಾತು ಮಾತ್ರ ನಿಜ. ಈ ಯುಗದಲ್ಲಿ ಈ ಅಣುಬಾಂಬನ್ನು ಯಾವ ರಾಷ್ಟ್ರವೂ ಎಂಥ ಸಂಧರ್ಭದಲ್ಲೂ ಉಪಯೋಗಿಸುವುದು ಅಸಂಭವ. ಹಾಗೆ ಉಪಯೋಗಿಸ ಬಹುದಾದರೆ ಅಮೆರಿಕಾ ಇರಾಕ್ ಮೇಲೆ ಪ್ರಯೋಗಿಸಬಹುದಾಗಿತ್ತು. ಸದ್ದಾಂ ಹುಸೇನ್ ಇರಾನ್ ಮೇಲೆ ಉಪಯೋಗಿಸ ಬಹುದಾಗಿತ್ತು. ಆದರೆ ಉಪಯೋಗಿಸಲಿಲ್ಲ. ಯಾಕೆ? ಅದರ ದುಷ್ಪರಿಣಾಮ ಮನವರಿಕೆ ಆಗಿದೆ.

ಅಣ್ವಸ್ತ್ರ ನಿಯಂತ್ರಣ ವಿಜ್ಞಾನಿಗಳ ಆಕಾಂಕ್ಷೆ ಆಗಿದೆ. ಜಗತ್ತಿನ ಹಿತವನ್ನು ಬಯಸುವ ಮುತ್ಸದ್ದಿಗಳ ಕನಸಾಗಿದೆ. ಮಾನವಕಾಲದ ಉಳಿವಿನಲ್ಲಿ ಆಶೆಯುಳ್ಳವರು ಅಣ್ವಸ್ತ್ರಗಳನ್ನುನಿಷೇಧಿಸಲು ಬಯಸಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಪಾಕಿಸ್ತಾನ ವಾಗಲಿ ಭಾರತವಾಗಲಿ ಅಣುಸಾಧನಾ ಪರೀಕ್ಷೆಯಲ್ಲಿ ತೊಡಗುವುದು ಹುಚ್ಚು ಹವ್ಯಾಸ. ಅಂಥ ಹುಚ್ಚು ಸಾಹಸವನ್ನು ಮೆಚ್ಚುವುದು ಪಡ್ಡೆ ಹುಡುಗರಿಗೆ ಆದೀತು. ಖುಷಿಯಾಗಬಹುದು. ಆದರೆ ಲಾಠಿ ಬೀಸುವ ಈ ಬಂಟರು ಅಣ್ವಸ್ತ್ರ ಬಂದಾಗ 'ಧ್ರಾಂಧ್ರೂಂಧ್ರೀಂ' ಮಂತ್ರಪಠಿಸುತ್ತ ಪರಾರಿ ಆಗುವರು. ಶಿಲಾಭವನ (ದೇವಾಲಯ) ಗಳಲ್ಲಿ ಅಡಗಿ ಕುಳಿತು ಸುರಕ್ಷಿತವಾಗಿರುತ್ತಾರೆ. ಆದರೆ ಬಯಲಲ್ಲಿ ಬದುಕುವ ಬಡವರು ಆಹುತಿ ಆಗುತ್ತಾರೆ! ಅವರ ಸಂತತಿ ನೂರಾರು ವರ್ಷ ಅಣು ವಿಕಿರಣದ ದುಷ್ಪರಿಣಾಮಕ್ಕೆ ಬಲಿಯಾಗುತ್ತಾರೆ. ಅಂಗವಿಕಲ ಮಕ್ಕಳು ಹುಟ್ಟಿ ಭೂಮಿಗೆ ಭಾರವಾಗುತ್ತದೆ! ಹೀಗಾಗಬೇಕೆ? ಆಲೋಚಿಸ ಬೇಕು. ಭಾವವೇಶಕ್ಕೆ ಬಲಿಯಾಗಿ ಮಾನವ ಬಾಳು ನರಕವಾಗುವಂತೆ ಮಾಡಬೇಕೆ?

●


ಗುಳಿಗೆ ನುಂಗುವ ಮುನ್ನ ಒಂದು ಗಳಿಗೆ ಯೋಚಿಸಿ

ಈ tension, ಡಿಪ್ರೆಶನ್ (ಮಾನಸಿಕ ಅಶಾಂತಿ, ಒತ್ತಡ) ಗೆ ಕಾರಣವೇ ಬೇಕಿಲ್ಲ! ಕಾಲೇಜಿನಲ್ಲಿ ಬ್ಯೂಟಿಕ್ವೀನ್ ಆಗಿರುವ ಯುವತಿ ಬೇರೊಬ್ಬನ ಜೊತೆಯಲ್ಲಿ ಆತ್ಮೀಯವಾಗಿದ್ದಾಳೆಂದು ಡಿಪ್ರೆಶನ್!

○ ಡಾ. ಆರತಿ ವೆಂಕಟೇಶ್

'**ತ**ಲೆನೋವಿನ ಉಪಶಮನಕ್ಕೆ ಅನಾಸಿನ್ ತೆಗೆದುಕೊಳ್ಳಿ'. 'ನೆಗಡಿ ಕೆಮ್ಮಿಗೆ ವಿಕ್ಸ್ ಆಕ್ಷನ್ 500 ತ್ವರಿತ ಆರಾಮ ನೀಡುತ್ತದೆ'. 'ಹೊಟ್ಟೆ ನೋವು ಹಾಗೂ ಅಜೀರ್ಣಕ್ಕೆ ಈನೋ ಸೇವಿಸಿ'- ಈ ಜಾಹೀರಾತುಗಳು ಯಾರಿಗೆ ಪರಿಚಿತವಿಲ್ಲ? ತಲೆ ನೋವು, ನೆಗಡಿ ಬಂದರೆ ಡಾಕ್ಟರ್ ಬಳಿ ಹೋಗುವ ಪ್ರಮೇಯವೇ ಬರುವುದಿಲ್ಲವಲ್ಲ! ಜಾಹೀರಾತುಗಳಲ್ಲಿ ಪ್ರಚಾರವಾಗುವ ವಸ್ತುಗಳು ಜನಸಾಮಾನ್ಯರಿಗೆ ಸುಲಭವಾಗಿ ಕೈಗೆಟುಕುವಂತಾಗಿರುವುದು ವಿಷಾದನೀಯ ಸಂಗತಿ.

ಈಗಿನ ಪೀಳಿಗೆಯ ಯುವಕ ಯುವತಿಯರಲ್ಲಂತೂ ಈ 'Pills craze' ಜಾಸ್ತಿ ಎಂದೇ ಹೇಳಬೇಕು! ಪರೀಕ್ಷೆ ಎಂದರೆ ಯಾವ ವಿದ್ಯಾರ್ಥಿಗೆ ಭಯವಿಲ್ಲ? ಪರೀಕ್ಷೆಯ ಹಿಂದಿನ ರಾತ್ರಿಯಂತೂ ಬಹುಶಃ ಯಾರೂ ನೆಮ್ಮದಿಯಾಗಿರಲಾರರು! ಇತ್ತ ನಿದ್ದೆಯೂ ಬರಲೊಲ್ಲದು, ಶ್ರದ್ಧೆಯಿಂದ ಓದಲೂ ಆಗದು. ವಿದ್ಯಾರ್ಥಿಯ ಪೀಕಲಾಟ ಆಗ ಕೇಳುವುದೇ ಬೇಡ. ನಮ್ಮಲ್ಲಿ ಬಹಳಷ್ಟು ಹುಡುಗರಿಗೆ ಪ್ಲಾಸ್ಕ್ ತುಂಬಾ ಕಾಫಿ ಅಥವಾ ಟೀ ತುಂಬಿಸಿಕೊಂಡು ರಾತ್ರಿಯಿಡೀ ಆಗಾಗ ಕುಡಿಯುತ್ತಾ ಓದುವ ಅಭ್ಯಾಸ ಸಾಮಾನ್ಯ. ಕಾಫಿ, ಟೀ ಮನಸ್ಸನ್ನು ಜಾಗೃತವಾಗಿಡಲು ಸಹಕಾರಿಯಾಗುತ್ತದೆ ಎಂದು ಹಲವರ ನಂಬಿಕೆ. ಮುಂದೆ ಕೇಳಿದರೆ ಇದೆಷ್ಟೋ ವಾಸಿ! ಕೆಲವರಿಗೆ ನಿದ್ದೆ ಹೋಗಲಾಡಿಸಲು ನೀರು ಮಜ್ಜಿಗೆ ಸಕ್ಕರೆ ಹಾಗು ತುಳಸಿ ಬೆರೆಸಿ ಕುಡಿಯುವ ವಾಡಿಕೆಯುಂಟು. ಇನ್ನೂ ಕೆಲವು ಬೃಹಸ್ಪತಿಗಳು ನಿದ್ದೆ ನಿವಾರಿಸಿ ಮನಸ್ಸನ್ನು ಉತ್ಸುಕವಾಗಿಡಲು 'ಡಿಸ್ಪಿರಿನ್' ಮಾತ್ರೆಗಳನ್ನು ಸೇವಿಸುತ್ತಾರೆ! ಅಸಲು 'ಡಿಸ್ಪಿರಿನ್' ಮಾತ್ರೆಯ ದುಷ್ಪರಿಣಾಮದ ಬಗ್ಗೆ ಅವರಿಗೆ ಅರಿವಾದರೂ ಉಂಟಾಗಿರುವುದೇ? ನಮಗೆ ಪರಿಚಿತರೊಬ್ಬರು ವೈದ್ಯರ ಸಲಹೆಯಿಲ್ಲದೇ ತಲೆ ನೋವಿನ ಉಪಶಮನಕ್ಕೆ ದಿನಕ್ಕೆರಡು ಬಾರಿಯಾದರೂ 'ಆಸ್ಪರಿನ್' ಮಾತ್ರೆ ಸೇವಿಸುತ್ತಿದ್ದರ ಪರಿಣಾಮವಾಗಿ ಒಮ್ಮೆ ರಕ್ತವಾಂತಿ ಮಾಡಿಕೊಂಡು ತುರ್ತು ಚಿಕಿತ್ಸೆ ವಿಭಾಗಕ್ಕೆ ಸೇರ್ಪಡೆಯಾದ ಗಂಭೀರ ಉದಾಹರಣೆಯಿದೆ. ಸ್ನೇಹಿತರೇ, ಗಾಬರಿಯಾಗುವ ಕಾರಣವೇನೂ ಇಲ್ಲ. ಔಷಧಿಗಳಲ್ಲಿ ಒಳ್ಳೆಯ ಪ್ರಭಾವದ ಜೊತೆ ಕೆಲವೊಮ್ಮೆ ಅತಿಯಾದ ಸೇವನೆಯಿಂದ ಕೆಲವು ದುಷ್ಪರಿಣಾಮಗಳೂ ಇರುತ್ತವೆ ಎಂಬುದನ್ನು ಮಾತ್ರ ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು.



Examination funk ಎಂದರೇನು? ಪರೀಕ್ಷೆ ಕೊಠಡಿಯನ್ನು ನಿರ್ಭೀತವಾಗಿ ಪ್ರವೇಶಿಸುವ ಎದೆಗಾರಿಕೆ ಎಲ್ಲರಲ್ಲೂ ಇರುವುದಿಲ್ಲ! ಕೆಲವರಿಗೆ ತಲೆಸುತ್ತು, ಓಕರಿಕೆ, ಭೇದಿ ಮುಂತಾದ ತೊಂದರೆಯುಂಟಾಗುತ್ತದೆ. ಅದನ್ನು ದೂರವಿಡಲು ಹವಣಿಸುವ ಮಹಾಪುರುಷರು 'ಮ್ಯಾಂಡ್ರಾಕ್ಸ್', ಇಂಡ್‌ರಾಲ್' ಮುಂತಾದ ಒತ್ತಡ ತಗ್ಗಿಸುವ ಮಾತ್ರೆಗಳ ಮೊರೆ ಹೋಗುತ್ತಾರೆ. ಮ್ಯಾಂಡ್ರಾಕ್ಸ್ ಡ್ರಗ್ ಸೇವನೆ ಅಭ್ಯಾಸ ಕೇಡು ಮಾಡುವಂಥದ್ದು (addiction) (ಉಗುರಿನಲ್ಲಿ ತೆಗೆಯುವುದನ್ನು ಕೊಡಲಿಯಲ್ಲಿ ತೆಗೆದಂತಾಗುತ್ತದೆ. ಇಂಥ ಪ್ರಸಂಗಗಳಲ್ಲಿ. ಪರೀಕ್ಷೆಯಲ್ಲಿ ರ್‍ಯಾಂಕ್ ಬರಲು ಹವಣಿಸುವ ವಿದ್ಯಾರ್ಥಿ ಕೊನೆಗೆ ಆ ಔಷಧಿಯ ದಾಸಾನುದಾಸ ನಾಗುತ್ತಾನೆ (Drug Addict) ಇದೆಂಥ ವಿಪರ್ಯಾಸ!

ಪರೀಕ್ಷೆ ಎಂದ ಕೂಡಲೇ ಇನ್ನೊಂದು ಪ್ರಸಂಗ ನೆನಪಾಗುತ್ತದೆ. ನಮ್ಮ ನೆರೆಮನೆಯ ಹುಡುಗನಿಗೆ ಪಾಠಗಳೆಷ್ಟು ಓದಿಕೊಂಡರೂ ವಸ್ತುಜ್ಞಾನ ಮೆದುಳಿಗೆ ಇಳಿಯುತ್ತಿರಲಿಲ್ಲ. (ಯುದ್ಧಕಾಲದಲ್ಲಿ ಶಸ್ತ್ರಗಳ ಅಭ್ಯಾಸ ಮಾಡಿದರೆ ಶಸ್ತ್ರ ಹಿಡಿಯಲಾಗುವುದೇ). ಜಾಹಿರಾತುಗಳಲ್ಲಿ ಹೆಮ್ಮೆಯಿಂದ ಪ್ರಚಾರವಾಗುವ Memory plus ಎನ್ನುವ ಮಾತ್ರೆ ಸೇವಿಸಿದರೆ ಇಡೀ ವರ್ಷದ ಸಿಲಬಸ್ ತಲೆಯೊಳಗೆ ಪ್ರತಿಷ್ಠಾಪನೆ ಮಾಡಿ ರ್‍ಯಾಂಕ್ ಗಳಿಸಬಹುದೆಂದು ಯಾರೋ ಪುಣ್ಯಾತ್ಮರು ಅವನಿಗೆ ಬೋಧಿಸಿದ್ದಾರೆ. ಅವನು ಇದುವರೆಗೂ ರ್‍ಯಾಂಕ್ ಬಂದಿಲ್ಲವಾದರೂ ಪರೀಕ್ಷೆ ಸಮಯದಲ್ಲಿ ಮಾತ್ರ ತಪ್ಪದೇ Memory plus ಖರೀದಿಸುತ್ತಾನೆ! ಯಾವ ಉಪಯೋಗಕ್ಕಾಗಿ? ಆ ದಿನದ ಪಾಠ, ಪ್ರವಚನಗಳನ್ನು ಶ್ರದ್ಧೆಯಿಂದ ಓದಿಕೊಂಡರೆ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣನಾಗಲಾರನೇ? ಯಾರ ಬೊಕ್ಕಸ ತುಂಬೇಕೆಂದು ಜಾಹೀರಾತುಗಳಲ್ಲಿ ಪ್ರಕಟವಾಗುವ ಜ್ಞಾಪಕ ಶಕ್ತಿ ವರ್ಧಿಸುವ ಮಾತ್ರೆ ಸೇವಿಸಬೇಕೋ ದೇವರೇ ಬಲ್ಲ.

ನನ್ನ ಗೆಳತಿಯೊಬ್ಬಳ ತಂಗಿಗೆ ಇಪ್ಪತ್ತು ವರ್ಷ ವಯಸ್ಸು. ಅವಳಿಗೆ ರೂಪದರ್ಶಿ ವೃತ್ತಿಯಲ್ಲಿ ಮುಂದುವರೆಯುಬೇಕೆಂಬ ಮಹತ್ವಾಕಾಂಕ್ಷೆ. ಐದಡಿ ಮೂರಿಂಚು ಎತ್ತರವಿರುವ ಅವಳಿಗೆ ಹೆಚ್ಚು ಎತ್ತರವಾಗಬೇಕೆಂಬ ಬಯಕೆ. ತೆಳ್ಳಗೆ, ಉದ್ದಕ್ಕಿರುವ ರೂಪದರ್ಶಿಗಳಿಗೆ ಅವಕಾಶ ಹೆಚ್ಚೆಂದು ಅವಳ ಅನಿಸಿಕೆ. ಇಪ್ಪತ್ತು ವರ್ಷಗಳಾದ ಮೇಲೆ ಎತ್ತರ ಬೆಳೆಯುವ ಅವಕಾಶ ಕಡಿಮೆಯೆಂದು ಅವಳಿಗೆ ಅರಿವಾಗಲಿಲ್ಲ. ಅವಳ ಗೆಳತಿಯೊಬ್ಬಳು ಜಾಹಿರಾತುಗಳಲ್ಲಿ ಪ್ರಕಟವಾಗುವ 'ಗ್ರೋತ್ ಟಾನಿಕ್' ಸೇವಿಸಿದರೆ ಶೀಘ್ರದಲ್ಲೇ ಐದಾರು ಇಂಚುಗಳಾದರೂ ಬೆಳೆಯುವ ಸಾಧ್ಯತೆ ಖಂಡಿತವೆಂದು ಪ್ರಮಾಣಿಸಿ ನುಡಿದಿದ್ದಳು! ವೈಜ್ಞಾನಿಕ ಜ್ಞಾನವನ್ನು ಈಗಿನ ಯುವಜನರು ಖಂಡಿತ ಅರಿತಿರಬೇಕು. ಮನುಷ್ಯನ ಆಕಾರ, ಎತ್ತರ ಎಲ್ಲವೂ ಅನುವಂಶಿಕ

ವಾದುದು. ಯಾವ ಔಷಧ ಸೇವಿಸುವುದರಿಂದಲೂ ಬೆಳವಣಿಗೆ ಹೆಚ್ಚಿಸಲು ಸಾಧ್ಯವಿಲ್ಲ!

ಟೆನ್‌ಷನ್! ಒತ್ತಡಗಳು! ಈಗ ಶಾಲೆಗೆ ಹೋಗುವ ಮಕ್ಕಳಿಂದ ಹಿಡಿದು ಪೆನ್‌ಶನ್ ಪಡೆಯುವ ಮುದಕರವರೆಗೂ ಯಾರಿಗೂ ಈ Tension ತಪ್ಪಿದ್ದಲ್ಲ. ಯುವ ಪೀಳಿಗೆಯಲ್ಲಂತೂ ಈ tension, ಡಿಪ್ರೆಶನ್ (ಮಾನಸಿಕ ಅಶಾಂತಿ, ಒತ್ತಡ)ಗೆ ಕಾರಣವೇ ಬೇಕಿಲ್ಲ! ಕಾಲೇಜಿನಲ್ಲಿ ಬ್ಯೂಟಿಕ್ವೀನ್ ಆಗಿರುವ ಯುವತಿ ಬೇರೊಬ್ಬನ ಜೊತೆಯಲ್ಲಿ ಆತ್ಮೀಯವಾಗಿದ್ದಾಳೆಂದು ಡಿಪ್ರೆಶನ್!

ಪರೀಕ್ಷೆಗಳು ಹತ್ತಿರ ಬರುತ್ತಿವೆ ಎಂದು ಟೆನ್‌ಷನ್! ಕ್ರಿಕೆಟ್ ಮ್ಯಾಚ್ ನೋಡುವಾಗ ಇಂಡಿಯಾದ ಸೋಲು, ಗೆಲುವಿನ ಬಗ್ಗೆ ಟೆನ್‌ಷನ್!

ತನ್ನ ಬಾಯ್‌ಫ್ರೆಂಡ್ ಇತ್ತೀಚೆಗೆ ತನ್ನ ಜೊತೆ ಮಾತು ಆಡಿಸುತ್ತಿಲ್ಲವೆಂದು ಡಿಪ್ರೆಶನ್!

ಈ ಬಗೆಯ 'ಹೃದಯದ' ಆಘಾತಗಳು ಹದಿಹರೆಯದಲ್ಲಿ ಮಾಮೂಲು. ತುಂಬಾ ಒತ್ತಡವಾದಾಗ ಹುಡುಗರು ಸಿಗರೇಟು, ಕುಡಿತದ ಮೊರೆ ಹೋಗುವುದು ಸಾಮಾನ್ಯ. ಈಗಂತೂ ಟಿ.ವಿ.ಯ ಜಾಹಿರಾತುಗಳಲ್ಲಿ ಪಾನ್ ಮಸಾಲಾ, ಘುಟ್ಕಾ, ಸಿಗರೇಟು, ಮದ್ಯಗಳ ವೈಭವ ಹೆಚ್ಚಾಗಿದೆ. 'ನಾನು ಸಿಗರೇಟ್ ಬಿಟ್ಟುಬಿಟ್ವೆ, ಕಿಕ್ ಬೇಕೂಂತ ಘುಟ್ಕಾ ಹಾಕ್ಕೋತೀನಿ'. ಎಂದು ಹೇಳಿಕೊಳ್ಳುವ ಹುಡುಗರು ಅನೇಕರು. ಸಿಗರೇಟು, ದೇಹಕ್ಕೆ ಎಷ್ಟು ಹಾನಿಕರವೋ ಘುಟ್ಕಾ ಕೂಡ 'ಚೂಯಿಂಗ್ ಟೊಬ್ಯಾಕೋ' ಎನ್ನುವುದನ್ನು ಮರೆತಿದ್ದಾರೆಯೇ? ಘುಟ್ಕಾ,ಪಾನ್‌ಪರಾಗ್ ಇವೆಲ್ಲಾ ತಂಬಾಕು ಮಿಶ್ರಿತ ಅಡಿಕೆಪುಡಿ, ಹಾಕಿಕೊಂಡಾಗ ಬರುವ ಮಜಾ ಅದರ ಪರಿಣಾಮ ಎದುರಿಸಬೇಕಾದಾಗ ಇರುವುದಿಲ್ಲ!

Anti-Depressants (ಮಾನಸಿಕ ಒತ್ತಡ ತಗ್ಗಿಸುವ ಮಾತ್ರೆಗಳು) ಈಗ ಔಷಧಿ ಮಾರಾಟಗಾರರಲ್ಲಿ ಲಭ್ಯವಾಗಿರುವುದರಿಂದ ಯುವಜನರ ಕೈಗೆ ಸುಲಭವಾಗಿ ಎಟುಕುತ್ತದೆ. ಮನೆಯಲ್ಲಿ ರಕ್ತದೊತ್ತಡ ವಿರುದ್ಧ ಹೃದ್ರೋಗಿಗಳು ಉಪಯೋಗಿಸುವ ಪ್ರಿಸ್‌ಕ್ರಿಪ್ಷನ್ ಔಷಧಿಯ ಅಂಗಡಿಗಳಲ್ಲಿ ತೋರಿಸಿ ಮಾತ್ರೆ ಪಡೆಯುವುದನ್ನು ಯುವಜನರು ಅಭ್ಯಾಸ ಮಾಡಿಕೊಂಡಿದ್ದಾರೆ. ಈ ಮಾತ್ರೆಗಳನ್ನು ನಿಯಮಿತವಿಲ್ಲದೇ ಸೇವಿಸುವುದರಿಂದ ಮಿದುಳು ಮಂದವಾಗಿ ಚಟುವಟಿಕೆಯೂ ಕಡಿಮೆಯಾಗುತ್ತದೆ.

ಕಾಲೇಜು ದಿನಗಳಿರುವುದೇ ಎಂಜಾಯ್ ಮಾಡುವುದಕ್ಕೆ! ಆ ಮಾತನ್ನು ಎಲ್ಲರು ಒಪ್ಪಲೇಬೇಕು, ನಿಜ. ಎಂಜಾಯ್ ಎಂದರೇನು?



ಈಗಿನ ಪೀಳಿಗೆಯವರ ಪ್ರಕಾರ ದಿನವಿಡೀ ಟಿ.ವಿ.ಯ ಚ್ಯಾನಲ್‌ಗಳನ್ನು ಬದಲಾಯಿಸುತ್ತಾ ಮಗ್ನರಾಗಿರುವುದು, ಕಾರ್ಡ್ಸ್ ಆಡುವುದು, ವೀಡಿಯೋಗೇಮ್ಸ್ ಇತ್ಯಾದಿ. ಇವುಗಳೇ ಮನರಂಜನಾ ಕೇಂದ್ರವಾಗಿ ಬಿಟ್ಟಿವೆ. ಬೌದ್ಧಿಕ ಜ್ಞಾನ ಹೆಚ್ಚಿಸುವ ಕಾರ್ಯಕ್ರಮಗಳು, ಕ್ರೀಡೆ, ಸಂಗೀತ-ಸಾಹಿತ್ಯ ನಮ್ಮ ಯುವಜನರಿಗೆ ಬೇಡದ ಕಸವಾಗಿದೆ. ಟಿ.ವಿಯ ಯಾವ ಚ್ಯಾನಲ್ ನೋಡಿದರೂ ಚಿತ್ರಗೀತೆಗಳು, ಸಿನಿಮಾ ನಟರ ಸಂದರ್ಶನಗಳು, ಪಾಪ್ ಮ್ಯೂಜಿಕ್, ಬ್ರೇಕ್‌ಡ್ಯಾನ್ಸ್‌ಗಳೇ ತುಂಬಿರುವಾಗ ಹದಿಹರೆಯದವರಿಗೆ ಆರೋಗ್ಯಕರ ಮನೋರಂಜನೆ ಸಿಗುವುದಾದರೂ ಹೇಗೆ? ಮೊನ್ನೆ ಟಿ.ವಿ.ಯಲ್ಲಿ ಒಂದು ಚ್ಯಾನೆಲ್‌ನಲ್ಲಿ (ಹೆಸರು ಬೇಕಿಲ್ಲ) ಯುವಜನರನ್ನು ಸಂದರ್ಶಿಸುತ್ತಾ ಕೇಳಿದ ಪ್ರಶ್ನೆಯಿದು:

'ಅಪ್ಪ-ಅಮ್ಮನ ಮಾತುಗಳನ್ನು ಮೀರಿ ಮನೆ ಬಿಟ್ಟು ಬಂದರೆ ಹೇಗಿರುತ್ತದೆ?'

'ಇಟ್ ವಿಲ್ ಬಿ ಗ್ರೇಟ್! ಮಜವಾಗಿರುತ್ತದೆ!' ಇದು ಅವರಿಂದ [illegible] ಪ್ರತಿಕ್ರಿಯೆ! [illegible] ಸಾಗುತ್ತಿರುವ ಯುವಜನರಲ್ಲಿ ಈ tension, depression ಬರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಇದರಿಂದ ಅವರು ದೈಹಿಕ, ಮಾನಸಿಕವಾಗಿ ಕುಗ್ಗುತ್ತಿದ್ದಾರೆ. ಹೆಚ್ಚು ಅಶಾಂತಿಗೊಳ್ಳುತ್ತಿದ್ದಾರೆ. ಅದನ್ನು ನಿವಾರಿಸಲು ಆತ್ಮಬಲ, [illegible] ಯುವಪೀಳಿಗೆ ಮದ್ದು ಸೇವನೆಗೆ (Drug addiction) ಬಲಿಯಾಗುತ್ತಿದ್ದಾರೆ.

ಅಂದವಾಗಿ ಎಲ್ಲರ ಕೇಂದ್ರಬಿಂದುವಾಗಬೇಕೆಂಬ ಆಕಾಂಕ್ಷೆ ಯಾವ ಹೆಣ್ಣುಮಕ್ಕಳಿಗಿರುವುದಿಲ್ಲ? 'ಮೊಡವೆಗಳನ್ನು ತಡೆಗಟ್ಟಲು 'Safi' ಕುಡಿಯಿರಿ'

"Skin Pills' ನಿಯಮಿತವಾಗ ಸೇವಿಸಿ [illegible]

'ಕೂದಲು ದಟ್ಟವಾಗಿ ಬೆಳೆಯಲು [illegible] ಮಾತ್ರೆಗಳನ್ನು ತೆಗೆದುಕೊಳ್ಳಿ.

'ಸ್ಲಿಮ್ಮಿಂಗ್ ಪಿಲ್ಸ್ - [illegible] ತಿಂಗಳೊಳಗೆ ಐದು ಕಿಲೋ [illegible]

ಖಂಡಿತ!

ಈ ಜಾಹಿರಾತುಗಳು ಯುವತಿಯರಿಗೆ ಸುಗ್ಗಿಯಂತೆ, ಟಿ.ವಿಗಳಲ್ಲಿ, ಪತ್ರಿಕೆಗಳಲ್ಲಿ ಆಯಾ ಪದಾರ್ಥಗಳಿಗೆ ಸುಂದರ ರೂಪದರ್ಶಿಯರನ್ನು ಕಂಡಾಗಲಂತೂ ಪ್ರತಿಯೊಬ್ಬ ಯುವತಿಗೂ ಹಾಗೇ ಕಾಣುವ ಹಂಬಲ!

'ಆ ಪ್ರಾಡಕ್ಟ್ ಬಳಸಿದರೆ ನಾನೂ ಅವಳ ಹಾಗೇ ಆಗ್ತೀನಿ'.

'ಸ್ಲಿಮ್ಮಿಂಗ್ ಪಿಲ್ಸ್ ತೊಗೊಂಡರೆ ನಾನೂ ಮಿಸ್. ಇಂಡಿಯಾ ಆಗಬಹುದು'ಎಂಬ ಆಸೆಯಿಂದ ಕೈಗೆಟುಕುವ ಪದಾರ್ಥಗಳನ್ನು ತಾರತಮ್ಯವಿಲ್ಲದೇ, ನಿಯಮಿತವಿಲ್ಲದೇ ಸೇವಿಸುವುದು ಈಗ ಮಾಮೂಲಿನ ಅಭ್ಯಾಸವೇ ಆಗಿದೆ.

ಪ್ರಿಯ ಗೆಳತಿಯರೇ, ಸೌಂದರ್ಯವೆಂದರೇನು? ಅದು ಬಿಳಿಯ ಕಾಂತಿಯುತ ಚರ್ಮದಲ್ಲಾಗಲಿ, ನೀಳ ಕೂದಲಿನಲ್ಲಾಗಲಿ, ಆಕರ್ಷಕ ಮೈಮಾಟದಲ್ಲಾಗಲಿ, ಗೋಚರಿಸುವುದಿಲ್ಲ. Beauty lies in the beholder's eyes (ನೋಡುವವರ ಕಣ್ಣುಗಳಲ್ಲಿ ಸೌಂದರ್ಯ ಅಡಗಿರುತ್ತದೆ) ಎನ್ನುವ ಗಾದೆ ಮಾತು ಕೇಳಿರಬಹುದು. ಹಿತಮಿತವಾದ ನಡವಳಿಕೆ, ಸಾಮಾನ್ಯ ತಿಳುವಳಿಕೆ, ಆಕರ್ಷಕ ಮಾತುಕತೆ, ಮುಖದ ಮೇಲಿನ ಮಾಸದ ಮುಗುಳು ನಗೆಯೇ ಸೌಂದರ್ಯವನ್ನು ಪ್ರತಿಬಿಂಬಿಸುತ್ತದೆ. ಇದನ್ನು ಹೊಂದಲು ಯಾವ ಕೃತಕ ಪದಾರ್ಥಗಳ ಅವಶ್ಯಕತೆಯೂ ಇಲ್ಲ. ಪ್ರತಿಯೊಬ್ಬರೂ ದೈವದತ್ತವಾಗಿ ಒಂದೊಂದು ಅಂಗಗಳಲ್ಲಿ ಸೌಂದರ್ಯ ಹೊಂದಿರುತ್ತಾರೆ. ಕೆಲವರ ಕಣ್ಣುಗಳೇ ಚೆಂದ, ಕೆಲವರ ತುಟಿಗಳು ಅಂದ, ಕೆಲವರ ಕೂದಲು ಮನೋಹರ- ತಮ್ಮ ಸೌಂದರ್ಯದ ಅಂಶ ಯಾವುದೆಂದು ಅರಿತ ಹೆಣ್ಣು ತನ್ನ ಚೆಲುವನ್ನು ಇಮ್ಮಡಿಗೊಳಿಸಿ, ತನ್ನಲ್ಲಿರುವ ದೋಷಗಳನ್ನು ಮರೆಮಾಚುವಂತೆ ಅಲಂಕರಿಸಿಕೊಂಡರೆ ಈ ಜಗತ್ತಿನಲ್ಲಿ ಕುರೂಪಿಯರೆಂದೇ ಯಾರೂ ಇರಲಾರರು. ನಿಮ್ಮ ಮೈಬಣ್ಣ, ಮೈಮಾಟ, ತಲೆಗೂದಲು, ಮುಖಚರ್ಯೆ ಎಲ್ಲವೂ ನಿಮಗೆ ಅನುವಂಶಿಕತೆಯಿಂದ ಬಂದ ಬಳುವಳಿ. ಯಾವ ಔಷಧವಾಗಲಿ, ರಾಸಾಯನಿಕ ಪದಾರ್ಥಗಳಿಂದಾಗಲಿ ನಿಮ್ಮ ಸಹಜ ವ್ಯಕ್ತಿತ್ವವನ್ನು ದೈಹಿಕವಾಗಲಿ, ಮಾನಸಿಕವಾಗಲಿ ಬದಲಾಯಿಸಲು ಸಾಧ್ಯವಿಲ್ಲ. ಪ್ರಪಂಚದಲ್ಲಿ ಪ್ರತಿಯೊಂದು ಹೆಣ್ಣು ವಿಶ್ವಸುಂದರಿಯಾಗಲು ಸಾಧ್ಯವೇ? ಆ ಆಕಾಂಕ್ಷೆ ನಿಮಗೆ ಬೇಡವೇ ಬೇಡ! ಪ್ರತಿಯೊಬ್ಬ ಹೆಣ್ಣುಮಗಳು ತಂದೆ, ತಾಯಿಯರಿಗೆ ಪ್ರೀತಿಯ ಮಗಳಾಗಿ, ಗಂಡನಿಗೆ ಒಲವಿನ ಪತ್ನಿಯಾಗಿ ಮಕ್ಕಳಿಗೆ ಮಮತೆಯ ತಾಯಿಯಾಗಿ, ದೇಶಕ್ಕೆ ಉತ್ತಮ ಪ್ರಜೆಯಾಗಿ ಬಾಳಿದರೆ ಬೇಕಾದಷ್ಟಾಯಿತು. ಸೌಂದರ್ಯವನ್ನು ಔಷಧ, ಮಾತ್ರೆಗಳ ಮೂಲಕ ಕೊಂಡುಕೊಳ್ಳಲು ಯಾರಿಗಾದರೂ ಅಸಾಧ್ಯವಾದುದು ಎಂಬುದನ್ನು ಮರೆಯಬೇಡಿ.

ಮಕ್ಕಳ ಬೆಳವಣಿಗೆಗೆ ಪೋಷಕಾಂಶಗಳು ಅಗತ್ಯ. ಹುಟ್ಟಿದಾಗಿನಿಂದ ಸಣ್ಣ ಮಕ್ಕಳಿಂದ ಹಿಡಿದು 'Vitamin drops' ಅಭ್ಯಾಸ ಮಾಡಿಸುವ ತಂದೆ ತಾಯಂದಿರು ಸಾವಿರಾರು ಮಂದಿ ಇದ್ದಾರೆ. ಮಕ್ಕಳು ಬೆಳೆದು ದೊಡ್ಡವರಾದಂತೆ ಈ 'ಟಾನಿಕ್'ಗಳಿಗೆ ಗುಲಾಮರಾಗುತ್ತಾರೆ.

'ಕಾಂತಿಯುತ ಕಣ್ಣುಗಳಿಗೆ ವಿಟಮಿನ್ ಎ ಮಾತ್ರೆಗಳು'.

'ಕೂದಲು ನೆರೆಯುವುದನ್ನು ತಪ್ಪಿಸಲು ವಿಟಮಿನ್ ಬಿ ಕಾಂಪ್ಲೆಕ್ಸ್'

'ಆರೋಗ್ಯ ಹಲ್ಲು, ವಸಡುಗಳಿಗೆ ವಿಟಮಿನ್ ಡಿ'.

'ಎಲುಬುಗಳು ಗಟ್ಟಿಯಾಗಲು ವಿಟಮಿನ್ ಇ'.

'ರಕ್ತಹೀನತೆ ತಡೆಯಲು ಐರನ್ ಮಾತ್ರೆಗಳು'.

ಇಷ್ಟೆಲ್ಲಾ ಪೌಷ್ಟಿಕಾಂಶವನ್ನು ಪಡೆಯಲು

ದಿನಕ್ಕೆ ಎಷ್ಟು ಮಾತ್ರೆಗಳನ್ನು ಸೇವಿಸುವಿರಿ ಎಂದು ಯೋಚಿಸಿದ್ದೀರಾ? ಮನುಷ್ಯನ ದೇಹಕ್ಕೆ ಅನ್ನಾಂಗಗಳ ಅಗತ್ಯ ಖಂಡಿತವಾಗಿಯೂ ಇದೆ. ಒಪ್ಪುವ ಮಾತೇ ಸರಿ! ಆದರೆ ನೈಸರ್ಗಿಕವಾದ ಪದಾರ್ಥಗಳಲ್ಲಿ ಯಥೇಚ್ಛವಾಗಿ ಲಭ್ಯವಾಗುವ ಅನ್ನಾಂಗಗಳನ್ನು ನಿರ್ಲಕ್ಷಿಸಿ ರಾಸಾಯನಿಕವಾಗಿ ತಯಾರಿಸಲ್ಪಟ್ಟ ಈ ಮಾತ್ರೆಗಳನ್ನು ಸೇವಿಸುವ ಅಗತ್ಯವಿದೆಯೇ ಎಂದು ಯೋಚಿಸಿ ನೋಡಿ! ಮಕ್ಕಳ ಬೆಳವಣಿಗೆಗೆ ಸಮತೋಲನ ಆಹಾರ ನೀಡಿ. ಹೇರಳವಾಗಿ ತರಕಾರಿ, ಹಣ್ಣುಗಳು, ಮೊಟ್ಟೆ, ಹಾಲು ಕೊಟ್ಟರೆ ಮಕ್ಕಳು ಆರೋಗ್ಯಶಾಲಿಯಾಗಿ ಬೆಳೆಯುವುದಲ್ಲದೇ ಯಾವ ಕೃತಕ ಪೋಷಕಾಂಶಗಳ ಅಗತ್ಯವೂ ಬರುವದಿಲ್ಲ. ಹದಿಹರೆಯದವರು ದೇಹಕ್ಕೆ ಯಾವ ಉಪಯೋಗವೂ ನೀಡದ ಸಾಫ್ಟ್ ಡ್ರಿಂಕ್ಸ್, ಐಸ್‌ಕ್ರೀಂ. ಚಿಪ್ಸ್, ಫಾಸ್ಟ್ ಫುಡ್ ಮುಂತಾದ ಪದಾರ್ಥಗಳನ್ನು ಸೇವಿಸುವುದಕ್ಕಿಂತ ತಾಜಾ ಹಣ್ಣಿನ ರಸ, ಹಾಲು, ತರಕಾರಿಗಳನ್ನು ಬಳಸಿದರೆ ನೀವು 'ವಿಟಮಿನ್ ಪಿಲ್ಸ್' ಬಗ್ಗೆ ಯೋಚಿಸಲೇಬೇಕಿಲ್ಲ. ಪ್ರಕೃತಿದತ್ತವಾದ ನೈಸರ್ಗಿಕ ಸೌಂದರ್ಯ ನಿಮ್ಮದಾಗುತ್ತದೆ. ಹೂವು ಸ್ವಾಭಾವಿಕವಾಗಿ ಸುಗಂಧ ಸೂಸಬೇಕೇ ವಿನಹ ಅದಕ್ಕೆ ಕೃತಕ ಸುವಾಸನೆ ಚಿಮುಕಿಸಿದರೆ ಅದು ತಾತ್ಕಾಲಿಕವಾಗಿ ಉಳಿಯುತ್ತದೆಯೇ ಹೊರತು ಶಾಶ್ವತವಾಗಿ ಮನಸ್ಸಿಗೆ ಆಹ್ಲಾದ ನೀಡದು.

ಕೆಲವು ಹೆಣ್ಣುಮಕ್ಕಳಿಗೆ ವೈದ್ಯಕೀಯವಾಗಿ ಅನ್ನಾಂಗಗಳ ಅಗತ್ಯ ಬಿದ್ದರೆ ತಪ್ಪದೇ ವೈದ್ಯರನ್ನು ಸಂಪರ್ಕಿಸಿದ ನಂತರವೇ ಅವುಗಳನ್ನು ಸೇವಿಸಿ. ವಿಟಮಿನ್ ಎ, ವಿಟಮಿನ್ ಡಿ. ವಿಟಮಿನ್ ಇ ಮಾತ್ರೆಗಳನ್ನು ಸ್ವತಂತ್ರ್ಯವಾಗಿ ನೀವೇ ಸೇವಿಸುವುದು ದೇಹಕ್ಕೆ ಹಾನಿಕರ.

ಈ ಔಷಧ, ಮಾತ್ರೆಗಳ ಪ್ರಪಂಚದಿಂದ ಹೊರಬಂದು ಒಮ್ಮೆ ನಮ್ಮ ನೈಸರ್ಗಿಕ ಜಗತ್ತಿನ ಕಡೆ ನೋಡ ಬನ್ನಿ.

1. ನಿಮಗೆ ಮರೆವು ಹೆಚ್ಚಾಗಿದೆಯೇ? ನಿಮ್ಮ ಆಹಾರದಲ್ಲಿ ಹಸಿರು ತರಕಾರಿಗಳು, ತಾಜಾ ಹಣ್ಣುಗಳು ಹೆಚ್ಚಾಗಿರಲಿ, ಪರೀಕ್ಷೆ ಸಮೀಪಿಸುವಾಗ ಕೊಬ್ಬು ಹೆಚ್ಚಾಗಿರುವ ಪದಾರ್ಥಗಳನ್ನು ತ್ಯಜಿಸಿಬಿಡಿ. ಸಿಗರೇಟು, ತಂಬಾಕು ಕೂಡದು. ಕಾಫಿ, ಟೀ ಸೇವನೆ ಮಿತವಾಗಿರಲಿ. ಪ್ರಶಾಂತ ವಾತಾವರಣದಲ್ಲಿ ಕುಳಿತು ಓದಿಕೊಳ್ಳಿ,

2. ರಾತ್ರಿ ನೆಮ್ಮದಿಯಾಗಿ ನಿದ್ರಿಸಲು ಕೆಲವು ಸುಲಭ ಸೂಚನೆಗಳಿವೆ. ಅನುಕೂಲವಾದರೆ ಸಂಜೆ ಮತ್ತೊಮ್ಮೆ ಬೆಚ್ಚನೆಯ ನೀರಿನಲ್ಲಿ ಸ್ನಾನ ಮಾಡಿ. ಸಾಯಂಕಾಲದ ಮೇಲೆ ಯಾವುದೇ ವಿಷಯದ ಬಗ್ಗೆ ಗಹನವಾಗಿ ಚಿಂತೆ ಮಾಡಬೇಡಿ. ರಾತ್ರಿ ಲಘುವಾಗಿ ಊಟ ಮಾಡಿ, ಮಲಗುವ ಮುನ್ನ ಒಂದು ಲೋಟ ಹಾಲಿಗೆ ಜೇನುತುಪ್ಪ ಬೆರೆಸಿ ಕುಡಿಯಿರಿ. ನಿಮ್ಮ ಬೆಡ್‌ರೂಂನಲ್ಲಿ ಗಾಳಿ, ಬೆಳಕು ಹೇರಳವಾಗಿರಲಿ. ಗೋಡೆಗಳು ತಿಳಿಯಾದ ಬಣ್ಣದಿಂದ ಪೆಯಿಂಟ್ ಮಾಡಿದ್ದರೆ ಒಳ್ಳೆಯದು.

3. ಡಿಪ್ರೆಶನ್ ಹೆಚ್ಚಾಗಿದೆಯೇ? ಸ್ವಲ್ಪ ತಡೆಯಿರಿ- ಮಾತ್ರೆಗೆ ಕೈ ಹಾಕಬೇಡಿ! ನಿಮಗೆ ಮಾನಸಿಕ ಒತ್ತಡ ಹೆಚ್ಚಾಗಿದ್ದರೆ ಒಂದರ್ಧ ಗಂಟೆ ಯಾರ ಜೊತೆಯೂ ಮಾತಾಡದೇ ನಿಮಗೆ ಪ್ರಿಯವೆನಿಸುವ ಸಂಗೀತ ಹಾಕಿಕೊಂಡು ವಿಶ್ರಮಿಸಿ. ನಿಮಗೆ ಕೌಟುಂಬಿಕ ಸಮಸ್ಯೆಗಳಿಂದ ಡಿಪ್ರೆಶನ್ ಉಂಟಾಗಿದ್ದರೆ ನಿಮ್ಮ ಆಪ್ತರೊಡನೆ ಮನ ಬಿಚ್ಚಿ ಮಾತಾಡಿ ನಿಮ್ಮ ಸಮಸ್ಯೆ ತೋಡಿಕೊಳ್ಳಿ. ಆಪ್ತಗೆಳತನಕ್ಕಿಂತ ಉತ್ತಮ ಚಿಕಿತ್ಸೆ ಬೇರೊಂದಿಲ್ಲ. ಪ್ರತಿಯೊಬ್ಬರಿಗೂ ಯಾವುದಾದರೂ ಹವ್ಯಾಸವಿದ್ದೇ ಇರುತ್ತದೆ. ಅದನ್ನು ಮುಂದುವರೆಸಿ ರೂಢಿಸಿಕೊಳ್ಳಿ, ನಿಮಗೆ ಯಾವುದು ಸಮಸ್ಯೆ ಎನಿಸುತ್ತದೋ ಅದನ್ನು ಅನಾವಶ್ಯಕವಾಗಿ ಮನಸ್ಸಿನಲ್ಲಿಟ್ಟುಕೊಂಡು ಕೊರಗಬೇಡಿ. ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸುವ ಸ್ಥೈರ್ಯ ಬೆಳೆಸಿಕೊಳ್ಳಿ. ಮಕ್ಕಳೊಂದಿಗೆ ಬೆರೆತು ಆಟವಾಡಿದರೆ ಬಳಲಿದ ಮನಸ್ಸಿಗೆ ಆಹ್ಲಾದ ಸಿಗುತ್ತದೆ. ಯೋಗಾಭ್ಯಾಸ, ಮೆಡಿಟೇಶನ್ ಸಹ ಮಾನಸಿಕ ಒತ್ತಡಗಳಿಗೆ ಉಪಯೋಗವಾಗುತ್ತದೆ.

4. ಪಾರ್ಟಿಗೆ, ಮದುವೆ ಮನೆಗೆ ಹೋದರೆ ಅಜೀರ್ಣವಾಗುತ್ತದೆಯೇ? ಅಂಥ ಸಮಾರಂಭಗಳಿಗೆ ಹೋಗುವ ಹಿಂದಿನ ದಿನ ಹಾಗೂ ಹೋದ ಮುಂದಿನ ಎರಡು ದಿನಗಳು ಹೆಚ್ಚು ಉಪ್ಪು, ಖಾರವಿಲ್ಲದ ಆಹಾರ ಸೇವಿಸಿ. ರಾತ್ರಿಯೂಟ ತಪ್ಪಿಸಿ ಹಾಲು, ಹಣ್ಣನ್ನು ಸೇವಿಸಿದರೆ ಮರುದಿನದ ಭರ್ಜರಿ ಊಟ ನಿಮ್ಮ ಹೊಟ್ಟೆಗೆ ತೊಂದರೆ ಮಾಡುವುದಿಲ್ಲ. ಯಾವುದೇ ಸಮಾರಂಭಕ್ಕೆ ಹೋದರೂ ಹೊಟ್ಟೆ ಬಿರಿಯುವಂತೆ ಮಾತ್ರ ತಿನ್ನಬೇಡಿ.

5. ಕಾಲೇಜು ಜೀವನ ಕೇವಲ ಮಜಾ ಮಾಡಲೆಂದೇ ವಿನಿಯೋಗಿಸಬೇಡಿ. ಜೀವನದಲ್ಲಿ ಮನರಂಜನೆ, ಬೇಕು, ನಿಜ. ಆದರೆ ಅತಿಯಾಗಿ ಅಮೃತ ಸೇವಿಸಿದರೂ ವಿಷವಾಗುತ್ತದೆ. ಹದಿಹರೆಯದಲ್ಲಿ ಪಿಕ್‌ನಿಕ್, ಸಿನಿಮಾ, ಪಾರ್ಟಿ, ಎಲ್ಲವೂ ಚೆನ್ನ. ಆದರೆ ಪ್ರತಿಯೊಂದು ಚಟುವಟಿಕೆಗಳಲ್ಲೂ ಸೀಮಾರೇಖೆ ದಾಟದಂತೆ ಎಚ್ಚರಿಕೆ ವಹಿಸಿ. ಯಾವ ಕಾರಣಕ್ಕೂ ನಿಮ್ಮ ಓದಿಗೆ, ವ್ಯಾಸಂಗಕ್ಕೆ ಮಾತ್ರ ಭಂಗ ತಂದುಕೊಳ್ಳಬೇಡಿ.

ಈ ಲೇಖನದಲ್ಲಿ ನಾನು ಯಾವ ಔಷಧ ತಯಾರಕರನ್ನೂ ಟೀಕೆ ಮಾಡುವ ಉದ್ದೇಶವಿಲ್ಲ. ಅನಾರೋಗ್ಯದ ಸಮಯದಲ್ಲಿ ಮಾತ್ರೆಗಳು ಮಾನವ ದೇಹಕ್ಕೆ ಅಗತ್ಯ. ಆದರೆ ಮಾತ್ರೆಗಳ ಸೇವನೆ ಮಾಡಲು ಈ ನಿಯಮಗಳನ್ನು ಪಾಲಿಸಿ:

1. ವೈದ್ಯರ ಸಲಹೆ ಚೀಟಿಯಿಲ್ಲದ ಸಣ್ಣ ತೊಂದರೆಗಾದರೂ ಯಾವ ಮಾತ್ರೆಯನ್ನು ಕೊಳ್ಳಬೇಡಿ.

2. ನಿಮ್ಮ ಗೆಳೆಯ/ಗೆಳತಿ ನಿಮಗೆ ಸೂಚಿಸಿದ ಮಾತ್ರೆಯನ್ನು ಕುರುಡಾಗಿ ಸೇವಿಸಬೇಡಿ. ಅವರ‍್ಯಾರೂ ವೈದ್ಯರಂತೆ ಸಲಹೆ ನೀಡಲು ಸಾಧ್ಯವಿಲ್ಲ.

3. ಮನೆಯಲ್ಲಿ ವಿವಿಧ ಮಾತ್ರೆಗಳನ್ನು ಶೇಖರಿಸಿ ಇಡಬೇಡಿ. ಆಗ ಸಣ್ಣ ಪುಟ್ಟ ತೊಂದರೆಗಳಿಗೂ ಅದನ್ನು ಸೇವಿಸಲು ಮನಸ್ಸು ಪ್ರೇರೇಪಿಸುತ್ತದೆ. ಮನೆಯಲ್ಲಿ ಚಿಕ್ಕ ಮಕ್ಕಳಿದ್ದರಂತೂ ಮಾತ್ರೆಗಳನ್ನು ಅವರ ಕೈಗೆಟುಕದಂತೆ ದೂರವಿಡಿ.

5. ನಿಮಗೆ ಅಭ್ಯಾಸವಿಲ್ಲದ ಮಾತ್ರೆಗಳನ್ನು ನೀವೇ ಸ್ವ-ನಿರ್ಧಾರದಿಂದ ಸೇವಿಸಬೇಡಿ. ಅದರ ದುಷ್ಪರಿಣಾಮಗಳು ಕೆಲವೊಮ್ಮೆ ನಿಮ್ಮ ಪ್ರಾಣಕ್ಕೇ ಅಪಾಯ ತರುತ್ತವೆ.

6. ನೋವು ಅಧಿಕವಾದಾಗ ಮಾತ್ರ ನೋವು ನಿವಾರಕ ಮಾತ್ರೆ ತೆಗೆದುಕೊಳ್ಳಿ,

7. ಪ್ರತಿಯೊಂದು ಮಾತ್ರೆ ಸೇವಿಸುವಾಗಲೂ ಅದರ ತಯಾರಾದ ಅವಧಿ (manufacturing date) ಹಾಗೂ ಅಂತ್ಯ ತಾರೀಖು (Expiry date) ಗಮನಿಸಿ.

7. ನಾಮಫಲಕವಿಲ್ಲದ ಮಾತ್ರೆಗಳನ್ನು ವೈದ್ಯರಿಂದಲೂ ತೆಗೆದುಕೊಳ್ಳಬೇಡಿ. ನೀವು ಮುಂದುವರೆದ ಬುದ್ಧಿವಂತ ಪ್ರಜೆಯಾಗಿದ್ದರೆ ಮಾತ್ರೆಯಲ್ಲಿರುವ ಪದಾರ್ಥಗಳ ಬಗ್ಗೆ ತಿಳಿದುಕೊಳ್ಳಿ. (Pharmacological contents). ಮಾತ್ರೆಯಲ್ಲಿರುವ ವಸ್ತುಗಳ ಹೆಸರನ್ನು ಮಾತ್ರೆಗಳ ಕವರ್ ಮೇಲೇ ಬರೆದಿರುತ್ತದೆ. ಅನಾವಶ್ಯಕವಾಗಿ ಯಾವ ಪದಾರ್ಥವೂ ನಿಮ್ಮ ದೇಹ ಪ್ರವೇಶಿಸದಂತೆ ಜಾಗೃತರಾಗಿರಿ.

ಮಾತ್ರೆಗಳನ್ನು, 'ಸುಮ್ನೆ, ಎಕ್ಸ್‌ಪೆರಿಮೆಂಟ್ ಮಾಡೋಕೆ ತೆಗೆದುಕೊಳ್ಳುವಂಥಹ ಮಹಾನುಭಾವರೂ ಉಂಟು. ಯಾವ ಪುರುಷಾರ್ಥಕ್ಕಾಗಿ ನೀವು ಪ್ರಯೋಗ ನಡೆಸುವ 'ಗಿನ್ನಿ ಪಿಗ್' ಆಗ ಬಯಸುತ್ತೀರಿ? ಈ ಪೂರ್ವಗ್ರಹಪೀಡಿತ ಭಾವನೆಗಳಿಂದ ಹೊರಬಂದು ಬದುಕನ್ನು ನಿಶ್ಚಲ ಮನಸ್ಸಿನಿಂದ ಎದುರಿಸಿ! ಪ್ರತಿಯೊಬ್ಬರೂ ಅತಿಶಯವಾದ ವ್ಯಕ್ತಿಯಾಗಿ ವಿಜೃಂಭಿಸಲು ಸಾಧ್ಯವಿಲ್ಲದಿದ್ದರೂ - ನಿಮ್ಮ ಸಹಜ, ಸೌಮ್ಯ ಸ್ವಭಾವವನ್ನೇ ರೂಢಿಸಿಕೊಳ್ಳಿ. ಜಾಹಿರಾತುಗಳಲ್ಲಿ ತೋರಿಕೆಗೆ ಪದರ್ಶಿತವಾಗುವ "Gimmicks' ಗೆ ನಿಮ್ಮ ವ್ಯಕ್ತಿತ್ವ ಕಲುಷಿತವಾಗುವುದು ಬೇಡ. ಅಲ್ಲವೇ?

ಕ್ಲಾಸ್ ರೂಂ

ಕೆಲಸವಿತ್ತು ಸೇನಾಧಿಪತಿಗಳೆ

ನಾನು ದ್ವಿತೀಯ ಪಿಯುಸಿ ಓದುವಾಗ ಮೈಸೂರಿನಿಂದ ಒಬ್ಬ Teacher ಬಂದಿದ್ದರು. ಅವರು ಮಾತನಾಡುವಾಗ 'ಏನ್! ದೊರೆ' ಎಂದು ಮಾತು ಶುರು ಮಾಡುತ್ತಿದ್ದರು. ಒಂದು ದಿನ ಕ್ಲಾಸ್ ರೂಂ ನಲ್ಲಿ ಮೈಸೂರಿನ Teacherರು ಕ್ಲಾಸ್ ತೆಗೆದು ಕೊಂಡಿದ್ದರು. ಆ ಸಮಯದಲ್ಲಿ ಒಬ್ಬ ವಿದ್ಯಾರ್ಥಿ ಬಂದು 'May I come in Sir' ಎಂದ. ಆಗ Teacherರು 'ಏನ್ ದೊರೆ ಲೇಟಾಗಿ ಬಂದೆ' ಎಂದರು. ಆಗ ಆ ವಿದ್ಯಾರ್ಥಿ 'ಮನೆಯಲ್ಲಿ ಸ್ವಲ್ಪ ಕೆಲಸವಿತ್ತು ಸೇನಾಧಿಪತಿಗಳೆ' ಎಂದ. ಆಗ ಕ್ಲಾಸಿನಲ್ಲಿ ಕುಳಿತಿರುವರೆಲ್ಲ ಗೊಳ್ಳೆಂದು ನಕ್ಕರು.

-ವಿನೋದ ಕುಮಾರ್,
ಯಲಬುರ್ಗಿ

ಅಯ್ಯಯ್ಯ ಹೊಳೆ

ನಾನು ಮಂಗಳೂರಿನಲ್ಲಿ ೩ನೇ ತರಗತಿಯಲ್ಲಿ ಓದುತ್ತಿದ್ದೆ. ಒಂದು ದಿನ ನಮ್ಮ ಗುರುಗಳು ನಮಗೆಲ್ಲರಿಗೂ ಒಬ್ಬೊಬ್ಬರಂತೆ ಸಮಾಜದ ಒಂದು ಪಾಠ ಓದಿಸುತ್ತಿದ್ದರು. ನಾನು ಒಂದು ಪ್ಯಾರಾ ಓದಿ ಮುಗಿಸಿದ ಬಳಿಕ, ನನ್ನ ಗೆಳೆಯ ಈರಯ್ಯ ಹಿರೇಮಠ ಈತನ ಸರದಿ ಬಂತು. ಕನ್ನಡ ಚೆನ್ನಾಗಿ ಓದಿಲಿಕ್ಕೆ ಬಾರದ ಆತನ ಪ್ಯಾರಾದಲ್ಲಿ ಐಯೊಳೆ ಪಟ್ಟದಕಲ್ಲು, ಇವುಗಳ ವಿವರಣೆ ಬಂದಿತು. ಆಗ ಆತನು ಐಹೊಳೆ, ಎನ್ನುವುದರ ಬದಲಾಗಿ 'ಅಯ್ಯಯ್ಯ ಹೊಳೆ' ಎಂದಾಗ ತರಗತಿಯ ತಂಬಾ ನಗೆಯ ಅಲೆಗಳಿದ್ದವು.

-ಎಸ್. ಎಮ್. ಮಾರ್‍ಯಾಳ
ಮಂಗಳೂರು

ಬೋಳು ತಲೆಯಲ್ಲಿ ಕೂದಲು

ನಾನು ೧೦ನೇ ತರಗತಿಯಲ್ಲಿ ಓದುತ್ತಿದ್ದೆ. ಆಗ ಬೋಳು ತಲೆ ಮಾಸ್ತರು ಬಂದು ರಾಮು 'ಮಹಾತ್ಮಗಾಂಧಿಯವರು ದಕ್ಷಿಣದಿಂದ ಉತ್ತರಕ್ಕೆ ರೈಲಿನಲ್ಲಿ ಪ್ರಯಾಣ ಮಾಡಿದರು. ಆವಾಗ ಗಾಂಧೀಜಿ ತಲೆ ಕೂದಲು ಯಾವ ದಿಕ್ಕಿಗೇ ಹಾರುತ್ತಿತ್ತು?' ಎಂದರು.

ರಾಮು 'ಹೇಳುತ್ತೇನೆ ಸಾರ್' ಎಂದು 'ನೀವು ಪಿಕನಿಕ್‌ಗೆ ಪೂರ್ವದಿಂದ ಪಶ್ಚಿಮಕ್ಕೆ ರೈಲಿನಲ್ಲಿ ಪ್ರಯಾಣ ಮಾಡಿರಿ, ಆಗ ನಿಮ್ಮ ತಲೆಯ ಕೂದಲು ಯಾವ ಕಡೆಗೆ ಹಾರುತ್ತೆ ಸಾರ್ ಎಂದ . ಆಗ ಮಾಸ್ತರು 'ಯಾಕೆ ರಾಮು' ಎಂದರು. 'ಸಾರ್ ನಿಮ್ಮ ತಲೆಯಲ್ಲಿ ಕೂದಲೂ ಬೇರೆ ಇಲ್ಲ' ಎಂದ. ಆಗ ಕ್ಲಾಸ್ ರೂಂನಲ್ಲಿ ಎಲ್ಲಾ ವಿದ್ಯಾರ್ಥಿಗಳು ನಗಲಾರಂಭಿಸಿದರು.

-ಬಿ. ಚಂದ್ರಶೇಖರ
ಶಕ್ತಿನಗರ

'ನೌ ಗ್ರಹಗಳು

ಒಂದು ದಿನ ನಮ್ಮ ಗುರುಗಳು ವಿಜ್ಞಾನ ಪಾಠವನ್ನು ಹೇಳುತ್ತಾ ಕೆಲವು ಪ್ರಶ್ನೆಗಳನ್ನು ಕೇಳಿದರು. ಮೊದಲನೆಯದಾಗಿ ಸೌರವ್ಯೂಹದಲ್ಲಿ ಎಷ್ಟು ಗ್ರಹಗಳಿವೆ ಎಂದರು. ಆಗ ನನ್ನ ಗೆಳತಿಯೊಬ್ಬಳು ಒಂಭತ್ತು ಎಂದಳು. ಆಗ ನಾನು ಎದ್ದು ನಿಂತು 'ಇಲ್ಲ ಸರ್ ಒಂಭತ್ತು ಅಲ್ಲ Nine' ಎಂದೆ. ಆಗ ಗುರುಗಳು ನಮ್ಮ ಉತ್ತರಗಳನ್ನು ಕೇಳಿ ಸಿಟ್ಟಿನಿಂದ ಒಂಭತ್ತು ಅಲ್ಲ Nine ಅಲ್ಲ 'ನೌವ್' ಎಂದು ಹಿಂದಿಯಲ್ಲಿ ಹೇಳಿದರು. ಆಗ ಹುಡುಗರೆಲ್ಲಾ ಬಹಳ ನಕ್ಕರು.

-ಎಸ್.ಎಸ್. ಸೋಮನಕಟ್ಟಿ
ಜಕ್ಕಲಿ

ನಿಮ್ಮ ಕಾಲ್ಗಳು ಸಾರ್

ನಾನು ೩ನೇ ತರಗತಿಯಲ್ಲಿ ಓದುತ್ತಿದ್ದೇನೆ. ಒಂದು ದಿನ ಗುರುಗಳು ಪ್ರಶ್ನೆಗಳನ್ನು ಕೇಳುತ್ತಿದ್ದರು. ಆಗ ನಾವು ಸಾಕು ಸಾರ್ ಎಂದಾಗ. ಗುರುಗಳು ಕೊನೆಯ ಪಶ್ನೆ ಎಂದು 'ಕಾಲುಗಳು ಕಂಬದಂತಿವೆ' ಎಂದಾಗ ಸಾಕಾಗಿದ್ದ ಒಬ್ಬ ಹುಡುಗ 'ನಿಮ್ಮ ಕಾಲುಗಳು ಸರ್' ಎಂದು ಉತ್ತರ ನೀಡಿದನು. ಅದಕ್ಕೆ ಎಲ್ಲ ಹುಡುಗರು ಗೊಳ್ಳ್ ಎಂದು ನಕ್ಕರು. ಆಗ ನಮ್ಮ ಗುರುಗಳು ಪ್ರಶ್ನೆ ಕೇಳುವುದನ್ನು ಸಾಕು ಮಾಡಿ ಬಿಟ್ಟರು.

-ಸುಜಾತ ದಾರವಾರ್
ಹೊಸಪೇಟೆ

ಹೊಟ್ಟೆ ಇರುವುದಿಲ್ಲ

ಇದು ಗುಳುಗುಳಿಯಲ್ಲಿ ನಡೆದ ಘಟನೆ. ಸಮಾಜ ವಿಷಯದ ಅವಧಿಯಲ್ಲಿ ಆ ವಿಷಯದ ಬೋಧಕ ಗುರುಗಳು 'ಬಡವರಿಗೆ ಏನೇನು ಇರುವದಿಲ್ಲ ' ಎಂದು ಕೇಳಿದರು.

ಆಗ ನನ್ನ ಸಹಪಾಟಿ ಯೊಬ್ಬನು 'ಅವರಿಗೆ ಹೊಟ್ಟೆ ಇರುವದಿಲ್ಲ' ಎಂದು ಹೇಳಿದನು. ಆಗ ಕ್ಲಾಸ್ ರೂಂ ನಗೆಗಡಲಲ್ಲಿ

ಅಳು ಮುಖದ ನಗು



ನಾನು ಆರನೇ ತರಗತಿ ಓದುತ್ತಿರುವಾಗ ಮುಂದಿನ ಬೆಂಚಿನಲ್ಲಿ ಕುಳಿತುಕೊಳ್ಳುತ್ತಿದ್ದೆ. ಗುರುಗಳು ನನ್ನ ಹೋಂವರ್ಕನ್ನು ಪರಿಶೀಲಿಸುತ್ತಿದ್ದರು. ನಾನು ನನ್ನ ಸ್ಥಳದಲ್ಲೇ ಎದ್ದು ನಿಂತು, ಹೋಂವರ್ಕನ್ನೇ ನೋಡುತ್ತಿದ್ದೆ. ಆಗ ನನ್ನ ಗೆಳತಿಯರು ಬೆಂಚನ್ನು ಹಿಂದಕ್ಕೆ ಎಳೆದಿದ್ದರು ನಾನು ತಕ್ಷಣ ಕುಳಿತುಕೊಂಡೆ. ನಾನು ನೆಲದ ಮೇಲೆ ಬಿದ್ದು ಬಿಟ್ಟೆ. ಆಗ ತುಂಬ ಪೆಟ್ಟಾಯಿತು. ತರಗತಿಯಲ್ಲಿದ್ದವರೆಲ್ಲಾ ಜೋರಾಗಿ ನಕ್ಕಿದ್ದರು. ನಾನು ಕೂಡ ಅಳು ಮೊಗದಲ್ಲಿ ನಕ್ಕಿದ್ದೆ.

-ಶುಭ ಹೆಚ್.ಸಿ.
ಬೆಂಗಳೂರು

ಚಾರ್ ಸೌ ಬೀಸ್



೮ನೇ ತರಗತಿ ಪ್ರೌಢಶಾಲೆಗೆ ಬಂದಿದ್ದೆವು. ಎಲ್ಲಾ ಶಿಕ್ಷಕರು ನಮ್ಮ ಹೆಸರು ಮತ್ತು ಅಂಕಗಳನ್ನು ಕೇಳುತ್ತಿದ್ದರು.

ಒಂದು ದಿನ ಹಿಂದೀ ಶಿಕ್ಷಕರು ನಮ್ಮ ಅಂಕಗಳನ್ನು ಕೇಳುತ್ತಿದ್ದಾಗ, ನನ್ನ ಗೆಳೆಯ ಎದ್ದು ನಿಂತು, 'ಚಾರ್‌ಸೌ ಬೀಸ್' ಎಂದು ಹೇಳಿದನು. ಗುರುಗಳು ನನಗೆ ಅಂದ್ರು' ಎಂದು ತಿಳಿದು, ಬಡಿಗೆಯನ್ನು ತರಲು ಹೇಳಿದರು. ಆಗ ಅವನು, 'ಅಲ್ಲಾ ಸಾರ್! ಹಿಂದಿನ ತರಗತಿಯಲ್ಲಿ ಪಡೆದ ಅಂಕಗಳು ೪೨೦' ಎಂದು ಹೇಳಿದಾಗ ಎಲ್ಲಾ ಹುಡುಗರು ನಕ್ಕರು.

-ಬಿ. ವೀರೇಗೌಡ, ಕನಕಗಿರಿ

ತೇಲಿತು.

-ಬೈಲಪ್ಪ ಎಸ್.
ನಿಂಬಲಗುಂದಿ

ನಾಲ್ಕಾಣೆ ಕೊಡ್ತೀನಿ ಸಾರ್

ನಾನು ೩ನೇ ತರಗತಿಯಲ್ಲಿ ಓದುತ್ತಿದ್ದೆ. ಒಂದು ದಿನ ಗುರುಗಳು ಹೋಂವರ್ಕ್ ನೋಡುತ್ತಿದ್ದರು. ಅವರು ಬಹಳ ಸ್ಟ್ರಿಕ್ಟ್ ಗುರುಗಳಾಗಿದ್ದರು. ಅಂದು ಒಬ್ಬ ವಿದ್ಯಾರ್ಥಿ ಹೋಂವರ್ಕ್ ಮಾಡಿಕೊಂಡು ಬಂದಿರಲಿಲ್ಲ. ಅದಕ್ಕಾಗಿ ಅವನನ್ನು ತಮ್ಮ ಕೋಲಿನಿಂದ ಜಡಾಯಿಸ ತೊಡಗಿದರು. ಅವನು ಹೊಡೆಬೇಡಿ ಸಾರ್ ನಾಲ್ಕಾಣೆ ಕೊಡುತ್ತೇನೆ ಎಂದ. ಆಗ ಇಡೀ ತರಗತಿಯಲ್ಲಾ ಗೊಳ್ಳು ಎಂಬ ನಗು ಸಾಗರದಲ್ಲಿ ತೊಡಗಿತ್ತು. ಈಗಲೂ ಅವನನ್ನು ನೆನಪಿಸಿಕೊಂಡು ನಗುತ್ತೇವೆ.

-ಕುಮಾರ ಪಟ್ಟಣಶೆಟ್ಟಿ

ಆದೇ ರೀತಿ ಹೇಳಬೇಕೆ?

ಮೊದಲು 'Wish you happy new year' ಹೊಸ ವರ್ಷಕ್ಕೆ ಕಾಲಿಡುವ ಮೊದಲು ಚಿಂತಿಸುವೆ. ಚಿಂತಿಸುವ ವೇಳೆಯಲ್ಲಿ ಒಂದು ಹಿಂದಿನ ಕಾಲೇಜಿನ ನೆನಪು ಮರು ನೆನಪಿಗೆ ಬಂದ ಈ ಘಟನೆ.

ಹಿಂದೆ ಕಾಲೇಜಿನಲ್ಲಿ ನಾಳೆಯಂತೆ ಹೊಸ ವರ್ಷ ಚಿಗುರುವ ಆಸೆಗಳು. ಮರುದಿವಸ ಕಾಲೇಜಿಗೆ ಬಂದಾಗ ವಿದ್ಯಾರ್ಥಿಗಳು ಬಹಳ ಹರ್ಷದಿಂದ ಕುಳಿತಾಗ ನಾನು ಕ್ಲಾಸಿನೊಳಗೆ ಹೋಗುವ ಪೂರ್ವದಲ್ಲಿ ಗುರುಗಳು ನನ್ನನ್ನು ಕರೆದು ಅವರ ಕೈಯಲ್ಲಿದ್ದ 'ಪಳ ವರಿಸುವ ಡೆಸ್ಟರ್ ೪ ಪುಸ್ತಕ' ಕೊಟ್ಟು ಕಳಿಸಿದರು. ನಾನು ಕ್ಲಾಸಿನೊಳಗೆ ಕಾಲಿಡುವಾಗಲೇ ಎಲ್ಲರೂ ಎದ್ದು ನಿಂತರು. ಮತ್ತೆ "Happy Happy' ಎಂದು ನಗ ತೊಡಗಿದರು. ಗುರುಗಳು ಕ್ಲಾಸಿನೊಳಗೆ ಕಾಲಿಡುವಾಗ ಎಲ್ಲ ವಿದ್ಯಾರ್ಥಿಗಳು 'ಹೊಸ ವರುಷದ ಶುಭಾಶಯಗಳು' ಕೋರಿದರು. ಆದೇ ರೀತಿ ಗುರುಗಳು "Wish you happy new year' ಈ ವರ್ಷ ಚೆನ್ನಾಗಿ ಅಭ್ಯಾಸ ಮಾಡಿ' ಎಂದು ಹೇಳಿದರು. ಆಗ ಕೊನೆಯ ವಿದ್ಯಾರ್ಥಿ 'ಸರ್, ನಾವೂ' ಆದೇ ರೀತಿ ಹೇಳಬೇಕೆ? ಎಂದು ಕೇಳಿದಾಗ. ಎಲ್ಲರೂ ಗೊಳ್ಳೆಂದು ನಕ್ಕರು.

-ಬಸವರಾಜ ಬೈಲಕೂರ
ಹುನಗುಂದ.

ABCD ನಾಲ್ಕಿವೆ

ಆಗ ನಾನು ೫ನೇಯ ತರಗತಿಯಲ್ಲಿ ಓದುತ್ತಿದ್ದೆ. ನಮ್ಮ ಶಾಲೆಯಲ್ಲಿ ಸ್ವಲ್ಪ ದಡ್ಡರಿದ್ದರು. ನಮ್ಮ English ಶಿಕ್ಷಕರು ಆಗತಾನೆ English Alphabets (ವರ್ಣಮಾಲೆ) ಬಗ್ಗೆ ಹೇಳುತ್ತಿದ್ದರು. ಆಗ ಶಿಕ್ಷಕರು ABCD ಎಷ್ಟು ಇವೆ ? ಎಂದು ಪ್ರಶ್ನಿಸಿದರು. ಆಗ ನಮ್ಮ ಶಾಲೆಯ ತುಂಟ ವಿದ್ಯಾರ್ಥಿಯೊಬ್ಬ ಎದ್ದು ನಿಂತು ನಾಲ್ಕು ಎಂದು ಉತ್ತರಿಸಿದ. ತಕ್ಷಣ ಎಲ್ಲರೂ ಗೊಳ್ಳೆಂದು ನಗತೊಡಗಿದೆವು. ಆಗ ಶಿಕ್ಷಕರು ತಾವು ಕೇಳಿದ್ದ ತಪ್ಪು ಪ್ರಶ್ನೆಯನ್ನು ಅರಿತು ಬೆಚ್ಚಿ ಬಿದ್ದರು.

-ವೀರೇಶ, ಕೊಪ್ಪಳ

ಬಿಸಿಲ ಬದುಕು ಓದ್ರಿ ಸಾರ್



ನಮ್ಮ ಸಾರ್ ಕ್ಲಾಸ್ ರೂಂಗೆ ಬಂದು 'ನೀತಿ ಪಾಠ ಮಾಡುತ್ತೇನೆ ಕೇಳಿರಿ' ಎಂದರು. ವಿಷಯ ಲಕ್ಷಾಂತರ ಜನರು ಇರುವ ಈ ನಮ್ಮ ಭರತ ದೇಶದಂತಹ ಪುಣ್ಯ ಭೂಮಿಯಲ್ಲಿ ನಾವು ಬದುಕುವುದು ಹೇಗೆ ಎಂದರು. ನಾನು ಎದ್ದು ''ಬಿಸಿಲ ಬದುಕು' ಮಾಸಪತ್ರಿಕೆ ಓದ್ರಿ, ಸಾರ್ ಗೊತ್ತಾಗುತ್ತದೆ ಎಂದೆ'. ವಿದ್ಯಾರ್ಥಿಗಳು ಎಲ್ಲರು ಗೋಳ್ ಎಂದು ನಕ್ಕರು.

-ಹೆಚ್. ರಹಮಾನ್
ದಾವಣಗೇರಿ

ನೀರು

ನಿಮಗೆಷ್ಟು ಗೊತ್ತು ?

○ ಡಾ.ಹೆಚ್. ಚಂದ್ರಶೇಖರ

ನೀರು, ಗಾಳಿಯ ನಂತರ ಸಕಲ ಜೀವಾತ್ಮರಿಗೆ ಅತ್ಯಂತ ಅವಶ್ಯಕವಾದ ನೈಸರ್ಗಿಕ ವಸ್ತು. ಅನ್ನ ಅಥವಾ ಆಹಾರವಿಲ್ಲದೆ ಮನುಷ್ಯ ಹಲವು ವಾರಗಳ ಅಥವಾ ತಿಂಗಳುಗಳ ಕಾಲ ಜೀವಿಸಬಹುದು. ಆದರೆ ನೀರಿಲ್ಲದೆ ಮನುಷ್ಯನು ಕೆಲ ದಿನಗಳ ಕಾಲ ಜೀವಿಸುವುದು ಅಸಾಧ್ಯ. ಹಾಗೆಯೇ ಇತರ ಪ್ರಾಣಿಗಳಿಗೂ, ಸಸ್ಯಗಳಿಗೂ ನೀರು ಅತ್ಯಂತ ಅವಶ್ಯಕ ವಸ್ತು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಜಲವೇ ಈ ಪೃಥ್ವಿಯ ಮೇಲೆ ಸಕಲ ಜೀವರಾಶಿಗಳ ಜನನಕ್ಕೆ ಕಾರಣ. ಆದ್ದರಿಂದ ವರಕವಿ ಬೇಂದ್ರೆಯವರ ಸುಪ್ರಸಿದ್ಧ ಕವನದ ಸಾಲುಗಳನ್ನು ಕೊಂಚ ಮಾರ್ಪಡಿಸಿ ಈ ಕೆಳಗಿನಂತೆ ಹೇಳಬಹುದು:

ಜಲವೇ ಜನನ
ನಿರ್ಜಲವೇ ಮರಣ
ಸಮಜಲವೇ ಜೀವನ.

ಬಾಟ್ಲಿ ನೀರಿನ ಉದ್ಯಮ

ಇಂಥ ಅದ್ಭುತ ಅತ್ಯಾವಶ್ಯಕ ವಸ್ತು ಜಲ . ನಮಗೆ ಎರಡು ರೂಪಗಳಲ್ಲಿ ಸಿಗುತ್ತದೆ. ಒಂದು ನದಿ, ಹಳ್ಳ ಕೊಳ್ಳಗಳಲ್ಲಿ ಸಂಗ್ರಹಿಸಲ್ಪಟ್ಟ ಅಥವಾ ಹರಿಯುವ ದ್ರವವಸ್ತುವಾಗಿ (ಮೇಲು ಜಲ Surface water) ಮತ್ತು ಭೂಮಿಯ ಒಳಗಡೆ ಅಂತರ್ಜಲವಾಗಿ (Goundwater) ಸಿಗುತ್ತದೆ.

ನಮ್ಮ ದೇಶದ ಮಟ್ಟಿಗೆ ಹೇಳುವುದಾದರೆ ಸುಮಾರು 30-40 ವರ್ಷಗಳ ಹಿಂದೆ ಮೇಲು ಜಲವು ಬಹುತೇಕವಾಗಿ ಕುಡಿಯಲು ಯೋಗ್ಯವಾದ ರೂಪದಲ್ಲಿ ಸಿಗುತ್ತಿತ್ತು. ಅಥವಾ ಲಘುರೂಪದ ಉಪಚಾರದ ನಂತರ (Treatment) ಮೇಲು ಜಲ ಕುಡಿಯಲು ಯೋಗ್ಯವಾಗುತ್ತಿತ್ತು. ಆದರೆ ಕಳೆದ ಕೆಲ ದಶಕಗಳಲ್ಲಿ ಬೆಳೆದ ಅನಿರ್ಬಂಧಿತ ಜನಸಂಖ್ಯೆ, ಅಡ್ಡಾಡ್ಡಿಯಾಗಿ ಬೆಳೆದ ನಗರಗಳು, ಕೇವಲ ಲಾಭವನ್ನೇ ದೃಷ್ಟಿಯಲ್ಲಿಟ್ಟುಕೊಂಡ ಉದ್ದಿಮೆಗಳು, ಸರ್ಕಾರದ ದಿವ್ಯನಿರ್ಲಕ್ಷ್ಯ ಇತ್ಯಾದಿ ಕಾರಣಗಳಿಂದಾಗಿ ಇಂದು ನಮ್ಮ ಬಹುತೇಕ , ಮೇಲು ಜಲ ಸಂಪತ್ತು ಕಲುಷಿತಗೊಂಡು ಕುಡಿಯಲು ಅಯೋಗ್ಯವಾಗಿದೆ. ಹಾಗೆಯೇ ಸ್ವಲ್ಪ ಮಟ್ಟಿಗಾದರೂ ಕಲುಷಿತಗೊಂಡಿರುವ (ಅಲ್ಲಲ್ಲಿ ಅಂಥ ಉದಾಹರಣಗಳಿವೆ, ಅವುಗಳ ಚರ್ಚೆಯನ್ನು ಸ್ಥಳವಾಕಾಶದ ಕಾರಣದಿಂದಾಗಿ ಬೆಳೆಸುವದಿಲ್ಲ) ಅಂತರ್ಜಲವು ಕುಡಿಯಲು ಅಯೋಗ್ಯವಾಗುತ್ತ ನಡೆದಿದೆ. ಇದರ ಜೊತೆಗೆ ನೀರೇ ನಮ್ಮ ಹಲವಾರು ರೋಗಗಳಿಗೆ ಕಾರಣವೆಂಬ ತಿಳುವಳಿಕೆ ಜನಸಾಮಾನ್ಯರಲ್ಲಿ ಇತ್ತೀಚಿನ ದಿನಗಳಲ್ಲಿ ಬೆಳೆಯುತ್ತಾ ಬಂದಿದೆ.

★

ಮಾರುಕಟ್ಟೆಯಲ್ಲಿರುವ ಬಾಟ್ಲಿ ನೀರು ಎಷ್ಟರ ಮಟ್ಟಿಗೆ ಹಿತಕರ? ಇದರ ಬದಲಾಗಿ ಬೇರೆ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ಸಾಧ್ಯವಿಲ್ಲವೆ?

★

ಈ ಪರಿಸ್ಥಿತಿಯೇ ಇಂದು ಲಾಭದಾಯಕ (ಅಷ್ಟೇ ಅನಾವಶ್ಯಕ) ಉದ್ಯಮವಾಗಿ ಬೆಳೆದಿರುವ ಬಾಟ್ಲಿ ನೀರಿನ ಉದ್ಯಮದ ಜನನಕ್ಕೆ ಕಾರಣ. ಅರವಟ್ಟಿಗೆ ಇಟ್ಟು ಬಾಯಾರಿದವರಿಗೆ ನೀರು ಕುಡಿಸುವದು ಪುಣ್ಯದ ಕೆಲಸವೆಂದು ನಂಬಿದ ದೇಶದಲ್ಲಿ ಅತ್ಯಂತ ದುಬಾರಿ ಬೆಲೆಯಲ್ಲಿ ನೀರನ್ನು ಮಾರುವ ವೈರುಧ್ಯತೆಯನ್ನು ಕಾಣುತ್ತಿರುವದೊಂದು ವಿಕಟದ ಸಂಗತಿ. ಈ ಪರಿಸ್ಥಿತಿಗೆ ಏನೇ ಕಾರಣಗಳಿರಲಿ, ಇದು ನಮ್ಮ ಮೌಲ್ಯಗಳಿಗೆ ವಿರೋಧವಾಗಿದ್ದರೂ ಈ ಬಾಟ್ಲಿನೀರಿನ ಉದ್ಯಮ ಇಂದು ಬೃಹದಾಕಾರವಾಗಿ ಬೆಳೆದಿದೆ, ಮುಂದೆಯೂ ಬೆಳೆಯುತ್ತದೆ ಎಂಬುದಂತೂ ಕಟು ಸತ್ಯ.

ಮಾರುಕಟ್ಟೆಯಲ್ಲಿರುವ ಬಾಟ್ಲಿನೀರನ್ನು ಕೊಂಡು ಕುಡಿಯುವ ವ್ಯಕ್ತಿಗಳು ಬಹುತೇಕ ಸಮಾಜದ ಮೇಲು ವರ್ಗಕ್ಕೆ ಸೇರಿದವರಾಗಿದ್ದರೂ, ಈ ನೀರು ಎಷ್ಟರ ಮಟ್ಟಿಗೆ ಹಿತಕರ? ಇದರ ಬದಲಾಗಿ ಬೇರೆ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ಸಾಧ್ಯವಿಲ್ಲವೆ? ಎಂಬುದರ ಬಗ್ಗೆ ನಾವು ತಲೆ ಕೆಡಿಸಿಕೊಳ್ಳುವದಿಲ್ಲ. ಈ ನಿಟ್ಟಿನಲ್ಲಿ ಅಹ್ಮದಾಬಾದಿನಲ್ಲಿರುವ 'ಬಳಕೆದಾರರ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ'ಯು ಒಂದು ಸರ್ವೇಕ್ಷಣೆಯನ್ನು ಕೈಗೊಂಡು ತನ್ನ ವರದಿಯನ್ನು INSIGHT ಎಂಬ ಪತ್ರಿಕೆಯಲ್ಲಿ ಪ್ರಕಟಿಸಿ ಕೃಪೆ ಮಾಡಿದೆ. ಈ ವರದಿ ಮತ್ತು ಇತರ ವರದಿಗಳನ್ನು ಹಾಗೂ ನನ್ನ ಅನುಭವ ಮತ್ತು ಸಂಶೋಧನೆಗಳನ್ನು ಆಧಾರಿಸಿ ಬಿಸಿಲು ಬದುಕಿನ ಓದುಗರಿಗಾಗಿ ನನ್ನ ಅನಿಸಿಕೆಗಳನ್ನು ಹಂಚಿಕೊಂಡಿದ್ದೇನೆ. ಮುಂದುವರೆಯುವದಕ್ಕಿಂತ ಮೊದಲು ಒಂದೆರಡು ಪರಿಕಲ್ಪನೆಗಳನ್ನು ಸ್ಪಷ್ಟಪಡಿಸುವದು ಅವಶ್ಯಕ.

ಕುಡಿಯುವ ನೀರು ಮತ್ತು ಖನಿಜಾಂಶ ಭರಿತ ನೀರು

ಇಂದು ಮಾರುಕಟ್ಟೆಯಲ್ಲಿ ಸಿಗುವ ಬಾಟ್ಲಿ ನೀರುಗಳನ್ನು ಎರಡು ಹೆಸರುಗಳಲ್ಲಿ ಮಾರಲಾಗುತ್ತಲಿದೆ. ಒಂದು, 'ಕುಡಿಯುವ ನೀರು' (Drinking water) ಇನ್ನೊಂದು 'ಖನಿಜಾಂಶ ಭರಿತ ನೀರು' (Mineral Water). ಕುಡಿಯುವ ನೀರು ಎಲ್ಲರಿಗೂ ತಿಳಿಯುತ್ತದೆ. ಆದರೆ ಖನಿಜಾಂಶ ಭರಿತ ನೀರನ್ನು ವಿವರಿಸುವುದು ಅವಶ್ಯಕ. ಮೇಲು ಜಲವಾಗಲೀ, ಅಂತರ್ಜಲವಾಗಲೀ ನೂರಕ್ಕೆ ನೂರರಷ್ಟು ಶುದ್ಧ ನೀರಾಗಿರುವುದು (H_2O) ಸಾಧ್ಯವಿಲ್ಲ. ಇದು


ಕೇವಲ ಪ್ರಯೋಗಶಾಲೆಗಳಲ್ಲಿ ಸಾಧ್ಯ. ಅದೂ ಅಲ್ಲದೆ ಕೇವಲ ಶುದ್ಧ ನೀರು ಮನುಷ್ಯನಿಗಾಗಲಿ, ಪ್ರಾಣಿಗಳಿಗಾಗಲಿ ಉಪಯುಕ್ತವಲ್ಲ. ಆದುದರಿಂದ ಖನಿಜಾಂಶ ಭರಿತ ನೀರು ಅವಶ್ಯಕ. ಅದಕ್ಕೆ ಇತಿಮಿತಿಗಳಿವೆ. ಮೇಲು ಜಲದಲ್ಲಿ ಖನಿಜಾಂಶ ಅತ್ಯಂತ ಕಡಿಮೆ, ಆದ್ದರಿಂದ ಕೆಲವೊಮ್ಮೆ ಕೆಲ ಖನಿಜಾಂಶಗಳನ್ನು ಬೆರೆಸ ಬೇಕಾಗುತ್ತದೆ. ಆದ್ದರಿಂದ ಕೆಲ ದೇಶಗಳಲ್ಲಿ (ಅದರಲ್ಲಿಯೂ ಪಾಶ್ಚಾತ್ಯರಲ್ಲಿ) ಖನಿಜಾಂಶ ಭರಿತ ನೀರಿನ ಬೇಡಿಕೆ ಆರಂಭವಾಯಿತು. ನೈಸರ್ಗಿಕವಾಗಿ ಹೊರ ಚಿಮ್ಮುವ ಊಟಿಗಳಲ್ಲಿ, ಚಿಲುಮೆಗಳಲ್ಲಿ (Water Springs) ಸಿಗುವ ನೀರಿಗೆ Mineral Water ಎಂದು ಹೆಸರಿಟ್ಟು ಬಾಟ್ಲಿಯಲ್ಲಿ ಸಂಗ್ರಹಿಸಿ ಮಾರಾಟ ಮಾಡಲು ಆರಂಭಿಸಲಾಯಿತು. ಇದೇ ಬಹುಶಃ ಬಾಟ್ಲಿ ನೀರಿನ ಉಗಮ. ಹಾಗೇ ನೋಡಿದರೆ ಬಾವಿಗಳಲ್ಲಿ, ಕೊಳವೆ ಬಾವಿಗಳಲ್ಲಿ ಸಿಗುವ ನೀರೆಲ್ಲವೂ Mineral Waterವೇ. ಆದರೆ ಬಳಕೆದಾರರನ್ನು ತಮ್ಮ ಜಾಹೀರಾತುಗಳ ಮೂಲಕ ದಾರಿ ತಪ್ಪಿಸುವ ಉದ್ದಿಮೆದಾರರು ಈ ವೈಜ್ಞಾನಿಕ ಸತ್ಯವನ್ನು ಮುಚ್ಚುತ್ತಾರೆ.

ಕಾನೂನು ಇಲ್ಲ

1954ರ ಆಹಾರ ಕಲಬೆರಕೆ ಪ್ರತಿಬಂಧ ಕಾಯ್ದೆಯು (ಆ.ಕ. ಪ್ರ. ಕಾ1958) The prevention of Food Adulteration (PFA) Act 1954) ನೀರನ್ನು ಮತ್ತು ಔಷಧಿಯನ್ನು ತನ್ನ ಪರಿಧಿಯಿಂದ ಹೊರಗುಳಿಸಿದೆ. ಈ ಕಾಯ್ದೆಯನ್ನು 1995ರಲ್ಲಿ ಕೊಂಚ ವಿಸ್ತರಿಸಿ ಖನಿಜಾಂಶ ಭರಿತ ನೀರನ್ನು ಈ ಕಾಯ್ದೆಯ ಅಧೀನಕ್ಕೆ ಒಳಪಡಿಸಲಾಯಿತು. ಆದರೆ ಕುಡಿಯುವ ನೀರಿಗೆ ಇನ್ನು ಯಾವ ಕಾನೂನು ಅನ್ವಯವಾಗುವದಿಲ್ಲ. ಈ ಕಾನೂನಿನ ನ್ಯೂನತೆಯ ಲಾಭವನ್ನು ಪಡೆದು ಇಂದು ನೀರಿನ ಮಾರಾಟಗಾರರು ಯಾವುದೇ ಪರೀಕ್ಷೆಗಳಿಗೆ (Tests) ಒಳಪಡಿಸದೆ ಬಾಟ್ಲಿಯಲ್ಲಿ ನೀರನ್ನು ತುಂಬಿ ಮಾರಬಹುದಾಗಿದೆ. ಹಾಗೆ ನಡೆಯುತ್ತಿರುವುದೂ ವಾಸ್ತವ ಸಂಗತಿ ಆಗಿದೆ. ಈ ಹಿನ್ನೆಲೆಯಲ್ಲಿ ಮೇಲೆ ಉದಾಹರಿಸಿದ ಬಳಕೆದಾರರ ಸಂಸ್ಥೆಯು ನಡೆಸಿದ ಸರ್ವೇಕ್ಷಣೆಯು ಗಮನಾರ್ಹವಾಗಿದೆ.

ಪರೀಕ್ಷೆಯ ಫಲಿತಾಂಶಗಳು:

ಮಾರುಕಟ್ಟೆಯಲ್ಲಿರುವ 13 ಬ್ರ್ಯಾಂಡ್ ಬಾಟ್ಲಿ ನೀರನ್ನು ಪರೀಕ್ಷೆಗೆ ಗುರಿಪಡಿಸಲಾಯಿತು. ಈ 13 ಬ್ರ್ಯಾಂಡುಗಳು ನೀರನ್ನು ತಜ್ಞರುರುಚಿ ನೋಡಿದರು. ಅಲ್ಲದೆ ಇವುಗಳ ರಾಸಾಯನಿಕ ಮತ್ತು ಕೀಟಾಣುಗಳ ವಿಶ್ಲೇಷಣೆಗಳನ್ನೂ ಕೈಗೊಳ್ಳಲಾಯಿತು. ಈ 13 ಬ್ರ್ಯಾಂಡುಗಳಲ್ಲಿ 8



ಬ್ರ್ಯಾಂಡುಗಳು ಕುಡಿಯುವ ನೀರಿನ ವರ್ಗಕ್ಕೆ ಸೇರಿದವು. ಈ ವರ್ಗಕ್ಕೆ ಬಿಸಲೇರಿ (ಬೆಂಗಳೂರು), ಬಿಸಲೇರಿ (ಗಾಜಿಯಾಬಾದ), ಬಿಸಲೇರಿ(ಕಲ್ಕತ್ತಾ). ಬಿಸಲೇರಿ (ಬರೋಡ), ಬೇಲ್ಲಿ (ಮುಂಬಯಿ), ಬೇಲ್ಲಿ (ಸೂರತ್), ತೃಪ್ತಿ (ಚೆನ್ನೈ). ಬಿಸಿಲ್ (ಮೆಹಸಾನಾ) ಸೇರಿವೆ. ಖನಿಜಾಂಶ ಭರಿತ ನೀರಿನ ವರ್ಗಕ್ಕೆ YES(ಯೆಸ್) ನಾಡಿಯಾಡ, ಗೋಲ್ಡನ್ ಈಗಲ್(ಚೆನ್ನೈ), ಅಕ್ವಾಸ್ಪಾ (ಮುಂಬೈ), ಸಾಯಿಗಂಗಾ (ಅಹ್ಮದನಗರ), ಮತ್ತು ನಿರಂತರ (ಥಾಣೆ) ಎಂಬ 5 ಬ್ರ್ಯಾಂಡುಗಳು ಸೇರಿವೆ. ಪ್ರತಿ ಬ್ರ್ಯಾಂಡಿನ 21 ಮಾದರಿಗಳನ್ನು (Samples) ಪರೀಕ್ಷಿಸಲಾಯಿತು. ಭಾರತೀಯ ಮಾನಕ ಸಂಸ್ಥೆಯು ನಿಗದಿಗೊಳಿಸಿದ ವಿವಿಧ ಅಂಶಗಳೊಡನೆ (Parameters) ಮತ್ತ ಜಾಗತಿಕ ಆರೋಗ್ಯ ಸಂಸ್ಥೆಯು ನಿಗದಿಗೊಳಿಸಿದ ಅಂಶಗಳೊಡನೆ ಈ ನೀರುಗಳ ಮಾದರಿಗಳನ್ನು ಹೋಲಿಸಿ ನೋಡಿದಾಗ ಈ ಕೆಳಗಿನ ಪ್ರಮುಖ ಫಲಿತಾಂಶಗಳು ಲಭ್ಯವಾದವು:

- ಪರೀಕ್ಷಿಸಲಾದ 13 ಬ್ರ್ಯಾಂಡುಗಳಲ್ಲಿ ಕೇವಲ ಮೂರು ಬ್ರ್ಯಾಂಡುಗಳು ಮಾತ್ರ ಎಲ್ಲಾ ನಿಗಧಿತ ಗುಣಮಟ್ಟಗಳಿಗೆ (Specifications) ಸರಿ ಹೊಂದಿದವು. ಅವುಗಳಲ್ಲಿ ಸಾಯಿಗಂಗಾ(ಅಹ್ಮದನಗರ), ಬಿಸಲೇರಿ (ಬರೋಡ) ಮತ್ತು ಬೇಲ್ಲಿ(ಮುಂಬೈ) ಅನುಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಪಡೆದವು.
- ಯಾವ ಬ್ರ್ಯಾಂಡುಗಳ ನೀರಿನಲ್ಲಿ ಯೂ ಕೀಟನಾಶಕಗಳ ಶೇಷಾಂಶಗಳು ಕಂಡು ಬಂದಿಲ್ಲ.
- ಅರ್ಸೆನಿಕ್ ಧಾತು ಅತ್ಯಂತ ವಿಷಕಾರಿ ಧಾತು. ಭಾರತೀಯ ಮಾನಕ ಸಂಸ್ಥೆಯು ಈ ಧಾತು ಕುಡಿಯುವ ನೀರಿನಲ್ಲಿ 0.05 ಪಿ.ಪಿ.ಎಮ್‌ಗಿಂತ ಹೆಚ್ಚಾಗಿರಕೂಡದೆಂದು ನಿಗದಿ ಪಡಿಸಿದ್ದರೆ, ಜಾಗತಿ ಆರೋಗ್ಯ ಸಂಸ್ಥೆಯು0.01 ಪಿ.ಪಿ.ಎಮ್‌ಗಿಂತ ಹೆಚ್ಚಾಗಿರಬಾರದೆಂದು ನಿಗಧಿಗೊಳಿಸಿದೆ. ಈ ಹಿನ್ನೆಲೆಯಲ್ಲಿ ಯೆಸ್ (Yes) ಬ್ರ್ಯಾಂಡಿನ ನೀರಿನಲ್ಲಿ ಅರ್ಸೆನಿಕ್‌ನ ಅಂಶವು 0.01 ರಿಂದ 0.1 ಪಿ.ಪಿ.ಎಮ್ (PPM) ವರೆಗಿರುವುದು ಆತಂಕಕಾರಿ ವಿಷಯ. ಇದರ ನಿರಂತರ ಬಳಕೆಯಿಂದ ಚರ್ಮರೋಗ ಬರುವ ಸಂಭವ ಇದೆ.
- ಬೇಲ್ಲಿ ಸೂರತ್, ಬ್ರ್ಯಾಂಡು ನೀರಿನಲ್ಲಿ ಅಲ್ಯೂಮಿನಿಯಂನ ಅಂಶವು (0.2 PPM) ಇದೆ. ಭಾರತೀಯ ಮಾನಕದ ಪ್ರಕಾರ ಇದು -0.03 PPM ಗಿಂತ ಹೆಚ್ಚಾಗಿರ ಕೂಡದು.
- ಯೆಸ್ ನೀರಿನಲ್ಲಿ ಫ್ಲೋರೈಡ ಕೂಡ ಕೊಂಚ ಹೆಚ್ಚಾಗಿದೆ. ಭಾರತೀಯ ಮಾನಕದ ಪ್ರಕಾರ ಫ್ಲೋರೈಡದ ಗರಿಷ್ಟ ಮಿತಿ 1.5 ಪಿಪಿಎಮ್ ಮತ್ತು ಜಾಗತಿಕ ಆರೋಗ್ಯ ಸಂಸ್ಥೆಯ ಪ್ರಕಾರ ಈ ಮಿತಿ 1.0 ಪಿಪಿಎಮ್. ಯೆಸ್ ಫ್ಲೋರೈಡ 1.4 ಪಿಪಿಎಮ್ ಇದೆ. ಫ್ಲೋರೈಡನ ಮಿತಿಯು 2 ಪಿಪಿಎಮ್ ಇದ್ದರೆ ಫ್ಲೋರೋಸಿಸ್ ರೋಗ ಬರುತ್ತದೆ. ಅದೇ ೧ ಪಿಪಿಎಮ್‌ಗಿಂತ ಕಡಿಮೆ ಇದ್ದರೂ ಎಲುಬು ಮತ್ತು ಹಲ್ಲುಗಳ ಬೆಳವಣಿಗೆಗೆ ತೊಂದರೆಯಾಗುತ್ತದೆ.
- ಕುಡಿಯುವ ನೀರಿನಲ್ಲಿ, ಅದರಲ್ಲಿಯೂ, ಖನಿಜಾಂಶ ಭರಿತ ನೀರಿನಲ್ಲಿ (Mineral water) ಒಟ್ಟು ಖನಿಜಾಂಶ (T.D.S. - Total Dissolved solids) ಬಹುಮುಖ್ಯ. ಮನುಷ್ಯನ ದೈಹಿಕ ಬೆಳವಣಿಗೆಗೆ ಬೇಕಾಗುವ ಖನಿಜಾಂಶವು ಇಂಥ ನೀರಿನಿಂದ ಸಿಗುತ್ತದೆ. ಇದು ಕುಡಿಯುವ ನೀರಿನಲ್ಲಿ ಕನಿಷ್ಠ 250 ಪಿಪಿಎಮ್‌ನಷ್ಟು ಮತ್ತು ಗರಿಷ್ಟ ಮಿತಿಯು 100⁰ ಪಿಪಿಎಮ್‌ನಷ್ಟಿರಬೇಕು. ಪರೀಕ್ಷೆಗೊಳಗಾದ ಎಲ್ಲಾ ಕುಡಿಯುವ ನೀರು ಮತ್ತು ಖನಿಜಾಂಶ ಭರಿತ ನೀರಿನಲ್ಲಿ ಕನಿಷ್ಟ ಮಟ್ಟದ ಖನಿಜಾಂಶವೂ ಇರಲಿಲ್ಲ. ಖನಿಜಾಂಶ ಭರಿತ ನೀರಿನಲ್ಲಿ ಕನಿಷ್ಟ

1000 ಪಿಪಿಎಮ್ ಮತ್ತು ಗರಿಷ್ಠ 1500 ಪಿಪಿಎಮ್ ಖನಿಜಾಂಶ ಇರಬೇಕು. ಅಂದರೆ Mineral Water ಎಂಬ ಹೆಸರು ಹೊತ್ತು ಮಾರುಕಟ್ಟೆಯಲ್ಲಿರುವ ನೀರು ಕೇವಲ ಹೆಸರಿಗೆ ಮಾತ್ರ ಖನಿಜ ನೀರು. ನಿಜವಾಗಿಯೂ ಇದು ಬಳಕೆದಾರರನ್ನು ಮೋಸಗೊಳಿಸಿದಂತೆಯೇ ಹೌದು.

● ಕುಡಿಯುವ ನೀರಿನ 8 ಬ್ರ್ಯಾಂಡುಗಳಲ್ಲಿ ಕೇವಲ ಮೂರು ಬ್ರ್ಯಾಂಡುಗಳಲ್ಲಿ ಮಾತ್ರ ತೇಲಾಡುವ ಕಣಗಳು ಇರಲಿಲ್ಲ. (Suspended solids) ಬೇಲ್ಲಿ (ಮುಂಬೈ), ಬೇಲ್ಲಿ(ಸೂರತ್) ಮತ್ತು ಬಿಸಲೇರಿ (ಸೂರತ್) ಇವುಗಳೇ ಆ ಮೂರು ಬ್ರ್ಯಾಂಡುಗಳು. ಉಳಿದ ಐದು ಬ್ರ್ಯಾಂಡುಗಳು ಈ ಪರೀಕ್ಷೆಯಲ್ಲಿ ಸೋತವು.

● ಐದು ಖನಿಜ ನೀರಿನ ಬ್ರ್ಯಾಂಡುಗಳಲ್ಲಿ ಕೇವಲ ಎರಡು ಬ್ರ್ಯಾಂಡುಗಳಲ್ಲಿ (ಸಾಯಿಗಂಗಾ ಮತ್ತು ಯೆಸ್) ತೇಲಾಡುವ ಕಣಗಳು ಇರಲಿಲ್ಲ.

● ರುಚಿಯ ದೃಷ್ಟಿಯಿಂದ ಗೋಲ್ಡನ್ ಈಗಲ್ ಅತ್ಯಂತ ಶ್ರೇಷ್ಠ ಮತ್ತು ಬೆಂಗಳೂರಿನ ಬಿಸಲೇರಿ ಅತ್ಯಂತ ಕನಿಷ್ಠ ಮಟ್ಟದೆಂದು ತಜ್ಞರ ಅಭಿಮತ.

● ಒಂದೇ ಬ್ರ್ಯಾಂಡ ಹೆಸರನ್ನು ಹೊಂದಿರುವ ಬಿಸಲೇರಿಯ ಗುಣಮಟ್ಟಗಳಲ್ಲಿ ಬಹಳಷ್ಟು ಅಂತರವಿರುವದರಿಂದ, ಬೇರೆ ಬೇರೆ ಸ್ಥಳಗಳಿಂದ ಬಾಟ್ಲಿಯಲ್ಲಿ ತುಂಬಿ ಬರುವ ನೀರಿಗೆ ಒಂದೇ ಹೆಸರಿಡುವದು ಸರಿ ಆಗಲಾರದು.

● ಯಾವುದೇ ಬ್ರ್ಯಾಂಡಿನ ನೀರು ಕೀಟಾಣು ರಹಿತವಾಗಿಲ್ಲ. ಆದರೆ ಈ ಕೀಟಾಣುಗಳು ರೋಗಕಾರಕವಲ್ಲ (Nonpathogenic). ಅಂದರೆ ಗೋಲ್ಡನ್ ಈಗಲ್, ನಿರಂತರ ಮತ್ತು ತೃಪ್ತಿ ಬ್ರ್ಯಾಂಡುಗಳು 100% ಕೀಟಾಣು

ಗುಣಮಟ್ಟ ಸರಿಹೊಂದದ ಬ್ರ್ಯಾಂಡುಗಳು
(Non conforming Brands)

ಕ್ರಸಂ.	ಬ್ರ್ಯಾಂಡ್	ಬೆಲೆ	ಗಾತ್ರ ಮಿ. ಲೀ.	೨೧ ಬಾಟ್ಲಿಗಳಲ್ಲಿ ತೇಲಾಡುವ ಕಣಗಳಿದ್ದ ಬಾಟ್ಲಿಗಳ ಸಂಖ್ಯೆ	ರಾಸಾಯನಿಕ ವಿಶ್ಲೇಷಣೆ	ರುಚಿಮಟ್ಟ %	ಟಿಪ್ಪಣಿ
೧.	ಗೋಲ್ಡನ್ ಈಗಲ್ (M)	೧೩.00	೧೦೦೬	೮ ಬಾಟ್ಲಿಗಳು	✓	೬೬	
೨.	ತೃಪ್ತಿ (D)	೧೨.00	೧೧೭೯	೪ ಬಾಟ್ಲಿಗಳು	✓	೫೬	
೩.	ಬಿಸಿಲೇರಿ (D) (ಕಲ್ಕತ್ತಾ)	೧೪.00	೧೦೦೯	೯ ಬಾಟ್ಲಿಗಳು	✓	೫೧	
೪.	ಅಕ್ವಾಸ್ವಾ(M) (ಮುಂಬೈ)	೧೩.00	೧೦೫೩	೬ ಬಾಟ್ಲಿಗಳು	✓	೪೨	
೫.	ಬಿಸಿಲ್ (D) (ಮೆಹಸಾನಾ, ಗುಜರಾತ)	೧೨.00	೧೦೪೬	೨ ಬಾಟ್ಲಿಗಳು	✓	೪೧	
೬.	ಬಿಸಿಲೇರಿ(D) (ಗಾಜಿಯಾವಾದ)	೧೨.00	೯೮೫	೧ಬಾಟ್ಲಿ	✓	೩೫	೦.೦೨ ಪಿಪಿ ಎಮ್ ಅಲ್ಯುಮಿನಿಯಂ ಇದೆ. ಗರಿಷ್ಠ ಮಿತಿ ೦.೦೩ ಪಿಪಿಎಮ್ ಇರುವದರಿಂದ ಇದು ಗಡಿಯಲ್ಲಿರುವ ಬ್ರ್ಯಾಂಡ
೭.	ಬಿಸಿಲೇರಿ(D) (ಬೆಂಗಳೂರು)	೧೨.00	೯೯೫	೮ ಬಾಟ್ಲಿಗಳು	✓	೨೬	
೮.	ಯಸ್ (M) (ನಾಡಿಯಾಡ)	೧೨.00	೧೦೩೧	ಒಂದೂ ಇಲ್ಲ	X	NT	ಅರ್ಸೆನಿಕ್ ಹೆಚ್ಚು ಮತ್ತು ಫ್ಲೋರೈಡ 1.4. ಪಿಪಿಎಮ್ ಇದೆ. ಕೊಂಚ ಹೆಚ್ಚಾದರೆ ಹಾನಿಕಾರಕ.
೯.	ಬೇಲ್ಲಿ (D) (ಸೂರತ್)	೧೧.00	೧೦೨೩	ಒಂದೂ ಇಲ್ಲ	X	NT	ಅಲ್ಯುಮಿನಿಯಂ 0.2 ಪಿಪಿ ಎಮ್ ಇದೆ. ಗರಿಷ್ಠಮಿತಿಗೆ ತೀರ ಹತ್ತಿರ.
೧೦.	ನಿರಂತರ(M) (ಥಾಣೆ)	೧೨.00	NT	೧೯ಬಾಟ್ಲಿಗಳು	NT	NT	21 ಬಾಟ್ಲಿಗಳಲ್ಲಿ 19 ಬಾಟ್ಲಿಗಳಲ್ಲಿ ತೇಲಾಡುವ ಕಣಗಳಿದ್ದರಿಂದ ಈ ಬ್ರ್ಯಾಂಡ್‌ನ್ನು ತಿರಸ್ಕರಿಸಲಾಯಿತು.

ಟಿಪ್ಪಣಿಗಳು:

M Mineral Water D Drinking Water ✓ ಎಲ್ಲಾ ಅಂಶಗಳಲ್ಲಿ ಗೆದ್ದಿತು

NT ರಾಸಾಯನಿಕ ಮತ್ತು ಭೌತಿಕ X ಸೋತಿತು. ಪರೀಕ್ಷೆಗಳಲ್ಲಿ ಸೋತಿದ್ದರಿಂದ ರುಚಿಗಾಗಿ ಪರೀಕ್ಷಿಸಲಿಲ್ಲ.



ರಹಿತ ಎಂದು ಹೇಳಿಕೊಳ್ಳುವುದು ತಪ್ಪಲ್ಲವೆ?

● ಒಂದು ಲೀಟರ್ ಬಾಟ್ಲಿಯಲ್ಲಿ ನಾಲ್ಕು ಬ್ರ್ಯಾಂಡುಗಳಲ್ಲಿ ಕಡಿಮೆ ಗಾತ್ರದ ನೀರಿತ್ತು. 10 ರಿಂದ 15 ಮಿಲಿ ಲೀಟರವರೆಗೆ ನೀರು ಕಡಿಮೆ ಇತ್ತು.

● ಯಾವುದೇ ಬ್ರ್ಯಾಂಡು I.S.I ಮುದ್ರೆಯನ್ನು ಹೊಂದಿಲ್ಲ.

● ಯಾವ ಬಾಟ್ಲಿಯ ಮೇಲೂ ನೀರಿನ ಮೂಲ ಯಾವುದೆಂದು ತೋರಿಸಿಲ್ಲ. ಇದು ತೀರ ಅವಶ್ಯಕ. ಖನಿಜಾಂಶ ಭರಿತ ನೀರಿನ ಬಾಟ್ಲಿಯ ಮೇಲಂತೂ ಇದನ್ನು ಮುದ್ರಿಸಲೇಬೇಕು. ಇಲ್ಲವಾದರೆ ಬಳಕೆದಾರರನ್ನು ಮೋಸಗೊಳಿಸಿದಂತೆ. ಬೆಂಗಳೂರಿನ ಬಿಸಿಲೇರಿಯ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಈ ನೀರಿಗೆ ಕಾವೇರಿ ಅಥವಾ ತಿಪ್ಪಗೊಂಡನ ಹಳ್ಳಿ ಜಲಾಶಯದ ನೀರೇ ಮೂಲವಾಗಿರಬೇಕು. ಅಂದರೆ ಬೆಂಗಳೂರು ಜಲ ಮಂಡಲಿಯ ನೀರನ್ನು ಅತ್ಯಂತ ಅಗಣ್ಯ ಬೆಲೆಗೆ ಪಡೆದು ಕೊಂಚ ಶುದ್ದೀಕರಿಸಿ ಅತ್ಯಂತ ದುಬಾರಿ ಬೆಲೆಗೆ (ರೂ. 12-16 ಪ್ರತಿ ಬಾಟ್ಲಿಗೆ) ಬಳಕೆದಾರರಿಗೆ ಮಾರಿದಂತಾಗುತ್ತದೆ. ಇದೊಂದು ಶೋಷಣೆ ಅಲ್ಲವೆ? ಇಲ್ಲವೇ ಯಾವುದೋ ಕೊಳವೆ ಬಾವಿಯ ನೀರನ್ನು ಪಾರದರ್ಶಕ ಬಾಟ್ಲಿಯಲ್ಲಿ ತುಂಬಿ ಮಾರುತ್ತಿರಬೇಕು. ಇದೂ ಅತ್ಯಂತ ದುಬಾರಿಯ ಬೆಲೆಯ ಮಾರಾಟವಾಗುತ್ತದೆ. ಬಿಸಲೇರಿಯ ರಾಸಾಯನಿಕ ವಿಶ್ಲೇಷಣಾ ವರದಿಯಲ್ಲಿ T.D.S ಅತ್ಯಂತ ಕಡಿಮೆ ಇರುವುದನ್ನು ಗಮನಿಸಿದಾಗ ಈ ಬಾಟ್ಲಿಯ ನೀರಿನ ಮೂಲ ಬೆಂಗಳೂರು ಜಲಮಂಡಲಿಯ ನೀರೇ ಎಂದು ಭಾಸವಾಗುತ್ತದೆ. ಕೇವಲ ಕೆಲ ಪೈಸೆಗಳನ್ನು ತೆತ್ತು ಒಂದು ಲೀಟರ ನೀರನ್ನು ಕೊಂಡು, ಕೊಂಚ ಶುದ್ಧೀರಕಿರಿಸಿ ರೂ. 16ಕ್ಕೆ ಮಾರಿದರೆ ಎಂಥ ಲಾಭ ಎಂಬುದನ್ನು ಓದುಗರೇ ಲೆಕ್ಕ ಹಾಕಬಹುದು॥ ಇಷ್ಟು ಲಾಭದಾಯಕ ಉದ್ದಿಮೆ ಇನ್ನೊಂದು ಇರಲಾರದು!!

● ಯಾವುದೇ ಬಾಟ್ಲಿಯ ಮೇಲೆ ಒಳಗಿರುವ ನೀರಿನ ರಾಸಾಯನಿಕ ಗುಣಮಟ್ಟದ ವಿವರಗಳಿಲ್ಲ. ಇದು ಬಳಕೆದಾರರ ಕಣ್ಣಿಗೆ ಮಣ್ಣೆರಚುವ ತಂತ್ರಗಾರಿಕೆ.

ಬಳಕೆದಾರರ ಹಿತರಕ್ಷಣೆಗಾಗಿ ಕೆಲ ಸೂಚನೆಗಳು

ಈಗ ನಮಗೆ ಬೇಕಾಗಲೀ, ಬೇಡವಾಗಲೀ ಬಾಟ್ಲಿಯ ನೀರು ಬಳಕೆಯಲ್ಲಿ ಬಂದಿದೆ. ಈ ಉದ್ಯಮವು ಮುಂದೆಯೂ ಅತಿ ವೇಗದಲ್ಲಿ ಬೆಳೆಯುವ ಸೂಚನೆಗಳಿವೆ. ಆದ್ದರಿಂದ ಸಾರ್ವಜನಿಕ ಹಿತರಕ್ಷಣೆಯ ದೃಷ್ಟಿಯಿಂದ ಈ ಕೆಳಗಿನ ಸೂಚನೆಗಳನ್ನು ಸಂಬಂಧಪಟ್ಟ ಸರ್ಕಾರದ ಇಲಾಖೆಗಳ ಗಮನಕ್ಕೆ ತರ ಬಯಸುತ್ತೇನೆ.

1. ಕುಡಿಯುವ ನೀರಿನ ಗುಣಮಟ್ಟವನ್ನು ವಿವರಿಸುವ IS 10500ನ್ನು ಎಲ್ಲಾ ಬಗೆಯ ನೀರಿಗೂ ಅನ್ವಯವಾಗುವಂತೆ ಅದರ ಪರಿಧಿಯನ್ನು ವಿಸ್ತರಿಸಬೇಕು. ಪ್ಲಾಸಿಕ್ ಬಾಟ್ಲಿ, ಗ್ಲಾಸ್ ಬಾಟ್ಲಿ, ಪ್ಲಾಸ್ಟಿಕ್ ಚೀಲ ಇತ್ಯಾದಿ ಯಾವುದೇ ರೂಪದಲ್ಲಿ ಸಂಗ್ರಹಿಸಿ ಮಾರಾಟ ಮಾಡುವ ಕುಡಿಯುವ ನೀರಿಗೆ ಈ ನಿಯಮಾವಳಿಯನ್ನು ಕಡ್ಡಾಯವಾಗಿ ಅನ್ವಯಿಸಬೇಕು.

2. ಖನಿಜಾಂಶ ಭರಿತ ನೀರು ಎಂದರೆ ನೈಸರ್ಗಿಕ ಊಟಿ ಅಥವಾ ಚಿಲಮೆಯ ನೀರು ಎಂದು ನಿಗದಿತಗೊಳಿಸಬೇಕು. ಇದಕ್ಕೂ ರಾಸಾಯನಿಕ ಮತ್ತು ಕೀಟಾಣುಗಳ ವಿಶ್ಲೇಷಣೆಯ ಮಾದರಿಗಳನ್ನು (Standards) ನಿಗದಿತಗೊಳಿಸಬೇಕು. ಖನಿಜಾಂಶ ಭರಿತ ನೀರಿನ ಮೂಲವನ್ನು ಬಾಟ್ಲಿಯ ಮೇಲೆ ನಮೂದಿಸಬೇಕು.

3. ಬಾಟ್ಲಿ, ಚೀಲ ಇತ್ಯಾದಿ ಸಂಗ್ರಾಹಗಳ (Containers) ಮೇಲೆ ನೀರಿನ ಮೂಲ ನೀರಿನ ಗುಣಮಟ್ಟವನ್ನು ಅಚ್ಚುಮಾಡಲೇಬೇಕೆಂದು ನಿಯಮವನ್ನು ವಿಧಿಸಬೇಕು.

4. ಸಧ್ಯದ PFA ಕಾನೂನಿಕ ಬದಲಾಗಿ ಕುಡಿಯುವ ನೀರಿನ ಕಾನೂನನ್ನು (Drinking Water Act) ರೂಪಿಸಿ ಜಾರಿಗೆ ತರಬೇಕು. ಇಂಥ ಕಾನೂನು ಅಮೇರಿಕೆಯಲ್ಲಿ ಜಾರಿಯಲ್ಲಿದೆ. ಇದು ತೀರ ತುರ್ತಿನ ಅವಶ್ಯಕತೆ.

5. ಬಾಟ್ಲಿ ನೀರಿನ ಬೆಲೆಯ ಮೇಲೆ ನಿಯಂತ್ರಣವಿರದಿದ್ದರೆ ಬಳಕೆದಾರರ ಶೋಷಣೆ

ಬಾಟ್ಲಿಯ ನೀರು ಕುಡಿಯುವವರಿಗೆ ಸಲಹೆಗಳು

ನೀವು ಬಾಟ್ಲಿಯ ನೀರನ್ನು ಕುಡಿಯುವವರಾಗಿದ್ದರೆ ಈ ಕೆಳಗಿನ ಸಲಹೆಗಳನ್ನು ಗಮನದಲ್ಲಿಡಿ:

❐ ಒಂದೇ ಸಲಕ್ಕೆ ಹಲವು ಬಾಟ್ಲಿಗಳನ್ನು ಕೊಳ್ಳಬೇಡಿ. ಬಹಳ ದಿನಗಳ ಕಾಲ ಸಂಗ್ರಹಿಸಿಡಬೇಡಿ.

❐ ಬಾಟ್ಲಿಯಿಂದ ನೇರವಾಗಿ ನೀರನ್ನು ಕುಡಿಯಬೇಡಿ. ಹಾಗೆಯೇ ಕುಡಿಯುವದಾದರೆ ಒಂದೆ ಸಲಕ್ಕೆ ಮುಗಿಸಿ ಬಿಡಿ. ಇಲ್ಲವಾದರೆ ನಿಮ್ಮ ಬಾಯಿಯಿಂದ ಕೀಟಾಣುಗಳು ಬಾಟ್ಲಿಯೊಳಕ್ಕೆ ಸೇರಿ, ಅಲ್ಲಿಯ ನೀರಿನಲ್ಲಿ ವೃದ್ಧಿಯಾಗುತ್ತವೆ.

❐ ಶಿಶುಗಳಿಗೆ ಕುದಿಸಿ ಆರಿಸಿದ ನೀರನ್ನೇ ಕುಡಿಸಿರಿ. ಅದು ಬಾಟ್ಲಿ ನೀರಾದರೂ ಸರಿಯೇ, ಕೊಳಾಯಿಯ ನೀರಾದರೂ ಸರಿಯೇ, ಈ ನಿಯಮ ತಪ್ಪದೆ ಪಾಲಿಸಿರಿ.

❐ ಬಾಟ್ಲಿಯ ಮುಚ್ಚಳವನ್ನು ತೆರೆದ ನಂತರ ನೀರಿರುವ ಬಾಟ್ಲಿಯನ್ನು ಫ್ರಿಜ್ ನಲ್ಲಿಡಿರಿ. ಬಾಟ್ಲಿಯನ್ನು ತೆರೆದ 3-4 ದಿನಗಳಲ್ಲಿ ಅದನ್ನು ಖಾಲಿ ಮಾಡಿರಿ.

❐ ನಿಮಗೆ ಸರಿ ಕಂಡ ಒಂದೇ ಬ್ರ್ಯಾಂಡ್ ನೀರನ್ನೇ ಉಪಯೋಗಿಸಿರಿ. ಪ್ರತಿಸಲವು ಬಾಟ್ಲಿಯ ಮುಚ್ಚಳವು ಸರಿಯಾಗಿದೆಯೇ ಎಂದು ಪರೀಕ್ಷಿಸಿರಿ.

❐ ಖಾಲಿ ಬಾಟ್ಲಿಯನ್ನು ಹಾಗೆಯೇ ಎಸೆಯಬೇಡಿ. ಉಪಯೋಗಿಸದಂತೆ ಅದನ್ನು ಛಿದ್ರಗೊಳಿಸಿರಿ.

ಖನಿಜಾಂಶಭರಿತ ನೀರಿನಲ್ಲಿ ನಿಮಗೆ ಖನಿಜ ಸಿಗುತ್ತದೆಯೇ?

ಈಗಾಗಲೇ ಖನಿಜಾಂಶ ಭರಿತ ನೀರು (Mineral Water) ಎಂದರೇನು ಎಂಬುದನ್ನು ವಿವರಿಸಿದ್ದೇನೆ. ಒಟ್ಟು ಲವಣಾಂಶ (Total Dissolved Solids) ಎಂದರೆ ನೀರಿನಲ್ಲಿ ಕರಗಿ ಹೋಗಿರುವ ಲವಣಗಳ ಮತ್ತು ಖನಿಜಗಳ ಅಂಶಗಳು ಎಂದರ್ಥ. ಒಟ್ಟು ಲವಣಾಂಶವು 500-1000 ಪಿಪಿಎಮ್ ಅಪೇಕ್ಷಣೀಯ ಮೇಲೆ ಉಲ್ಲೇಖಿಸಲಾದ ಖನಿಜಾಂಶ ಭರಿತ ನೀರು ಮತ್ತು ಕುಡಿಯುವ ನೀರಿನಲ್ಲಿ ಇರುವ ಲವಣಾಂಶಗಳನ್ನು ಈ ಕೆಳಗೆ ಕೊಡಲಾಗಿದೆ:

ಖನಿಜಾಂಶ ಭರಿತ ನೀರು

ಬ್ರ್ಯಾಂಡ್	ಲವಣಾಂಶ ಪಿಪಿಎಮ್
ಗೋಲ್ಡನ್	
ಈಗಲ್	೨೭೬
ಯಸ್(Yes)	೨೭೦
ಅಕ್ವಾಸ್ಪಾ	೧೧೭
ಸಾಯಿಗಂಗಾ	೭೦
ನಿರಂತರ	ಇಲ್ಲ

ಕುಡಿಯುವ ನೀರು

ಬ್ರ್ಯಾಂಡ್	ಲವಣಾಂಶ ಪಿಪಿಎಮ್
ತೃಪ್ತಿ	೨೯೯
ಬಿಸಿಲ್	೧೨೦
ಬಿಸಿಲೇರಿ(ಬರೋಡ)	೧೧೪
ಬಿಸಿಲೇರಿ(ಬೆಂಗಳೂರು)	೧೧೦
ಬಿಸಿಲೇರಿ(ಕಲ್ಕತ್ತಾ)	೧೦೦
ಬಿಸಿಲೇರಿ(ಗಾಜಿಯಾಬಾದ)	೯೩
ಬೇಲ್ಲಿ (ಸೂರತ್)	೫೧
ಬೇಲ್ಲಿ(ಮುಂಬೈ)	೮೩

ಖನಿಜಾಂಶ ಭರಿತ ನೀರಿನ ಬಗ್ಗೆ ನಮ್ಮ ದೇಶದ ಮಾದರಿ ಇಲ್ಲ. ಆದರೆ ಅಮೆರಿಕೆಯಲ್ಲಿ ಒಟ್ಟು ಲವಣಾಂಶವು (TDS) 130 ಪಿಪಿ ಎಮ್. ಇದ್ದರೆ ಅಂಥ ನೀರನ್ನು ಖನಿಜಾಂಶ ಭರಿತ ನೀರೆಂದು ಪರಿಗಣಿಸಲಾಗುತ್ತದೆ. ಹಾಗೆ ನೋಡಿದರೆ ನಮ್ಮ ಎಲ್ಲಾ ಕೊಳವೆ ಬಾವಿಯ ನೀರು ಈ ಮಟ್ಟಕ್ಕಿಂತಲೂ ಹೆಚ್ಚಿನ ಲವಣಾಂಶವನ್ನು ಹೊಂದಿದೆ. ಆದ್ದರಿಂದ Mieneral Water ಎಂಬುದೊಂದು ಬಳಕೆದಾರರನ್ನು ಮೋಸಗೊಳಿಸುವ ತಂತ್ರವೇ ಹೊರತು ವಾಸ್ತುವವಲ್ಲ. ಹೆಚ್ಚಿನ ಚರ್ಚೆಯನ್ನು ಲೇಖನದಲ್ಲಿ ಕೊಡಲಾಗಿದೆ.

ಟಿಪ್ಪಣಿ:

ಪಿಪಿಎಮ್: Parts per million ಅಂದರೆ ಒಂದು ದಶಲಕ್ಷದಲ್ಲಿ ಇಂತಿಷ್ಟು ಭಾಗ ಎಂದರ್ಥ.

ಯಾಗುತ್ತದೆ. ಉದ್ದಿಮೆದಾರರಿಗೂ ಲಾಭ ಸಿಕ್ಕು ಬಳಕೆದಾರರ ಶೋಷಣೆಯಾಗದಂಥ ರೀತಿಯಲ್ಲಿ ಬೆಲೆಯನ್ನು ನಿಷ್ಕರ್ಷಿಸಬೇಕು. ಆಗ ಉದ್ದಿಮೆಯೂ ಬೆಳೆಯುತ್ತದೆ; ಗ್ರಾಹಕನೂ ಉಳಿಯುತ್ತಾನೆ.

ಶುದ್ಧನೀರಿನ ಪರ್ಯಾಯ ವ್ಯವಸ್ಥೆ

ನಾನಾಗಲೇ ತಿಳಿಸಿದಂತೆ ಬಾಟ್ಲಿ ನೀರು ತುಂಬಾ ದುಬಾರಿಯ ಬೆಲೆಯ ವಸ್ತುವಾಗಿದೆ. ದಿನಾಲೂ 2-3 ಲೀಟರ ನೀರನ್ನು ಕುಡಿಯುವಂಥ ವ್ಯಕ್ತಿ ಪ್ರತಿದಿನ ಸುಮಾರು 30-40 ರೂ.ಗಳನ್ನು ಖರ್ಚು ಮಾಡಬೇಕಾಗುತ್ತದೆ. ಅಂದರೆ ಒಬ್ಬ ವ್ಯಕ್ತಿ ತಿಂಗಳಿಗೆ ಸುಮಾರು 1200 ರೂ.ಗಳನ್ನು ಖರ್ಚುಮಾಡಬೇಕು! ಐದು ಜನರ ಕುಟುಂಬಕ್ಕೆ ಸುಮಾರು 6000. ರೂ. ಗಳನ್ನು ಪ್ರತಿ ತಿಂಗಳೂ ಖರ್ಚು ಮಾಡಬೇಕು!! ಇದು ಅಸಾಧ್ಯದ ಮಾತು. ಅದಕ್ಕಾಗಿ ಒಂದು ಪರ್ಯಾಯ ವ್ಯವಸ್ಥೆಯನ್ನು ಸೂಚಿಸ ಬಯಸುತ್ತೇನೆ.

ಬೆಂಗಳೂರು, ಮೈಸೂರು ಮತ್ತಿತ್ತರ ಪಟ್ಟಣಗಳಿಗೆ ನದಿ ಮೂಲದಿಂದ ನೀರನ್ನು ಪೂರೈಸಲಾಗುತ್ತದೆ. ನೀರನ್ನು ಸೋಸುವ ಸ್ತರಗಳು (Filter beds) ಸುವ್ಯವಸ್ಥೆಯಲ್ಲಿದ್ದರೆ ನೀರು

ಹೊಂಡು ರಹಿತ ವಾಗಿರುತ್ತದೆ. (Free from silt). ಅದರಲ್ಲಿ ಕ್ಲೋರಿನ್‌ನ್ನು ಹಾಯಿಸಿದರೆ ರೋಗಕಾರಕ ಕೀಟಾಣುಗಳು ಸತ್ತು ಹೋಗುತ್ತವೆ. ಆದರೆ ನಮ್ಮ ದೇಶದಲ್ಲಿ ಎಲ್ಲಾ ಸಾರ್ವಜನಿಕ ಸೇವಾಸಂಸ್ಥೆಗಳು ಕ್ಷಯಪೀಡಿತ ವಾಗಿರುವಂತೆ, ಇಂಥ ಸಂಸ್ಥೆಗಳೂ ರೋಗಿಗಳಾಗಿರುವುದು ಕಟು ಸತ್ಯ. ಆದ್ದರಿಂದ ನೀರಿನ ಸರಬರಾಜಿನಿಂದ ಸಂಗ್ರಹಿಸಿದ ನೀರನ್ನು ಮಾರುಕಟ್ಟೆಯಲ್ಲಿ ಸಿಗುವ ಸೋಸುಕಗಳ (Filter) ಮೂಲಕ ಸೋಸಿದರೆ ತೇಲಾಡುವ ಕಣಗಳು ಇರುವದಿಲ್ಲ. ಹೀಗೆ ಸೋಸಲ್ಪಟ್ಟ ನೀರನ್ನು ಕುದಿಸಿ ಆರಿಸಿದರೆ ಕೀಟಾಣುಗಳೂ ಇರುವದಿಲ್ಲ. ಹೀಗೆ ಲಭ್ಯವಾದ ನೀರು ಯಾವ ಬಾಟ್ಲಿಯ ನೀರಿಗೂ ಗುಣದಲ್ಲಿ ಕಡಿಮೆಯಾಗಿರುವದಿಲ್ಲ. ಮತ್ತು ಮಾಡುವ ಖರ್ಚು ತೀರ ತೀರ ಕಡಿಮೆ. ಅಂದರೆ ತೀರ ಸುಲಭ ಬೆಲೆಗೆ ಒಳ್ಳೆಯ ಹಾಗೂ ಶುದ್ಧೀಕರಿಸಿದ ನೀರು ನಮಗೆ ಲಭ್ಯವಾಗುತ್ತದೆ.

ಕೊಳವೆ ಬಾವಿಯಿಂದ ಪಂಪ ಮಾಡುವ ನೀರು ಸಾಮಾನ್ಯವಾಗಿ ನೇರವಾಗಿ ಕುಡಿಯಲು ಯೋಗ್ಯವಾಗಿರುತ್ತದೆ. ಆದರೆ ಹಳ್ಳಿಗಳಲ್ಲಿ ಅಥವಾ ನಗರದ ಕೊಳಚೆ ಪ್ರದೇಶದಲ್ಲಿ ಕೊಳವೆ ಬಾವಿಯ ಸುತ್ತಲೂ ಹೊಲಸು ನೀರು ತುಂಬಿರುತ್ತದೆ. ಪ್ರತಿ ಕೊಳವೆಯ ಬಾವಿ ಸುತ್ತಲೂ (ಕರ್ನಾಕದ ಭೂವೈಜ್ಞಾನಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು) ಸುಮಾರು 100 ಮೀಟರ್ ಅಂತರದೊಳಗೆ ಗಟಾರ, ತಿಪ್ಪೆ, ಗುಂಡಿಗಳು ಇತ್ಯಾದಿ ಮಲಿನ ತಾಣಗಳು ಇರದಂತೆ ನೋಡಿಕೊಂಡರೆ ನೀರು ನೇರವಾಗಿ ಕುಡಿಯಬಹುದಾದಷ್ಟು ಶುದ್ಧವಾಗಿರುತ್ತದೆ. ಆದರೆ ಕೆಲವೊಂದು ಸ್ಥಳಗಳಲ್ಲಿ ಅಂತರ್ಜಲದಲ್ಲಿ ಫ್ಲೋರೈಡಿನ ಮಟ್ಟ ಹೆಚ್ಚಾಗಿರುವದು ಕಂಡು ಬಂದಿದೆ. ಅಂತಹ ನೀರನ್ನು ಮೊದಲೆ ಸರಿಯಾಗಿ ಪರೀಕ್ಷಿಸಿ ವರ್ಜಿಸಬೇಕು. ನಾನು ಕಳೆದ 10-15 ವರ್ಷಗಳಿಂದಲೂ ಪ್ರವಾಸದಲ್ಲಿದ್ದಾಗ ಕೊಳವೆ ಬಾವಿಯ ನೀರನ್ನು ಕುಡಿದಿದ್ದೇನೆ. ಯಾವ ಆರೋಗ್ಯದ ಸಮಸ್ಯೆಗಳನ್ನು ನಾನು ಎದುರಿಸಿಲ್ಲ.

ಲವಣಾಂಶ (T.D.S) ತೀರ ಕಡಿಮೆ ಇರುವ ನೀರು ಬಾಯಿಗೆ ರುಚಿ ಎನಿಸಬಹುದು. ಆದರೆ ತೀರ ಕಡಿಮೆ ಲವಣಾಂಶ ಇರುವ ನೀರನ್ನು ಸದಾ ಕುಡಿಯುವವರು ಹೃದ್ರೋಗಕ್ಕೆ ತುತ್ತಾಗುತ್ತಾರೆಂದು ಒಂದು ಅಧ್ಯಯನ ತಿಳಿಸುತ್ತದೆ. ಸಾಮಾನ್ಯವಾಗಿ ಲವಣಾಂಶವು ಕೊಳವೆ ಬಾವಿಯ ನೀರಿನಲ್ಲಿ 500-1000 ಪಿಪಿ ಎಮ್ ಇರುತ್ತದೆ. ಇದರಿಂದ ಹೃದ್ರೋಗದ ಸಂಭವತೆಯು ಕಡಿಮೆ. ಈ ದೃಷ್ಟಿಯಿಂದಲೂ ಕೊಳವೆ ಬಾವಿಯ ನೀರು ಅಪೇಕ್ಷಣೀಯ. ಆದರೆ ಕೊಳವೆ ಬಾವಿಯ ಪರಿಸರವನ್ನು ನಿರ್ಮಲವಾಗಿಡಬೇಕು. ಅಷ್ಟಾದರೆ ನೀವು ಬಾಟ್ಲಿ ನೀರಿಗೆ ಮೊರೆಹೋಗಬೇಕಾಗಿಲ್ಲ. ●

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ

ನಂ. 16, 11ನೇ ರಾಜಭವನ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ 5254
ಬೆಂಗಳೂರು : 560 001. ದೂರವಾಣಿ : 2867369 ಫ್ಯಾಕ್ಸ್ : 286 4532

ಕೃಷಿ ಮಾರಾಟ ರಂಗದಲ್ಲಿ ಮಂಡಳಿಯ ಸಾಧನೆಗಳು

- ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆಗಳ ಪ್ರಾಂಗಣಗಳ ಅಭಿವೃದ್ಧಿಗಾಗಿ ಇದುವರೆವಿಗೂ ಒಟ್ಟು 706.29 ಲಕ್ಷ ರೂಪಾಯಿಗಳನ್ನು ಸಾಲ ಮತ್ತು ಅನುದಾನ ರೂಪದಲ್ಲಿ ನೀಡಲಾಗಿದೆ.
- ಅತಿ ಹಿಂದುಳಿದ ಹಳ್ಳಿಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಿಗೆ ಸಂಪರ್ಕಿಸಲು ಅನುಕೂಲವಾಗುವ ಕೂಡು ರಸ್ತೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ವಯ 4.85 ಕೋಟಿ ರುಪಾಯಿ ಹಣವನ್ನು ಮಾರುಕಟ್ಟೆಗೆ ಸಾಲವಾಗಿ ನೀಡಲಾಗಿದೆ.
- ಮಾರಾಟ ರಂಗದ ಸಮಸ್ಯೆಗಳಿಗೆ ಪರಿಹಾರೋಪಾಯಕ್ಕಾಗಿ ಮಂಡಳಿಯ ಸಂಶೋಧನಾ ವಿಭಾಗವು ಹಲವಾರು ಸಂಶೋಧನಾ ಕೆಲಸಗಳನ್ನು ಕೈಗೊಂಡು ಇದುವರೆವಿಗೂ 234 ಸಂಶೋಧನಾ ವರದಿಗಳನ್ನು ಪ್ರಕಟಿಸಿದೆ.
- ಮಂಡಳಿಯು ಸ್ಥಾಪಿಸಿದ ಮೈಸೂರು, ಹುಬ್ಬಳ್ಳಿ ಮತ್ತು ರಾಯಚೂರು ತರಬೇತಿ ಮಹಾವಿದ್ಯಾಲಯಗಳಲ್ಲಿ ಇದುವರೆವಿಗೂ 13, 567 ರೈತರಿಗೆ, 6,070 ಸಿಬ್ಬಂದಿಗಳಿಗೆ ಹಾಗೂ 10,947 ಇತರೆಯವರಿಗೆ ಕೃಷಿ ಮಾರಾಟ ಕುರಿತು ತರಬೇತಿ ನೀಡಲಾಗಿದೆ.
- ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಾ ವಿಸ್ತರಣಾ ವಿಭಾಗಗಳಿಂದ ಇದುವರೆಗೂ ಸುಮಾರು 11,300 ಹಳ್ಳಿಗಳಲ್ಲಿ ಪ್ರಚಾರ ಮತ್ತು ಪ್ರದರ್ಶನಗಳನ್ನು ಏರ್ಪಡಿಸಿ ರೈತರಿಗೆ ಪ್ರಚಲಿತ ಮಾರಾಟ ಸುಧಾರಣೆ ಕುರಿತು ಮನವರಿಕೆ ಮಾಡಿಕೊಡಲಾಗಿದೆ.
- ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಪ್ರಚಲಿತದಲ್ಲಿರುವ ದೈನಂದಿನ, ವಾರಾಂತ್ಯದ, ಮಾಸಿಕ ಹಾಗೂ ವಾರ್ಷಿಕ ಬೆಲೆಗಳನ್ನು ಎನ್. ಐ. ಸಿ. ಸಹಯೋಗದೊಂದಿಗೆ ಸಂಗ್ರಹಿಸಿ, ಕ್ರೋಢೀಕರಿಸಿ ವಿವಿಧ ಮಾಧ್ಯಮಗಳ ಮುಖಾಂತರ ಪ್ರಸಾರ ಮಾಡಲಾಗುತ್ತಿದೆ.
- ರಾಜ್ಯದ ರೈತರುಕೃಷಿ ಉತ್ಪನ್ನಗಳನ್ನು ರಫ್ತು ಮಾಡಿ ಹೆಚ್ಚಿನ ಲಾಭ ಗಳಿಸಲು ಅಗತ್ಯವಿರುವ ಮಾಹಿತಿಯನ್ನು ನೀಡಲು ಮಂಡಳಿಯ ಕೇಂದ್ರ ಕಛೇರಿಯಲ್ಲಿ ರಫ್ತು ಉತ್ತೇಜನ ಘಟಕ ತೆರೆಯಲಾಗಿದೆ.
- ಕೃಷಿ ಮಾರಾಟ ಕುರಿತು ಲೇಖನಗಳನ್ನೊಳಗೊಂಡ 'ಕೃಷಿಪೇಟೆ' ಮಾಸಪತ್ರಿಕೆಯನ್ನು ಹೊರತರುತ್ತಿದ್ದು ಇದುವರೆಗೆ 17.84 ಲಕ್ಷ ಪತ್ರಿಕೆಗಳನ್ನು ಪ್ರಕಟಿಸಲಾಗಿದೆ.
- ರಾಜ್ಯದ ಕೃಷಿ ಮಾರುಕಟ್ಟೆ ಸಮಿತಿಗಳಿಗೆ ಮತ್ತು ಮಂಡಳಿಗೆ ಅಗತ್ಯವಿರುವ ಮುದ್ರಣ ಸಾಮಗ್ರಿ ಪೂರೈಸಲು ಸುಸಜ್ಜಿತ ಆಫ್‌ಸೆಟ್ ಮುದ್ರಣಾಲಯವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗಿದೆ.
- ವರ್ಗೀಕರಣ ಮತ್ತು ಪ್ರಮಾಣೀಕರಣ ಕುರಿತು ರೈತರಿಗೆ ಹಾಗೂ ಸಂಬಂಧಿಸಿದವರಿಗೆ ವೈಜ್ಞಾನಿಕವಾಗಿ ಶಿಕ್ಷಣ ಕೊಡಲು ಮಂಡಳಿ ವತಿಯಿಂದ ರಾಯಚೂರಿನಲ್ಲಿ 'ಗುಣ ನಿಯಂತ್ರಣ ಘಟಕ' ವನ್ನು ಸ್ಥಾಪಿಸಲಾಗಿದೆ.
- ಕೃಷಿ ಮಾರಾಟ ರಂಗದ ವಿವಿಧ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಮತ್ತು ಕಾರ್ಯಗಾರಗಳನ್ನು ನಡೆಸಿ ಶಿಫಾರಸ್ಸುಗಳನ್ನು ಪಡೆದು ಸರ್ಕಾರದಿಂದ ಅನುಷ್ಠಾನಗೊಳಿಸಲು ಪ್ರಯತ್ನಿಸಲಾಗುತ್ತಿದೆ.
- ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾಗ ಅಪಘಾತ ಸಂಭವಿಸಿ ಸಾವನ್ನಪ್ಪಿದ ಕೃಷಿಕರು, ಕೃಷಿ ಕಾರ್ಮಿಕರ ಕುಟುಂಬದವರಿಗೆ 25,000 ರೂಪಾಯಿಗಳ ವಿಮಾ ಸೌಲಭ್ಯವನ್ನು ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆಯ ಮೂಲಕ ಕಲ್ಪಿಸಲಾಗಿದೆ.
- ಕೃಷಿ ಉತ್ಪನ್ನ ಮಾರುಕಟ್ಟೆಸಮಿತಿಗಳ ಪರವಾನಿಗೆ ಪಡೆದುಕಾರ್ಯ ನಿರ್ವಹಿಸುತ್ತಿರುವ ಶ್ರಮಿಕರು, ತೂಕದವರು ಮತ್ತು ಚಕ್ಕಡಿಯವರಿಗೆ 1 ಜನತಾ ಅಪಘಾತ ವಿಮಾ ಯೋಜನೆಗಳನ್ನು ಜಾರಿಗೆ ತಂದಿದ್ದು ಈ ಯೋಜನೆಯನ್ವಯ, ಸಾವನ್ನಪ್ಪಿದವರ ಕುಟುಂಬಕ್ಕೆ 50,000 ರೂಪಾಯಿಗಳ ವಿಮಾ ಸೌಲಭ್ಯ ಕಲ್ಪಿಸಲಾಗಿದೆ.
- ಹುಬ್ಬಳ್ಳಿಯಲ್ಲಿ ಸ್ಥಾಪಿತವಾಗಿರುವ ಹಣ್ಣು ಮತ್ತು ತರಕಾರಿಗಳ ಮಾರಾಟ ಸಂಸ್ಕರಣ ಹಾಗೂ ರಫ್ತು ಸಹಕಾರಿ ಸಂಘದಲ್ಲಿ ಬಂಡವಾಳ ಹೂಡಿ ಸಹಕಾರಿ ಮಾರಾಟ ರಂಗಕ್ಕೆ ಉತ್ತೇಜನ ನೀಡಲಾಗಿದೆ.

ಬಿ. ಎಸ್. ಪಾಟೀಲ್	**ಹೆಚ್. ನಾಗಪ್ಪ**	**ವಿ. ಉಮೇಶ್** ಭಾ. ಆ. ಸೇ.
ಮುಖ್ಯ ಪ್ರಧಾನ ವ್ಯವಸ್ಥಾಪಕರು	ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಹಾಗೂ ಅಧ್ಯಕ್ಷರು	ವ್ಯವಸ್ಥಾಪಕ ನಿರ್ದೇಶಕರು



○ ಉಷಾ ನವರತ್ನರಾಮ್

ಚುಡಾಯಿಸುವ ಹುಡುಗರು

ನಾನು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿನಿ. ನಾನು ದಿನಂಪ್ರತಿ ಇನ್ನೊಂದೂರಿನ ಕಾಲೇಜಿಗೆ ಹೋಗಿ ಬರುತ್ತೇನೆ. ದಾರಿಯಲ್ಲಿ ಬಸ್ಸಿನಲ್ಲಿ ಹಲವು ಹುಡುಗರು ನನ್ನನ್ನು ಬಹಳ ಚುಡಾಯಿಸುತ್ತಾರೆ. ಇದರಿಂದ ನನಗೆ ಕಾಲೇಜಿಗೆ ಹೋಗಲು ತುಂಬಾ ತೊಂದರೆಯಾಗಿದೆ. ದಯವಿಟ್ಟು ಪರಿಹಾರ ಸೂಚಿಸಿ.

- ಹೆಸರು ಬೇಡ, ಊರು ಬೇಡ.

ಸಲಹೆ

ನಿಮ್ಮ ಸಮಸ್ಯೆ ಎಲ್ಲಾ ಕಡೆಯೂ ಇದ್ದುದೇ. ಇಲ್ಲಿ ಬೆಂಗಳೂರಿನಲ್ಲಿ ದಿನಂಪ್ರತಿ ಕಾಲೇಜಿಗೆ ಬಸ್ಸಿನಲ್ಲಿ ಹೋಗುವ ಹುಡುಗಿಯರಿರಲಿ, ದುಡಿಯುವ ಮಹಿಳೆಯರಿಗೂ ಈ ಕಾಟ ತಪ್ಪಿದ್ದಲ್ಲ. ನಮ್ಮ ಯುವ ಜನಾಂಗ ಅದರಲ್ಲೂ ಯುವಕರಿಗೆ ಸರಿಯಾದ ಮಾರ್ಗದರ್ಶನ ಮನೆಯಲ್ಲೂ ಸಿಗಬೇಕು. ಕಾಲೇಜುಗಳಲ್ಲೂ ಸಿಗಬೇಕು. ಸಾಲದ್ದಕ್ಕೆ ಚಲನಚಿತ್ರಗಳಲ್ಲಿ ಹುಡುಗಿಯರನ್ನು ರೇಗಿಸುವುದು, ಚುಡಾಯಿಸುವುದೂ, ಬಲಾತ್ಕಾರ ಮಾಡುವುದೂ ಇವುಗಳನ್ನು ವೈಭವೀಕರಿಸಿ ತೋರಿಸುವುದರಿಂದ ಯುವಕರು ಪ್ರಚೋದಿಸಲ್ಪಡುತ್ತಾರೆ. ಆರೋಗ್ಯಕರವಾದ ಸ್ನೇಹ, ಪರಸ್ಪರ ಗೌರವ ಇವೆಲ್ಲಾ ನಮ್ಮ ಯುವ ಪೀಳಿಗೆಗೆ ಎಷ್ಟೇ ಪಾಶ್ಚಾತ್ಯ ಅನುಕರಣೆ ಮಾಡಿದರೂ ಆಳವಾಗಿ ಬೇರೂರಿಲ್ಲ. ಅವರು ಚುಡಾಯಿಸಿದರೆ ನೀವು ಅವರನ್ನು ಅಲಕ್ಷಿಸಿ. ಇಲ್ಲವೇ ಅವರಿಗೆ ನಿಮ್ಮ ಅನಿಸಿಕೆ ತಿಳಿಸಿ. ಅವರ ಅಕ್ಕತಂಗಿಯರನ್ನು ಹೀಗೆ ಮಾಡಿದರೆ ಅವರಿಗೆಷ್ಟು ಮನಸ್ಸಿಗೆ ಬೇಸರವಾಗುವುದೋ ಅಷ್ಟೇ ನಿಮಗೂ ಆಗುವುದೆಂದು ತಿಳಿಯಪಡಿಸಿ.

ಕುಡುಕ ಗಂಡನೊಂದಿಗೆ ಸಂಸಾರ

ಗಂಡನ ಕುಡಿತವೇ ನನ್ನ ಬಹು ದೊಡ್ಡ ಸಮಸ್ಯೆ. ಅವರಿಗೆ ೮ ವರ್ಷದಿಂದ ಈ ಚಟವಿದೆ. ಅವರಿಗೆ ಕುಡಿತ ಬಿಡಲು ಪ್ರೀತಿಯಿಂದ ಹೇಳಿಯಾಯ್ತು. ನಾಟಿ ಔಷಧಿ, ಮಂತ್ರ, ಮಾಟ, ದೇವರು ಎಲ್ಲಾ ಮುಗಿದು, ನಿಮ್ಹಾನ್ಸ್, ಆಸ್ಪತ್ರೆಯಲ್ಲಿ ೮ ದಿನ ಚಿಕಿತ್ಸೆ ಕೊಡಿಸಿಯೂ ಆಯ್ತು. ಆದರೂ ಚಟ ಬಿಡಲೊಲ್ಲರು. ಅವರು ಭಾವನಾ ಜೀವಿ, ನನ್ನ ಮೇಲೆ ನಮ್ಮ ಎರಡೂ ಮಕ್ಕಳ ಮೇಲೆ ಅವರು ತುಂಬಾ ಪ್ರೀತಿ. ದಿನಗಟ್ಟಲೆ ಹಗಲು ರಾತ್ರಿ ಕುಡಿಯುತ್ತಾರೆ. ಬುದ್ಧಿ ಹೇಳಿದಾಗ ಒಪ್ಪಿ ಮತ್ತೆ ಕುಡಿಯುವುದಿಲ್ಲ ಅಂತಾರೆ. ಆದರೆ ಬಿಡುವುದಿಲ್ಲ. ಅವರಿಗೆ ಫಿಟ್ಸ್ ಇದೆ. ಇತ್ತೀಚೆಗೆ ಅಪಘಾತ ಬೇರೆ ಆಗಿ ಮರೆವು ಜಾಸ್ತಿಯಾಗಿದೆ. ಪ್ರತಿ ವಿಷಯಕ್ಕೂ ಸಿಟ್ಟು ಮಾಡಿಕೊಳ್ಳುತ್ತಾರೆ. ಆಫೀಸಿನಲ್ಲಿ ಮೆಮೋ ತೆಗೆದುಕೊಂಡಿದ್ದಾರೆ. ನಾನು ದುಡಿದರೆ ಅದರಲ್ಲೇ ಸಂಸಾರ ನಡೆಸು ಎಂದು ಹೇಳಿ ತಮ್ಮ ಸಂಬಳವನ್ನೆಲ್ಲ ಹಾಳು ಮಾಡುತ್ತಾರೆ. ಮನೆಯಲ್ಲಿ ನಿತ್ಯ ಜಗಳ. ಇದರಿಂದ ಬೇಸತ್ತು ಎಲ್ಲಿಯಾದರೂ ಕಣ್ಮರೆಯಾಗಬೇಕೆನಿಸಿದೆ. ಅವರನ್ನು ಸರಿ ದಾರಿಗೆ ಹಚ್ಚುವ ಸಂಘ ಸಂಸ್ಥೆಗಳಿದ್ದರೆ, ಆಶ್ರಮವಿದ್ದರೆ ದಯವಿಟ್ಟು ತಿಳಿಸಿ.

- ಹೆಸರು, ಊರು ಬೇಡ.

ಸಲಹೆ

ಕುಡಿತ ಚಟವಾದ ಮೇಲೆ ಬಿಡಿಸುವುದು ಕಷ್ಟ. ಇದಕ್ಕೆ ಕುಡುಕರಿಂದಲೂ ಸಹಕಾರ, ನಿರ್ಧಾರ ಮುಖ್ಯ. ನಿಮ್ಮ ಪರಿಸ್ಥಿತಿ ಕರುಣಾಜನಕವಾದುದೇ. ಇದನ್ನು ತಡೆಯಲು ಕೆಲವು ಔಷಧಿಗಳನಿತ್ತು ಕುಡಿಯಲು ನಿರಾಸಕ್ತಿ ಮೂಡುವಂತೆ ಮಾಡಲು ಚಿಕಿತ್ಸೆಗಳು ಹೋಮಿಯೋಪತಿ, ಅಲೋಪತಿಯಲ್ಲಿದೆ. ಆದರೆ ಅವನ್ನು ಸೂಕ್ತವಾದ ವೈದ್ಯಕೀಯ ಮಾರ್ಗದರ್ಶನ ನೀಡಬೇಕು. ಮಾದಕ ದ್ರವ್ಯ ಸೇವನೆ, ಕುಡಿತ ಇವುಗಳನ್ನು ನಿಲ್ಲಿಸುವಾಗ ವಿತ್‌ಡ್ರಾಲ್ ಸಿಂಪ್ಟಮ್ಸ್ (withdrawl symptoms) ಕೆಲವರಿಗೆ ಕಂಡು ಬಂದು ಇವನ್ನು ನಿವಾರಿಸಲೂ ತಾಳ್ಮೆ ಸಹನೆ, ಸೂಕ್ತ ವೈದ್ಯಕೀಯ ಮಾರ್ಗದರ್ಶನ ಮುಖ್ಯ. ಇದೆಲ್ಲಕ್ಕೂ ದೀರ್ಘಾವಧಿ ಚಿಕಿತ್ಸೆ ಬೇಕಾಗುತ್ತದೆ. ಫಿಟ್ಸ್ ಬರುವವರಂತೂ ಕುಡಿಯಲೇ ಬಾರದು. ಅತೀ ಮದ್ಯಪಾನದಿಂದಾಗಿ ಮಾನಸಿಕವಾಗಿ ಅಸ್ವಸ್ಥರಾಗುವುದಲ್ಲದೇ ಪಿತ್ತಕೋಶ ದೊಡ್ಡದಾಗುತ್ತಾ ಬರುತ್ತದೆ, ಇದು ರಕ್ತನಾಳಗಳ ಮೇಲೆ ಒತ್ತಡಹೇರಿ ರಕ್ತ ಸೋರುವಿಕೆ, ಪ್ರಾರಂಭವಾಗುವುದುಂಟು. ನಿಷ್ಕ್ರಿಯವಾದ ಪಿತ್ತಕೋಶದಿಂದ ದೇಹದ ಆರೋಗ್ಯ ಅಸ್ತವ್ಯಸ್ತವಾಗುವುದು. ಸಿರೋಸಿಸ್ ಎಂಬ ಕಾಯಿಲೆಗೆ ಒಳಗಾಗಿ ನರಳುತ್ತಾರೆ. ಕುಡುಕರ ಸಂಸಾರಗಳೆಲ್ಲಾ ನಿಮ್ಮಂತೆಯೇ ಕಣ್ಣೀರಿನಲ್ಲಿ ಕೈತೊಳೆಯುತ್ತಾ ಬಳಲಿ ಬೆಂಡಾಗುತ್ತಿದ್ದಾರೆ. ನೀವು ಧೈರ್ಯವಹಿಸಿ ಸಂಸಾರದ ಭಾರವಹಿಸಿಕೊಳ್ಳಿ, ನಿಮ್ಮ ಪತಿಯ ಕೈಗೆ ಹಣ ಸಿಗದಂತೆ ಎಚ್ಚರ ವಹಿಸಿ - ಆದಷ್ಟು ಒಳ್ಳೆಯ ಮಾತಿನಿಂದ ಅವರನ್ನು ದಾರಿಗೆ ತರಲು ಯತ್ನಿಸಿ. ಪ್ರೀತಿಯಿಂದ ಓಲೈಸಿ - ಪ್ರೀತಿಯಿಂದ ನಿಲ್ಲಲಾಗದು ಯಾವದೂ ಇಲ್ಲ.

ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸುವ ಆಸೆ

ನಾನು J.O.Cಯ ೨ನೇ ವರ್ಷದ ಕಂಪ್ಯೂಟರ್ ಕೋರ್ಸ್ ಮಾಡುತ್ತಿದ್ದೇನೆ. ನನಗೆ ೧೭ ವರ್ಷ ೫ ತಿಂಗಳು. ನನಗೆ 'ಮಿಸ್ ಕರ್ನಾಟಕ' ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂಬ ಆಸೆ. ಮಧ್ಯಮ ವರ್ಗಕ್ಕೆ ಸೇರಿದ ಡಯಾನ ಅವರು 'ಮಿಸ್ ಇಂಡಿಯಾ' ವಿಜೇತರಾದಾಗ ಈ ಸೌಂದರ್ಯ ಸ್ಪರ್ಧೆ ಶ್ರೀಮಂತರ ಸ್ವತ್ತಲ್ಲ, ನಮ್ಮಂತಹವರೂ ಇದರಲ್ಲಿ ಭಾಗವಹಿಸಬಹುದು ಎಂದು ಮನವರಿಕೆಯಾಯಿತು. ಆದರೆ ನನಗೆ ಸ್ಪರ್ಧೆಯ ನಿಯಮಗಳು ತಿಳಿದಿಲ್ಲ. ಆದ್ದರಿಂದ 'ಮಿಸ್ ಕರ್ನಾಟಕ' ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಲು ಯಾರನ್ನು ಸಂಪರ್ಕಿಸಬೇಕು, ಹೇಗೆ ಸಿದ್ಧತೆ ನಡೆಸಬೇಕು, ತಿಳಿಸುವಿರಾ?

- ಹೆಸರು, ಊರು ಬೇಡ.

ಸಲಹೆ

ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗವಹಿಸಲು ಒಳ್ಳೆಯ ನಿಲುವು, ದೇಹಸಿರಿ, ರೂಪು ಬಹಳ ಮುಖ್ಯವಾದುದು. ಇದರೊಂದಿಗೆ ನಿಮ್ಮ ವ್ಯಕ್ತಿತ್ವ, ನಿಮ್ಮ ನಡೆನುಡಿ, ಅಲಂಕಾರವೂ ಮುಖ್ಯವಾದುದು. ಇದು ಶ್ರೀಮಂತರ ಸ್ವತ್ತಲ್ಲ ಆದರೆ ಇದಕ್ಕಾಗಿ ಉಡಿಗೆ, ತೊಡಿಗೆ, ಅಲಂಕಾರ ಇವಕ್ಕೆಲ್ಲಾ ಬಹಳಷ್ಟು ಹಣ ವ್ಯಯವಾಗುತ್ತದೆ. ಇದು, ಒಂದೊಂದು ದಿನಗಳಲ್ಲಿ ಸಾಧ್ಯವಿಲ್ಲ. ಸತತವಾಗಿ ನಿಮ್ಮನ್ನು ನೀವೇ 'ಮಾಡೆಲ್' ಆಗಿ ರೂಪಿಸಿಕೊಂಡು ಪ್ರತಿಯೊಂದು ಹಂತದಲ್ಲೂ ಸೌಂದರ್ಯತಜ್ಞರನ್ನು ಸಂಪರ್ಕಿಸಬೇಕಾಗುತ್ತದೆ. ಹವ್ಯಾಸಿ ಮಾಡೆಲಿಂಗ್‌ನಲ್ಲಿರುವವರಿಗೆ ಇದು ಸುಲಭವಾಗುತ್ತದೆ. ನಿಮ್ಮ ಮಾಡೆಲಿಂಗ್‌ಗಾಗಿ ಪ್ರಯತ್ನಿಸಿ. ಯಾರಾದರೂ ಸ್ಪಾನ್ಸರ್ಸ್ ಸಿಕ್ಕರೆ ಮತ್ತೂ ಒಳ್ಳೆಯದು. ಬರಿಯ ದೇಹ ಸೌಂದರ್ಯವೊಂದೇ ಅಲ್ಲ ಮಾನಸಿಕವಾಗಿಯೂ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಬ್ಯೂಟಿ ವಿತ್ ಬ್ರೈನ್ ತುಂಬಾ ಮುಖ್ಯ. ಇದೊಂದು ಕಲೆ ಹಾಗೂ ಸಾಕಷ್ಟು ಸಾಧನೆ ಅಧ್ಯಯನಾ ಮಾರ್ಗದರ್ಶನ ಮುಖ್ಯ. ಬೆಂಗಳೂರು, ಮುಂಬೈನಲ್ಲಿ ಇಂತಹ ಮಾರ್ಗದರ್ಶನ ನೀಡಲು ಹಲವಾರು ಸಂಸ್ಥೆಗಳಿವೆ. ಆಗಾಗ ಅವುಗಳ ಬಗ್ಗೆ ಜಾಹಿರಾತುಗಳು ಪತ್ರಿಕೆಗಳಲ್ಲಿ ಬರುತ್ತಲೇ ಇರುತ್ತವೆ. ಅವುಗಳನ್ನು ಸಂಪರ್ಕಿಸಿ.

ನಡತೆಗೆಟ್ಟವಳ ಮಗಳನ್ನು ವರಿಸಲೇ?

ನಾನು ಒಬ್ಬ ಮೆಕ್ಯಾನಿಕ್. ಸ್ವಂತ ಗ್ಯಾರೇಜ್ ಇಟ್ಟುಕೊಂಡಿದ್ದೇನೆ. ಜಾತಿಯಲ್ಲಿ ಮುಸಲ್ಮಾನ. ನನ್ನ ಗ್ಯಾರೇಜ್ ಹತ್ತಿರವಿರುವ ಒಂದು ಮನೆಯವರೊಂದಿಗೆ ಸ್ನೇಹ ಬೆಳೆಸಿದೆ. ಆ ಮನೆಯಲ್ಲಿ ತಾಯಿ ಮಗಳು ಇಬ್ಬರೇ ಇದ್ದಾರೆ. ಅವರ ಮಗಳೊಂದಿಗೆ ಪ್ರೀತಿ ಮೊಳೆಯಿತು. ಹುಡುಗಿ ೮ನೇ ಕ್ಲಾಸ್ ಕಲಿಯುತ್ತಿದ್ದಳು. ಅವಳ ತಾಯಿಯ ನಡತೆ ಸರಿಯಿಲ್ಲ (ದೇವದಾಸಿ). ಇದು ಗೊತ್ತಿದ್ದೂ, ತುಂಬಾ ವಿಚಾರ ಮಾಡಿ ಅವಳ ಮಗಳ ಬಾಳನ್ನು ಬೆಳಗಿಸಲೆಂದೇ ನಾನು ಆ ಹುಡುಗಿಯನ್ನು ಪ್ರೀತಿಸುತ್ತಿರುವೆ. ಈಗ ಈ ವಿಷಯ ಮನೆಯವರಿಗೆ ಗೊತ್ತಾಗಿ ತುಂಬಾ ಗೊಂದಲವಾಗಿದೆ. ವಯಸ್ಸಾದ ನನ್ನ ತಾಯಿಗೆ ಈ ಸಂಬಂಧ ಒಪ್ಪಿಗೆಯಿಲ್ಲ. ಮನೆಯವರೆಲ್ಲಾ ಸೇರಿ ತರಾತುರಿಯಲ್ಲಿ ಬೇರೊಬ್ಬ ಹುಡುಗಿಯೊಂದಿಗೆ ನಿಶ್ಚಿತಾರ್ಥ ಮಾಡಿದ್ದಾರೆ. ನಾನು ನನ್ನ ತಾಯಿ ಮುಖ ನೋಡಿ ಪ್ರೇಯಸಿಯನ್ನು ಮರೆತರೆ ಅವಳು ತನ್ನ ತಾಯಿಯಂತೆ ಅಡ್ಡ ದಾರಿ ಹಿಡಿದಾಳೆಂಬ ಭಯ. ಈಗಾಗಲೇ ಅವಳಿಗೆ ತುಂಬಾ ಹುಡುಗರೊಂದಿಗೆ ಸ್ನೇಹ ಬೆಳೆದಿದೆ. ಆದರೆ ನನ್ನಂತೆ ಯಾರೊಂದಿಗೂ ಸಲಿಗೆಯಿಂದಿಲ್ಲ. ನಿನ್ನನ್ನು ಬಿಟ್ಟು ಬೇರಾರನ್ನು ಮದುವೆಯಾಗುವುದಿಲ್ಲ ಎನ್ನುತ್ತಾಳೆ. ಏನು ಮಾಡಲಿ?

- ಹೆಸರು ಬೇಡ, ಧಾರವಾಡ

ಸಲಹೆ

ನೀವು ಮಾಡಿರುವ ನಿರ್ಧಾರ ಬಹಳ ಉದಾತ್ತವಾದುದು. ಆ ಹುಡುಗಿಯ ಸಹಕಾರವನ್ನು ನೀವು ನಿಶ್ಚಿತಮಾಡಿಕೊಳ್ಳಬೇಕು. ಬೇರೆ ಹುಡುಗರ ಸ್ನೇಹದಿಂದ ಅವಳ ಬಾಳು ಕಲುಷಿತಗೊಳ್ಳಬಹುದು. ಅವಳಿಗೆ ಆ ಎಚ್ಚರ ನೀಡಿ ನಿಮ್ಮ ತಂದೆ ತಾಯಿಯ ಮನವೊಲಿಸಲು ಯತ್ನಿಸಿ. ಒಂದು ಹೆಣ್ಣಿನ ಬಾಳು ತಿದ್ದಿ ಹೊಸ ಬಾಳು ದೊರೆಯುತ್ತಿರುವುದಾಗಿ ಮನನ ಮಾಡಿ ಇತರರಿಂದಲೂ ನಿಮ್ಮ ತಂದೆ ತಾಯಿಗೆ ಹೇಳಿರಿ. ಏನೇ ಗೊಂದಲವಾದರೂ ನಿಮ್ಮ ಧೃಢ ನಿರ್ಧಾರ ಬದಲಿಸದೇ ಆ ಹುಡುಗಿಗೆ ಬಾಳು ಕೊಡಿ. ಎಲ್ಲಾ ಕಾಪಾಡಿ. ಒಳ್ಳೆಯ ಕೆಲಸಮಾಡುವಾಗ ಧೃತಿ ಗೆಡಬಾರದು. ಧೈರ್ಯಂ ಸರ್ವತ್ರಸಾಧನಂ ದೇವರು ಒಳ್ಳೆಯದು ಮಾಡಲಿ.

ಒಲಿಸಿಕೊಳ್ಳುವ ಬಗೆ ಹೇಗೆ?

ನಾನು ೧೦ನೇ ತರಗತಿಯ ವಿದ್ಯಾರ್ಥಿನಿ ನಾನು ಯಾವುದನ್ನು ಮಾಡಬಾರದು ಎಂದುಕೊಂಡಿದ್ದೆನೊ ಅದು ನನಗೆ ಅರಿವಿಲ್ಲದ ಹಾಗೆ ನಡೆದಿದೆ. ನನ್ನ ಜೀವನದಲ್ಲಿ ಇದುವರೆಗೆ ನಾನು ಯಾರನ್ನು ಮೋಹದ ದೃಷ್ಟಿಯಿಂದ ನೋಡಿಲ್ಲ ಆದರೆ ಒಬ್ಬ ಮಾತ್ರ ನನ್ನನ್ನು ತನ್ನೆಡೆಗೆ ಆಕರ್ಷಿಸಿ, ನನ್ನ ಮನಸ್ಸನ್ನು ಒಲಿಸಿಕೊಂಡಿದ್ದಾನೆ. ಆದರೆ ಆತನೊಬ್ಬ ನೌಕರ. ನಾನೊಬ್ಬ ವಿದ್ಯಾರ್ಥಿನಿ. ಆತ ಯಾವಾಗಲೂ ನನ್ನನ್ನು ಗಮನಿಸುತ್ತಿರುತ್ತಾನೆ. ಮತ್ತು ಮನಸ್ಸಿನಲ್ಲೆ ಮಾತನಾಡುತ್ತಾನೆ. ನಾನು ಒಂದು ಕ್ಷಣ ಕಾಣದಾದಾಗ ಹುಡುಕುತ್ತಾನೆ. ಆದರೆ ಮಾತನಾಡಿಸಿದರೆ, ಸಿಟ್ಟು ಮಾಡಿಕೊಂಡು ರೇಗುತ್ತಾನೆ. ಅವನ ಬಳಿ ಏಕಾಂತವಾಗಿ ಮಾತನಾಡೋಣವೆಂದರೆ ಯಾವಾಗಲೂ ಕೆಲಸದಲ್ಲಿ ಮಗ್ನನಾಗಿರುತ್ತಾನೆ. ಅವನು ನನ್ನ ಜೀವನದಲ್ಲಿ ಬಂದು ಬಿರುಗಾಳಿಯನ್ನೇ ಎಬ್ಬಿಸಿದ್ದಾನೆ. ದಯಮಾಡಿ ಅವನನ್ನು ಒಲಿಸಿಕೊಳ್ಳುವ ಬಗೆಯನ್ನು ತಿಳಿಸಿ.

-ಮೀನಾಕ್ಷಿ, ಬೆಂಗಳೂರು

ಸಲಹೆ

ಇಂತಹ ಭಾವೋದ್ರೇಕಗಳಿಗೆ ಒಳಗಾಗದೇ ಸರಿಯಾದ ಪ್ರಾಕ್ಟಿಕಲ್ ರೀತಿಯಲ್ಲಿ ಬಾಳಲು ಕಲಿಯಿರಿ. ಬದುಕು ಆಟದ ಮೈದಾನವಲ್ಲ. ಕಣ್ಣಿನಲ್ಲಿ ಮಾತಾಡಿ, ಕಣ್ಣಿನಲ್ಲಿ ಪ್ರೀತಿಸಿ ಪಾತರಗಿತ್ತಿಗಳನ್ನು ಕಾಮನಬಿಲ್ಲುಗಳ ಹಿಂದೆ ಹುಟ್ಟು ಮಹಾಪುರುಷರಂತೆ ನುಗ್ಗುವುದು ಕೆಲವರ ಮಾನಸಿಕ, ದೌರ್ಬಲ್ಯ. ಅವನನ್ನು ಒಲಿಸಿಕೊಳ್ಳುವುದು ಬಿಟ್ಟು ಬೇರೆಯಾರಾದರೂ ಸಹಜ ಮನೋಧರ್ಮವಿರುವ ಬುದ್ಧಿವಂತನಾದ ಹುಡುಗನನ್ನು ಭೇಟಿಯಾಗಿ, ಸ್ನೇಹ ಗಳಿಸಿ, ಪರಸ್ಪರ ವಿವಾದ ವಿನಿಮಯ ಮಾಡಿಕೊಂಡು ಸರಿಯಾದವನಿಗೆ ನಿಮ್ಮ ಒಲವು ನೀಡಿ.

ದುಡುಕಿ ಮಾಡಿದ ತಪ್ಪು

ನಾನು ೨೭ ವರ್ಷದ ಯುವಕ, ರಾಜ್ಯ ಸರ್ಕಾರಿ ನೌಕರಿಯಲ್ಲಿದ್ದೇನೆ. ಒಬ್ಬ ಹುಡುಗಿಯನ್ನು ಪ್ರೀತಿಸುತ್ತಿದ್ದೇನೆ. ಅವಳು ಸಹ ನನ್ನನ್ನು ಪ್ರೀತಿಸುತ್ತಿದ್ದಾಳೆ. ನಾವಿಬ್ಬರು ಅವಿವೇಕತನದಿಂದ ತಪ್ಪು ಮಾಡಿದ್ದೇವೆ. ಒಂದು ದಿನ ಆಕೆ ನನ್ನನ್ನು ನೋಡಲು ನಮ್ಮ ಮನೆಗೆ ಬಂದಾಗ, 'ನನ್ನನ್ನು ಈ ಕೂಡಲೆ ಮದುವೆ ಮಾಡಿಕೊ' ಅಂತ ಹೇಳಿದಳು. ಅವಳಿಗೆ ಬೇರೆ ಮದುವೆ ಮಾಡಿ ಬಿಡುತ್ತಾರೆ ಅಂತ ಭಯ. ಅವಳ ಇಷ್ಟದಂತೆ ಅಕಸ್ಮಾತಾಗಿ ಅವಳಿಗೆ ನನ್ನ ಮನೆಯಲ್ಲಿ ಮಂಗಳ ಸೂತ್ರ ಕಟ್ಟಿದ್ದೇನೆ. ಆದರೆ ಅವಳಿಗೆ ಇನ್ನು ೧೮ ವರ್ಷ ಆಗಿಲ್ಲ ಅಂತ ನಂತರ ತಿಳಿಯಿತು. ನಾನು, ಅವಳು, ದೈಹಿಕವಾಗಿ ಮುಂದುವರೆದಿಲ್ಲ. ಈಗ ಅವಳನ್ನು ಒಪ್ಪಿಸಿ ಅವರ ಮನೆಗೆ ಕಳುಹಿಸಿದ್ದೇನೆ. ಅವರ ಮನೆಯಲ್ಲಿ ಈ ವಿಷಯ ಗೊತ್ತಾಗಿದೆ. ಅವಳನ್ನು ಬಂಧನದಲ್ಲಿ ಇಟ್ಟುಕೊಂಡು ಅವಳಿಗೆ ಬೇರೆ ಮದುವೆ ಮಾಡಲು ಹೊರಟಿದ್ದಾರೆ. ಅವಳ ಮೇಲೆ ನನಗೆ ಹಕ್ಕು ಇದೆಯಾ ಅಥವಾ ಇಲ್ಲವೋ? ಈಗಲೂ ನಾನು ಅವಳನ್ನು ಬೇರೆ ಕರೆದುಕೊಂಡು ಹೋಗಬಹುದಾ? ಕಾನೂನು ಪ್ರಕಾರ ನನ್ನ ನೌಕರಿ ಹೋಗುತ್ತಾ? ನನ್ನ ಸಮಸ್ಯೆಗೆ ಪರಿಹಾರ ಸೂಚಿಸಿ.

-ಎಸ್.ಜಿ., ಊರು ಬೇಡ

ಸಲಹೆ

ಪ್ರೀತಿಸುವುದು ತಪ್ಪಲ್ಲ. ಆದರೆ ನಿಮ್ಮ ಅಜ್ಞಾನ ಅವಿವೇಕತನ ಸಲ್ಲದು. ಅವಳು ಕೇಳಿದಳು ಎಂದು ನೀವು ತಾಳಿ ಕಟ್ಟಬಿಟ್ಟರೆ ಮದುವೆಯಾದ ಹಾಗೆ ಎಂದು ಯಾರು ಹೇಳಿದರು . ಗಂಧರ್ವ ವಿವಾಹ ಮಾಡಿಕೊಂಡ ದುಷ್ಯಂತ. ಶಕುಂತಲರಂತರಿಗೂ ಶಕುಂತಲನ ಸಖಿಯರಂತ ಗಣ್ವ ಮಹರ್ಷಿಯ ಆಶ್ರಮವಾಸಿಗಳೂ ಸಾಕ್ಷಿಯಾಗಿದ್ದರು. ಯಾವ ಸಾಕ್ಷಿಯೂ ಇಲ್ಲದೇ ನೀವಿಬ್ಬರೇ ಏಕಾಂತದಲ್ಲಿರುವಾಗ ಮಾಂಗಲ್ಯ ಕಟ್ಟಿದರೆ ಕಾನೂನು ಬದ್ಧವಾಗಿ ಏನೂ ಆಗಿಲ್ಲ. ಮಾಂಗಲ್ಯ ಕಟ್ಟುವುದರಿಂದ ಮದುವೆ ಕಾನೂನಾತ್ಮಕವಾಗದು. ಸಪ್ತಪದಿಯಾದ ನಂತರವೇ ಕಾನೂನುಬದ್ಧವಾಗುತ್ತದೆ. ಇಲ್ಲವೇ ನೀವಿಬ್ಬರೂ ಸಾಕ್ಷಿಗಳನಿಟ್ಟುಕೊಂಡು ರಿಜಿಸ್ಟರ್ ಮದುವೆಯಾಗಬಹುದು. ಇಪ್ಪತ್ತೇಳು ವರ್ಷದ ಸರ್ಕಾರಿ ನೌಕರಿಯಲ್ಲಿರುವ ನಿಮಗೆ ಇದು ತಿಳಿದಿಲ್ಲವೆಂದರೆ ಅಚ್ಚರಿಯಾಗುತ್ತದೆ. 'ಮಾಂಗಲ್ಯ ತಂತುನಾನೇ...' ಅದೆಲ್ಲಾ ಸಿನಿಮಾ ವರ್ಷನ್! ಪ್ರೀತಿಸುವಾಗ ಧೈರ್ಯ ಇರಬೇಕು. ನೀವೇ ಹೋಗಿ ಅವಳ ಮನೆಯವರಿಗೆ, ತಿಳಿಸಿ, ಒಪ್ಪಿಸಿ ಅವಳ ಕೈ ಹಿಡಿಯಿರಿ. ಅಗ್ನಿಸಾಕ್ಷಿ, ಸೂರ್ಯಚಂದ್ರರ ಸಾಕ್ಷಿ, ಗುರುಹಿರಿಯರ ಸಾಕ್ಷಿಯಾಗಿ. ನಾನು ನಿಮ್ಮ ಹಿರಿಯಾಧಿಕಾರಿಯಾಗಿದ್ದರೆ ನಿಮ್ಮ ಅಜ್ಞಾನ, ಮೂರ್ಖತನ ಕಂಡು ನೌಕರಿಯಿಂದ ತೆಗೆದು ಹಾಕುವೆನೆಂದು ವಾರ್ನಿಂಗ್ ಕೊಡುತ್ತಿದ್ದೆ. ಅರೆಜ್ಞಾನ ತುಂಬಾ ಅಪಾಯಕಾರಿ! ನಿಮ್ಮ ಅಜ್ಞಾನ ಅರೆಜ್ಞಾನದಿಂದ ಒಂದು ಹುಡುಗಿಯ ಬಾಳು ಹಾಳು ಮಾಡಬೇಡಿ. ಮದುವೆಯಾದರೆ ಸಾಕು ಎನ್ನುವ ಹುಡುಗಿಯರು ಇಂತಹ ಮೂರ್ಖತನಕ್ಕೆ ಕೈ ಹಾಕದೇ ಎಚ್ಚೆತ್ತುಕೊಳ್ಳಬೇಕು. ದೈಹಿಕ ಸಂಪರ್ಕವನ್ನು ಬೆಳೆಸಿಕೊಳ್ಳಲಿಲ್ಲಾವಲ್ಲಾ! ಆ ಹುಡುಗಿ ಚೆನ್ನಾಗಿದೆ. ಇಲ್ಲದಿದ್ದರೆ ಅವಳ ಭವಿಷ್ಯ ಹಾಳು ಮಾಡುತ್ತಿದ್ದಿರಿ! ಗಾಡ್ ಬ್ಲೆಸ್ ಯೂ!.

ಬಹುಧರ್ಮಗಳ ಸಮಾಜ ಕುರಿತ ಹಿಂದೂ ದೃಷ್ಟಿಕೋನ

ಸ್ವಾಮಿ ಅಗ್ನಿವೇಶ್ ಸಾಮಾಜಿಕ-ಧಾರ್ಮಿಕ-ರಾಜಕೀಯ ಚಿಂತಕ. ಹರ್ಯಾಣಾದಲ್ಲಿ ಶಿಕ್ಷಣ ಮಂತ್ರಿಯಾಗಿದ್ದರು. ಕೋಮುವಾದದ ಉಗ್ರವಿರೋಧಿ. ಜೀತ ಕಾರ್ಮಿಕರ ಸಂಘಟನೆ 'ಬಂಡುರ ಮುಕ್ತಿ ಮೋರ್ಚಾ'ದ ನೇತಾರ. ಗುಲಾಮತನದ ಸಮಕಾಲೀನ ರೂಪಗಳಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ದತ್ತಿನಿಧಿಯ ವಿಶ್ವ ಮಂಡಳಿಯ ಸದಸ್ಯರು. ಆರ್ಯ ಸಮಾಜದ ಬೇರುಳ್ಳವರು.

ಈ ಲೇಖನದ ಮೂಲ **The Parliament of World Religion**ನ **Global Ethics** ಕಾರ್ಯಕ್ರಮದಲ್ಲಿ ಕ್ರಿಶ್ಚಿಯನ್ ಧರ್ಮಗುರುಗಳನ್ನುದ್ದೇಶಿಸಿ ಜರ್ಮನಿಯಲ್ಲಿ ಮಾಡಿದ ಭಾಷಣ. ಮೊದಲು **Communalism Combat** ಪತ್ರಿಕೆಯ ಸೆಪ್ಟೆಂಬರ್' ೯೭ರ ಆವೃತ್ತಿಯಲ್ಲಿ ಪ್ರಕಟವಾಗಿ ತೀವ್ರ ಟೀಕೆಗೆ ಒಳಗಾಗಿತ್ತು. ನಂತರ ಡಿಸೆಂಬರ್ '೯೭ರ **Seminar**ನಲ್ಲಿ ಪ್ರಕಟವಾಯಿತು.

ಅನು : ಮಾಧವ ಐತಾಳ್

ವೇದಗಳ ಪ್ರಕಾರ - ಧರ್ಮ ಎಂದರೆ ಸರ್ವಕಾಲಿಕ ಋಜುಮಾರ್ಗ, ನೈತಿಕ ನಡವಳಿಕೆ.... ಹೀಗೆ ಅದೊಂದು ಪುಂಖಾನುಪುಂಖ ಆದರ್ಶಗಳ ಸರಮಾಲೆ. ಹಿಂದೂ ಧರ್ಮದಲ್ಲಿ ಸಂಸ್ಥಾಪಕನಿಲ್ಲ, ಪ್ರವಾದಿಗಳಿಲ್ಲ, ಆದರೆ ಎಲ್ಲ ಹಿಂದೂಗಳೂ ಒಪ್ಪಿಕೊಳ್ಳುವ ಕೆಲವು ಸಾಮಾನ್ಯ ಸತ್ಯಗಳಿವೆ. ಅವುಗಳಲ್ಲೊಂದು- ಧರ್ಮದ ಉದ್ದೇಶ, ಇಹ ಲೋಕದ ಬಂಧನಗಳಿಂದ ಬಿಡುಗಡೆ. ಇಂತಹ ವಾತಾವರಣವನ್ನು ಸೃಷ್ಟಿಸಲು ಧರ್ಮವು ಸೂಕ್ತ ಪರಿಸರವನ್ನು ಸೃಷ್ಟಿಸಬೇಕು. ಹಿಂದೂಗಳು 'ಸೃಷ್ಟಿ ಕರ್ತನು ಎಲ್ಲದರಲ್ಲೂ ಇದ್ದಾನೆ, ಆತನ ದೈವಿಕತೆಯು ಎಲ್ಲ ಮನುಷ್ಯರ ಸತ್ವ, ನಮ್ಮ ಅಜ್ಞಾನ ಮತ್ತು ಅಹಂಕಾರದಿಂದಾಗಿ ದೇವರೊಡನೆ ಸಂವಹನ ಅಸಾಧ್ಯವಾಗಿದೆ' ಎನ್ನುವುದನ್ನು ನಂಬುತ್ತಾರೆ.

ದೇವರನ್ನು ತಲುಪಲು ಯೋಗಿಗಳು, ಸಂತರು ಕಂಡುಕೊಂಡ ದಾರಿಗಳಲ್ಲಿ ಮುಖ್ಯವಾದವು - ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ ಮತ್ತು ರಾಜಯೋಗ. ಈ ದಾರಿಗಳಲ್ಲಿ ಅನೇಕ ಕವಲುಗಳಿವೆ, ಅಡ್ಡದಾರಿಗಳಿವೆ. ಭಗವದ್ಗೀತೆ ಹೇಳುವುದು - 'ಈ ಎಲ್ಲಾ ದಾರಿಗಳೂ ನಮ್ಮನ್ನು ಭಗವಂತನೆಡೆಗೆ ಸೇರಿಸುತ್ತವೆ. ನಾವು ಆತ್ಮಾವಲೋಕನ ಮಾಡಿಕೊಂಡು, ನಮಗೆ ಸೂಕ್ತವಾದ ದಾರಿಯನ್ನು ಆಯ್ದುಕೊಳ್ಳಬೇಕು. ಅದೇ ಸ್ವಧರ್ಮ, ಗುರುವು ಆ ದಾರಿಯನ್ನು ತೋರಿಸುತ್ತಾನೆ'.

ಮನುಷ್ಯನಲ್ಲಿರುವ ದಿವ್ಯತ್ವವನ್ನು ಹೊರತೆಗೆಯಲು, ಋಷಿ ಮುನಿಗಳು, 'ವರ್ಣಾಶ್ರಮ ಧರ್ಮ' ಎಂಬ ವ್ಯವಸ್ಥೆಯನ್ನು ಹುಟ್ಟು ಹಾಕಿದರು. ವರ್ಣದ ಮೂಲ 'ವ್ರಿ' ಎಂದರೆ 'ಆಯ್ದುಕೋ'. ವರ್ಣವು ವ್ಯಕ್ತಿಗೆ ಸಮಾಜದಲ್ಲಿ ಸ್ಥಾನವನ್ನು, ಹಕ್ಕು/ಕರ್ತವ್ಯವನ್ನು ನೀಡುತ್ತದೆ. ಅದು ವಂಶಪಾರಂಪರ್ಯವಲ್ಲ. ಪುರಾಣಗಳು ಸ್ಪಷ್ಟವಾಗಿ ಹೇಳುತ್ತವೆ- 'ವ್ಯಕ್ತಿಯ ವರ್ಣವು ಆತನ ವೃತ್ತಿಯನ್ನು ಆಧರಿಸಿದೆ'. ವ್ಯಕ್ತಿಯ ವರ್ಣವನ್ನು ನಿರ್ಧರಿಸುವ ಮಾನದಂಡಗಳು-ಗುಣ, ಕರ್ಮ ಮತ್ತು ಸ್ವಭಾವ. ಪುರಾಣಗಳ ಪ್ರಕಾರ- 'ಹುಟ್ಟುವಾಗ ನಾವೆಲ್ಲ ಶೂದ್ರರು, ನಮ್ಮ ಅರ್ಹತೆ, ಕ್ರಿಯೆಗಳಿಂದ ದ್ವಿಜರಾಗುತ್ತೇವೆ.'

ಆಶ್ರಮ ಪದ್ಧತಿಯು ಮನುಷ್ಯನ ಜೀವಿತವನ್ನು ೪ ಭಾಗವಾಗಿ ವಿಭಾಗಿಸಿತ್ತು. ಮೊದಲನೆಯದು- ವಿದ್ಯಾರ್ಜನೆ, ನಂತರದ್ದು-ಗೃಹಸ್ಥಾಶ್ರಮ. ಇದರಲ್ಲಿ ಧರ್ಮ, ಅರ್ಥ, ಕಾಮ ಎಲ್ಲವನ್ನು ಅನುಭವಿಸಿ, ೩ ನೇ ಹಂತದಲ್ಲಿ ಅದರಿಂದ ಬಿಡುಗಡೆ. ೪ನೇ ಹಂತವು ದೇವರು ಮತ್ತು ಮನುಷ್ಯನ ಸೇವೆಗೆ ಮೀಸಲಾದದ್ದು. ಈಗ ತೀರ ದುರ್ಬಳಸಲ್ಪಟ್ಟಿರುವ ವರ್ಣಾಶ್ರಮ ಧರ್ಮವು, ಕ್ರಾಂತಿಕಾರಕ ನಡೆಯಾಗಿತ್ತು. ಅಸಮಾನತೆ ಮತ್ತು ನಿಷ್ಕ್ರಿಯತೆಗೆ ಕಾರಣವಾಗುವ ಹುಟ್ಟಿನಿಂದ ವ್ಯಕ್ತಿಗೆ ಅಂಟಿಕೊಳ್ಳುವ ಜಾತಿ ಪದ್ಧತಿಗೆ ಹೋಲಿಸಿದರೆ, ವರ್ಣಾಶ್ರಮ ಪದ್ಧತಿಯು ಹುಟ್ಟಿನಿಂದ ಬರುವ ಅಂತಸ್ತನ್ನು ಸಾಮಾಜಿಕ/ಆರ್ಥಿಕ ಗಣಿಸಲಿಲ್ಲ. ನಿಜವಾಗಿ ಹೇಳಬೇಕೆಂದರೆ ಉತ್ಪನ್ನದ ಮೇಲಿನ ಖಾಸಗಿ ಹಕ್ಕು ಮತ್ತು ಖಾಸಗಿ ಆಸ್ತಿಯ ಅಸ್ತಿತ್ವವನ್ನು ಹಾಗೂ ನಿಷ್ಕ್ರಿಯತೆಯನ್ನು ಅದು ವಿರೋಧಿಸುತ್ತದೆ. ಈ ತತ್ವವು ಅಯೋಗ್ಯರ ಕೈಗೆ ಸಿಕ್ಕಿ ಹಾಳಾಗಿಬಿಟ್ಟಿತು. ಅದರ ಪುನರ್ಜೀವ, ಪುನರುತ್ಥಾನ ಕಷ್ಟಕರ, ಆದರೆ ಅಸಾಧ್ಯವೇನಲ್ಲ. ಹಿಂದೂ ಧರ್ಮದಲ್ಲಿ ಎಲ್ಲವೂ -ದೇಶದ ರಾಜ್ಯಭಾರ ನಡೆಸುವುದು ಹೇಗೆ ಎನ್ನುವುದರಿಂದ ಹಿಡಿದು ತಾಂತ್ರಿಕ ಸಂಭೋಗದ ತನಕ-ಇರುವುದು ಆತ್ಮಜ್ಞಾನದ ಅರಿವು ಅಥವಾ ದೇವರ ಸಾಕ್ಷಾತ್ಕಾರಕ್ಕಾಗಿ.

ಹಿಂದೂ ನಂಬಿಕೆಯ ಪ್ರಕಾರ-ಹುಟ್ಟು, ಸಾವುಗಳ ತಿರುಗಣೆಯನ್ನು ದಾಟಿ, ಹಿಂದಿನ ಜನ್ಮದ ಕ್ರಿಯೆಗಳಿಗನುಗುಣವಾಗಿ ಜನಿಸಿ, ನಿಧಾನ ವಿಕಾಸದ ಮೂಲಕ ಪರಮಾತ್ಮನನ್ನು ಸೇರುತ್ತೇವೆ. ಋಷಿಗಳು ಹೇಳುವುದು - 'ನಾವು ಈ ಜನ್ಮದಲ್ಲೇ, ಈ ಭೂಮಿಯಲ್ಲೇ ದೇವರನ್ನು ಕಾಣಬಹುದು; ಪುರಾಣಗಳು ಹೇಳುತ್ತವೆ- 'ಇರುವುದೆಲ್ಲ ಪರಮಾತ್ಮನೆ, ಬ್ರಹ್ಮವೇ. ಆತ ಎಲ್ಲವೂ, ಎಲ್ಲವನ್ನೂ ಒಳಗೊಂಡವ. ಆತನಿಲ್ಲದೆ ಏನೂ ಇಲ್ಲ. ಆತನಿಗೆ ಸಂಪೂರ್ಣ ಶರಣಾಗುವುದು ಮತ್ತು ತನ್ನದೇ ಸ್ವಧರ್ಮದಲ್ಲಿ ಬದುಕುವುದು ಬದುಕಿನ ಬಹು ದೊಡ್ಡ ಗುರಿಗಳು'. ಹಿಂದೂ ಧರ್ಮ ಹಾಗೂ ಅದರಲ್ಲಿ ತನ್ನ ಬೇರನ್ನುಳ್ಳ ಎಲ್ಲ ಧರ್ಮಗಳೂ ಕರ್ಮ ಸಿದ್ಧಾಂತದಲ್ಲಿ ನಂಬಿಕೆ ಇರಿಸಿವೆ. ಆದರೆ ಅದನ್ನು ತಿರುಚಿ, ಸಾಮಾಜಿಕ/ಆರ್ಥಿಕ/ಲಿಂಗ ಸಂಬಂಧಿತ ಅಸಮಾನತೆ, ಅನ್ಯಾಯಗಳನ್ನು ಸಮರ್ಥಿಸಿಕೊಳ್ಳಲು ಬಳಸಲಾಗಿದೆ.

ಹಿಂದುವೊಬ್ಬ ಇರುವುದು ಒಬ್ಬನೇ ದೇವರು ಅಥವಾ ಪ್ರವಾದಿ ಎಂದಾಗಲೀ, ಆತನನ್ನು ನಂಬದವರನ್ನು ಶಾಶ್ವತ ನರಕಕ್ಕೆ ತಳ್ಳಬೇಕು ಎಂದು ಯೋಚಿಸಲಾರ. ತನ್ನದೇ ಸೃಷ್ಟಿಗಳನ್ನು ದೇವರು ನರಕಕ್ಕೆ ತಳ್ಳುತ್ತಾನೆ ಎನ್ನುವುದನ್ನು ನಾವು ಒಪ್ಪುವುದಿಲ್ಲ. ದೇವರನ್ನು ತಲುಪಲು ಅನೇಕ ದಾರಿಗಳಿವೆ. ಆತನಿಗೆ ಅಲ್ಲಾ, ತಾವೋ, ಬ್ರಹ್ಮ, ಜೆಹೋವಾ-ಮೊದಲಾದ ಹೆಸರುಗಳಿವೆ ಎಂದು ನಂಬಲು ಹಿಂದುವೊಬ್ಬನಿಗೆ ಕಷ್ಟವಾಗುವುದಿಲ್ಲ, ಏಕೆಂದರೆ ನಾವು ಕೊನೆಯಲ್ಲಿ ತಲುಪಬಹುದಾದಕ್ಕೆ ಯಾವುದೇ ಹೆಸರು, ರೂಪ ಇಲ್ಲ ಎಂಬುದನ್ನು

ಆತ ಬಲ್ಲ. ಈ ಧಾರ್ಮಿಕ ದೃಷ್ಟಿಯಿಂದಾಗಿ, ಆತನಿಗೆ ಯಾವುದೇ ಧರ್ಮದವರೊಂದಿಗೆ, ಅವರು ತಾವು ವಿಶೇಷ ಮಂದಿ ಎನ್ನುವ ಕವಚವನ್ನು ಹೊರಗೆಸೆದಲ್ಲಿ, ಸಂವಾದ ಕಷ್ಟವಾಗುವುದಿಲ್ಲ. ಇದೆಲ್ಲದರಿಂದಾಗಿ ಹಿಂದೂ ಧರ್ಮಕ್ಕೆ ಮಿಷನರಿ ಪ್ರಭುತ್ವವಿಲ್ಲ.


ಮೇಲಿನ ವಾಕ್ಯಗಳಿಂದ ಪ್ರವಾದಿ ಧರ್ಮಗಳಿಗೂ, ಭಾರತದ ನೆಲದಲ್ಲಿ ಅರಳಿದ ಧರ್ಮಗಳಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗುತ್ತದೆ. 'ಸೈತಾನನಿಂದ ನಮ್ಮೆಲ್ಲರನ್ನು ರಕ್ಷಿಸುತ್ತಾನೆ' ಎನ್ನುವ ಮತ್ತು ಜಗತ್ತಿನ ಎಲ್ಲರ ನೈತಿಕ ಹೊಣೆಗಾರಿಕೆ ಹೊತ್ತಿರುವ ಧರ್ಮಗಳಿವೆ. ಇನ್ನೊಂದೆಡೆ ಬಹುತ್ವದಲ್ಲಿ ನಂಬಿಕೆಯಿರುವ, ದೇವರನ್ನು ತಲುಪಲು ಅನೇಕ ಮಾರ್ಗಗಳಿವೆ ಎನ್ನುವುದನ್ನು ನಂಬುವ ಧರ್ಮಗಳಿವೆ. ಪೌರಾತ್ಯ ದೇಶಗಳಲ್ಲಿ ಧರ್ಮ ಎಂಬುದು ಯೋಗದ ಅಂತರ್ ಕ್ರಿಯೆ. ಯಾವುದೇ ಧರ್ಮಗ್ರಂಥವು ಪರಿಪೂರ್ಣವಾದದ್ದು ಮತ್ತು ವ್ಯಕ್ತಿಯ ಅಂತರಂಗಕ್ಕಿಂತ ದೊಡ್ಡದು ಎಂಬುದನ್ನು ಅದು ನಂಬುವುದಿಲ್ಲ.

ಉಪನಿಷತ್ತುಗಳು ಹೇಳುವುದು- ಧರ್ಮ ಗ್ರಂಥಗಳು ಧರ್ಮಗ್ರಂಥಗಳಾಚೆಗೆ ನಿಮ್ಮನ್ನು ಒಯ್ಯುತ್ತದೆ. ವಾಸಿಷ್ಠದ ಪ್ರಕಾರ 'ಮನುಷ್ಯ ಕೃತವಾದದ್ದಾದರೂ ಸರಿ, ಸತ್ಯವನ್ನು ಒಪ್ಪಿಕೊಳ್ಳಬೇಕು. ಅಲ್ಲದೇ ಹೋದಲ್ಲಿ, ದೇವವಾಣಿಯಾಗಿದ್ದರೂ ಅದನ್ನು ತಿರಸ್ಕರಿಸಬೇಕು. ಜ್ಞಾನದ ಮಾತುಗಳನ್ನು ಆಡಿದಾತ ಬಾಲಕನಾದರೂ ಅದನ್ನು ಅಂಗೀಕರಿಸಬೇಕು. ಇಲ್ಲದೇ ಹೋದರೆ ಸೃಷ್ಟಿಕರ್ತ ಬ್ರಹ್ಮನೇ ಹೇಳಿದರೂ, ಅದನ್ನು ಹುಲ್ಲುಗರಿಕೆ ಎಂದು ಗಣಿಸಿ ತಿರಸ್ಕರಿಸಬೇಕು.'

ಆದರೆ ಹಿಂದೂಧರ್ಮದಲ್ಲಿ ಸಾಮಾಜಿಕ ಹಂತದಲ್ಲಿ ಅಸಂಖ್ಯಾತ ಲೋಪಗಳು ಇವೆ. 'ಅದು ಸನಾತನ ಧರ್ಮ, ವಿಶಿಷ್ಟವಾದದ್ದು, ಅದು ಎಲ್ಲ ಧರ್ಮಕ್ಕೂ ಮೀರಿದ್ದು' ಎನ್ನುವ ಹಿಂದೂ ಕೋಮುವಾದಿಗಳಿದ್ದಾರೆ. ಆದರೆ ಆ ದೃಷ್ಟಿಯನ್ನು ಬಹು ಸಂಖ್ಯೆಯ ಹಿಂದೂಗಳು ಒಪ್ಪುವುದಿಲ್ಲ. ಭಾರತದ ಪ್ರಸ್ತುತ ಸ್ಥಿತಿಗೆ ಕಾರಣ- ಸಂಪೂರ್ಣವಾಗಿ ಮೂಲವಾಹಿನಿಯಿಂದ ಹೊರ ತಾಗಿರುವ, ಅದರಲ್ಲಿ ಆಸಕ್ತಿ ಕಳೆದುಕೊಂಡಿರುವ ಮೇಲ್ವರ್ಗ, ಬುದ್ಧಿಜೀವಿಗಳು, ಲಂಪಟ ಪುರೋಹಿತಶಾಹಿ, ಸಾವಿರಾರು ವರ್ಷಗಳ ಕಾಲ ಶೋಷಿತರಾಗಿ, ತುಳಿಯಲ್ಪಟ್ಟಿದ್ದರಿಂದ ಕೀಳರಿಮೆ ಬೆಳೆಸಿಕೊಂಡಿರುವ ಬಹುಸಂಖ್ಯೆಯ ಕೆಲವು ವರ್ಗಗಳು.

ಇತ್ತೀಚಿನ ದಿನಗಳಲ್ಲಿ ಹಿಂದೂ ಧರ್ಮಕ್ಕೆ ತನ್ನನ್ನು ಸುಧಾರಿಸಿಕೊಳ್ಳಲು ತನ್ನ ವೈಶ್ವಿಕ ದೃಷ್ಟಿಕೋನವನ್ನು ಪ್ರಪಂಚಕ್ಕೆ ಪರಿಚಯಿಸಲು

'ಬಹು ಧರ್ಮಗಳ ಸಮಾಜ ಕುರಿತ ಹಿಂದೂ ದೃಷ್ಟಿಕೋನದ ವಿವರಣೆ ಕಷ್ಟವಾದದ್ದು. ಏಕೆಂದರೆ ಹಿಂದೂ ಧರ್ಮದೊಳಗೆ ಅನೇಕಾನೇಕ ಯೋಚನಾ ಧಾಟಿಗಳಿವೆ, ವ್ಯವಸ್ಥೆಗಳಿವೆ ಮತ್ತು ರಚನೆಗಳಿವೆ. ಅವುಗಳಲ್ಲಿ ಕೆಲವು ಸಹಿಷ್ಣುಗಳು, ಇನ್ನು ಕೆಲವು ತತ್ವ ಶಾಸ್ತ್ರೀಯ ದೃಷ್ಟಿಕೋನದವು. ಕೆಲವು ಅತ್ಯಂತ ಅಸಹಿಷ್ಣು ಮನಸ್ಥಿತಿಯವು.



ಯಾವುದೇ ಅವಕಾಶ ಸಿಕ್ಕಿಲ್ಲ. ಏಕೆಂದರೆ ಅಂತಹ ಯಾವುದೇ ಪ್ರಯತ್ನವನ್ನು ಅಲ್ಪ ಸಂಖ್ಯಾತ ವರ್ಗಗಳು 'ಹಿಂದೂ ಮತೀಯವಾದ'ವೆಂದೋ, 'ಹಿಂದೂಗಳ ಪ್ರತೀಕಾರ' ವೆಂದೋ ಕರೆದು ಬಿಡುತ್ತವೆ. ಹಿಂದೂಗಳು ಅವರ ಸಹಿಷ್ಣು ಧಾರ್ಮಿಕ ಪ್ರವೃತ್ತಿಯ ಹೊರನೋಟದ ಬಲಿಪಶುಗಳಾಗಿಬಿಟ್ಟಿದ್ದಾರೆ. ಹಿಂದೂ ಮತೀಯವಾದ ಎನ್ನುವುದು ಎಲ್ಲಿದೆ? ವೇದವೂ ಸೇರಿದಂತೆ, ಎಲ್ಲ ಹಿಂದೂಗಳಿಗೂ ಅನ್ವಯಿಸುವ ಏಕೈಕ ಧಾರ್ಮಿಕ ಗ್ರಂಥವಿಲ್ಲ. ಅಲ್ಲದೆ ಆತ್ಮೋನ್ನತಿಯು ಎಲ್ಲ ಧರ್ಮಗ್ರಂಥವನ್ನು ಮೀರಿದ್ದು ಎಂದು ಗಣಿಸುವಲ್ಲಿ, ಎಲ್ಲರಿಗೂ ಅನ್ವಯಿಸುವ ಗ್ರಂಥವೊಂದು ಇರಲಾರದು. ನಮ್ಮ ಬೋಧನೆಗಳು, ಕ್ರಮ, ತಂತ್ರಗಳು ಅನೇಕವಿರುವಾಗ ಒಂದೇ ಧಾರ್ಮಿಕ ನಂಬಿಕೆಯ ವ್ಯವಸ್ಥೆಯ ಸ್ಥಾಪನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.

'ಹೊರಗೆ ಹೋಗಿ ನಂಬದವರನ್ನು ಮತಾಂತರಗೊಳಿಸಿ' ಎಂದು ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಸ್ಥಾಪಕರು ತಮ್ಮ ಅನುಯಾಯಿಗಳಿಗೆ ಹೇಳುವಲ್ಲಿ, ಅವರ ಮೇಲೆ ಜಗತ್ತನ್ನು ಬದಲಾಯಿಸುವ ನೈತಿಕ ಹೊಣೆ ಹೇರುತ್ತಿರುವೆಡೆ ಎಲ್ಲರನ್ನೂ ಒಳಗೊಳ್ಳುವ ತಮ್ಮ ಧಾರ್ಮಿಕ ನೋಟವು ದಿನೇದಿನೇ ಅಪಾಯಕ್ಕೆ ಒಳಗಾಗುತ್ತಿದೆ ಎನ್ನುವುದು ಬಹುಪಾಲು ಹಿಂದೂಗಳ ಅರಿವಿಗೆ ಬರುತ್ತಿದೆ. ಸಮೂಹ ಮಾಧ್ಯಮಗಳ ಸಂಪರ್ಕವಿರುವ ಹಿಂದೂ ಧಾರ್ಮಿಕ ನಾಯಕರು ಜನರ ಈ ಭಾವನೆಗಳನ್ನು ಜನಗಳ ಮಧ್ಯೆ ದ್ವೇಷ ಹೆಚ್ಚಿಸಲು ಬಳಸುತ್ತಿದ್ದಾರೆ.

ಹಿಂದೂ ಮತ್ತು ಬೇರೆ ಧರ್ಮಗಳ ನಡುವಣ ಭೇದಗಳನ್ನು ಪರಿಗಣಿಸದಿರುವುದು ಅವುಗಳನ್ನು ಒಟ್ಟುಗೂಡಿಸುವುದಿಲ್ಲ. ಧರ್ಮಗಳ ನಡುವಿನ ಸಾಮಾನ್ಯ ಅಂಶಗಳನ್ನು ಮಾತನ್ನಾಡಬಹುದು. ಆದರೆ ನಾವು ಭೇದಗಳ ಬಗ್ಗೆ, ಅವು ತಂದಿರುವ ಲಕ್ಷಾಂತರ ಸಾವು, ತಾಳಲಾರದ ನೋವು ಮತ್ತು ಮಾನವತೆಗೆ ತಂದಿರುವ ಸಂಕಷ್ಟದ ಬಗ್ಗೆ ಮಾತನ್ನಾಡಬೇಕು. ನಮ್ಮ ಧಾರ್ಮಿಕ ನಂಬಿಕೆಗಳ ಒಳ್ಳೆಯ ಅಂಶಗಳ ಬಗ್ಗೆ ಮಾತನ್ನಾಡುತ್ತ, ನಮ್ಮ ಪ್ರಜ್ಞೆಯಲ್ಲಿ ಸದಾ ನೆರಳಿನಂತೆ ಇರುವ ಕೆಟ್ಟ ಅಂಶಗಳನ್ನು ಮರೆಯಬಾರದು. ಹತ್ತಿಕ್ಕಿದ, ನಿರ್ಲಕ್ಷಿಸಿದ ಭಾವನೆಗಳು ನಮ್ಮ ಮಾನಸಿಕ ಅಸ್ತವ್ಯಸ್ತತೆಗೆ, ರೋಗಕ್ಕೆ ಕಾರಣವಾಗುತ್ತದೆ. ಕೆಟ್ಟದ್ದರ ಬಗ್ಗೆ, ನೆರಳಿನಡಿಯ ದುಷ್ಟತ್ವದ ಬಗ್ಗೆ ಮತ್ತು ನಮ್ಮ ಧರ್ಮದ ವಿನಾಶಕಾರಿ ಪ್ರವೃತಿಗಳನ್ನು ಎದುರಿಸದೆ, ಸಿಹಿಯಾದ ಮಾತುಗಳನ್ನು ಆಡುತ್ತಾ ಕೂರುವುದರಿಂದ ಸೃಷ್ಟಿಯಾಗುವ ಮಾನಸಿಕ ಪ್ರವೃತಿಯು ನಾಜಿಯುಗವನ್ನು ಮರುಕಳಿಸಬಲ್ಲುದು. ತೀರ ಇತ್ತೀಚೆಗೆ ಹಿಂದಿನ ಯುಗೋಸ್ಲಾವಿಯಾದಲ್ಲಿ ನಡೆದ ಜನಾಂಗೀಯ ಶುದ್ಧೀಕರಣದಂತಹ ಪರಿಸ್ಥಿತಿಯನ್ನು ಸೃಷ್ಟಿಸಬಲ್ಲುದು.

ಹಿಂದೂ ಒಬ್ಬನಿಗೆ ಬೇರೆ ಧರ್ಮೀಯನ ಪಕ್ಕದಲ್ಲಿ ಜೀವಿಸುವುದು ಕಷ್ಟವಾಗುವುದಿಲ್ಲ. ಬೇರೆ ಧರ್ಮೀಯನ ಪೂಜೆ/ಸಂಪ್ರದಾಯಗಳು ಎಲ್ಲಿಯ ತನಕ ಸಂವಿಧಾನಿಕವಾಗಿ ಹಾಗೂ ಮಾನವೀಯ ಪರಿಸರವನ್ನು ಉಲ್ಲಂಘಿಸುವುದಿಲ್ಲವೋ ಅಲ್ಲಿಯ ತನಕ ಆತ ಅದಕ್ಕೆ ಆಕ್ಷೇಪಿಸಲಾರ. ಇದಕ್ಕೊಂದು ಉದಾಹರಣೆ



ಜ್ವರ, ಹೊಟ್ಟೆನೋವು, ಹೆಂಡ್ತಿ ಹೆರಿಗೆ - ರಜೆಗೆ ಇವೆಲ್ಲ ನೆಪಗಳು ಹಳೆಯದಾಯ್ತು.... ಯಾವುದಾದ್ರು ಹೊಸ ನೆಪ ತನ್ನಿ ಅಂದ್ರೆ, ಹಬ್ಬಕ್ಕೆ 'ಅಡಿಗೆ' ಮಾಡಬೇಕೆಂದು ಬರೆಯಲು ನಿಮಗೆ ನಾಚಿಕೆ ಆಗುವುದಿಲ್ಲವೆ...?

ಮೊದಲು ಸಣ್ಣ ಸಂಖ್ಯೆಯಲ್ಲಿದ್ದು ೧೫೦೦ ವರ್ಷದಿಂದ ದೊಡ್ಡ ಸಂಖ್ಯೆಯಲ್ಲಿ ಬೆಳೆದಿರುವ ಸಿರಿಯನ್ ಕ್ರಿಶ್ಚಿಯನ್ನರು. ಯಹೂದಿಗಳು ಅದಕ್ಕಿಂತ ಹೆಚ್ಚು ಕಾಲದಿಂದ ಇಲ್ಲಿ ನೆಲೆಸಿದ್ದಾರೆ. ಅದೇ ರೀತಿ ಪಾರ್ಸಿಗಳು, ತೀರ ಇತ್ತೀಚೆಗೆ ಇರಾನ್‌ನ ಬಹಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ವಲಸೆ ಬಂದಿದ್ದಾರೆ. ದೆಹಲಿಯಲ್ಲಿ ಪ್ರಖ್ಯಾತ ದೇವಾಲಯವನ್ನು ಕಟ್ಟಿದ್ದಾರೆ ಕೂಡಾ.

ದೇಶ ವಿಭಜನೆಯಾದಾಗ ಪಾಕಿಸ್ತಾನದಲ್ಲಿದ್ದ ಹಿಂದೂಗಳ ಪ್ರಮಾಣ ಶೇ.೧೦. ಈಗ ಅವರ ಸಂಖ್ಯೆ ತುಂಬಾ ಕ್ಷೀಣಿಸಿದೆ. ಪೂರ್ವ ಪಾಕಿಸ್ತಾನ ಅಂದರೆ ಇಂದಿನ ಬಾಂಗ್ಲಾದೇಶದಲ್ಲಿ ೧೯೭೪ರಲ್ಲಿ ಶೇ.೨೫ರಷ್ಟು ಹಿಂದೂಗಳಿದ್ದರು. ಇಂದು ಅವರ ಸಂಖ್ಯೆ ಶೇ. ೧೦ಕ್ಕೆ ಇಳಿದಿದೆ. ೫೦ ವರ್ಷದಲ್ಲಿ ಭಾರತದಲ್ಲಿನ ಮುಸ್ಲಿಮರ ಸಂಖ್ಯೆ ದುಪ್ಪಟ್ಟಾಗಿದೆ. ಹಿಂದೂ-ಮುಸ್ಲಿಮರ ನಡುವೆ ಮತೀಯ ಗಲಭೆಗಳು ನಡೆದಿವೆ. ಇತ್ತೀಚೆಗೆ ಸಿಖ್-ಹಿಂದೂ ಹಿಂಸಾಚಾರವೂ ನಡೆದಿದೆ. ಬಹುಪಾಲು ಈ ಗಲಭೆಗಳು ರಾಜಕೀಯ ಮುಖಂಡರ ಇಲ್ಲವೇ ಗೂಂಡಾಗಳ ಸೃಷ್ಟಿಯಾಗಿವೆ.

ಇತ್ತೀಚೆಗೆ ತಲೆಯೆತ್ತಿರುವ ಹಿಂದೂ ಮತೀಯವಾದವು, ದೇಶೀ ಹಾಗು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚುತ್ತಿರುವ ಮುಸ್ಲಿಂ ಮತೀಯವಾದಕ್ಕೆ ಪ್ರತಿಕ್ರಿಯೆಯಾಗಿದೆ. ಜನಸಂಖ್ಯೆಯ ಅರ್ಧಕ್ಕೂ ಹೆಚ್ಚು ಜನಸಂಖ್ಯೆಯ ಅನಕ್ಷರಸ್ತರಿರುವಲ್ಲಿ, ಬಡತನ/ಸಾಮಾಜಿಕ ಅಸಮಾನತೆ ಇರುವಲ್ಲಿ, ರಾಜಕೀಯ ಪುರೋಹಿತ ಶಾಹಿಗೆ ಜನರನ್ನು ಕೆರಳಿಸುವುದು ಕಷ್ಟವಲ್ಲ. ಭಾರತದ ಬಹುಪಾಲು ಮತೀಯ ಘರ್ಷಣೆಗಳು ಈ ಭ್ರಷ್ಟ ಹಿತಾಸಕ್ತ ಗುಂಪುಗಳ ಕೈವಾಡದಿಂದಾಗಿವೆ.

ಎಲ್ಲ ಅಕ್ಷರಸ್ತರಿಗೂ ತಿಳಿದಿರುವಂತೆ ಇಸ್ಲಾಂ ಪ್ರಪಂಚವನ್ನು ಎರಡಾಗಿ ವಿಭಾಗಿಸುತ್ತದೆ. ಇಸ್ಲಾಂನ ಮನೆ (Dar ul Islam) ಮತ್ತು ಇಸ್ಲಾಂನ ಶತ್ರುವಿನ ಮನೆ (Dar-ul-Harab). ಅಲ್ಲದೆ ಇಡೀ ಪ್ರಪಂಚ ಅಲ್ಲಾನಿಗೆ ಶರಣಾಗುವಂತೆ ಮಾಡುವುದೇ ಮುಸ್ಲಿಮನ ಧಾರ್ಮಿಕ ಕರ್ತವ್ಯ ಎನ್ನುತ್ತದೆ. ಇಸ್ಲಾಂ ಧರ್ಮ ಹೇಳುವ 'ಅಲ್ಲಾನ ಹೆಸರಿನಲ್ಲಿ ಹೋರಾಡು, ಅಲ್ಲಾನ ದಾರಿಯಲ್ಲಿ ಹೋರಾಡು, ಅಲ್ಲಾನ ವಿರೋಧಿಗಳ ವಿರುದ್ಧ ಹೋರಾಡು, ಧರ್ಮಯುದ್ಧ ನಡೆಸು' ಎನ್ನುವ ಹೇಳಿಕೆಗಳು ಯಾವ ಸಂವಾದಕ್ಕೂ ಅವಕಾಶ ಕೊಡುವುದಿಲ್ಲ.

ಈ ಧಾರ್ಮಿಕ ನಿರ್ದೇಶನಗಳನ್ನು ಬೆಂಬಲಿಸದಿದ್ದಲ್ಲಿ ಅವುಗಳಿಗೆ ಯಾವುದೇ ಮಹತ್ವವಿರುವುದಿಲ್ಲ. ದುರದೃಷ್ಟವೆಂದರೆ ಇಡೀ ನಿರ್ದೇಶನಗಳನ್ನು ಮುಲ್ಲಾಗಳು ಪದಶಃ ಪುನರುಚ್ಚರಿಸುತ್ತಾರೆ. ಕುರಾನಿನ 'ನಿನ್ನ ಧರ್ಮ ನಿನ್ನದು, ನನ್ನದು ನನಗಿರಲಿ' ಎನ್ನುವ ಸಮಾಧಾನಿಸುವ ಮಾತುಗಳು ಇರಾನಿನಿಂದ ಇಂಡೋನೇಷ್ಯಾದವರೆಗೆ ತಮ್ಮ ಪ್ರಭಾವವನ್ನು ಕಳೆದುಕೊಂಡ ಹಿಂದೂಗಳ ಕಿವಿಗೆ ಕೇಳಿಸುವುದಿಲ್ಲ. ಅಲ್ಲಾನ ಹೆಸರಿನಡಿ ಇಡೀ ಪ್ರಪಂಚವನ್ನು ತರುವ ಅನೇಕ ಪ್ರಯತ್ನಗಳು ನಡೆದಿರುವ ಬಗ್ಗೆ ಚರಿತ್ರೆಯಲ್ಲಿ ದಾಖಲೆಗಳಿವೆ. ಮೇಲಿನ ಸಮಾಧಾನಕರ ಹೇಳಿಕೆ ಪ್ರವಾದಿಯು ಮೆಕ್ಕಾದ ಕಾಲದ ಮೊದಲು ಹೇಳಿದ್ದು, ೧೪೦೦ ವರ್ಷಗಳಿಂದ ಇಸ್ಲಾಂ ಮತ್ತು ಮುಸ್ಲಿಮರು ತಮ್ಮ ಮಾದರಿಯಾಗಿಟ್ಟುಕೊಂಡದ್ದು ಮದೀನಾದ ಕಾಲದ ಕಟು ಹೇಳಿಕೆಗಳನ್ನೇ ಹೊರತು, ಮೆಕ್ಕಾದ ಕಾಲದ ಹೇಳಿಕೆಗಳನ್ನಲ್ಲ.

ಹಿಂದೂಗಳು ಮತಾಂತರವನ್ನು ವಿರೋಧಿಸುತ್ತಾರೆ. ಚರಿತ್ರೆಯಲ್ಲಿ ಸೆಮಿಟಿಕ್ ಧರ್ಮಗಳ ನಡುವೆ ವಿಗ್ರಹಾರಾಧಕ ಸಂಸ್ಕೃತಿ ಉಳಿದ ದಾಖಲೆಗಳಿವೆ. ಈಜಿಪ್ಟ್, ಸೂಡಾನ್, ಟರ್ಕಿಗಳಲ್ಲಿ ಕ್ರಿಶ್ಚಿಯನ್ನರು ಹಾಗೂ ಕಾಪ್ಟಿಕ್ ಕ್ರಿಶ್ಚಿಯನ್ನರು ಎದುರಿಸುತ್ತಿರುವ ಸಮಸ್ಯೆಗಳು ಹಿಂದೂಗಳಿಗೆ ಭಯ ಹುಟ್ಟಿಸಿದೆ. ಇದೇ ಪರಿಸ್ಥಿತಿ-ಇರಾನಿನಲ್ಲಿ ಬಹಾಯಿಗಳನ್ನು, ಪಾಕಿಸ್ತಾನದಲ್ಲಿ ಅಹ್ಮದಿಯಾಗಳನ್ನು, ಬಾಂಗ್ಲಾದಲ್ಲಿ ಬೌದ್ಧರನ್ನು ಕಾಡುತ್ತಿದೆ. ಕ್ರಿಶ್ಚಿಯನ್ನರಿಗೆ ಕ್ರಿಸ್ತ ಹೇಳುವುದು - 'ಎಲ್ಲ ಜೀವಿಗಳಿಗೂ ಕ್ರಿಸ್ತನ ಸುವಾರ್ತೆಗಳನ್ನು ಬೋಧಿಸಿ, ನಂಬುವವನು ಉಳಿಯಲಿ, ನಂಬದಿದ್ದವರನ್ನು ದಂಡಿಸಿ'. ಈ ಹೇಳಿಕೆಯು ಕ್ರಿಸ್ತರಲ್ಲದವರಿಗೆ ಏನನ್ನು ಧ್ವನಿಸುತ್ತದೆ? ತಮ್ಮ ಆತ್ಮವನ್ನು ಉಳಿಸಿಕೊಳ್ಳಲು ಪಾಶ್ಚಾತ್ಯ ದೇಶಗಳಲ್ಲಿರುವ ೨,೪೯,೦೦೦ ಹಿಂದೂ ಮಿಷನರಿಗಳು ಸನ್ನದ್ಧರಾದರೆ ಕ್ರಿಶ್ಚಿಯನ್ ಪ್ರಪಂಚ ಅದಕ್ಕೆ ಹೇಗೆ ಪ್ರತಿಕ್ರಯಿಸುತ್ತದೆ? ೧೯೮೩-೮೪ರಲ್ಲಿ ಉತ್ತರ ಅಮೆರಿಕನ್ನರು ಹೊರದೇಶಗಳಲ್ಲಿ ೬೭,೦೦೦ ಜನ ಮಿಶನರಿಗಳನ್ನು ಬೆಂಬಲಿಸುತ್ತಿದ್ದರು. ಅಮೆರಿಕಾದ ಪ್ರೊಟೆಸ್ಟೆಂಟ್ ಮಿಷನರಿಗಳು ಭಾರತದಲ್ಲಿ ಈಗಾಗಲೇ ೨೨,೦೦೦ ಚರ್ಚ್‌ಗಳನ್ನು ಸ್ಥಾಪಿಸಿದ್ದಾರೆ. ಸ್ವಿಟ್ಜರ್ಲೆಂಡ್, ಬೊವೇರಿಯಾ ಮತ್ತು ಐರ್ಲೆಂಡಿನಲ್ಲಿ ವಿಶೇಷ ಸವಲತ್ತನ್ನು ಅನುಭವಿಸುತ್ತಿರುವ ಕ್ಯಾಥೊಲಿಕರು ಅವರ ಮಧ್ಯೆ ಹಿಂದೂ/ಬೌದ್ಧ ಮತಸ್ಥರು ಮಠಗಳನ್ನು ಸ್ಥಾಪಿಸಿದಲ್ಲಿ ಹೇಗೆ ಪ್ರತಿಕ್ರಿಯಿಸುತ್ತಾರೆ? ಇಸ್ಲಾಮಿಕ್ ದೇಶಗಳಲ್ಲಿ ಹಿಂದೂ ಶಾಲೆಗಳನ್ನು/ದೇವಾಲಯಗಳನ್ನು ಸ್ಥಾಪಿಸಿದಲ್ಲಿ ಮುಸ್ಲಿಮರು ಹೇಗೆ ಪ್ರತಿಕ್ರಿಯಿಸುತ್ತಾರೆ? ಜಾತ್ಯಾತೀತ ಭಾರತದಲ್ಲಿ ಮುಸ್ಲಿಮರಿಗೆ ವೈಯಕ್ತಿಕ ಕಾನೂನು ಇರುವಂತೆ, ಮುಸ್ಲಿಂ ದೇಶದಲ್ಲಿರುವ ಹಿಂದೂ ಅಲ್ಪ ಸಂಖ್ಯಾತರು ವೈಯಕ್ತಿಕ ಕಾನೂನನ್ನು ಆಕ್ಷೇಪಿಸಿದರೆ? ಮತ ಸಹಿಷ್ಣುತೆಗೆ ಹೆಸರಾಗಿದ್ದ ಗಾಂಧಿಯೂ ಸೇರಿದಂತೆ ಅನೇಕ ಹಿಂದೂ ಚಿಂತಕರು ಹೇಳುವುದು 'ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು ತಮ್ಮ ಮಿಷನರಿ ಉತ್ಸಾಹವನ್ನು ತೊಡೆದರೆ ಮಾತ್ರ ನಿಜವಾದ ಸಂವಾದ ಸಾಧ್ಯವಾಗುತ್ತದೆ.

ಬೈಬಲ್ ಹೇಳುತ್ತದೆ 'ನನ್ನನ್ನು ಗೊತ್ತಿಲ್ಲದವನ ಮೇಲೆ, ನನ್ನ ಹೆಸರನ್ನು ನೆನೆಸದ ರಾಜ್ಯಗಳ ಮೇಲೆ ದ್ವೇಷವನ್ನು ಸುರಿ' ಕುರಾನ್ ಹೇಳುತ್ತದೆ - 'ಕ್ರೈಸ್ತರನ್ನು, ಯಹೂದಿಗಳನ್ನು ಸ್ನೇಹಿತರೆನ್ನಬೇಡ. ಅವರಿಬ್ಬರೂ ಪರಸ್ಪರ ಸ್ನೇಹಿತರಷ್ಟೆ. ಅವರೊಡನೆ ಸ್ನೇಹ ಮಾಡಿದಾತ ಅವರವನೇ ಆಗುತ್ತಾನೆ'- ಈ ಹೇಳಿಕೆಗಳನ್ನು ಚಾಚೂ ತಪ್ಪದೆ ಅನುಸರಿಸಿದಲ್ಲಿ ಶಾಂತಿಯ ಬದುಕು ಸಾಧ್ಯವಾದೀತೇನು? ಭಾರತದಲ್ಲಿ ಕೆಲವು ಪುರೋಹಿತರು ಮತ್ತು ಪಂಡಿತರು ದೇವರ ಹೆಸರಿನಲ್ಲಿ ತಮ್ಮನ್ನು ಎತ್ತರಕ್ಕೇರಿಸಿಕೊಳ್ಳಲು ಸೃಷ್ಟಿಸಿದ ಧರ್ಮ ಗ್ರಂಥಗಳು ಹಾಗು ಸಂಹಿತೆಗಳು ಕೂಡಾ ಯಾವುದೇ ಹಿಂದೂ ಚಿಂತಕರನ್ನು ಇಷ್ಟೇ ಪೇಚಿನಲ್ಲಿ ಸಿಲುಕಿಸುತ್ತವೆ. ಉದಾಹರಣೆಗೆ - 'ಸ್ತ್ರೀಯರಿಗೆ ಹಾಗೂ ಶೂದ್ರರಿಗೆ ವಿದ್ಯೆಯ ಹಕ್ಕಿಲ್ಲ' ಹಾಗೂ 'ಹೆಣ್ಣು ನರಕದ ದಾರಿ'. ವೃತ್ತಿವಂತ ಧರ್ಮಗ್ರಂಥಗಳ ವ್ಯಾಖ್ಯಾನಕಾರರಾದವರು ಏಕೆ ಆತ್ಮಾವಲೋಕನ ಮಾಡಿಕೊಂಡಿಲ್ಲ? ಪವಿತ್ರಸ್ಥಾನಕ್ಕೊಳಗಾಗದ ಮಗುವನ್ನು ಶಾಶ್ವತ ನರಕಕ್ಕೆ ತಳ್ಳುವವ ಎಂತಹ ದೇವರು? ೪೦° ಸೆ. ಉಷ್ಣತೆ, ಪ್ರತಿಶತ ೮೦ ರಷ್ಟು ಒಣ ಆರ್ದ್ರತೆ ಇರುವಲ್ಲಿ ಹೆಣ್ಣು ಮಕ್ಕಳು ಕಪ್ಪು ಬುರ್ಖಾ


ಧರಿಸಬೇಕು ಎಂದು ಯಾವ ದೇವರು ಇಚ್ಛಿಸುತ್ತಾನೆ? ಜೀತಗಾರನಾಗಿಯೇ ಇರು, ಶೌಚಾಗಾರದ ಶುಚಿಮಾಡುತ್ತಲೇ ಇರು ಜೀವಮಾನವಿಡೀ ಎಂದು ಯಾವ ದೇವರು ವಿಧಿಸುತ್ತಾನೆ? ನಿರ್ವಾಣವನ್ನು ಗಂಡಸರಿಗೆ ಮಾತ್ರ ಕಾಯ್ದಿರಿಸುವ ಮತ್ತು ಹೆಣ್ಣು ಮಕ್ಕಳು ಮಠಗಳಲ್ಲಿ ಮೌನವಾಗಿರಬೇಕು ಎಂದು ವಿಧಿಸುವವ ಎಂತಹ ದೇವರು? ಫಿರಂಗಿ-ಮದ್ದುಗುಂಡುಗಳನ್ನು ಆಶೀರ್ವದಿಸುತ್ತ, ಸ್ತ್ರೀಯರ ಲಿಂಗಚ್ಛೇದವನ್ನು ಯಾವ ದೇವರು ಅಪೇಕ್ಷಿಸುತ್ತಾನೆ? ತನ್ನ ಗಂಡನ ಚಿತಾಗ್ನಿಯಲ್ಲಿ ಹೆಂಡತಿಯೂ ಸುಟ್ಟು ದಗ್ಧವಾಗಲಿ ಎಂದು ಯಾವ ದೇವರು ನಿರೀಕ್ಷಿಸುತ್ತಾನೆ? ಜನಿಸಿದ ಶಿಶು ಹೆಣ್ಣೆಂದು ಗೊತ್ತಾದ ತಕ್ಷಣ ತಾಯಿ ಅಳುವಂತಹ ಸ್ಥಿತಿ ಏಕೆ ನಿರ್ಮಾಣವಾಗಿದೆ?

ಮತೀಯವಾದ ಮತ್ತು ವಿಚ್ಛಿದ್ರಕಾರತೆಯನ್ನು ತಡೆಯುವ ಜವಾಬ್ದಾರಿ ಎಲ್ಲ ಧರ್ಮಗುರುಗಳ ಮೇಲಿದೆ. 'ಧರ್ಮಗ್ರಂಥಗಳ ಪ್ರತೀ ಮಾತೂ ದೇವರ ಏಕೈಕ ವಾಕ್' ಎಂಬ' ನಂಬಿಕೆ ಮೂರ್ಖತನದ್ದು. ದೇವರ ವಾಕ್‌ಗಳೆಂದು ಎಷ್ಟೊಂದು ತಪ್ಪು ಪುಸ್ತಕಗಳು ಪ್ರಪಂಚದೆಲ್ಲೆಡೆ ಹಂಚಿ ಹೋಗಿವೆ? ಧರ್ಮಗ್ರಂಥಗಳು ಅಮೂಲ್ಯ ಧಾರ್ಮಿಕ ಸೂಚನೆಗಳನ್ನೊಳಗೊಂಡಿವೆ. ಆದರೆ ಅವುಗಳಲ್ಲಿ ಪ್ರಶ್ನಾರ್ಹವಾದ ಹೇಳಿಕೆಗಳೂ ಇವೆ. ಇದ್ದಂತೆಯೇ ಅವುಗಳನ್ನು ತೆಗೆದುಕೊಂಡಲ್ಲಿ ಅವು ಅಪಾಯಕರ. ಅವುಗಳ ಸತ್ವವನ್ನು ಗ್ರಹಿಸಿ, ಗುಮಾಸ್ತರ ವಿಶ್ಲೇಷಣೆಯನ್ನು ಮರೆತು ಬಿಡಬೇಕು. ೧.೫ ಬಿಲಿಯನ್ ಜನ ನಂಬುವ ಗ್ರಂಥವೊಂದರ ಪ್ರಕಾರ ಕ್ರಿಸ್ತನು ಮಾನವರನ್ನು ನಿರಂತರ ನರಕದಿಂದ ತಪ್ಪಿಸಲು ಗಲ್ಲಿಗೇರಿದ. ಆದರೆ ಅಂತದ್ದೇ ಇನ್ನೊಂದು ಧರ್ಮಗ್ರಂಥ ಹೇಳುತ್ತದೆ-ಶಿಲುಬೆಗೇರಿದ್ದು ಕ್ರಿಸ್ತನಲ್ಲ. ಬದಲಿಗೆ ಯಾರೋ ಏರಿದರು. ಯಾರು ಸತ್ಯ ಹೇಳುತ್ತಿದ್ದಾರೆ? ಬೈಬಲ್ ಅನ್ನು ಆಧರಿಸಿದ ೨೦,೦೦೦ಕ್ಕೂ ಹೆಚ್ಚು ಕ್ರೈಸ್ತ ಪಂಗಡಗಳು ದೇವದೂತನ ಮಾತು ಕುರಿತು ತನ್ನದೇ ವಿವರಣೆ ಸರಿ ಎನ್ನುತ್ತವೆ. ಗ್ರಾಂಥಿಕ ಮತ್ತು ಧಾರ್ಮಿಕ ಹಂತದಲ್ಲಿ ನಾವು ಎಂದಾದರೂ ಒಂದೆಡೆ ಸಮತ್ವ ಸಾಧಿಸುವುದು ಸಾಧ್ಯವೇ? ಪ್ರತಿ ಧರ್ಮವೂ ಧಾರ್ಮಿಕ ಎಚ್ಚರದ ಒಂದು ಹಂತ. ಕೆಲವು ಬಾಲಶಾಲೆಯ ಹಂತದಲ್ಲಿದ್ದರೆ, ಇನ್ನು ಕೆಲವು ಮಾಧ್ಯಮಿಕ ಹಂತದವು. ಆದರೆ ವಿಶ್ವವಿದ್ಯಾಲಯದ ಉನ್ನತ ಹಂತದಲ್ಲಿ ಮಾತ್ರ ಕ್ರಿಸ್ತ, ಬುದ್ಧ, ಕಬೀರ, ರೂಮಿ, ರಮಣ, ಶಂಕರ-ಮುಂತಾದವರು ಒಬ್ಬರನ್ನೊಬ್ಬರು ಸಂಧಿಸುತ್ತಾರೆ ಎನ್ನುವುದನ್ನು ನಾವು ಒಪ್ಪುತ್ತೇವೇನು?

'ಸತ್ಯದ ಅರಿವು ಇಂದು ಮತ್ತು ನಾಳೆಯೂ, ನಮ್ಮಲ್ಲಿ ಮಾತ್ರ ಇರುತ್ತದೆ' ಎಂಬ ಅಹಂ ಅನ್ನು ನಾವೆಲ್ಲರೂ ಬಿಟ್ಟಾಗ ಮಾತ್ರ ನಿಜವಾದ ಸಂವಾದ ಸಾಧ್ಯವಾಗುತ್ತದೆ. 'ನಾನು ಮಾತ್ರ ಸರಿ, ನೀನು ತಪ್ಪು ಅಥವಾ ನೀನು ತಪ್ಪು ದಾರಿಯಲ್ಲಿ ನಡೆಸಲ್ಪಡುತ್ತಿದ್ದೀ' ಎನ್ನುವ ಯೋಚನೆಯನ್ನು ನಾನು ಕೈಬಿಡಬೇಕಾಗುತ್ತದೆ. ಯಾವುದೇ ರೀತಿಯ ಧರ್ಮ ಲಂಡತನ ಮತ್ತು ಮಿಷನರಿ ಚಟುವಟಿಕೆಗಳು ಗುಲಾಮಶಾಹಿಯ ಸೂಚನೆಗಳು ಮತ್ತು ಬೇರೆ ಧರ್ಮದವರ ಮೇಲೆ ಎರಗುವ ಅಪಚಾರ. ಅದನ್ನು ಸ್ಥಾಪಿಸಲು ನಡೆಸುವ ಹಿಂಸಾಚಾರ ಅತ್ಯುಗ್ರ ಧಾರ್ಮಿಕ ಹಟಮಾರಿತನ. ನಮ್ಮ ಧರ್ಮದ ಕುರಿತು ಹೆಮ್ಮೆ ಮತ್ತು ನಂಬಿಕೆ ತಪ್ಪಲ್ಲ. ಆದರೆ ಶಾಶ್ವತ ನರಕದಿಂದ ಬೇರೆಯವರನ್ನು ರಕ್ಷಿಸಲು ಇಡೀ ಉದ್ಯಮವೊಂದನ್ನು ಸೃಷ್ಟಿಸುವುದು ಹಾಗೂ ಅದನ್ನು ಬೆಂಬಲಿಸುವುದು ಅಂತರಧರ್ಮಿಯ ಸಂವಾದಕ್ಕೆ ಪೂರಕವಾಗುವುದಿಲ್ಲ. 'ಇಂತಹ ಧರ್ಮವು ನನ್ನ ಧಾರ್ಮಿಕ ಹಾಗೂ ವೈಯಕ್ತಿಕ ಅಗತ್ಯಕ್ಕೆ ಸೂಕ್ತ' ಎನ್ನುವ ಹಕ್ಕು ನಮಗಿದೆ. ಆದರೆ 'ಆ ಧರ್ಮ ಮಾತ್ರ ಪರಿಪೂರ್ಣವಾಗಿದ್ದು, ಎಲ್ಲ ಮಾನವರಿಗೂ ದೇವರ ನಿಜವಾದ ವಾಕ್ಕು' ಎನ್ನುವ ಹಕ್ಕು ನಮಗಿಲ್ಲ.

ಇರುವ ಏಕೈಕ ಪ್ರಪಂಚವನ್ನು ನಂಬುವವರು ಮತ್ತು ಪಾಖಂಡಿಗಳು ಎಂದು ವಿಭಾಗಿಸಬೇಕೆ? ಪ್ರಪಂಚದಲ್ಲಿರುವವ ಒಬ್ಬನೇ ದೇವರಾಗಿದ್ದಲ್ಲಿ, ನಾವು ತಪ್ಪು ದೇವರನ್ನು ಪೂಜಿಸುತ್ತೇವೇಕೆ? ಪುರೋಹಿತಶಾಹಿ ಕಟ್ಟಿದ, ಮನುಷ್ಯತ್ವಕ್ಕೆ ಅಪಾರ ಹಾನಿ ಮಾಡಿದ ಗೋಡೆಗಳನ್ನು ಕುಟ್ಟಿ ಕೆಡವಿದರೆ, ಧಾರ್ಮಿಕ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ತನ್ನಿಂತಾನೇ ವಿಶಾಲ ವೇದಿಕೆ ಸಿದ್ಧವಾಗುತ್ತದೆ.

ಸತ್ಯದ ಅನ್ವೇಷಕ ಯಾವುದೇ ಸಾಮಾಜಿಕ ಇಲ್ಲವೇ ಸಾಂಸ್ಕೃತಿಕ ಒತ್ತಡಕ್ಕೆ ಸಿಲುಕಬಾರದು. ಬಹುತ್ವವಾದಿ ಜಗತ್ತಿನಲ್ಲಿ ಸಂಪೂರ್ಣ ತಟಸ್ಥ ಮತ್ತು ಧರ್ಮಾತೀತ ಸರ್ಕಾರವು ಧಾರ್ಮಿಕ ಹಾಗೂ ಮನಸ್ಸಾಕ್ಷಿಯ ಸ್ವಾತಂತ್ರಕ್ಕೆ ಯಾವುದೇ ಧಕ್ಕೆ ಬರದಂತೆ ನೋಡಿಕೊಳ್ಳಬೇಕು. ಮಾನವ ಹಕ್ಕುಗಳಿಗೆ ಹಿಂದೂ ಮತ್ತು ಮುಸ್ಲಿಂ ಎಂಬ ಕವಚವಿಲ್ಲ. ಅವು ವಿಶ್ವಾತ್ಮಕ. ಅವುಗಳನ್ನು ಸಂವಿಧಾನಿಕವಾಗಿ ಧರ್ಮಾತೀತ ಶಾಸಕಾಂಗವು ಬೆಂಬಲಿಸಬೇಕು. ಧಾರ್ಮಿಕ ವ್ರತಿಗಳಿಗಿರುವ ಅತ್ಯಂತ ದೊಡ್ಡ ಸವಾಲು- ಈ ಹಕ್ಕುಗಳಿಗಾಗಿ ವಿವಾದಕ್ಕೆಡೆಯಿಲ್ಲದ ಭಾಷೆಯಲ್ಲಿ ಒತ್ತಾಯಿಸುವುದು. ಇಲ್ಲದೇ ಹೋದಲ್ಲಿ, ಅಲ್ಪಸಂಖ್ಯಾತರಿಗೆ ಹಾಗೂ ತಮ್ಮ ಆತ್ಮಸಾಕ್ಷಿಗನು



ಕುಸುಮ ಯಾವುದು?

ಮೋಡದ ಮರೆಯಲ್ಲಿ
ಕನಸಿನ ತೆರೆಯಲ್ಲಿ
ಮಿಂಚಿ ಮರೆಯಾದ ಕುಸುಮ
ಯಾವುದು?

ತೆಂಗಿನ ಗರಿಯಿಂದ
ಮನಸಿನ ಕೊಡದಿಂದ
ತಂಗಾಳಿ ಸೂಸಿ ಮರೆಯಾದ ಕುಸುಮ
ಯಾವುದು?

ಕಾಮನ ಬಿಲ್ಲಿನಲ್ಲಿ
ನಯನದ ಬಾಗಿಲಲ್ಲಿ
ಬಣ್ಣದೋಕುಳಿ ಚೆಲ್ಲಿ - ಮರೆಯಾದ
ಕುಸುಮ ಯಾವುದು?

ಬೆಳ್ಳಿ ಬೆಟ್ಟದಲ್ಲಿ
ಅಂಗೈಯ್ಯ ಚಪ್ಪರದಲ್ಲಿ
ಬೆಟ್ಟದ ಹೂವಂಗೆ ಮರೆಯಾದ
ಕುಸುಮ ಯಾವುದೀ ಕುಸುಮ
ಯಾವುದು?

-ಹುಳಿಯಾರು ಕಿರಣ್

ಗುಣವಾಗಿ ನಡೆಯುತ್ತಿರುವವರಿಗೆ ಗುಮಾಸ್ತರ ಸಿಹಿಭಾಷೆಯಿಂದ ಯಾವುದೇ ಉಪಯೋಗ ವಿಲ್ಲದೆ ಹೋಗುತ್ತದೆ.

ನಮಗೆ ನಿಜವಾದ ಧಾರ್ಮಿಕ ಸ್ವಾತಂತ್ರ್ಯ, ಶಾಂತಿ, ಸಹಿಷ್ಣುತೆ ಬೇಕು ಎನ್ನುವುದು ನಮ್ಮ ನಂಬಿಕೆಯ ಮೂಲೆಗಲ್ಲಾಗಿದ್ದಲ್ಲಿ ಫರ್ಮಾನು ಹೊರಡಿಸುವ ಆಯತೊಲ್ಲಾಗಳ ವಿರುದ್ಧ ನಾವು ದನಿಯೆತ್ತಬೇಕು. ಪರಸ್ಪರರ ಇಚ್ಛೆಗೆ ವಿರುದ್ಧವಾಗಿ ದಂಪತಿಗಳನ್ನು ಬೇರ್ಪಡಿಸುವ ಇಸ್ಲಾಂ ನ್ಯಾಯಾಲಯಗಳ ವಿರುದ್ಧ ದನಿಯೆತ್ತಬೇಕು. ಸತಿ ಪದ್ಧತಿ ಹಾಗೂ ಅಸ್ಪೃಶ್ಯತೆಯನ್ನು ಬೋಧಿಸುವ ಹಿಂದೂ ಪೂಜಾರಿಗೆ ಸರಿಯಾದ ಜಾಗ ತೋರಿಸಬೇಕು. ಪ್ರತ್ಯೇಕತೆಯನ್ನು ಆಧರಿಸಿ ಬೆಳೆಯುವ ಯಾವುದೇ ರಾಜಕೀಯ ಅಥವಾ ಧಾರ್ಮಿಕ ವ್ಯವಸ್ಥೆಯನ್ನು ನಾವು ತಿರಸ್ಕರಿಸಬೇಕು. ೧೦೦೦ ವರ್ಷಗಳ ಶೋಧನಾ ಹತ್ಯೆಯ ಇತಿಹಾಸವನ್ನು, ದ್ವೇಷದಿಂದ ಬೆನ್ನು ಹತ್ತಿ ಬೇಟೆಯಾಡಿದ್ದನ್ನು, ಯುರೋಪಿನ ಹತ್ಯಾ ಕಾಂಡವನ್ನು ಮತ್ತು ಇತ್ತೀಚೆಗೆ ೭೦ ವರ್ಷಗಳ ಕಾಲದ ಸೋವಿಯತ್ ರಷ್ಯಾದ ರಾಜಕೀಯ ಪ್ರತ್ಯೇಕತೆಗಳು ನಮ್ಮೆಲ್ಲರಿಗೆ ಎಚ್ಚರಿಕೆ ನೀಡಬೇಕು. ಬಹುತ್ವವಾದಕ್ಕೂ ಅದರದ್ದೇ ಆದ ಲೋಪದೋಷಗಳಿವೆ. ಧಾರ್ಮಿಕ ರಾಜ್ಯಗಳನ್ನು ಬೆನ್ನ ಹಿಂದೆ ಇರಿಸಿಕೊಂಡ ಬೇರೆ ವ್ಯವಸ್ಥೆಗಳಿಗಿಂತ ಪ್ರಜಾಪ್ರಭುತ್ವವು ಹೇಗೆ ಉತ್ತಮವೋ ಹಾಗೆ, ಇದ್ದುದರಲ್ಲಿ ಉತ್ತಮ ವ್ಯವಸ್ಥೆ ಅದು.

ಧಾರ್ಮಿಕ ಕ್ಷೇತ್ರದಲ್ಲಿ ನಾವು ಹಚ್ಚಿದ ಸಂವಾದವನ್ನು ಮೀರಿ ಮುನ್ನಡೆಯಬೇಕು. ಅಭಿಪ್ರಾಯ ಭೇದ ವ್ಯಕ್ತಪಡಿಸುವ, ಸಂಶಯಿಸುವ ಹಾಗೂ ಸಂವಾದದ ಸ್ವಾತಂತ್ರ್ಯವನ್ನು ಉತ್ತೇಜಿಸಬೇಕು. ಸತ್ಯಾನ್ವೇಷಣೆಯ ಗುರಿ ಲಿಖಿತ ಅಥವಾ ವಾಚಿತ ಸತ್ಯ ಇಲ್ಲವೇ ಧಾರ್ಮಿಕ ಗ್ರಂಥಗಳಲ್ಲಿನ ಸತ್ಯಾದಾಚೆಗೆ ನಿರ್ದೇಶಿತ ವಾಗಿರಬೇಕು. ಸ್ವತಂತ್ರ ಧರ್ಮಶಾಸ್ತ್ರ ವೆಂಬುದರ ಅರ್ಥ -ಧರ್ಮಗ್ರಂಥಗಳಿಂದ ಬಿಡುಗಡೆ ಎಂದಾಗಬೇಕು. ಎಲ್ಲ ಧರ್ಮಗಳಲ್ಲಿನ ಸಾಮಾನ್ಯ ಅಂಶಗಳಾದ ಮಾನವೀಯತೆ, ಸತ್ಯ, ನ್ಯಾಯ ಪರತೆ, ಸಮಾನತೆಗಳನ್ನು ಉತ್ತೇಜಿಸಬೇಕು ಮತ್ತು ಬಡತನ, ಸಾಮಾಜಿಕ/ ಆರ್ಥಿಕ ಅಸಮಾನತೆ ಗಳನ್ನು ಒಟ್ಟಾಗಿ ಎದುರಿಸಬೇಕು. ಸಾಮಾಜಿಕ ಅನಿಷ್ಟಗಳಾದ ಜಾತೀಯತೆ, ಮತೀಯವಾದ, ಕುಡಿತ, ಗ್ರಾಹಕವಾದ ಲಿಂಗ ಅಸಮಾನತೆ, ಬಾಲ ಕಾರ್ಮಿಕ ಸಮಸ್ಯೆಯೇ ಮೊದಲಾದವುಗಳ ವಿರುದ್ಧ ನಾವು ಸೆಣೆಸಿದಲ್ಲಿ ಸಾಮಾನ್ಯ ಜನರು ತಮ್ಮ ಸಂಪ್ರದಾಯಗಳಲ್ಲಿರುವ ಶ್ರೇಷ್ಠವಾದದ್ದನ್ನು ಹೊರ ತರುತ್ತಾರೆ. ಅಭಿವೃದ್ಧಿಯ ಹೊಸ ವ್ಯಾಖ್ಯೆ 'ಸಾಮಾಜಿಕ ನ್ಯಾಯ ಸಹಿತ ಅಭಿವೃದ್ಧಿ' ಹುಟ್ಟು ಹಾಕುತ್ತಾರೆ. ಇದೆಲ್ಲದರಿಂದಾಗಿ ದಕ್ಷಿಣ ಏಷ್ಯಾ ದೇಶಗಳ ಜನರ ನಡುವೆ ಸ್ನೇಹ ಬೆಳೆದು, ಈ ಉಪಖಂಡದಲ್ಲಿ ಮಿಲಿಟರಿ ಶಾಹಿ ಹಾಗೂ ಶಸ್ತ್ರಾಸ್ತ್ರ ಪೈಪೋಟಿ ನಿಲ್ಲುತ್ತದೆ.

ಸಿದ್ಧಾರ್ಥ ಗೌತಮ ಬುದ್ಧ ತೋರಿದ ದಾರಿ ಎಲ್ಲರಿಗೂ ಸೂಕ್ತ ದಾರಿ. ಆತ ಹೇಳುತ್ತಾನೆ. 'ನೀನು ಕೇಳಿದ್ದನ್ನು ನಂಬಬೇಡ. ಧಾರ್ಮಿಕ ಗ್ರಂಥಗಳು ತಲೆತಲಾಂತರಗಳಿಂದ ಬಂದಂಥವು, ಆದ್ದರಿಂದ ಅವುಗಳನ್ನು ನಂಬಬೇಡ. ಅನೇಕಾ ನೇಕ ಜನ ನಡೆದಿದ್ದಾರೆ ಎನ್ನುವ ದಾರಿಯನ್ನು ನಂಬಬೇಡ. ಅದು ಕುರುಡು ಅನುಕರಣೆ ಯಾಗಿರಬಹುದು. ಹಿರಿಯರು ಅಥವಾ ಗುರು ಹೇಳಿದ್ದಾರೆಂದ ಮಾತ್ರಕ್ಕೆ ಅದನ್ನು ನಂಬ ಬೇಕೆಂದಿಲ್ಲ. ಬುದ್ಧಿಯನ್ನು ನಿಕಷ ಮಾಡಿಕೊಂಡು ಯೋಚಿಸು, ವಿಶ್ಲೇಷಿಸು, ಯಾವಾಗ ಫಲಿತಾಂಶವು ತರ್ಕದೊಂದಿಗೆ ಹೊಂದುತ್ತದೋ, ಯಾವ ದಾರಿ ಎಲ್ಲರ ಒಳಿತನ್ನು ಆಶಿಸುತ್ತದೋ ಅದನ್ನು ಒಪ್ಪಿಕೋ, ಅದನ್ನೇ ಬಾಳು'. ●

ಕ್ವಿಜ್-೧೧ ಬಹುಮಾನ ವಿಜೇತರು

ಪ್ರಥಮ ಬಹುಮಾನ ರೂ. ೫೦೦-೦೦

ಸದಾಶಿವ ವಿ. ರಾತ್ರಿಕರ್
ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್
ಬಳಗಾನೂರ ಶಾಖೆ - ೫೮೪೧೩೮
ತಾ: ಸಿಂಧನೂರು, ಜಿಲ್ಲೆ: ರಾಯಚೂರು

ದ್ವಿತಿಯ ಬಹುಮಾನ ರೂ. ೨೦೦-೦೦

ಶ್ರೀದೇವಿ ರಾಜೀವ ಜೋಶಿ
C/o ಡಾ|| ರಾಜೀವ ರಂ. ಜೋಶಿ
ಕಿತ್ತೂರ ಚೆನ್ನಮ್ಮ ರಸ್ತೆ
ಗದಗ - ೫೮೨ ೧೦೧.

ಸಮಾಧಾನಕರ ಬಹುಮಾನ ತಲಾ ರೂ. ೧೦೦/-

ಜಯಶ್ರೀ ಎನ್. ಸಪ್ಪಿನ್
ಬಸವೇಶ್ವರ ನಗರ
ಹಾವೇರಿ - ೫೮೧ ೧೧೦

ಎಚ್. ಟಿ. ಶ್ರೀಧರ
ಶ್ರೀನಿಧಿ ಜನರಲ್ ಸ್ಟೋರ್ಸ್ (ರಾಜಮಾರ್ಗ)
ಸಿದ್ದಾಪುರ - ೫೮೧ ೩೫೫
ಉತ್ತರ ಕನ್ನಡ.

ಸಿ. ಮುರಳಿಪ್ರಸಾದ್
S/o ಚಿನ್ನಪ್ಪ,
ಮಂಜುನಾಥ ಕೃಪ
ದೊಡ್ಡಮನೆ ನರ್ಸಿಂಗ್ ಹೋಮ್ ಹತ್ತಿರ,
ಬಿ. ಎಮ್. ಗಾರ್ಡನ್,
ತುಮಕೂರು - ೫೭೨೧೦೨.

ಕ್ವಿಜ್ - ೧೧ರ ಸರಿಯುತ್ತರ

೧. ಎಂ.ಎಂ. ಕಲಬುರ್ಗಿ
೨. ಕರ್ನಾಟಕ ಪಬ್ಲಿಕ್ ಸರ್ವಿಸ್ ಕಮೀಶನ್
೩. ರಮೇಶ
೪. ಜಯಲಲಿತಾ
೫. ಧಾರವಾಡ

ಕ್ವಿಜ್ ೧೨ರಲ್ಲಿ ಭಾಗವಹಿಸುವಿರಾ?

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಪ್ರಥಮ-ದ್ವಿತಿಯ ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು. ಕೂಪನ್ ಜೊತೆಗೆ ಭಾವಚಿತ್ರ ಕಳಿಸಬೇಡಿ. ಬಹುಮಾನಿತರನ್ನು ಸಂಪರ್ಕಿಸಿ ಭಾವಚಿತ್ರ ತರಿಸಿಕೊಳ್ಳಲಾಗುವುದು.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **೧೫-೬-೧೯೯೮**

ಕ್ವಿಜ್ - ೧೨

೧. ಇತ್ತೀಚೆಗೆ ಭಾರತ ಪರಮಾಣು ಸಾಧನಾ ಪರೀಕ್ಷೆ ನಡೆಸಿದ ಸ್ಥಳ ಯಾವುದು?

....

೨. ಶೃಂಗೇರಿ ಕ್ಷೇತ್ರದಲ್ಲಿ ಪೂಜಿಸಲಾಗುವ ಪ್ರಸಿದ್ಧ ದೇವತೆಯ ಹೆಸರೇನು?

....

೩. ದಾವಣಗೆರೆ ಜಿಲ್ಲೆಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಯಾರು?

....

೪. ಕೇಂದ್ರ ಸರ್ಕಾರದಲ್ಲಿ ರಾಮಕೃಷ್ಣ ಹೆಗಡೆ ನಿರ್ವಹಿಸುತ್ತಿರುವ ಖಾತೆ ಯಾವುದು?

....

೫. ಇತ್ತೀಚೆಗೆ ಮಹಡಿಯಿಂದ ಬಿದ್ದ ಕನ್ನಡ ಸಿನಿಮಾ ನಟ ಯಾರು?

....

ಹೆಸರು..
ವಿಳಾಸ..
....
....
ಪಿನ್ ಕೋಡ್.............................. ದೂರವಾಣಿ..............................
ಪ್ರವೇಶ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು**, ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು-೭೯.

ಚೌಚೌ

ಕುಡಿಯಲು ನೀರಿಲ್ಲ

ಹಾವೇರಿ ಜಿಲ್ಲೆಯ, ರಾಣಿ ಬೆನ್ನೂರು ತಾಲ್ಲೂಕಿನ ಚೌಡಯ್ಯ ದಾನಪುರ ಎಂಬ ಹಳ್ಳಿ ಇದು ರೋಡ್ ಸೈಡ್ ಇಲ್ಲ. ಈ ಊರಿಗೆ ಹೋಗಲು ೪ ಕಿ.ಮೀ ಇದೆ ಬಸ್ಸು ಬರದೇ ಹೋದರೆ ನಡೆಯುವ ಪ್ರಸಂಗತಪ್ಪಿದ್ದಲ್ಲ. ಇಲ್ಲಿ ಸಂಕ್ರಾಂತಿ, ಯುಗಾದಿ, ಹೋಳಿ ಹುಣ್ಣಿಮೆಯಲ್ಲಿ ಬಹು ಜನಸಂಖ್ಯಾ ಸಾಂದ್ರತೆಯಿಂದ ಜಾತ್ರೆಗಳು ನಡೆಯುತ್ತವೆ. ಕ್ರಾಸ್‌ನಲ್ಲಿ ಬಂದು ಜನರಿಗೆ ಕುಳಿತು ಕೊಳ್ಳಲು ತಂಗು ದಾಣವಿಲ್ಲ. ಪ್ರವಾಸಿಗರಿಗೆ ನೀರಡಿಕೆಯಾದರೆ ನೀರು ಕುಡಿಯಲು ಬೋರ್ ಇಲ್ಲ ಹೀಗೆ ಪ್ರಯಾಣಿಕರು ಬೇಸರಗೊಂಡು ಜನರು ರಸ್ತೆಯಲ್ಲಿ ಬಿಸಿಲಲ್ಲಿ ನಿಂತು ಪ್ರಯಾಸ ಪಡುತ್ತಾರೆ. ಆದ್ದರಿಂದ ಇಲ್ಲಿ ತಂಗುದಾಣ ನಿರ್ಮಿಸುವುದು ಅಗತ್ಯವಿದೆ.

-ಮೂಲತೇಶ್ ವೀ. ಭತ್ತದ
ಚೌಡಯ್ಯದಾನಪುರ.

ಮಲ್ಲಿಯಮ್ಮನ ಜಾತ್ರೆಗೆ

ನನ್ನೂರು ಹರಪನಹಳ್ಳಿ ತಾಲ್ಲೂಕು ಹಾಕ್ಕಿನಾಳ್ ಗ್ರಾಮ. ಈ ಗ್ರಾಮದ ಸರಹದ್ದಿನಲ್ಲಿ ಸುಮಾರು ೭ ಹಳ್ಳಿಗಳು ಸೇರುತ್ತವೆ. ನನ್ನೂರಿನಲ್ಲಿ ಪ್ರತಿ ೩ ವರ್ಷಕ್ಕೊಮ್ಮೆ ಶ್ರೀ ಮಲಿಯಮ್ಮದೇವಿ . ಜಾತ್ರೆ ನಡೆಯುತ್ತದೆ.

ಈ ಜಾತ್ರೆಯ ಪ್ರಮುಖ ಆಕರ್ಷಣೆ ಎಂದರೆ ಮೂಕ ಪ್ರಾಣಿಗಳ ಬಲಿ. ಸುಮರು ೩-೪ ಕೋಣಗಳನ್ನು ದೇವರ ಹೆಸರಿನಲ್ಲಿ ಬಲಿ ಕೊಡಲಾಗುತ್ತದೆ. ಸ್ವಂತಕ್ಕೆ ಎಷ್ಟೋ ಕುರಿಗಳನ್ನು ಬಲಿಕೊಡಲಾಗುತ್ತದೆ.

ಹಿಂದೂ - ಮುಸ್ಲಿಮ್‌ರೆಲ್ಲಾ ಸೇರಿ ಈ ಜಾತ್ರೆಯನ್ನು ಬಹಳ ವಿಜ್ರುಂಭಣೆಯಿಂದ ಆಚರಿಸುತ್ತಾರೆ. ಈ ಜಾತ್ರೆಯ ಸಮಯದಲ್ಲಿ ವಾದಿಸುತ್ತಾರೆ. ಈ ಜಾತ್ರೆಯ ಸಮಯದಲ್ಲಿ ವಾದಿ-ಬೀದಿ ಬಿದ್ದು ೨-೩ ನಾಟಕಗಳನ್ನು ಪ್ರದರ್ಶಿಸುತ್ತಾರೆ. ನಾಟಕ ನೋಡಲು ಸುಮಾರು ದೂರದ ಹಳ್ಳಿಗಳಿಂದ ಬರುತ್ತಾರೆ. ಕೆಲವು ಸಾರಿ ಗಲಾಟೆಗಳೂ ಆಗುವ ಸಂಭವವೂ ಉಂಟು.

ಜಾತ್ರೆ ನಡೆಯಲು ಪ್ರತಿ ಮನಗೆ ಇಂತಿಷ್ಟು ಹಣ ಎಂದು ಪಟ್ಟಿ ಎತ್ತುತ್ತಾರೆ. ೨ ಎತ್ತುಗಳಿದ್ದವರು ೨೫೦/-, ಕೂಲಿಕಾರರು ೧೦೦/-, ನೌಕರದಾರರು ತಮಗಿಷ್ಟವಾದ ರೀತಿ ಭಕ್ತಿಯ ರೂಪದಲ್ಲಿ ಹಣ ನೀಡುತ್ತಾರೆ. ಕೆಲ ಮುಖಂಡರು ಈ ಹಣವನ್ನೇ ಲಪಾಟಾಯಿಸಿದ ನಿದರ್ಶನಗಳಿವೆ.

ಜಾತ್ರೆಯ ಸಮಯದಲ್ಲಿ ಪರ ಊರಿನಿಂದ ಬಂದ ಸುಂದರ ಹುಡುಗಿಯರ ಹಿಂದೆ ನನ್ನೂರ ಕೆಲ ಪಡ್ಡೆ ಹುಡುಗರು ಟ್ರಿಮ್ಮಾಗಿ ಡ್ರೆಸ್ ಮಾಡಿಕೊಂಡು ಅಡ್ಡಾಡುವುದನ್ನು ನೋಡಲು ಬಹಳ ಚೆಂದ.

-ಹಾಕ್ಕನಾಳ್ ಶಿವಕುಮಾರ್ ಗೌಡ

ಅವ್ಯವಸ್ಥೆಯ ಮಡಿಲಲ್ಲಿ

ಇದು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನಲ್ಲಿ ಬರುವಂತಹ ಒಂದು ಹಳ್ಳಿಯಾಗಿದೆ.

ಇದು ಕುಷ್ಟಗಿಯಿಂದ ಸುಮಾರು ೮ ಕಿಲೋಮೀಟರ ದೂರದಲ್ಲಿರುತ್ತದೆ. ಯಲಬುರ್ತಿಯಲ್ಲಿ ಸುಮಾರು ೧೦೦೦ರಿಂದ ೧೬೦೦ ಜನಸಂಖ್ಯೆಯಿದ್ದು ಅಲ್ಲಿಯ ಜನ 'ಮೂಕ ಜಂತುಗಳಾಗಿದ್ದಾರೆ. ಸರಕಾರದಿಂದ ಯಾವುದೇ ಸವಲತ್ತುಗಳು ಬಂದರೂ ಅವುಗಳ ಬಗ್ಗೆ ಯಾರು ಚಿಂತನೆ ಮಾಡುವದಿಲ್ಲ. ಅವು ಕಾವುಲ ಗ್ರಾಮ ಪಂಚಾಯಿತಿ ಮೆಂಬರ ಅವರ ಅಣ್ಣ ಅಕ್ಕ ತಮ್ಮ ಅವರವರ ಕೈಗೆ ಮಾತ್ರ ಸೇರುತ್ತವೆ. ದುರದೃಷ್ಟ ಯಲಬುರ್ತಿಯಲ್ಲಿ ಇನ್ನೂ ಭದ್ರವಾದ ಸಂಘ ಸಂಸ್ಥೆಗಳು ಹುಟ್ಟಿಕೊಂಡಿಲ್ಲ. ಗಜೇಂದ್ರಗಡದಿಂದ ೧೯ ಕಿ.ಮೀ ದೂರದಲ್ಲಿದ್ದರೂ ಜನ ಅಲ್ಲಿಗೆ ವ್ಯಾಪಾರ ಮಾಡಲು ಹೋಗುತ್ತಾರೆ. ಆದರೆ ಸಾರಿಗೆಯ ಸೌಕರ್ಯ ವಿರುವುದಿಲ್ಲ.

ಗ್ರಾಮ ಪಂಚಾಯಿತಿ ಮೆಂಬರುಗಳು ತಮ್ಮ ಹೊಲದಲ್ಲಿ ೧೦೦ದಾ ೫ ಬೋರುಗಳನ್ನು (ಅಂತರ್ಜಲ ನೀರಾವರಿ) ಹಾಕಿಸಿಕೊಂಡು ಬಡ ಜನರಿಗೆ ಬಂದಂತೆ ಅವುಗಳನ್ನು ಅವರ ಹೊಟ್ಟೆಯ ಮೇಲೆ ಬಂಡಿ ಏಳದೇ. ಅವರನ್ನು ತುಳಿಯುತ್ತಾರೆ. ಬಡಜನರನ್ನು ಹೆದರಿಸುತ್ತಾರೆ. ಬಡವರು ಅವರಿಗೆ ತಲೆ ಬಾಗುತ್ತಾರೆ. ಯುವಕರು ಯಾವದೇ ರೀತಿಯ ಪ್ರತಿಭಟನೆ ಮಾಡಲು ಹೋದಾಗ ಅವರನ್ನು ಕಲಿಯುವ ಶಾಲೆಯಿಂದ ಹೊರಗೆ ಹಾಕಿಸುತ್ತಾರೆ.

ಈ ವರ್ಷ ವಿಪರೀತ ಬರಗಾಲದಿಂದ ನರಳುತ್ತಿರುವ ಪ್ರಜೆಗಳಿಗೆ ಕುಷ್ಟಗಿ ತಾಲೂಕಿನ ಶಾಸಕರು ಯಾವುದೇ ರೀತಿಯ ಪರಿಹಾರ ನೀಡಲಿಲ್ಲ. ಬಂದಂಥ ಹಣವೆಲ್ಲ ತಮ್ಮ ಕೈಯಲ್ಲಿರುವ ಸಣ್ಣ M.L.Aಗಳಿಗೆ ಕೊಟ್ಟು, ಕುರುಡು ಮೂಕರಂತೆ ಸಮ್ಮನೆ ಕುಳಿತು ಬಿದ್ದಿರುತ್ತಾರೆ. ಇಂತಹ ದುಷ್ಟ ರಾಜಕಾರಣಿಗಳಿಂದ ಯಲಬುರ್ತಿ ಗ್ರಾಮ ಏನು ಕಾಣದ ಕರಿಗೊಂಬೆಯಾಗಿ ಸುಮ್ಮನೆ ಕುಳಿತು ಬಿಟ್ಟಿದೆ.

ಇದಕ್ಕೆ ಕಾರಣ ಯಲಬುರ್ತಿ ಜನರಲ್ಲಿಯ ಅಜ್ಞಾನ ಮೂಢ ನಂಬಿಕೆ ಮತ್ತು ಭಯಗಳಿಂದ ತುಂಬ ತುಳುಕುತ್ತದೆ.

-ಎಸ್.ಎಚ್. ಯಲಬುರ್ತಿ

ರಸ್ತೆ ಸರಿಪಡಿಸಿ

ಹರಪನಹಳ್ಳಿ ತಾಲ್ಲೂಕ ತವಡೂರು ಗ್ರಾಮದ ರಸ್ತೆಯು ವಿಕ್ಟೋರಿಯಾ ರಾಣಿಯ ಕಾಲದ್ದು. ಇಲ್ಲಿಯ ರಸ್ತೆ ಬಗ್ಗೆ ಯಾವ ದೂರು ಸಲ್ಲಿಸಿದರೂ ಅದರ ಬಗ್ಗೆ ಯಾವ ರಾಜಕಾರಣಿಗಳು ತಮ್ಮ ಗಮನವನ್ನು ಕೊಡದಿರುವುದೆ ಇದಕ್ಕೆ ಕಾರಣ.

ಸ್ವತಂತ್ರ ಬಂದು ಸುಮಾರು ೫೦ ವರ್ಷಗಳಾದರೂ ಒಂದು ಸಲವೂ ಇಂಥ ರಸ್ತೆಗಳ ಬಗ್ಗ ಚಿಂತಿಸಿಲ್ಲ. ಇಲ್ಲಿಯವರೆಗೂ ಬಂದಂಥ ಯಾವ ಮಂತ್ರಿಗಳಾಗಲಿ, ಪ್ರಧಾನಿಗಳಾಗಲಿ ಇಂತಹ ಹಳ್ಳಿಯ ಬಗ್ಗೆ ಕಿಂಚಿತ್ತೂ ಯೋಚನೆ ಮಾಡಿಲ್ಲ. ಇಂದು ಇರುವ ಪ್ರಧಾನಿಗಳಾದರು ಇಂಥ ಹಳ್ಳಿಗಳ ಬಗ್ಗೆ ಯೋಚಿಸಿ. ರಸ್ತೆಗಳನ್ನು ಸರಿಪಡಿಸುವ ಕ್ರಮ ಕೈಗೊಳ್ಳುವರೆ?

-ಶಶಿಧರ, ತವಡೂರು

ನಮ್ಮೂರ ನೋಡ ಬನ್ನಿ

ನೀವು ನಿಸರ್ಗದ ಸೌಂದರ್ಯವನ್ನು ಸವಿ ಬೇಕಿದ್ದರೆ ಕೂಡಲೇ ಆಗಮಿಸಿ ನಮ್ಮೂರಿಗೆ. ಕರಾವಳಿ ತೀರದ ಈ ಊರಿನ ಪರಿಸರ ನೋಡಲು ಎಷ್ಟು ಮುದ್ದು. ಒಂದೆಡೆ ಅರಬ್ಬೀಸಮುದ್ರ ಇನ್ನೊಂದೆಡೆ ಸೌಪರ್ಣಿಕಾ ನದಿ ನಮ್ಮ ಕುಂದಾಪುರದ ವೈಶಿಷ್ಟ. ಕಾಲಕಾಲಕ್ಕೆ ಬೆಳೆಬೆಳೆಯುವ ಈ ಊರಿನಲ್ಲಿ ಇಲ್ಲಿಯ ಜನರು ವ್ಯವಸಾಯವನ್ನು ಮುಖ್ಯ ಉದ್ಯೋಗವನ್ನಾಗಿ ಅವಲಂಬಿಸಿ ದ್ದಾರೆ. ಸುಂದರ ಕಡಲು ತೀರವನ್ನು ಹೊಂದಿರುವ ತ್ರಾಸಿಯ ಬೀಚ್ ಆಕರ್ಷಣೀಯ. ಒಂದೆಡೆ ಸಮುದ್ರ ಒಂದೆಡೆ ನದಿ ಮಧ್ಯದಲ್ಲಿ ಹೈವೆ ರಸ್ತೆ ಈದೆಲ್ಲವನ್ನು ನೋಡಲು ಏನು ಚಂದ. ಕೊಂಕಣ ರೈಲು ಈ ಊರನ್ನು ಪ್ರತಿ ನಿತ್ಯ ಹಾದು ಹೋಗುವಾಗ ನೋಡಲು ಬಹಳ ನೆಮ್ಮದಿ. ಮಳೆಗಾಲದಲ್ಲಿ ತಲೆಗೆ ಹಾಳೆ ಹಾಕಿಕೊಂಡು ಕೆಸರು ಗದ್ದೆಯಲ್ಲಿ ನೆಟ್ಟಿನೆಡುವ ಹೆಂಗಸರು; ಕೈಯಲ್ಲಿ ಕೋಲು ಹಿಡಿದು ಉಳುವ ಗಂಡಸರು. ಇದೆಲ್ಲವನ್ನು ವೀಕ್ಷಿಸುವಾಗ ಕುಂದಾಪುರ ಸಾಮಾನ್ಯವಾದ ಊರಲ್ಲ ಎನಿಸದಿರದು.

- ಸುರೇಶಾ ವೆಂಕಟಾಬಿಲ್ಲವ
ಬಡಾಕೋರೆ

ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ

ಈ ಚಿಕಿತ್ಸೆಯನ್ನು ಪುರುಷ ಹಾಗು ಸ್ತ್ರೀ ಇಬ್ಬರಲ್ಲಿಯೂ ಮಾಡಬಹುದಾದರೂ ಮಹಿಳೆಯರಲ್ಲಿ ಈ ಶಸ್ತ್ರ ಚಿಕಿತ್ಸೆಯ ಜವಾಬ್ದಾರಿ ಬೀಳುತ್ತದೆ. ಇದಕ್ಕೆ ಹಲವಾರು ಕಾರಣಗಳಿವೆ.

○ ಡಾ. ಸುನಂದಾ ಕುಲಕರ್ಣಿ

ಸಂತಾನ ನಿರೋಧ ಶಸ್ತ್ರಚಿಕಿತ್ಸೆಯು ಈಗ ನಮ್ಮ ದೇಶದಲ್ಲಿ ಜನಪ್ರಿಯವಾಗುತ್ತಲಿದೆ. ಈ ಚಿಕಿತ್ಸೆಯನ್ನು ಪುರುಷ ಹಾಗು ಸ್ತ್ರೀ ಇಬ್ಬರಲ್ಲಿಯೂ ಮಾಡಬಹುದಾದರೂ ಮಹಿಳೆಯರಲ್ಲಿ ಈ ಶಸ್ತ್ರ ಚಿಕಿತ್ಸೆಯ ಜವಾಬ್ದಾರಿ ಬೀಳುತ್ತದೆ. ಇದಕ್ಕೆ ಹಲವಾರು ಕಾರಣಗಳಿವೆ. ಅವು ಯಾವವೆಂದರೆ ಪುರುಷರು ತಾವು ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡರೆ ತಮ್ಮ ಲೈಂಗಿಕ ಶಕ್ತಿಯು ಕಡಿಮೆಯಾಗುತ್ತದೆಂಬ ಮೂಢನಂಬಿಕೆ ಇದೆ. ತಮ್ಮ ಗಂಡಂದಿರು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡರೆ; ಅವರ ದೈಹಿಕ ಶಕ್ತಿ ಕಡಿಮೆಯಾಗಿ, ದುಡಿಯುವ ಗಂಡಸಿಗೆ ತೊಂದರೆ ಯಾಗುವದೆಂಬ ಹೆದರಿಕೆ ಹಾಗು ಗಂಡನ ಮೇಲಿನ ಮಮಕಾರ ಮಮತೆ, ದುಗುಡ ಅಡ್ಡ ಬಂದು, ತಾವೇ ತಿರುಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಮುಂದೆ ಬರುತ್ತಾರೆ. ಕೆಲವು ಸಲ ಯಾವುದೋ ಕಾರಣಕ್ಕೆ ಗಂಡಸರಲ್ಲಿ ಸಂತಾನ ನಿರೋಧ ಶಸ್ತ್ರಚಿಕಿತ್ಸೆ (ವ್ಯಾಸೆಕ್ಟಮಿ) ಸರಿಯಾಗಲಿಲ್ಲವೆಂದು ತಿಳಿಯೋಣ. ಆಗ ಹೆಂಡತಿಯು ಬಸಿರಾದರೆ, ಗಂಡಂದಿರು ಹೆಂಡತಿಯ ಚಾರಿತ್ರದ ಬಗ್ಗೆ ಸಂಶಯ ಪಡುತ್ತಾರೆ. ಇದೂ ಅಲ್ಲದೆ ಹೆಂಗಸರು ಬಸಿರಿರುವಾಗ ಭಾರಹೊತ್ತು, ವಾಂತಿಯ ಆವಾಂತರಕ್ಕೆ ಈಡಾಗಿ, ನಂತರ ಹೆರಿಗೆಯನ್ನು ಅನುಭವಿಗೆ ನೀರ್ವಿಣ್ಣರಾಗಿ, ಹಡೆದ ನಂತರ ಹಾಲುಣಿಸಿ, ಮಗುವನ್ನು ಬೆಳೆಸಿ, ನಾನಾ ತರಹದ ತೊಂದರೆಗಳನ್ನು ಅನುಭವಿಸಿ ಇನ್ನು ಮಕ್ಕಳೇ ಬೇಡ ಅನ್ನುವ ಸ್ಥಿತಿಗೆ ಬಂದಾಗ, ಗಂಡ ಶಸ್ತ್ರ ಚಿಕಿತ್ಸೆಗೆ ತಾನು ಒಳಪಡುವದಿಲ್ಲವೆಂದಾಗ, ಹೆರಿಗೆಯ ನೋವಿಗಿಂತ ಶಸ್ತ್ರಚಿಕಿತ್ಸೆ ಮೇಲೆಂದು ಅವರೇ ಮಾಡಿಸಿಕೊಂಡು ಬಿಡುತ್ತಾರೆ.

ಈ ಶಸ್ತ್ರಚಿಕಿತ್ಸೆಯನ್ನು ಯಾವಾಗ ಬೇಕಾದರೂ ಮಾಡಬಹುದು. ಬಾಣಂತನವಾದ ನಂತರ, ಗರ್ಭಪಾತವಾದ ನಂತರ ಮಾಡಿಸಿಕೊಂಡರೆ ಒಳ್ಳೆಯದು. ಏಕೆಂದರೆ ಗರ್ಭಾಶಯ ಬಸಿರಿರುವಾಗ ದೊಡ್ಡದಾಗಿರುವದರಿಂದ ಅದು ಮೇಲೆಯೇ ಬರುವದರಿಂದ ಶಸ್ತ್ರಚಿಕಿತ್ಸೆಯನ್ನು ಈ ಸಮಯದಲ್ಲಿ ಮಾಡುವದು ಸುಲಭ. ತಾಯಿಗೂ ಸಹ ಇದೇ ಸಮಯದಲ್ಲಿ ಬಾಣಂತನವಾಗಿರುವದರಿಂದ ವಿಶ್ರಾಂತಿ ಸಿಗುತ್ತದೆ. ಬಸಿರಿಲ್ಲದ ಸಮಯದಲ್ಲಿ ಮಾಡಿಸಿಕೊಂಡಾಗ ಗಂಡ ಹಾಗು ಹೆಂಡತಿ ಇಬ್ಬರಿಗೂ ೭ ದಿನಗಳ ರಜೆಯನ್ನು ಸರಕಾರ ಕೊಡ ಮಾಡಿದೆ. ಗಂಡಂದಿರು ಹೆಂಡತಿಗೆ ಸಹಾಯ ಮಾಡಿ, ಮನೆ ನೋಡಿಕೊಳ್ಳಲು ಸರಕಾರ ರಜೆಯನ್ನು ಗಂಡನಿಗೂ ಮಂಜೂರು ಮಾಡಿದೆ.

ಗರ್ಭಪಾತ ಬೇಕೆಂದಾಗ, ಗರ್ಭ ಮೂರು ತಿಂಗಳಕ್ಕೂ ಚಿಕ್ಕದಿದ್ದರೆ ಗರ್ಭಪಾತ ಮಾಡಿ ಆಗೆಯೇ ಈ ಶಸ್ತ್ರಚಿಕಿತ್ಸೆಯನ್ನು ಮಾಡಿಬಿಡಬಹುದು. ಅಕಸ್ಮಾತ್ ಗರ್ಭ ೩ರರಿಂದ ೫ ತಿಂಗಳ ಒಳಗಡೆ ಇದ್ದರೆ ಗರ್ಭಪಾತವಾದ ನಂತರ ೨ ದಿನಕಾದು ಶಸ್ತ್ರಚಿಕಿತ್ಸೆಯನ್ನು ಮಾಡಲಾಗುವದು. ಮಗುವನ್ನು ಹೊರತೆಗೆಯುವ ಸಿಝೇರಿಯನ್ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವಾಗ ಸಹ ಈ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡರೆ ವಿಶ್ರಾಂತಿ ಸಿಕ್ಕೇ ಸಿಗುತ್ತದೆ. ಇದೂ ಇಲ್ಲದೆ ಗರ್ಭಾಶಯ ಕೆಳಜಾರಿದಾಗ ಇಲ್ಲವೆ ಮತ್ತಾವುದೋ ಕಾರಣಕ್ಕೆ ಹೊಟ್ಟೆಯನ್ನು ಕೊಯ್ದಾಗ ಈ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಬಹುದು.

ಈ ಶಸ್ತ್ರಚಿಕಿತ್ಸೆಯನ್ನು ಸುಮ್ಮನೆ ನಿದ್ರೆಯ ಚುಚ್ಚುಮದ್ದು ಹಾಗು ಶಸ್ತ್ರಚಿಕಿತ್ಸೆಯ ಜಾಗದಲ್ಲಿ ವೇದನಾರಹಿತ ಚುಚ್ಚುಮದ್ದನ್ನು ಕೊಟ್ಟು ಮಾಡಬಹುದು ಇಲ್ಲವೆ ಪೂರ್ತಿ ಅರಿವಿಳಿಕೆ ಕೊಟ್ಟು ಅಂದರೆ ಪೂರ್ತಿ ಎಚ್ಚರತಪ್ಪಿದಾಗ ಸಹ ಮಾಡಬಹುದು. ಸಂತಾನ ನಿರೋಧದ ಶಸ್ತ್ರಚಿಕಿತ್ಸೆಯನ್ನು ಯೋನಿ ಮೂಲಕ ಇಲ್ಲವೆ ಹೊಟ್ಟೆಯ ಮೇಲಿಂದ ಮಾಡಬಹುದು.

ಈ ಸಂತಾನ ನಿರೋಧ ಚಿಕಿತ್ಸೆಯನ್ನು ಒಂದು ಮಗು ಇದ್ದರೆ ಸಾಕೆನ್ನುವವರಿಗೆ, ೨-೩ ಮಕ್ಕಳು ಸಾಕೆನ್ನುವವರಿಗೆ ಮಾಡಬಹುದು. ೨-೩ ಮಕ್ಕಳಿದ್ದವರಲ್ಲಿ ಗಂಡನ ಒಪ್ಪಿಗೆ ಬೇಕೆ ಎಂದಿಲ್ಲ. ಗಂಡನ ಪರವಾಗಿ ಹೆಂಡತಿಯು ಒಪ್ಪಿಗೆ ಕೊಟ್ಟರೆ ಸಾಕು! ಹುಟ್ಟಿದ ಮಕ್ಕಳು ಚೆನ್ನಾಗಿದ್ದು ಕೊನೆಯ ಮಗುವಿಗೆ ೨ ವರ್ಷ ಇಲ್ಲವೆ ಹಿರಿಯದಕ್ಕೆ ೫ ವರ್ಷವಿದ್ದರೆ ತಾಯಂದಿರಿಗೆ ಹಾಗು ಮಕ್ಕಳಿಗೆ ಅನುಕೂಲ. ಈ ಶಸ್ತ್ರಚಿಕಿತ್ಸೆಯನ್ನು ಇನ್ನೂ ಬೇರೆ ಕಾರಣಗಳಿಗಾಗಿ ಮಾಡುತ್ತಾರೆ. ಅವು ಯಾವವೆಂದರೆ.

೧. ಅಶುದ್ಧ ತಳಿಗಾಗಿ - ಅಂದರೆ ಒಂದಾದರೊಂದರಂತೆ ಬರೀ ವಿಕೃತ ಮಕ್ಕಳು ಹುಟ್ಟುತ್ತಿದ್ದರೆ, ಅನುವಂಶಿಕ ಕೆಟ್ಟ ರೋಗಗಳನ್ನು ಮುಂದಿನ ಪೀಳಿಗೆಗೆ ಹೋಗದಂತೆ ನಿಯಂತ್ರಿಸಬೇಕೆಂದರೆ ಮಾಡುತ್ತಾರೆ.

೨. ಸಾಮಾಜಿಕ ಹಾಗು ಆರ್ಥಿಕ ಕಾರಣಗಳಿಗಾಗಿ - ಮನೆಯಲ್ಲಿ ಮಕ್ಕಳು ಬಹಳವಾದರೆ. ಆರ್ಥಿಕ ಮುಗ್ಗಟ್ಟಾಗುತ್ತಿದ್ದರೆ ಮಾಡಬಹುದು.

೩. ಕುಟುಂಬ ಯೋಜನೆ - ನಮ್ಮ ದೇಶದಲ್ಲಿ ಬಡವರಿರಲಿ, ಸಿರಿವಂತರಿರಲಿ, ದೇಶದ

ಜನಸಂಖ್ಯೆಯನ್ನು ನಿಯಂತ್ರಿಸಲು ಈ ಚಿಕಿತ್ಸೆಯನ್ನು ಮಾಡಲಾಗುತ್ತದೆ.

೪. ಆರೋಗ್ಯ - ತಾಯಿಯು ಬಸಿರಾಗುವದರಿಂದ ಅವಳ ಆರೋಗ್ಯ ಇನ್ನೂ ಕೆಟ್ಟು ಹೋಗುತ್ತಿದ್ದರೆ ಅಥವಾ ಗರ್ಭಾಶಯದ ತೊಂದರೆಯಾಗಿ ಅದು ಒಡೆದು ಹೋಗಿ ತಾಯಿಯು ಸಾಯುವ ಸಂಭವವಿದ್ದರೆ ಇರುವ ನಾನಾ ಜಾಡ್ಯಗಳು ತಾಯಿಯನ್ನು ಬಸಿರಿನಿಂದ ಸಾವಿನಾಚೆಗೆ ಒಯ್ಯುತ್ತಿದ್ದರೆ ಮಾಡಬಹುದು.

ಶಸ್ತ್ರಕ್ರಿಯೆಯ ವಿಧಾನಗಳು

ಈ ಶಸ್ತ್ರಕ್ರಿಯೆಯನ್ನು ಹಲವಾರು ವಿಧಾನಗಳಿಂದ ಮಾಡಬಹುದು. ಅವು ಯಾವವೆಂದರೆ ಹೊಟ್ಟೆಯ ಮೂಲಕ ಮಾಡುವಂತಹವು

೧. ಉದರ ದರ್ಶಕ ಯಂತ್ರ ವಿಧಾನ (ಲೆಪ್ರೋಸ್ಕೋಪಿ)

೨. ಡಿಂಬನಾಳ ಭೇದ ವಿಧಾನ (ಟ್ಯುಬೆಕ್ಟಮಿ)

೩. ಕಿರುಶಸ್ತ್ರಕ್ರಿಯೆ ವಿಧಾನ (ಮಿನಿ ಲೆಪ್ರೋಟಮಿ) ನಂತರ

ಯೋನಿ ಮೂಲಕ ಮಾಡುವ ಚಿಕಿತ್ಸೆಗಳು

೧. ಗರ್ಭದರ್ಶಕ ಯಂತ್ರದಿಂದ (ಹಿಸ್ಟೆರೋಸ್ಕೋಪಿ)

೨. ಯೋನಿ ಮೂಲಕದ ಶಸ್ತ್ರಚಿಕಿತ್ಸೆ

ಹೊಟ್ಟೆಯ ಮೇಲಿನಿಂದ ಮಾಡುವ ಶಸ್ತ್ರಚಿಕಿತ್ಸೆಗಳು ಬಹಳ ಜನಪ್ರಿಯವಾಗಿದೆ. ಅಲ್ಲದೇ ಸುರಕ್ಷಿತವಾಗಿವೆ.

ಶಸ್ತ್ರಚಿಕಿತ್ಸೆಯ ವಿಧಾನ

ಈ ವಿಧಾನದಲ್ಲಿ ಮೊದಲು ಹೆಂಗಸು ಶಸ್ತ್ರಕ್ರಿಯೆಗೆ ಅರ್ಹಳಿರುವಳೋ ಇಲ್ಲವೋ ಎಂಬುದನ್ನು ಪರೀಕ್ಷಿಸಲಾಗುವದು. ಅವಳಿಗೆ ಶ್ವಾಸಕೋಶದ ಕಾಯಿಲೆ, ಹೃದ್ರೋಗದಕಾಯಿಲೆ ಇಲ್ಲವೇ ಮೂರ್ಛೆರೋಗ ಮುಂತಾದವುಗಳು ಇಲ್ಲವೆಂಬುದನ್ನು ಖಚಿತಪಡಿಸಿಕೊಂಡ ನಂತರವೇ ಅವಳನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸುತ್ತಾರೆ. ಅವಳ ರಕ್ತಪರೀಕ್ಷೆ, ಮೂತ್ರ ಪರೀಕ್ಷೆ, ರಕ್ತದ ಒತ್ತಡ ಸರಿಯಾಗಿದ್ದರೆ ಮಾತ್ರ ಅವಳು ಚಿಕಿತ್ಸೆಗೆ ಅರ್ಹಳಾಗುತ್ತಾಳೆ. ನಂತರ ಹೊಟ್ಟೆಯ ಮೇಲೆ ಉದ್ದವಾಗಿಯೋ, ಅಡ್ಡವಾಗಿಯೋ ೨ಸೆಂ. ಕೊಯ್ದು ಹೊಟ್ಟೆಯ ಪದರುಗಳನ್ನು ಛೇದಿಸಿ ಉದರದಲ್ಲಿ ಪ್ರವೇಶಿಸಿ ಗರ್ಭಾಶಯ ಡಿಂಬನಾಳ (ಗರ್ಭನಾಳ, ಟ್ಯೂಬ)ಗಳನ್ನು ಗುರುತಿಸಿ ಒಂದು ಸ್ವಲ್ಪ ಭಾಗವನ್ನು ಮಾತ್ರವೇ. ಅಂದರೆ ಮಧ್ಯದ ಭಾಗ ಕತ್ತರಿಸಿ, ನಂತರ ಧಾರದಿಂದಾಗಲೀ ಇನ್ನೂ ಯಾವುದಾದರಿಂದ ಕಟ್ಟಿಹಾಕುತ್ತಾರೆ. ತಿರುಗಿ ಹೊಟ್ಟೆಯನ್ನು ಪದರುಪದರಾಗಿ ಹೊಲಿದು ಹಾಕುತ್ತಾರೆ. ಈ ಚಿಕಿತ್ಸೆಗೆ ಒಳಪಟ್ಟವರು ಆಸ್ಪತ್ರೆಯಲ್ಲಿ ೫-೭ದಿನ ಇರಬೇಕಾಗುತ್ತದೆ. ಚಿಕಿತ್ಸೆಯಾದ ನಂತರ ೨ ಗಂಟೆ ತಡೆದು ನೀರು, ಕಾಫಿಯನ್ನು ಕೊಡಬಹುದು. ನಂಜಾಗದಂತೆ ಅವರಿಗೆ ೫ ದಿನ ನಂಜು ನಿರೋಧಕ, ಚುಚ್ಚುಮದ್ದು, ಮಾತ್ರೆ ಕೊಡುತ್ತಾರೆ. ಹೊಲಿಗೆ ಬಿಚ್ಚಿದ ನಂತರ ಮನೆಗೆ ಹೊಗಬಹುದು.

ದೋಷ ಉಂಟಾಗುತ್ತದೆಂದು ಪ್ರತೀತಿಯಿದೆ. ಆದರೆ ದಪ್ಪಗಾಗುವದು ಈ ಕಾರಣಕ್ಕೆ ಅಲ್ಲ. ಮಕ್ಕಳನ್ನು ಹಡೆಯುವದು, ಹಾಲುಣಿಸುವುದು, ಮಕ್ಕಳಿಗಾಗಿ ರಾತ್ರಿ ನಿದ್ರೆಗೆಡುವದು ಹೀಗೆ ಎಲ್ಲವೂ ತಪ್ಪುವದರಿಂದ ಅವರು ನಿಶ್ಚಿಂತೆಯಾಗುವದರಿಂದ ದಪ್ಪಗಾಗುತ್ತಾರೆ. ಇದೂ ಅಲ್ಲದೆ ಲೈಂಗಿಕ ಸಂಬಂಧ ಮಾಡಿದರೆ ಗರ್ಭವಾಗುವದೆಂಬ ಹೆದರಿಕೆಯೂ ಇಲ್ಲದಿರುವದರಿಂದ ನಿರಾಳವಾಗಿ ಇರುವದರಿಂದಲೂ ದಪ್ಪಗಾಗಬಹುದು.



ಸ್ತ್ರೀ ಜನನಾಂಗ

ಸ್ತ್ರೀ ಜನನಾಂಗಗಳನ್ನು ಒಳಜನನಾಂಗ ಹಾಗು ಹೊರ ಜನನಾಂಗಳೆಂದು ವರ್ಗೀಕರಿಸಬಹುದು. ಒಳಜನನಾಂಗಗಳಲ್ಲಿ ಯೋನಿ, ಗರ್ಭಕಂಠ, ಗರ್ಭಾಶಯ, ಡಿಂಬನಾಳ ಹಾಗು ಅಂಡಾಂಶಗಳಿರುತ್ತವೆ. ಪುರುಷ ಬೀಜಗಳು ಯೋನಿಯಿಂದ ಗರ್ಭಕಂಠಕ್ಕೆಗರ್ಭಾಶಯದಿಂದ ಡಿಂಬನಾಳಕ್ಕೆ ಹೋಗುತ್ತವೆ. ಅಲ್ಲಿ ಅಂಡಾಶಯದಿಂದ ಉತ್ಪನ್ನವಾದ ಅಂಡವು ಡಿಂಬನಾಳಕ್ಕೆ ಬರುವಾಗ ಅದಕ್ಕೆ ಪುಂಬೀಜದ ಜೊತೆಗೆ ಸಮಾಗಮವಾಗಿ, ಕೂಡಿಕೊಂಡು ಭ್ರೂಣವಾಗುತ್ತದೆ. ಈ ಭ್ರೂಣವು ತಿರುಗಿ ಗರ್ಭಾಶಯಕ್ಕೆ ಬಂದು ಅಲ್ಲಿ ೯ ತಿಂಗಳಕಾಲ ವಾಸವಾಗುತ್ತದೆ. ಗರ್ಭಾಶಯವು ಸ್ನಾಯುಗಳಿಂದ ಮಾಡಲ್ಪಟ್ಟು ಅದು ಹೀಚಲಿಕ್ಕೆ ಬರುತ್ತದೆ.

ಈ ಶಸ್ತ್ರಚಿಕಿತ್ಸೆಯಲ್ಲಿ ಪುಂಬೀಜ ಹಾಗು ಅಂಡ ಇವೆರಡೂ ಒಂದಕ್ಕೊಂದು ಸೇರದಂತೆ ಡಿಂಬನಾಳವನ್ನು ಕತ್ತರಿಸಿ ೨ ಭಾಗವನ್ನಾಗಿ ಮಾಡಲಾಗುತ್ತದೆ. ಇದರಿಂದ ಎರಡೂ ಬೀಜ ಸೇರದೇ ಗರ್ಭಧಾರಣೆಯಾಗುವದಿಲ್ಲ.

ಒಂದು ವಾರದ ನಂತರ ಗಾಯಮಾಯವಾದಾಗ ಸ್ನಾನ ಮಾಡಬಹುದು. ಎಷ್ಟೋ ಜನ ಹೆದರಿ ಸ್ನಾನ ಮಾಡದೇ ಇರುವದರಿಂದ ಅಲ್ಲಿ ಹೊಲಸು ಕುಳಿತು ಬೆವರಿನೊಂದಿಗೆ ಬೆರೆತು ಕೀವಾಗುವ ಸಂಭವವಿದೆ. ಅವರು ಭಾರ ಹೊರುವದನ್ನೊಂದು ಬಿಟ್ಟರೆ, ದಿನ ನಿತ್ಯದ ಕೆಲಸಗಳನ್ನು ೧-೨ ವಾರ ವಿಶ್ರಾಂತಿಯ ನಂತರ ಮಾಡಬಹುದು.

ಈ ಶಸ್ತ್ರಕ್ರಿಯೆಗೆ ಒಳಪಟ್ಟವರು ದಪ್ಪಗಾಗುತ್ತಾರೆಯೆಂದೂ ನಂತರ ಮುಟ್ಟಿನ


ಕಿರುಶಸ್ತ್ರಕ್ರಿಯೆ ವಿಧಾನ (ಮಿನಿ ಲೆಪ್ರೋಟಮಿ)

ಈ ವಿಧಾನದಲ್ಲಿ ಶಸ್ತ್ರಚಿಕಿತ್ಸೆಯನ್ನು ಹೊಟ್ಟೆಯ ಮೇಲಿಂದಲೇ ಮಾಡಲಾಗುವದು. ಆದರೆ ಇಲ್ಲಿ ಸ್ತ್ರೀಯ ಮುಟ್ಟು ಮುಗಿದ ನಂತರ ಮಾಡಲಾಗುವದು. ಅಂದರೆ ಮುಟ್ಟು ಮುಗಿದ ನಂತರ ಅವಳು ಗರ್ಭವತಿಯಿಲ್ಲವೆಂಬುದು ಖಚಿತವಾಗುತ್ತದೆ. ಹೆರಿಗೆಯಾದ ನಂತರ ಈ ಚಿಕಿತ್ಸೆಯನ್ನು ಮಾಡಲಾಗುವುದಿಲ್ಲ. ಇಲ್ಲಿ ಮೇಲೆ

ಹೇಳಿ ಶಸ್ತ್ರಚಿಕಿತ್ಸೆಯ ತರಹವೇ ನಿದ್ದೆಯ ಚುಚ್ಚುಮದ್ದು ಹಾಗು ಮರಗಟ್ಟುವ ಚುಚ್ಚುಮದ್ದು ಹೊಟ್ಟೆಗೆ ಕೊಟ್ಟು ಸಮಾರು....ನಷ್ಟು ಹೊಟ್ಟೆಯನ್ನು ಕಿಬ್ಬೊಟ್ಟೆಯಲ್ಲಿ ಕೊಯ್ಯುತ್ತಾರೆ. ನಂತರ ಯೋನಿ ಮೂಲಕ ಉಪಕರಣವನ್ನು ಹಾಕಿ ಡಿಂಬನಾಳಗಳು ಆ ಸಣ್ಣ ರಂಧ್ರದಲ್ಲಿ ಬರುವಂತೆ ಮಾಡುತ್ತಾರೆ. ಉಳಿದೆಲ್ಲ ಪದ್ಧತಿ ಮೇಲೆ ಹೇಳಿದಂತೆಯೇ ಇದ್ದರೂ ಸ್ತ್ರೀಯನ್ನು ಆಸ್ಪತ್ರೆಯಿಂದ ಬೇಗ ಬಿಡುಗಡೆ ಮಾಡುತ್ತಾರೆ. ಇದ್ಕಕೆ ಸಣ್ಣಗಾಯ ಮಾಡುವವದರಿಂದ ಇದಕ್ಕೆ ಮಿನಿ ಲೆಪ್ರೊಟಮಿ ಎನ್ನುತ್ತಾರೆ.

ಯೋನಿ ಮೂಲಕ ಶಸ್ತ್ರಕ್ರಿಯೆ

ಇದಕ್ಕೆ ಮಾತ್ರ ಅರಿವಿಳಿಕೆ ಜಾಸ್ತಿ ಬೇಕಾಗುತ್ತದೆ. ಯೋನಿಯಲ್ಲಿ ರಂಧ್ರ ಮಾಡಿ ಅಲ್ಲಿಂದ ಡಿಂಬನಾಳಗಳನ್ನು ಹಿಡಿದು ಶಸ್ತ್ರ ಕ್ರಿಯೆಯನ್ನು ಮಾಡಲಾಗುವದು. ಹೊಟ್ಟೆಯ ಮೇಲೆ ಗಾಯವಿರುವದಿಲ್ಲ. ಆದರೆ ಕೆಲಕಾಲ ಹೆಂಗಸರು ಲೈಂಗಿಕ ಸಂಬಂಧದಿಂದ ದೂರ ವಿರಬೇಕಾಗುತ್ತದೆ. ಪರಿಣಿತರ ಅಗತ್ಯತೆಕೂಡ ವಿದ್ದು, ಈ ಶಸ್ತ್ರಕ್ರಿಯೆಯೂ ಸ್ವಲ್ಪ ಕಠಿಣವಿರುವದರಿಂದ ಅಷ್ಟೊಂದು ಜನಪ್ರಿಯವಾಗಿರುವದಿಲ್ಲ.



ದೇವದಾಸಿ

ದೇವರ ಹೆಸರಿನಲ್ಲಿ
ಬಿಟ್ಟ ಹೆಣ್ಣಿಗೊಂದು ಹೆಸರು
ಸ್ವಾರ್ಥಿ ಗಂಡಸರು
ಹೆಣ್ಣು ಕುಲಕ್ಕೆ ಬಳಿದ ಧರ್ಮದ ಕೆಸರು
-ಮಹಾಲಿಂಗ ಯಾಳಗಿ

ಗರ್ಭದರ್ಶಕ ಯಂತ್ರ

ಈ ಯಂತ್ರದ ಸಹಾಯದಿಂದ ಮಾಡುವ ಹೊಸ ವಿಧಾನ ಬಂದಿದೆಯಾದರೂ ಇದಕ್ಕೆ ಖರ್ಚು ಹೆಚ್ಚು ಹಾಗು ಯಶಸ್ಸು ಕಡಿಮೆ ಇರುವುದು. ಇದರಲ್ಲಿ ದುರ್ಬೀನಿನಿಂದ ಡಿಂಬನಾಳಗಳನ್ನು ನೋಡಿ ಅವುಗಳನ್ನು ಬಾಯಿಯನ್ನು ಮುಚ್ಚಲಾಗುವದು. ಈ ತರಹದ ಚಿಕಿತ್ಸೆ ಸಹ ಜನಪ್ರಿಯವಿರುವದಿಲ್ಲ.

ಉದರ ದರ್ಶಕ ಶಸ್ತ್ರಚಿಕಿತ್ಸೆ

ದುರ್ಬೀನಿನಿಂದ ಮಾಡುವ ಶಸ್ತ್ರಚಿಕಿತ್ಸೆಯು ಬಹಳ ಜನಪ್ರಿಯವಾಗಿದೆ. ಈ ಚಿಕಿತ್ಸೆಯನ್ನು ವೈದ್ಯರೇ ಹಳ್ಳಿ-ಹಳ್ಳಿಗೆ ಹೋಗಿ. ಶಾಲೆ ಯಲ್ಲಿಯೋ, ಸಣ್ಣ-ಸಣ್ಣ ಆಸ್ಪತ್ರೆಯಲ್ಲಿಯೋ ಮಾಡಲಾಗುತ್ತಿತ್ತು. ಉಪಕರಣಗಳು ಬಹಳ ತುಟ್ಟಿಯಾದರೂ ಮಾಡಲು ಮಾತ್ರ ಕೆಲವೇ ನಿಮಿಷಗಳು!

ಇದರಲ್ಲಿ ಸಹ ನಿದ್ದೆಯ ಚುಚ್ಚುಮದ್ದು ಕೊಟ್ಟು, ಮರಗಟ್ಟುವ ಚುಚ್ಚುಮದ್ದನ್ನು ಕೊಟ್ಟು ನಂತರ ಹೊಕ್ಕಳ ಹತ್ತಿರ ಸಣ್ಣ ರಂಧ್ರವನ್ನು ಮಾಡುತ್ತಾರೆ. ನಂತರ ಹೊಟ್ಟೆಯಲ್ಲಿ ಗಾಳಿಯನ್ನು ತುಂಬಿ ಉಬ್ಬಿಸಿ, ತೂತಿನ ಮೂಲಕ ದುರ್ಬೀನನ್ನು ತೂರಿಸಿ ನೋಡುತ್ತಾರೆ. ನಂತರ ಎರಡೂ ಡಿಂಬನಾಳಗಳನ್ನು ಗುರುತಿಸಿ ಅವಕ್ಕೆ ರಬ್ಬರು ತರಹ ೨ ಬ್ಯಾಂಡುಗಳನ್ನು ಹಾಕುತ್ತಾರೆ. ನಂತರ ಈ ಬ್ಯಾಂಡುಗಳು ಬಿಗಿಯಾಗಿ ಕೂಡವದರಿಂದ ಸ್ವಲ್ಪ ಭಾಗ ಮಾತ್ರ ಅಂದರೆ ಡಿಂಬನಾಳದ ಸ್ವಲ್ಪಭಾಗಕ್ಕೆ ರಕ್ತಸಂಚಾರವಿಲ್ಲದೆ ಸಾವಕಾಶವಾಗಿ ಒಣಗಿ ಹೋಗುತ್ತದೆ. ಉಳಿದ ಶಸ್ತ್ರಕ್ರಿಯೆಗಳಲ್ಲಂತೆ ಇಲ್ಲಿ ಡಿಂಬನಾಳಗಳನ್ನು ಕತ್ತರಿಸದಿದ್ದರೂ ಅದು ಸಾವಕಾಶವಾಗಿ ನಿಷ್ಕ್ರಿಯವಾಗುತ್ತದೆ. ಈ ಶಸ್ತ್ರ ಕ್ರಿಯೆಯನ್ನು ಮಾಡಿಸಿಕೊಂಡವರಲ್ಲಿ ಗಾಯ ಕಾಣುವದೇಯಿಲ್ಲ. ಹೊಲಿಗೆ ಬಿಚ್ಚಿಸಿಕೊಳ್ಳುವ ಗೋಜಿಲ್ಲ. ಆಸ್ಪತ್ರೆಯಲ್ಲಿ ಇರಬೇಕಾಗಿಲ್ಲ. ಶಸ್ತ್ರಕ್ರಿಯೆಯನ್ನು ಮಾಡಿಸಿಕೊಂಡವರಲ್ಲಿ ಗಾಯ ಕಾಣುವದೇಯಿಲ್ಲ. ಶಸ್ತ್ರಕ್ರಿಯೆಗಂತೂ ತೀರ ಕಡಿಮೆ ಅಂದರೆ ೫ ನಿಮಿಷಗಳು!! ಮನೆಗೆ ಹೋದ ನಂತರ ಕುಡಿಯಲು, ತಿನ್ನಲು ನಿರ್ಭಂಧಗಳಿಲ್ಲ.

ಯಾವುದೇ ತರಹದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೂ ಪೂರ್ತಿ ಯಶಸ್ಸು ದೊರತೇ ದೊರೆಯುತ್ತದೆ. ಅಪಯಶಸ್ಸು ಅಂದರೆ ತಿರುಗಿ ಗರ್ಭಧಾರಣೆಯಾಗುವದು. (೧:೧೦೦೦) ಸಾವಿರಕ್ಕೊಂದು. ಎಷ್ಟೋ ಜನ ತಾವು ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡರೂ ಗರ್ಭವಾಯಿತು ಅನ್ನುವವರಿದ್ದಾರೆ. ಅದಕ್ಕೆ ಕಾರಣಗಳಾವವೆಂದರೆ

೧. ಬಸಿರು ೧ ಅಥವಾ ಒಂದೂವರೆ ತಿಂಗಳಿರುವಾಗ ಗೊತ್ತಿಲ್ಲದೆಯೇ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರು.


೨. ಮಗುವಿಗೆ ಹಾಲುಣಿಸುವಾಗ ಮುಟ್ಟಾಗದೇ ಇರುವದರಿಂದ ತಮಗೆ ಗರ್ಭಕಟ್ಟಿಲ್ಲವೆಂದು ತಿಳಿದುಕೊಂಡು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರು ಸಾಮಾನ್ಯವಾಗಿ ತಾಯಿ ಹಾಲುಣಿಸುವಾಗ ಮುಟ್ಟುಬಾರದೇಯಿರುವದು ಸಹಜ. ಆದರೆ ಮೂರು ತಿಂಗಳು ಕಳೆದ ನಂತರ ಗರ್ಭಕಟ್ಟಬಹುದು.

೩. ಉದರ ದರ್ಶಕ ಚಿಕಿತ್ಸೆಯಲ್ಲಿ ಹಾಕಿದ ಬ್ಯಾಂಡುಗಳು ಸರಿಯಾಗಿ ಕೆಲಸ ಮಾಡದೇ ತೀರ ಹೀಚಿ ಜಾರಿದ್ದರೆ, ಇಲ್ಲವೆ ಒಡೆದಿದ್ದರೆ

೪. ಕೆಲವು ಸಲ ನೈಸರ್ಗಿಕವಾಗಿಯೇ ಕತ್ತರಿಸಿ, ಕಟ್ಟಿದ ಟ್ಯೂಬುಗಳಲ್ಲಿ ತೂತಾಗಿದ್ದರೆ.

೫. ಡಿಂಬನಾಳ ಕೆಲವು ಸಲ ಶಸ್ತ್ರಚಿಕಿತ್ಸೆ ಮಾಡುವಾಗ ಸಿಗದಿದ್ದರೆ.

ಯಾವುದೇ ತರಹದ ಚಿಕಿತ್ಸೆಯನ್ನು ಮಾಡಿಸಿಕೊಂಡರೂ ಅದು ಕಾಯಂ ಆಗಿ ಮಕ್ಕಳಾಗುವದಿಲ್ಲ. ತೀರ ಕ್ವಚಿತ ಸಂದರ್ಭಗಳಲ್ಲಿ ಅಂದರೆ ಹುಟ್ಟಿದ ಮಕ್ಕಳು ಅಕಸ್ಮಾತ್ತಾಗಿ ಸತ್ತು ಹೋದರೆ, ಅವನ್ನು ತಿರುಗಿ ಜೋಡಿಸುವ ವಿಧಾನವಿದೆಯಾದರೂ ಅದರಿಂದ ತಿರುಗಿ ಮಕ್ಕಳು ಆಗೇ ಆಗುತ್ತದೆಂದು ಹೇಳಲಾಗದು. ಕಾರಣ ಹುಟ್ಟಿದ ಮಕ್ಕಳನ್ನು ತೀರ ಕಾಳಜಿಯಿಂದ ಮುತುವರ್ಜಿ ವಹಿಸಿ ಬೆಳೆಸುವದು ವಿಹಿತ.



ಗಂಡ ಹೆಂಡ್ತಿ ಇಬ್ಬರೂ ನೌಕರಿಗೆ ಹೋದ್ರೆ ಸಂಸಾರದಲ್ಲಿ ಸುಖ ಇರುವುದಿಲ್ಲಾದರೆ ನೀವು ನೌಕರಿ ಬಿಟ್ಟು ಅಡುಗೆ ಕೆಲಸ ನೋಡಿಕೊಳ್ರಿ.....!

ಗರ್ಭಿಣಿಯರ ಆಹಾರ

ಸ್ತ್ರೀಯು ಬಸಿರಿರುವಾಗ ಏನೇನು ತಿನ್ನಬೇಕು. ಯಾವುದನ್ನು ತಿನ್ನಬಾರದು ಎಂಬುದು ಪ್ರತಿಯೊಬ್ಬ ಗರ್ಭಿಣಿಗೂ ಹಾಗೂ ಅವರ ಜೊತೆಯಿರುವ ಹಿತೈಷಿಗಳಿಗೂ ಕಾಡುವ ಪ್ರಶ್ನೆ. ಜಾನಪದ ಗೀತೆಗಳಲ್ಲಿಯೂ ಕೂಡ ''ಒಂದು ತಿಂಗಳ ಬಸಿರು, ಕೆನೆ ಕೆನೆ ಮೊಸರು' ಎಂಬ ಹಾಡಿದೆ. ಬಸಿರಿರುವಾಗ ಅಪರೂಪವಾಗಿ ಮಾಡಿದ ತಿಂಡಿಗಳನ್ನು ತಿನ್ನ ಬಯಸಬಹುದು, ಉಪ್ಪಿನಕಾಯಿ, ಕಚ್ಚಾ ಪೇರಲಹಣ್ಣು, ಮಾವಿನ ಕಾಯಿ, ಹುಣಿಸೇ ಹಣ್ಣಿನ ತಿರುಳು ಮುಂತಾದವುಗಳನ್ನು ತಿನ್ನಬಯಸಬಹುದು. ಇದೆಲ್ಲ ಮೊದಲ ತ್ರೈಮಾಸಿಕದ ಆಸೆಗಳು. ನಂತರ ೨ನೆಯ ಹಾಗು ೩ನೆಯ ತ್ರೈಮಾಸಿಕದಲ್ಲಿ ತಾಯಿಯ ತೂಕ ಏರಲು ತೊಡಗುತ್ತದೆ. ಈ ವೇಳೆಯಲ್ಲಿ ಅವಳು ಹೆಚ್ಚು-ಹೆಚ್ಚು ಪೌಷ್ಟಿಕಾಂಶಗಳಿಂದ ಕೂಡಿದ ಆಹಾರವನ್ನು ತಿನ್ನಬೇಕಾಗುತ್ತದೆ. ಮೊದಲ ತ್ರೈಮಾಸಿಕದ ತೊಂದರೆಗಳಾದ ವಾಂತಿ, ಹೊಟ್ಟೆಯಲ್ಲಿನ ಮಳ ಮಳ, ಸಂಕಟ ಕಡಿಮೆಯಾಗಿ, ಉಂಡ ಅನ್ನ ವಾಂತಿಯಾಗದೇ ಹೊಟ್ಟೆಯಲ್ಲಿಯೇ ಉಳಿಯುತ್ತದೆ.

ಸ್ತ್ರೀಯು ಬಸಿರಿರುವಾಗ ಏನೇನು ತಿನ್ನಬೇಕು. ಯಾವುದನ್ನು ತಿನ್ನಬಾರದು ಎಂಬುದು ಪ್ರತಿಯೊಬ್ಬ ಗರ್ಭಿಣಿಗೂ ಅವರ ಹಿತೈಷಿಗಳಿಗೂ ಕಾಡುವ ಪ್ರಶ್ನೆ.

ಬಸಿರು ಇರುವಾಗ ಹೊಟ್ಟೆಯಲ್ಲಿ ಮತ್ತೊಂದು ಜೀವ ಬೆಳೆಯುತ್ತಿರುವದರಿಂದ ಅವರು ಇಬ್ಬರ ಊಟ ಮಾಡಬೇಕೆನ್ನುತ್ತಾರೆ. ಮಗುವು ಬೆಳೆದಂತೆ ಗರ್ಭಾಶಯ ಮೇಲೆ ಮೇಲೆ ಬಂದು ಅನ್ನಾಂಗಗಳನ್ನು ಅಂದರೆ ಜಠರವನ್ನು ಮೇಲೆ ಒತ್ತುವದರಿಂದ ತಿಂದದ್ದು ಎದೆಯಲ್ಲಿಯೇ ಕುಳಿತಹಾಗೆ ಆಗಿ ಕೆಲವರು ಉಂಡ ಊಟ ಆರೋಗ್ಯವಾಗದು ಎಂದು ತಿಳಿಯುತ್ತಾರೆ. ಇಂಥ ವೇಳೆಯಲ್ಲಿ ಅವರು ದಿನಕ್ಕೆ ಎಷ್ಟು ಊಟ ಮಾಡಬೇಕೋ ಅದನ್ನು ಸಣ್ಣ ಸಣ್ಣ ಪ್ರಮಾಣದಲ್ಲಿ ವಿಭಜಿಸಿ, ಸ್ವಲ್ಪ-ಸ್ವಲ್ಪ ತಿನ್ನಬೇಕು. ಅಂದರೆ ಊಟದಲ್ಲಿ ೨ ಚಪಾತಿ, ಅನ್ನ ಹೀಗೆ ತಿನ್ನಬೇಕೆಂದು ಮಾಡಿದ್ದರೆ ೧ ಗಂಟೆಗೆ ಎಲ್ಲವನ್ನೂ ಊಟ ಮಾಡುವದರ ಬದಲು ೧೦ ಗಂಟೆಗೆ ೨ ಚಪಾತಿ ೧೨ ಗಂಟೆಗೆ ಅನ್ನ ನಂತರ ೨ ಗಂಟೆಗೆ ಹಣ್ಣು ಈ ತರಹ ತಿಂದರೆ ಅವರಿಗೆ ಆಹಾರ ಎದೆಯಲ್ಲಿ ಕುಳಿತ ಹಾಗೆ ಅನಿಸುವುದಿಲ್ಲ. ಸಾಮಾನ್ಯವಾಗಿ ಗರ್ಭಿಣಿಯರು ಹೆಚ್ಚಿನ ಖಾರದ ಪದಾರ್ಥಗಳು, ಹೆಚ್ಚಿನ ಉಪ್ಪು ಮುಂತಾದವುಗಳನ್ನು ತಿನ್ನಬಾರದು. ಉಪ್ಪಿನ ಪ್ರಮಾಣ ಹೆಚ್ಚಿದಂತೆ ರಕ್ತದ ಒತ್ತಡ ಹೆಚ್ಚಾಗುತ್ತದೆ. ಖಾರದ ಪದಾರ್ಥಗಳಿಂದ ವಾಂತಿಯಾಗುವ ಸಂಭವ ಹೆಚ್ಚು. ಕಚ್ಚಾ ಪಪ್ಪಾಯಿ (ಪರಂಗಿ ಹಣ್ಣು) ತಿನ್ನಬಾರದು. ಬಲಿತ, ಸಿಹಿಯಾದ ಪಪ್ಪಾಯಿ ಹಣ್ಣು ತಿಂದರೆ ಅಂದರಿಂದ ಏನೂ ಭಾದಕವಿಲ್ಲ. ಉತ್ತರ ಭಾರತದಲ್ಲಿ ಯಾರಾದರೂ ಒಬ್ಬ ಹೆಂಗಸು ಗರ್ಭವತಿಯಿದ್ದಾಳೆಂದು ತಿಳಿದರೆ ಅವಳಿಗೆ, ಬೇಕೂಂತಲೆ ಪಪ್ಪಾಯಿ ಹಣ್ಣನ್ನು ತಿನ್ನಲು ಕೊಡುತ್ತಾರೆ. ಕಚ್ಚಾ ಪಪ್ಪಾಯಿಯಿಂದ ಗರ್ಭಸ್ರಾವವಾಗುವ ಸಂಭವವಿದೆ.

ಬಸಿರು ಹೆಂಗಸು ಎಲ್ಲ ತರಹದ ತರಕಾರಿ, ಹಣ್ಣು, ಹಾಲು ಮುಂತಾದವುಗಳನ್ನು ತೆಗೆದುಕೊಳ್ಳಬೇಕು. ಇದರಿಂದ ಹೊಟ್ಟೆಯಲ್ಲಿ ಬೆಳೆಯುವ ಮಗುವಿಗೆ ಚೆನ್ನಾಗಿ ಆಗುತ್ತದೆ. ಮಗುವು ಒಂದು ಪೂರ್ತಿ ಪರಾವಲಂಬಿ ಜೀವಿ. ತಾಯಿಯ ದೇಹದಲ್ಲಿ ತನಗೆ ಬೇಕಾದ ಲವಣ, ಜೀವಸತ್ವ, ಕೊಬ್ಬು, ಶರ್ಕರಪಿಷ್ಟ, ಸಸಾರಜನಕ ಮುಂತಾದವುಗಳನ್ನು ಹೀರಿಕೊಂಡು ಬೆಳೆಯುತ್ತದೆ. ಇದರಿಂದ ತಾಯಿಯು ಸರಿಯಾಗಿ ಆಹಾರ ಸೇವಿಸದಿದ್ದರೆ, ಅವಳು ಸವೆಯುತ್ತಾಳೆ ಶಕ್ತಿಯಿಲ್ಲದೆ ಸೊರಗುತ್ತಾಳೆ. ಹೆರಿಗೆಯಲ್ಲಿ ರಕ್ತ ಸ್ರಾವವಾದರೆ ತಡೆದುಕೊಳ್ಳುವ ಶಕ್ತಿಯಿರುವದಿಲ್ಲ. ಕೆಲವು ಜನರು ''ಗರ್ಭಸ್ಥ ಸ್ತ್ರೀಯು ಬಹಳ ತಿನ್ನಬಾರದು ಏಕೆಂದರೆ ಅವಳು ಚೆನ್ನಾಗಿ ತಿಂದರೆ, ಹೊಟ್ಟೆಯಲ್ಲಿಯ ಮಗುವು ಚೆನ್ನಾಗಿ ಬೆಳೆದು ಅವಳಿಗೆ ಹೆರಿಗೆಯಲ್ಲಿ ತ್ರಾಸವಾಗುತ್ತದೆ. ಸಾಮಾನ್ಯ ಹೆರಿಗೆಯಾಗದೇ ಮಗುವು ಚೆನ್ನಾಗಿ ಬೆಳೆಯುವದರಿಂದ ಸಿಝೇರಿಯನ ಶಸ್ತ್ರಚಿಕಿತ್ಸೆಯಾಗುತ್ತದೆ'' ಎಂಬ ಮೂಢ ನಂಬಿಕೆಯಿದೆ. ತಾಯಿ ತಿನ್ನಲಿ ಬಿಡಲಿ ಮಗುವು ತಾಯಿಯ ದೇಹದಿಂದ ರಕ್ತ ಹೀರಿ ಚೆನ್ನಾಗಿ ಬೆಳೆದೇ ಬೆಳೆಯುತ್ತದೆ.

ಗರ್ಭಸ್ಥ ಸ್ತ್ರೀಯ ಆಹಾರವು ಸಮತೋಲವಾಗಿದ್ದು, ಅದು ಪೌಷ್ಟಿಕಾಂಶಗಳಿಂದ ಕೂಡಿರಬೇಕು. ಎಲ್ಲ ತರಹದ ಹಣ್ಣು, ತರಕಾರಿ ಊಟದಲ್ಲಿರಬೇಕು. ಹಾಲನ್ನಂತೂ ಅವರು ತೆಗೆದುಕೊಳ್ಳಬೇಕು. ಹಾಲಿನಲ್ಲಿ ಕ್ಯಾಲ್ಸಿಯಂ ಲವಣವಿದ್ದು, ಅದರಲ್ಲಿ ಹಲವಾರು ಜೀವಸತ್ವಗಳು (ವಿಟಮಿನ್‌ಗಳು) ಇರುತ್ತವೆ. ಬಸಿರಿರುವಾಗ ಬಸಿರು ಹೆಣ್ಣು ಮಕ್ಕಳಿಗೆ 'ಆರತಿ' 'ಕಳ್ಳ ಕುಬುಸ' ನಂತರ 'ಶ್ರೀಮಂತ' ಎಂದು ಮಾಡುತ್ತಾರೆ. ಕಳ್ಳ ಕುಬುಸವೆಂದರೆ ತೀರ ಸಣ್ಣ ಗರ್ಭವಿರುವಾಗ ತಾಯಿಯ ಮನೆಯವರು ಹೊರಗಿನ ಜನರನ್ನು ಕರೆಯದೇ, ತಮ್ಮ ಮಗಳಿಗೆ ಒಂದು ಕುಬುಸದ ಬುಟ್ಟಿಯನ್ನು ಕೊಟ್ಟು ಊಟ ಹಾಕುತ್ತಾರೆ. 'ಆರತಿ' ಇಲ್ಲವೆ ಶ್ರೀಮಂತವೆಂದರೆ ನಂತರ ೭-೮ ತಿಂಗಳಲ್ಲಿ ಹತ್ತಾರು ಜನರನ್ನು ಕರೆದು ಬಸಿರು ಹೆಂಗಸಿಗೆ ಆರತಿ ಮಾಡಿ ಸೀರೆ, ಬಾಗಣ ಕೊಟ್ಟು ಊಟ ಹಾಕುತ್ತಾರೆ. ನಂತರ ಅಕ್ಕಪಕ್ಕದ ಮನೆಯವರು ಅವಳನ್ನು ಊಟಕ್ಕೆ ಕರೆದು ನಂತರ ಉಡುಗೊರೆಯನ್ನು ಕೊಡುತ್ತಾರೆ. ಈ ಕುಬುಸದಲ್ಲಿಯೇ ಹಲವಾರು ತರಹದ ಕುಬುಸಗಳಿವೆ. ಅವು ಯಾವವೆಂದರೆ 'ಬೆಳದಿಂಗಳ ಕುಬುಸ', 'ವನದ ಕುಬುಸ' ಮುಂತಾದವುಗಳು. ಬೆಳದಿಂಗಳ ಕುಬುಸದಲ್ಲಿ ಬಿಳಿಯ ಬಣ್ಣದ ಉಡುಗೊರೆಕೊಟ್ಟು, ಅನ್ನ, ಪಾಯಸ, ಮಂಡಿಗೆ ಹೀಗೆ ಬಿಳಿಯ ವರ್ಣದ ಅಡಿಗೆಯನ್ನು ಮಾಡುತ್ತಾರೆ. ಈ ಪದ್ಧತಿ ಕೇವಲ ನಮ್ಮ ದೇಶಕ್ಕೆ ಸೀಮಿತವಾಗದೇ ಪಾಶ್ಚಾತ್ಯ ದೇಶಗಳಲ್ಲಿಯೂ ಇದೆ. ಇದಕ್ಕೆ ಅವರು 'ಬೇಬಿ ಶಾವರ' ಅನ್ನುತ್ತಾರೆ. ಈ ಪದ್ಧತಿ ತುಂಬ ಒಳ್ಳೆಯದು. ಇದರಿಂದ ಒಬ್ಬರ ಮನೆಯಲ್ಲಿ ಊಟದಲ್ಲಿ ಒಂದು ಜೀವ ಸತ್ವದ ಕೊರತೆಯಿದ್ದರೆ, ಇನ್ನೊಬ್ಬರ ಮನೆಯಲ್ಲಿ ಅದು ಸಿಗುತ್ತದೆ.

೧೯೪೪-೧೯೪೫ರಲ್ಲಿ ನೆದರಲ್ಯಾಂಡದಲ್ಲಿ ಬರಗಾಲವಿದ್ದಾಗ ಮಕ್ಕಳ ತೂಕ ಕಾಲು ಕೆ.ಜಿ.ಯಷ್ಟು ಕಡಿಮೆಯಾದದ್ದನ್ನು ಗಮನಿಸಿದರು. ಹುಟ್ಟಿದ ಮಗುವಿನ ಮಿದುಳಿನಲ್ಲಿ ಕೆಲವು ಬದಲಾವಣೆಯನ್ನು ಕೆಲವು ಪ್ರಾಣಿಗಳಿಗೆ ಕಡಿಮೆ ಊಟ ಹಾಕಿದಾಗ, ಹುಟ್ಟಿದ್ದನ್ನು ಪ್ರಯೋಗಾಲಯದಲ್ಲಿ ಗಮನಿಸಿದ್ದಾರೆ. ಫೋಲಿಕ ಆಸೈಡದ ಕೊರತೆಯಿಂದ ಗರ್ಭಸ್ರಾವ, ಊನ ಅಂಗದ

ಮಕ್ಕಳು ಹಾಗು ಅಕಾಲ ಹೆರಿಗೆಯಾಗುವದನ್ನು ಕಂಡುಹಿಡಿದಿದ್ದಾರೆ. ಇಷ್ಟೇ ಅಲ್ಲ ಅತಿ ಹೆಚ್ಚಿನ ಪ್ರಮಾಣದ ಮಾತ್ರೆಗಳು ಅಂದರೆ ಸತ್ವಯುತ ಮಾತ್ರೆಗಳಾದ ಖನಿಜಲವಣ, ಜೀವಸತ್ವಗಳುಳ್ಳವುಗಳೂ ಸಹ ಈ ಆಪಾದನೆಗೆ ಹೊರತಾಗಿಲ್ಲ. ಕಾರಣ ಮೊದಲ ತ್ರೈಮಾಸಿಕದಲ್ಲಿಯೂ ಸಹ ಯಾವ ತರಹದ ಟಾನಿಕ್ಕುಗಳನ್ನು ಸಹ ವೈದ್ಯರ ಅನುಮತಿಯಿಲ್ಲದೇ ತೆಗೆದುಕೊಳ್ಳಬಾರದು.

ಬಸಿರು ಇರುವಾಗ ಮೊದಲ ತ್ರೈಮಾಸಿಕದಲ್ಲಿ ವಾಂತಿಯ ಅವಾಂತರದಿಂದ ಬಹಳವಾದರೆ ೧ ಕೆ.ಜಿ. ತೂಕ ಹೆಚ್ಚಾದರೂ ನಂತರ ೨ನೆಯ ಹಾಗು ೩ನೆಯ ತ್ರೈಮಾಸಿಕದಲ್ಲಿ ಒಟ್ಟು ೯-೧೦ ಕೆ.ಜಿ.ಯಷ್ಟು ತೂಕ ಹೆಚ್ಚಾಗಬೇಕು. ಮಗುವು, ಗರ್ಭದ್ರವ, ಸ್ತನ, ಹಿಗ್ಗಿದ ರಕ್ತ, ಗರ್ಭಾಶಯ ಹಾಗು ಮಾಸು ಇವೆಲ್ಲವುಗಳ ತೂಕವೇ ಸುಮಾರು ೯ ಕೆ.ಜಿ. ಯಷ್ಟಾಗುತ್ತದೆ ಉಳಿದದ್ದು ತೂಕ ಕೊಬ್ಬಿನ ಪ್ರಮಾಣದಲ್ಲಿ ಹೆಚ್ಚಾದಂತೆ ಅದೂ ಹೆಚ್ಚಾಗುತ್ತದೆ.

ಬಸಿರಿಲ್ಲದ ಹೆಂಗಸಿಗೆ ಪ್ರತಿ ದಿನಕ್ಕೆ ೨೨೦೦ ಕಿಲೋ. ಕ್ಯಾಲರಿಗಳಷ್ಟು ಬೇಕಾದರೆ, ಬಸಿರಿರುವಾಗ ೨೫೦೦ ಕಿಲೋ ಕ್ಯಾಲರೀಸ್ ಬೇಕಾದರೆ, ಹಾಲುಣಿಸುವಾಗ ೨೬೦೦ ಕಿಲೋ ಕ್ಯಾಲರಿಗಳು ಬೇಕಾಗುತ್ತವೆ.

ಸಸಾರಜನಕ ೧ ಗ್ರಾಂ ಪ್ರತಿ ಕೆ.ಜಿ. ದೇಹದ ತೂಕಕ್ಕೆ ಬೇಕಾಗುತ್ತದೆ. ಇದನ್ನು ಹಾಲು, ಮಾಂಸ, ಮೀನು ಇವುಗಳಿಂದ ಪಡೆಯಬಹುದು. ಮಾಂಸವನ್ನು ತಿನ್ನಲಾರದವರು ಉದ್ದು, ಬೇಳೆ, ಅವರೆಗಳಲ್ಲಿ ಪಡೆಯಬಹುದು ಬಸಿರು ಇರುವಾಗ ದಿನಾಲು ೨ ದೊಡ್ಡ ಗ್ಲಾಸಿನ ತುಂಬ ಹಾಲು ಕುಡಿದರೆ ಒಳ್ಳೆಯದು.

ಲವಣಗಳು : ಕ್ಯಾಲ್ಸಿಯಂ ಕಬ್ಬಿಣ, ಸತುವು, ಮ್ಯಾಗ್ನಿಷಿಯಂ, ಆಯೋಡಿನ ಪೊಸ್ಪರಸ್ಸು ಮುಂತಾದ ಖನಿಜಗಳನ್ನು ಸಣ್ಣ ಪ್ರಮಾಣದಲ್ಲಿ ಬೇಕಾಗುತ್ತದೆ. ಇವುಗಳಿಂದ ರಕ್ತವೃದ್ಧಿ, ಮೂಳೆಯ ಗಟ್ಟಿತನ, ಗ್ರಂಥಿಗಳ ಚಟುವಟಿಕೆ ಉಪಯೋಗವಾಗುತ್ತದೆ. ಉದಾಹರಣೆಗೆ ಕಬ್ಬಿಣ ದಂಶದಿಂದ ರಕ್ತ ವೃದ್ಧಿಯಾಗುತ್ತದೆ. ಈ ಕಬ್ಬಿಣದಂಶ ರಾಗಿ, ಖರ್ಜೂರ, ಕೊತ್ತುಂಬರಿ, ಸ್ಪೇನ್ಯಾಚ್, ತೊಪ್ಪಲ ಪಲ್ಯೆ (ಸೊಪ್ಪು) ಕೆಂಪು ಮಾಂಸ, ಬೆಲ್ಲ ಮುಂತಾದವುಗಳಲ್ಲಿ ಇರುತ್ತದೆ. ಪ್ರತಿ ನಿತ್ಯದ ಆಹಾರದಲ್ಲಿ ೩೦ ಮೆ.ಗ್ಯಾಲರಿ ಇರಬೇಕಾಗುತ್ತದೆ. ನಮ್ಮ ಊಟದಲ್ಲಿ ಇದು ಅಷ್ಟು ಗಣನೀಯವಾಗಿ ಇರದ್ದರಿಂದ ಕಬ್ಬಿಣದಂಶದ ಮಾತ್ರೆಯನ್ನು ತೆಗೆದುಕೊಳ್ಳಲೇಬೇಕು.

ಕ್ಯಾಲ್ಸಿಯಂ ಲವಣ : ದಿನಕ್ಕೆ ೧ ರಿಂದ ೧.೨ ಗ್ರಾಂ ಬೇಕಾಗುತ್ತದೆ. ಇದರಿಂದ ಮಗುವಿನ ಮೂಳೆಯ ಬೆಳವಣಿಗೆಗೆ, ತಾಯಿಯ ಹಾಲಿಗೆ ಹಾಗು ತಾಯಿಯ ಮೂಳೆಗೂ ಉಪಯೋಗವಾಗುತ್ತದೆ. ಕ್ಯಾಲ್ಸಿಯಂ ಹಾಲು ಹಾಗು ಹಾಲಿನಿಂದ ಉತ್ಪತ್ತಿಯಾದ ಪದಾರ್ಥಗಳಲ್ಲಿ ಇರುತ್ತದೆ. ಒಟ್ಟು ೩೦ ಗ್ರಾಂ ನಷ್ಟು ಕ್ಯಾಲ್ಸಿಯಂ ಮಗುವಿನಲ್ಲಿರುತ್ತದೆ.

ಸತುವು ಚರ್ಮಕ್ಕೆ, ಆಯೋಡಿನ ಥೈರಾಯಿಡ ಗ್ರಂಥಿಗೆ, ಸೆಲವಿಯಂ ಹೃದಯಕ್ಕೆ ಕ್ರೋಮಿಯಂ ಇನಸುಲಿನ, ಪೊಟ್ಯಾಸಿಯಂ, ಸೋಡಿಯಂ ಹೀಗೆ ಎಲ್ಲ ಲವಣಗಳೂ ಬೇಕಾಗುತ್ತವೆ. ಆಯೋಡಿನ ಸಮುದ್ರ ಪ್ರಾಣಿಗಳ ಮಾಂಸದಲ್ಲಿರುತ್ತದೆ.

ಜೀವಸತ್ವಗಳು : ಜೀವಸತ್ವಗಳಾದ ಎ,ಬಿ,ಸಿ,ಡಿ,ಇ ಮತ್ತು ಕೆ ಗಳು ಬೇಕಾಗುತ್ತವೆ. ವಿಟಮೀನ್ ಎ ಯು ಗಜ್ಜರಿ ಸೊಪ್ಪಿನ ತರಕಾರಿ, ಹಾಲು ಬೆಣ್ಣೆ ಮೀನದೆಗ್ಗೆ, ಬೀನ್ಸುಗಳಲ್ಲಿದ್ದರೆ, ಬಿ ಯು ಮೊಳಕೆಯೊಡೆದ ಧಾನ್ಯಗಳು, ಪಾಲಿಶಿಲ್ಲದ ಅಕ್ಕಿಯಲ್ಲಿರುತ್ತದೆ. ವಿಟಮೀನ್ ಇ ಸೋಯಾಬೀನು ಶೇಂಗಾ, ಲೆಟ್ಯೂಸ್‌ಗಳಲ್ಲಿ ಇರುತ್ತದೆ. ವಿಟಮೀನ್ ಸಿ ಯು ಸ್ಟ್ರಾಬೆರಿ, ನಿಂಬೆಹಣ್ಣು, ಕಿತ್ತಳೆ ಹಣ್ಣು, ನೆಲ್ಲಿಕಾಯಿ, ಟೊಮೆಟೊ ಮುಂತಾದವುಗಳಲ್ಲಿ ಸಿಗುತ್ತದೆ. ಪದಾರ್ಥವನ್ನು ಬೇಯಿಸುವಾಗ ಮುಚ್ಚಳ ಮುಚ್ಚಿ ಬೇಯಿಸಬೇಕು. ನಿಂಬೆಹಣ್ಣನ್ನು ಅಡಿಗೆ ಮಾಡಿದ ನಂತರ ಹಾಕಬೇಕು. ಇದರಿಂದ ಜೀವಸತ್ವಗಳು ಉಳಿಯುತ್ತವೆ. ಅವು ನಿಷ್ಕ್ರಿಯವಾಗುವದಿಲ್ಲ.

ಮಾಂಸ ತಿನ್ನುವ ಸ್ತ್ರೀಯಾದರೆ ಸಸಾರಜನಕದಲ್ಲಿ ಅರ್ಧದಷ್ಟನ್ನು ಮಾಂಸಗಳಿಂದ, ಉಳಿದ ಅರ್ಧವನ್ನು ಸಸ್ಯಾಹಾರಗಳಿಂದ ತೆಗೆದುಕೊಂಡರೆ ಒಳ್ಳೆಯದು. ಕೊಬ್ಬು ಎಣ್ಣೆ, ತುಪ್ಪ, ಕರಿದ ಪದಾರ್ಥ ಎಳ್ಳು, ಬೆಣ್ಣೆ, ಶೇಂಗಾ ಮುಂತಾದವುಗಳಲ್ಲಿದ್ದರೆ, ಶರ್ಕರಪಿಷ್ಟವು, ಅಕ್ಕಿ ಶರ್ಕರ ಪದಾರ್ಥಗಳಲ್ಲಿ ಇರುತ್ತದೆ. ಗರ್ಭಸ್ಥ ಸ್ತ್ರೀಗೆ ಬೇಕಾಗುವ ಆಹಾರದ ಪ್ರಮಾಣಗಳು.

	Pregnant	Normal Non Pregnant
೧. ಸಸಾರಜನಕ	೬೦ ಗ್ರಾಂ	೫೦ ಗ್ರಾಂ
೨. ಕ್ಯಾಲ್ಸಿಯಂ	೧-೧.೨ ಗ್ರಾಂ	೫೦೦ಎಂ.ಜಿ.
೩. ಕಬ್ಬಿಣ	೩೦-೪೦ಎಂ.ಜಿ.	೧೮ ಎಂ.ಜಿ.
೪. ವಿಟಮಿನ್ ಎ	೬೦೦೦ ಐ.ಯು	೫೦೦೦ ಐ.ಯು.
೫. ವಿಟಮಿನ್ ಸಿ	೬೦ ಎಂ.ಜಿ.	೪೫ ಐ.ಯು.
೬. ವಿಟಮಿನ್ ಡಿ	೪೦೦ ಐ.ಯು.	೪೦೦ ಐ.ಯು.
೭. ಫಿಲ್ಯೋ ಆಸಿಡ್	೧ ಜಿ.ಎಂ.	೦.೫ ಗ್ರಾಂ
೮. ವಿಟಮಿನ್ ಬಿ	೧.೫ ಎಂ.ಜಿ.	೧.೧ ಎಂ.ಜಿ.

ಎಚ್ಚರಿಕೆಗಳು:

೧. ಅತಿ ಖಾರ ಬೇಡ
೨. ಅತಿ ಉಪ್ಪು ಬೇಡ
೩. ತಂಗಳ, ಹಳಸಿದ ಆಹಾರ ಬೇಡ

ಸಲಹೆಗಳು :

೧. ದಿನಕ್ಕೆ ೧ ಲೀಟರ್ ಹಾಲು
೨. ದಿನಾಲು ಒಂದು ಹುಳಿ ಹಣ್ಣು
೩. ಸೊಪ್ಪಿನ ಸಾರು, ಪಲ್ಯೆ
೪. ಸ್ವಲ್ಪ - ಸ್ವಲ್ಪ ಊಟ
೫. ಬೇಳೆಯ ಸಾರು, ವಿವಿಧ ಬೇಳೆಯ ಉಪಯೋಗ
೬. ತರಹಾವದಿ ಹಣ್ಣು
೭. ಉಸುಳಿಗಳು

ಸತ್ವಯುತ, ಸಮತೋಲ, ಶುಚಿಯಾದ ಆಹಾರ ಉಂಡರೆ ತಾಯಿಯ ಆರೋಗ್ಯ ಸುಧಾರಿಸಿ ಮಗುವು ಚೆನ್ನಾಗಿ ಬೆಳೆದು ತಿರುಗಿ ಹೆರಿಗೆಯಲ್ಲಿ ಏನಾದರೂ ಹೆಚ್ಚಿನ ರಕ್ತಸ್ರಾವ ತೊಂದರೆಯಾದರೆ ಅದನ್ನು ತಡೆದುಕೊಳ್ಳುವ ಶಕ್ತಿ ಬರುವದಲ್ಲದೆ ಬಸಿರು ಹೆಂಗಸು ನೋಡಲು ಚೆನ್ನಾಗಿ ಕಾಣಿಸುವದಲ್ಲದೆ, ಅವಳಿಗೆ ಹುಟ್ಟುವ ಮಗುವೂ ಸಹ ಲೋಪದೋಷವಿಲ್ಲದೆ ಮುದ್ದಾಗಿ ಹುಟ್ಟುವದು. ●

ನನ್ನವಳು

ಬಿನ್ನಾಣದ ಬಿರುಸಿಲ್ಲ
ಸಿರಿತನದ ಹಮ್ಮಿಲ್ಲ
ಲಕ್ಷ್ಮಿಯವಳು ನನ್ನ ಮನೆಗೆ
ಬಯಕೆಯ ಮಾತಿಲ್ಲ
ದುಮ್ಮಾನ ಇನಿತಿಲ್ಲ
ಕುರುಡನಾದೆ ನಾನಿವಳ ಪ್ರೀತಿಗೆ.

-ಸಿ. ಎಸ್. ಭಾರತಿ ಬಾಗೇಪಲ್ಲಿ

ನಲುಮೆ

ನನ್ನಲ್ಲಿ
ನಿನಗಿರುವ ಪ್ರೀತಿ
ಅರಿತೆ
ಅದಕ್ಕೆಂದೇ
ಹಾಲಿನಲ್ಲಿ ಸಕ್ಕರೆ
ಒಂದಾದಂತೆ
ಬೆರೆತೆ.

-ರಾಜಶ್ರೀ ವಿನಾಯಕ ಗುಮಾಸ್ತೆ

ಸಂತಾನ ನಿಯಂತ್ರಣ : ಇತರ ಕ್ರಮಗಳು

○ ಡಾ|| ವಸುಂಧರಾ ಭೂಪತಿ

ಸಂಸಾರದಲ್ಲಿ ತೃಪ್ತಿ, ಆನಂದ ಪಡೆಯುವುದಕ್ಕೂ ಆರೋಗ್ಯವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದಲೂ ಹಾಗೂ ಮಿತಿಮೀರುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟುವುದಕ್ಕಾಗಿ ಕುಟುಂಬ ಯೋಜನೆಯ ಬಗ್ಗೆ ವೈಜ್ಞಾನಿಕ ಜ್ಞಾನ ಅತ್ಯಂತ ಅವಶ್ಯಕ.

ವೈವಾಹಿಕ ಜೀವನಕ್ಕೆ ಕಾಲಿಟ್ಟ ಕ್ಷಣದಿಂದ ಜೀವನದಲ್ಲಿ ಸಂತೋಷದಿಂದ, ಆತ್ಮವಿಶ್ವಾಸದಿಂದ ಬದುಕುವುದಕ್ಕೆ ಸಂತಾನ ನಿಯಂತ್ರಣ ಕ್ರಮಗಳ ಬಗ್ಗೆ ತಿಳುವಳಿಕೆ ಅತ್ಯಗತ್ಯ. ಸಂಸಾರದಲ್ಲಿ ತೃಪ್ತಿ, ಆನಂದ ಪಡೆಯುವುದಕ್ಕೂ, ಆರೋಗ್ಯವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದಲೂ ಹಾಗೂ ಮಿತಿಮೀರುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟುವುದಕ್ಕಾಗಿ ಕುಟುಂಬ ಯೋಜನೆಯ ಬಗ್ಗೆ ವೈಜ್ಞಾನಿಕ ಜ್ಞಾನ ಅತ್ಯಂತ ಅವಶ್ಯಕ. ವಿವಾಹವಾದ ಕೂಡಲೇ ದಂಪತಿಗಳಿಗೆ ಒಂದೆರಡು ವರ್ಷ ಹಾಯಾಗಿರಬೇಕೆಂಬ ಇಚ್ಛೆ ಇದ್ದೇ ಇರುತ್ತದೆ ಮತ್ತು ಒಂದು ಮಗುವಾದ ಬಳಿಕ ಇನ್ನೊಂದು ಮಗುವಾಗಲು ಕನಿಷ್ಠ ಮೂರು ವರ್ಷಗಳ ಅಂತರವೂ ಇರಬೇಕಾಗುತ್ತದೆ. ಆದ್ದರಿಂದ ಸಂತಾನ ನಿಯಂತ್ರಣ ಬಗ್ಗೆ ತಿಳಿದುಕೊಳ್ಳೋಣವೆ?

ಸುರಕ್ಷಿತ ಸಮಯ

೨೮ ಅಥವಾ ೩೦ ದಿನಗಳಿಗೊಮ್ಮೆ ಮುಟ್ಟಾಗುವ ಸ್ತ್ರೀಯರಲ್ಲಿ ಮೊದಲ ಹತ್ತು ದಿನಗಳೂ ಮತ್ತು ಕೊನೆಯ ಹತ್ತು ದಿನಗಳೂ ಸುರಕ್ಷಿತ ಸಮಯವೆನ್ನಬಹುದು. ಸಾಮಾನ್ಯವಾಗಿ ಹದಿನಾಲ್ಕನೆಯ ದಿನ ಅಂಡಾಣು ಪಕ್ವವಾಗಿ ಹೊರಬರುವುದರಿಂದ ಆ ಸಮಯದಲ್ಲಿಯೇ ಹೆಚ್ಚಾಗಿ ಗರ್ಭಧರಿಸುವ ಸಾಧ್ಯತೆಯಿರುತ್ತದೆ. ಆದರೆ ನಿಯಮಿತವಾಗಿ ಮುಟ್ಟಾಗದ ಸ್ತ್ರೀಯರಲ್ಲಿ ಈ ಕ್ರಮವು ಪ್ರಯೋಜನವಾಗುವುದಿಲ್ಲ.

ವೀರ್ಯಾಣು ನಾಶಕಗಳು

ಇವು ಮಾತ್ರೆ, ಜೆಲ್ಲಿ, ಮಲಾಮುಗಳ ರೂಪದಲ್ಲಿರಬಹುದು. ಇವುಗಳಿಗೆ ವೀರ್ಯಾಣುಗಳನ್ನು ನಾಶಪಡಿಸುವ ಶಕ್ತಿಯಿದೆ. ಮಾತ್ರೆಯನ್ನು ಸ್ತ್ರೀ ಯೋನಿಯಲ್ಲಿರಿಸಿಕೊಂಡರೆ ನೊರೆ ಉತ್ಪತ್ತಿಯಾಗಿ ಅದು ಅಲ್ಲಿಗೆ ಬರುವ ವೀರ್ಯಾಣುಗಳನ್ನು ನಾಶಪಡಿಸುತ್ತದೆ. ಜೆಲ್ಲಿ ಮುಲಾಮುಗಳನ್ನು ಯೋನಿಯಲ್ಲಿರಿಸಿಕೊಳ್ಳುವುದರಿಂದಲೂ ವೀರ್ಯಾಣುಗಳು ಯೋನಿಯಲ್ಲಿಯೇ ನಿರ್ನಾಮ ಹೊಂದುವುದರಿಂದ ಗರ್ಭಕೋಶವನ್ನು ವೀರ್ಯಾಣು ಪ್ರವೇಶಿಸುವ ಪ್ರಶ್ನೆಯೇ ಬರುವುದಿಲ್ಲ.

ವಂಕಿ ಇಲ್ಲವೇ ಕಾಪರ್ ಟಿ

ಗರ್ಭಕೋಶದಲ್ಲಿ ಯಾವ ಹೊರ ಪದಾರ್ಥ ಇದ್ದರೂ ಗರ್ಭಧಾರಣೆಯಾಗದು ಎಂಬ ಸಿದ್ಧಾಂತದ ಅನುಸಾರ ವಂಕಿ ಇಲ್ಲವೇ ಕಾಪರ್ ಟಿ ರೂಪುಗೊಂಡಿದೆ. ತಾಮ್ರದ ತಂತಿಯಿಂದ ತಯಾರಿಸಿದ್ದು T ಆಕಾರದಲ್ಲಿರುವುದರಿಂದ ಈ ಸಾಧನಕ್ಕೆ ಕಾಪರ್ ಟಿ ಎಂಬ ಹೆಸರು ಬಂದಿದೆ. ಗರ್ಭಧಾರಣೆ ಅಪೇಕ್ಷಿಸದ ಸ್ತ್ರೀಯರಲ್ಲಿ ಈ ಸಾಧನವು ಅತ್ಯಂತ ಪರಿಣಾಮಕಾರಿಯಾದುದು. ಜಗತ್ತಿನಲ್ಲಿ ನೂರು ಮಿಲಿಯನ್‌ಗಿಂತ ಅಧಿಕ ಸ್ತ್ರೀಯರು ಇದನ್ನು ಬಳಸುತ್ತಿದ್ದಾರೆ. ಇದು ವೀರ್ಯಾಣುಗಳ ಚಲನೆಗೆ ಭಂಗವನ್ನುಂಟು ಮಾಡಿ ಅವುಗಳ ಉಳಿವಿಗೆ ವಿಘ್ನವನ್ನುಂಟು ಮಾಡುತ್ತದೆ. ಗರ್ಭಕೋಶದ ಒಳಪದರಿನಲ್ಲಿ ಪ್ರತಿಕ್ರಿಯೆಯನ್ನುಂಟು ಮಾಡಿ ಅಲ್ಲಿ ಬಿಳಿಕಣಗಳ ಬಿಡುಗಡೆಯನ್ನು ಪ್ರಚೋದಿಸಿ, ಪುಸ್ಟಾಗ್ಲಾಂಡಿನ್ ಬಿಡುಗಡೆ ಮಾಡುತ್ತದೆ. ಅದು ಲಿಂಡನಾಳ, ಗರ್ಭಕೋಶ, ಗರ್ಭದ ತುತ್ತಿಗೆಯ ಮೇಲೆ ಏಕಕಾಲದಲ್ಲಿ ಪ್ರಭಾವ ಬೀರಿ ವೀರ್ಯಾಣುಗಳ ಚಲನೆಗೆ ತೊಂದರೆಯನ್ನುಂಟು ಮಾಡಿ ಗರ್ಭಧಾರಣೆ ತಪ್ಪಿಸುತ್ತದೆ. ತಾಮ್ರವು ಈ ಕಾರ್ಯವೆಸಗಲು ಅತ್ಯಂತ ಪ್ರಭಾವ ಶಾಲಿ. ತಾಮ್ರವು ವೀರ್ಯಾಣುಗಳಿಗೆ ಮಾರಕವಾಗಿದೆ.

ವಂಕಿ ಅಥವಾ ಕಾಪರ್ ಟಿ ದೇಹದಲ್ಲಿ ರಸದೂತಗಳ (ಹಾರ್ಮೋನ್) ಏರುಪೇರು ಉಂಟುಮಾಡುವುದಿಲ್ಲ. ಅದು ಗರ್ಭಕೋಶದಲ್ಲಿ ಇರುವ ಕಾಲದಾದ್ಯಂತ ಗರ್ಭಧಾರಣೆಯನ್ನು ಪ್ರತಿರೋಧಿಸುತ್ತದೆ. ಅದನ್ನು ಹೊರತೆಗೆದ ಮೇಲೆ ಮತ್ತೆ ಗರ್ಭಧರಿಸಬಹುದು. ಈ ಕಾಪರ್ ಟಿಯನ್ನು ಅಪ್ಲಿಕೇಟರ್ ಮುಖಾಂತರ ಗರ್ಭ ದ್ವಾರದೊಳಗೆ ತಳ್ಳುತ್ತಾರೆ. ಅಪ್ಲಿಕೇಟರ್ ಹೊರತೆಗೆದೊಡನೆ ದಾರ ಕಾಪರ್ ಟಿ ಗರ್ಭಕೋಶದಲ್ಲಿ ಉಳಿಯುತ್ತದೆ. ಅದರ ತುದಿಗಿರುವ ದಾರ ಯೋನಿಯೊಳಗೆ ಇರುತ್ತದೆ. ಆದ್ದರಿಂದ ಕಾಪರ್ ಟಿ ಧರಿಸಿದ ಸ್ತ್ರೀ ಆಗಾಗ್ಗೆ ದಾರವನ್ನು ಮುಟ್ಟಿ ನೋಡಿಕೊಂಡು, ಕಾಪರ್ ಟಿ ಇರುವಿಕೆಯನ್ನು ಖಚಿತ ಪಡಿಸಿಕೊಳ್ಳಬೇಕು. ಏಕೆಂದರೆ ಕೆಲವೊಮ್ಮೆ ಕಾಪರ್ ಟಿ ಬಿದ್ದು ಹೋಗುವ ಸಂಭವವೂ ಇರುತ್ತದೆ.

ಮುಟ್ಟಾದ ಐದನೆಯ ಇಲ್ಲವೆ ಏಳನೆಯ ದಿನ ಕಾಪರ್ ಟಿ ಹಾಕಿಸಿಕೊಳ್ಳಬೇಕು. ಆದರೆ ಇದನ್ನು ಒಂದು ಮಗುವಾದ ನಂತರ ಗರ್ಭಧಾರಣೆ ತಡೆಯುವುದಕ್ಕೋಸ್ಕರ ಹಾಕಿಸಿಕೊಳ್ಳಬೇಕು. ಮಕ್ಕಳಾಗುವುದಕ್ಕೆ ಮುಂಚೆ ಇದನ್ನು ಹಾಕಿಸಿಕೊಳ್ಳಬಾರದು. ಏಕೆಂದರೆ ಕೆಲವೊಮ್ಮೆ ಇದರಿಂದ ಅಂಡನಾಳ ಮುಚ್ಚಿಕೊಂಡು ಹೋಗುವ ಅಪಾಯವೂ ಇದೆ.

ಕೆಲವು ಸ್ತ್ರೀಯರಲ್ಲಿ ಕಾಪರ್ ಟಿ ಹಾಕಿಸಿಕೊಂಡ ಮೇಲೆ ಬಿಳಿಸೆರಗು ಆಗಬಹುದು. ಹೊಟ್ಟೆ ನೋವೂ ಬರಬಹುದು. ಇನ್ನೂ ಕೆಲವರಲ್ಲಿ ಅಧಿಕ ರಕ್ತಸ್ರಾವವೂ ಆಗಬಹುದು. ಇಂತಹ ತೊಂದರೆಗಳುಂಟಾದರೆ ಕಾಪರ್ ಟಿ ತೆಗೆದು ಕುಟುಂಬ ಯೋಜನೆಯ ಬೇರೆ ಕ್ರಮ ಅನುಸರಿಸುವಂತೆ ಹೇಳಬೇಕು.

ಕಾಪರ್ ಟಿಯನ್ನು ಮೂರು ವರ್ಷಗಳಾದ ನಂತರ ತೆಗೆಸಿ ಮತ್ತೆ ಬೇರೆಯದನ್ನು ಹಾಕಿಸಿಕೊಳ್ಳಬೇಕು. ಮಲ್ಟಿಲೋಡ್ ಎನ್ನುವ ಸಾಧನವನ್ನು ಐದು ವರ್ಷಗಳವರೆಗೆ ಇರಿಸಿಕೊಳ್ಳಬಹುದು.

ಮಾತ್ರೆ

ಸ್ತ್ರೀಯು ಮುಟ್ಟಾದ ಐದನೆಯ ದಿನದಿಂದ ದಿನಕ್ಕೊಂದರಂತೆ ಈ ಮಾತ್ರೆ ತೆಗೆದುಕೊಳ್ಳಬೇಕು. ಮಾತ್ರೆ ಆರಂಭಿಸಿದ ಮೇಲೆ ಒಂದು ದಿನವೂ

ಬಿಡಬಾರದು. ಪ್ರತಿದಿನ ರಾತ್ರಿ ಸಮಯ ಊಟವಾದ ಕೂಡಲೇ ಮಾತ್ರೆ ತೆಗೆದುಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳ ಬೇಕು. ಒಂದು ಪ್ಯಾಕೆಟ್‌ನಲ್ಲಿ ಇಪ್ಪತ್ತೊಂದು ಮಾತ್ರೆಗಳಿರುತ್ತವೆ. ಐದನೆಯ ದಿನ ಮಾತ್ರೆ ಆರಂಭಿಸಿದರೆ ಇಪ್ಪತ್ತೈದನೆಯ ದಿನಕ್ಕೆ ಮಾತ್ರೆ ಮುಗಿದು ಹೋಗುತ್ತದೆ. ಮತ್ತೆ ಐದನೆಯ ದಿನದಿಂದ ಮಾತ್ರೆ ತೆಗೆದುಕೊಳ್ಳಬೇಕು. ಮಾತ್ರೆಗಳಿಂದ ಮಾಸಿಕ ಸ್ರಾವವೂ ಕ್ರಮಬದ್ಧವಾಗುವುದು.

ಗರ್ಭನಿರೋಧಕ ಮಾತ್ರೆಯಲ್ಲಿ ಕೃತಕ ಹಾರ್ಮೋನುಗಳಿದ್ದು, ಅವು ಪ್ರತಿ ತಿಂಗಳಿಗೊಮ್ಮೆ ಅಂಡಾಶಯದಿಂದ ಪಕ್ವಗೊಂಡು ಹೊರ ಬರುವ ಅಂಡಾಣುವನ್ನು ಹೊರಬರದಂತೆ ತಡೆಯುತ್ತವೆ. ಅಂಡಾಣುವಿಲ್ಲದೇ ಗರ್ಭಧಾರಣೆ ಆಗುವುದಿಲ್ಲ. ಹೀಗೆ ಈ ಮಾತ್ರೆಗಳು ಕಾರ್ಯನಿರ್ವಹಿಸುತ್ತವೆ.

ಮಾತ್ರೆ ಆರಂಭಿಸಿದ ಕೆಲವು ದಿನಗಳಲ್ಲಿ ಕೆಲವರಿಗೆ ತಲೆನೋವು ವಾಂತಿ ಬಂದಂತಾಗುವ ಲಕ್ಷಣಗಳು ಕಂಡುಬರಬಹುದು. ಒಂದೆರಡು ತಿಂಗಳ ಬಳಿಕ ಈ ಲಕ್ಷಣಗಳು ಕಡಿಮೆಯಾಗುತ್ತವೆ. ಆಕಸ್ಮಾತ್ ಕಡಿಮೆಯಾಗದೇ ಹಾಗೆ ಮುಂದುವರೆದರೆ ಮಾತ್ರೆ ನಿಲ್ಲಿಸಿಬಿಡುವುದು ಒಳ್ಳೆಯದು.

ಮಾತ್ರೆ ತೆಗೆದುಕೊಳ್ಳಲು ಇಚ್ಚಿಸುವವರು ಸ್ತ್ರೀರೋಗ ತಜ್ಞರನ್ನು ಕಾಣುವುದೊಳ್ಳೆಯದು.

ಮದುವೆಯಾದ ತಕ್ಷಣ ಒಂದೆರಡು ವರ್ಷ ಮಕ್ಕಳು ಬೇಡವೆನ್ನುವವರಿಗೆ ಈ ಮಾತ್ರೆ ಸೇವನೆ ಸೂಕ್ತವಾದುದು. ಎರಡು ವರ್ಷ ಮಾತ್ರೆ ಸೇವಿಸಿ ನಂತರ ಬಿಟ್ಟರೆ ಮತ್ತೆ ಗರ್ಭ ಧರಿಸುವುದಕ್ಕೆ ಯಾವುದೇ ತೊಂದರೆಯಿಲ್ಲ. ಕೆಲವರಲ್ಲಿ ಮಾತ್ರೆ ಬಿಟ್ಟ ಒಂದೆರಡು ತಿಂಗಳಲ್ಲಿಯೇ ಗರ್ಭ ನಿಲ್ಲುತ್ತದೆ.

ಪುರುಷರಿಗೆ ಸಂತಾನ ನಿಯಂತ್ರಣ ಸಾಧನಗಳು: ಕಾಂಡೂಮ್(ನಿರೋಧ್)

ಇದು ಪುರುಷರು ಶಿಶ್ನದ ಮೇಲೆ ಧರಿಸುವ ತೆಳುವಾದ ರಬ್ಬರ್ ಚೀಲ. ಇದನ್ನು ಧರಿಸಿ ಸಂಭೋಗ ಮಾಡುವುದರಿಂದ ವೀರ್ಯವು ರಬ್ಬರ್ ಚೀಲದಲ್ಲಿಯೇ ಸಂಗ್ರಹವಾಗುವುದರಿಂದ ಸ್ತ್ರೀ ಗರ್ಭಧರಿಸುವ ಸಾಧ್ಯತೆ ಇರುವುದಿಲ್ಲ. ಕೆಲವೊಮ್ಮೆ ಒಂದು ಚಿಕ್ಕ ತೂತಾಗಿದ್ದರೂ ಗರ್ಭಿಣಿಯಾಗಬಹುದು.

ಶಸ್ತ್ರಕ್ರಿಯೆ : ಟ್ಯೂಬೆಕ್ಟಮಿ

ಇದು ಮಹಿಳೆಯರಲ್ಲಿ ಸಂತಾನ ನಿರೋಧ ಶಸ್ತ್ರಕ್ರಿಯೆ, ಉದರವನ್ನು ಛೇದಿಸಿ ಗರ್ಭಕೋಶ ಎರಡೂ ಬದಿಗಿರುವ ಡಿಂಬನಳಿಕೆಗಳನ್ನು ಕತ್ತರಿಸಿ ಅದರ ತುದಿಗಳಿಗೆ ಪ್ರತ್ಯೇಕ ಗಂಟು ಹಾಕುತ್ತಾರೆ. ಹೀಗೆ ಮಾಡುವುದರಿಂದ ಗರ್ಭಕೋಶದೊಳಗಿನಿಂದ ಬಂದ ವೀರ್ಯಾಣು ಡಿಂಬನಳಿಕೆಯ ಒಂದು ತುದಿಯವರೆಗೂ ಹೋಗಿ ನಿಂತು ಬಿಡುತ್ತದೆ. ಅಂಡಾಣು ಡಿಂಬನಳಿಕೆಯೊಳಗೆ ಪ್ರವೇಶಿಸಿ ಅಲ್ಲಿಯೇ ನಾಶ ಹೊಂದುತ್ತದೆ. ಶಸ್ತ್ರಚಿಕಿತ್ಸೆಯ ಬಳಿಕ ಸ್ತ್ರೀಗೆ ಬೊಜ್ಜು ಬರುತ್ತದೆ ಎಂದು ಕೆಲವರ ಅನಿಸಿಕೆ. ಬೊಜ್ಜು ಬರುವುದು ನೆಮ್ಮದಿಯ ಜೀವನದಿಂದಲೇ ಹೊರತು ಶಸ್ತ್ರ ಚಿಕಿತ್ಸೆಯಿಂದಲ್ಲ. ಸಾಮಾನ್ಯವಾಗಿ ಮಹಿಳೆಯರಲ್ಲಿ ಶಸ್ತ್ರಚಿಕಿತ್ಸೆಯ ಬಳಿಕ ತಮಗಿನ್ನು ಮಕ್ಕಳಾಗುವುದಿಲ್ಲ ಎಂಬ ಸಂತಸದಿಂದ ಆರಾಮದಾಯಕ ಜೀವನ ನಡೆಸುವುದರಿಂದಲೇ ಸ್ಥೂಲ ದೇಹಿಗಳಾಗುತ್ತಾರೆ.

ಶಸ್ತ್ರಚಿಕಿತ್ಸೆಯ ನಂತರ ಎರಡು ತಿಂಗಳು ಸಂಪೂರ್ಣ ವಿಶ್ರಾಂತಿಬೇಕಾಗುತ್ತದೆ. ಆದ್ದರಿಂದ ಹೆರಿಗೆಯಾದ ಬಳಿಕ ಶಸ್ತ್ರಚಿಕಿತ್ಸೆ ಮಾಡಿಸಿ ಕೊಳ್ಳುವುದರಿಂದ ಬಾಣಂತನಕ್ಕಾಗಿ ಮೂರು ತಿಂಗಳು ಹೇಗೂ ವಿಶ್ರಾಂತಿಯಲ್ಲಿರುವುದರಿಂದ ಅದೇ ಸೂಕ್ತ ಸಮಯ.

ಪುರುಷರಿಗೆ ಶಸ್ತ್ರಚಿಕಿತ್ಸೆ (ವ್ಯಾಸೆಕ್ಟಮಿ)

ಪುರುಷರ ಶಸ್ತ್ರಚಿಕಿತ್ಸೆ ಸ್ತ್ರೀಯರ ಶಸ್ತಚಿಕಿತ್ಸೆಗಿಂತ ಸುಲಭವಾದುದು. ಏಕೆಂದರೆ ಪುರುಷರಲ್ಲಿ 'ವಾಹಕನಾಳ' ಚರ್ಮದ ಕೆಳಗೇ ಇರುತ್ತದೆ. ಶಸ್ತ್ರಕ್ರಿಯೆ ಐದು ನಿಮಿಷಗಳಲ್ಲಿ ಮುಗಿದು ಹೋಗುತ್ತದೆ. ಒಂದು ವಾರದ ವಿಶ್ರಾಂತಿಯ ನಂತರ ತನ್ನ ದಿನನಿತ್ಯದ ಕಾರ್ಯಗಳನ್ನು ನಿರ್ವಹಿಸಬಹುದು.

ವೃಕ್ಷಣದಿಂದ ಮೇಲೇರಿದ ವಾಹಕನಾಳವು ಮೂತ್ರಕೋಶವನ್ನು ಬಳಸಿ ವೀರ್ಯಕೋಶವನ್ನು ಸೇರುತ್ತದೆ. ಶಸ್ತ್ರಕ್ರಿಯೆಯಲ್ಲಿ ವಾಹಕನಾಳವನ್ನು ಎರಡೂ ಬದಿಗಳಲ್ಲಿ ಕತ್ತರಿಸಿ ಪ್ರತ್ಯೇಕ ಗಂಟು ಹಾಕುತ್ತಾರೆ. ಹೀಗೆ ಮಾಡುವುದರಿಂದ ವೃಷಣದಿಂದ ಉತ್ಪತ್ತಿಯಾದ ವೀರ್ಯಾಣು ಮೇಲೇರಿ ವೀರ್ಯಕೋಶಕ್ಕೆ ಹೋಗುವುದಿಲ್ಲ. ಉತ್ಪತ್ತಿಯಾದವುಗಳು ಸ್ವಲ್ಪ ದೂರ ವಾಹಕನಾಳಕ್ಕೆ ಬಂದು ಅಲ್ಲೇ ನಾಶ ಹೊಂದುತ್ತವೆ. ಆದರೆ ವೀರ್ಯದ ಉತ್ಪತ್ತಿ ಸತತವಾಗಿ ನಡೆದೇ ಇರುತ್ತದೆ. ಅದರಲ್ಲಿ ಗರ್ಭ ಧರಿಸಲು ಕಾರಣವಾದ ವೀರ್ಯಾಣು ಇರುವುದಿಲ್ಲ. ಆದ್ದರಿಂದ ಈ ಶಸ್ತ್ರಚಿಕಿತ್ಸೆಯಿಂದ ಪುರುಷರ ದೈಹಿಕ ಆರೋಗ್ಯ ಹಾಗೂ ಲೈಂಗಿಕ ಜೀವನಕ್ಕೆ ಯಾವುದೇ ವಿಧವಾದ ತೊಂದರೆ ಇರುವುದಿಲ್ಲ.

ನೋ ಸ್ಕಾಲ್‌ಪೆಲ್ ವ್ಯಾಸೆಕ್ಟಮಿ

ಇದು ಅತ್ಯಂತ ಸರಳವಾದ ವಿಧಾನ. ಈಗ ಬಹಳ ಜನಪ್ರಿಯವಾಗುತ್ತಿದೆ. ಶಸ್ತ್ರಚಿಕಿತ್ಸೆಯ ನಂತರ ಒಂದೆರಡು ದಿನಗಳಲ್ಲೇ ತಮ್ಮ ಎಲ್ಲ ಕೆಲಸಗಳನ್ನು ಮಾಡಿಸಿಕೊಳ್ಳಬಹುದು. ●

ದೃಷ್ಟಿ

ಅಮಾವಾಸ್ಯೆಯು
ನಿರಾಶೆವಾದಿಗೆ
ಕಾರ್ಗತ್ತಲು
ಆಶಾವಾದಿಗೆ
ಅದುವೇ
ಕಪ್ಪು ಹುಣ್ಣಿಮೆ.

-ಶಿವಲಿಂಗ ಸಿದ್ನಾಳ

ಅರ್ಪಣೆ

ನನ್ನ ಮನಸ್ಸಿನ
ಪ್ರತಿ ವೇದನೆ,
ವಿಧವಿಧ ಭಾವನೆ
ಕನಸು, ಕಲ್ಪನೆ, ಪ್ರೇರಣೆ
ಎಲ್ಲ ಎಲ್ಲವೂ
ನಿನ್ನ ಪ್ರೀತಿಯ
ನಿವೇದನೆಯಲ್ಲಿ.

-ರಶ್ಮಿ ಬಿ. ಕೆ.



ಸಂಪೂರ್ಣ ದಂತ ಚಿಕಿತ್ಸೆಯಲ್ಲಿ ಕೇರ್

ವಿಶೇಷವೆಂದರೆ ಭಾರತದ ಕ್ರಿಕೆಟ್ ತಂಡದ ಆಟಗಾರ ರಾಹುಲ್ ದ್ರಾವಿಡ್ ಅವರೂ ಸಹ ಡಾ. ರಾಯ್ ಅವರ ಕ್ಲೈಂಟ್ ಆಗಿದ್ದಾರೆ.

ಪ್ರಾಸ್ತೆಟಿಕ್ ಡೆಂಡಿಸ್ಟ್ರಿಯ ಪ್ರೊಫೆಸರ್ ಡಾ|| ಎ.ಕೆ. ರಾಯ್ ಅವರು ಸಂಪೂರ್ಣ ದಂತ ಚಿಕಿತ್ಸೆಯ ಸೇವಾಕೇಂದ್ರವಾಗಿ 'ಕೇರ್' ನ್ನು 1997ರ ಏಪ್ರಿಲ್ 17ರಂದು ಸ್ಥಾಪಿಸಿದರು.

ಆಧುನಿಕ ವೈದ್ಯ ವಿಜ್ಞಾನದೊಂದಿಗೆ ದಂತಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಉತ್ತಮ ಸಾಧನಗಳ ನೆರವಿನೊಂದಿಗೆ ಬಗೆಹರಿಸುತ್ತಾ, ಹದಿನೆಂಟು ವರ್ಷಗಳ ದೀರ್ಘ ಅನುಭವ ಹೊಂದಿರುವ ರಾಯ್ ಅವರು, ಬೆಂಗಳೂರಿನ ಸೂಕ್ತ ಸ್ಥಳವೊಂದರಲ್ಲಿ ದಂತ ಚಿಕಿತ್ಸಾಲಯವೊಂದನ್ನು ಸ್ಥಾಪಿಸಬೇಕೆಂಬ ಧ್ಯೇಯದೊಂದಿಗೆ ಮುನ್ನುಗ್ಗಿದ್ದರು. ಅದರಂತೆ ಕನ್ನಿಂಗ್ ಹ್ಯಾಮ್ ರಸ್ತೆಯ ಪ್ರೆಸ್ಟೀಜ್ ಸೆಂಟರ್ ಪಿಜ್ಜಾಹಟ ನಂತಹ ಉತ್ತಮ ಸ್ಥಳವನ್ನು ಆಯ್ಕೆ ಮಾಡಿದರು.

ಇಲ್ಲಿ ಉತ್ತಮ ಅನುಭವಿ ವೈದ್ಯರೊಂದಿಗೆ ದಂತರೋಗಿಪೀಡಿತರಿಗೆ ಸಂಪೂರ್ಣ ಚಿಕಿತ್ಸೆ ನೀಡಲು, ಡೆಂಟಿಸ್ಟ್ರಿಯ ಪ್ರಾಸ್ತೋಡಾಂಟಿಕ್ಸ್, ಆರ್ಥೋಡಾಂಟಿಕ್ಸ್, ಪೀರಿಯೋಡಾಂಟಿಕ್ಸ್, ಎಂಡೋಡಾಂಟಿಕ್ಸ್, ವಾಯಿಡೋಡಾಂಟಿಕ್ಸ್ ಹಾಗೂ ಇಂಪ್ಲಾಂಟಾಲಜಿಯಂತಹ ವಿವಿಧ ರಂಗಗಳಲ್ಲಿ ನೈಪುಣ್ಯತೆ ಪಡೆದಿದೆ.

ಡಾ||ರಾಯ್ ಅವರು ಸ್ವತಹ ಪ್ರಾಸ್ತೊಡಾಂಟಿಸ್ಟ್ ಇಂಪ್ಲಾಂಟಾಲಜಿಸ್ಟ್ ಹಾಗೂ ಆಸ್ತೆಟಿಕ್ ಡೆಂಟಿಸ್ಟ್ರಿಯ ನಿಪುಣರೂ ಆಗಿದ್ದಾರೆ. ಇವರು ರೋಗಪೀಡಿತ ದಂತಗಳನ್ನು ಅವುಗಳಿಂದ ಮುಕ್ತ ಮಾಡುವುದಲ್ಲದೆ, ರೋಗಿಗಳು ತಮ್ಮ ಸ್ವಾಭಾವಿಕ ಅಥವಾ ಕೃತಕ ಹಲ್ಲುಗಳಿಂದ ಸದಾ ಹಸನ್ಮುಖಿಗಳಾಗಿ ನಗುತ್ತಿರುವಂತೆ ಮಾಡಬಯಸುತ್ತಾರೆ.

ಈಗಾಗಲೇ 'ಕೇರ್' ಸ್ವಚ್ಚತೆ ಹಾಗೂ ರೋಗಿಯ ಬಗ್ಗೆ ಕಾಳಜಿ ವಹಿಸುವಲ್ಲಿ ತುಂಬಾ ಹೆಸರುಗಳಿಸಿದೆ. ಏಯಿಡ್ಸ್ ಮತ್ತು ಹೆವಾಟಿಟಿಸ್ 'ಬಿ' ಯಂತಹ ಅಂಟು ರೋಗಗಳನ್ನು ರೋಗಿಗಳಿಂದ ದಂತ ವೈದ್ಯರಿಗಾಗಲಿ, ವೈದ್ಯರಿಂದ ರೋಗಿಗಳಿಗಾಗಲಿ ಇಲ್ಲಿವೆ ಪರಸ್ಪರ ರೋಗಿಗಳಲ್ಲಾಗಲಿ ಹರಡದಂತೆ ಸದಾ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸುತ್ತಿರುತ್ತಿದೆ. ಈ ರೀತಿಯಲ್ಲಿ ರೋಗಿಗಳಿಗೆ ಪ್ರತ್ಯೇಕ ಸಾಧನೆಗಳನ್ನು ಉಪಯೋಗಿಸಿ ಶಸ್ತ್ರ ಚಿಕಿತ್ಸೆ ಮಾಡಿ. ದಂತದ ಯಾವುದೇ ಸಮಸ್ಯೆಯನ್ನು ಹೋಗಲಾಡಿಸುತ್ತಾರೆ.

ಅಂಬೇಡ್ಕರ್ ಡೆಂಟಲ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿರುವ ಡಾ। ಆಯ್ ಅವರು ಅನೇಕಾನೇಕ ಕ್ಲೈಂಟ್ಸ್‌ಗಳನ್ನು ಪಡೆದಿದ್ದಾರೆ. ಅವರಲ್ಲಿ ಟಾಟಾ ಕನ್ಸಲ್ ಟೆಂಟ್ ಸರ್ವಿಸಸ್, ಮ್ಯೂಕ ಡವಲ್ಸ್, ಷರಿಡಿಯನ್, ಹೆಚ್. ಸಿ. ಎಲ್. ಲಿಂಕನ್, ಎಚಕಾನ್, ಬರ್ಲಿಂಗ್ ಟನ್ ಎಲ್. ಜಿ. ಗ್ರೂಪ್, ಹೋಟೇಲ್ ಅಶೋಕ, ಹೋಟೆಲ್ ವಿಂಡ್ಸರ್ ಮ್ಯಾನರ್ ಸಂಸ್ಥೆಗಳು ಸೇರಿವೆ.

ಇಂಗ್ಲೆಡ್, ಇಟಲಿ, ಜರ್ಮನಿ ಇತ್ಯಾದಿ ದೇಶಗಳಿಂದ ಬರುವ ವಿದೇಶಿಯಾತ್ರೆಗಳು ಹಾಗೂ ಇತರೆ ರಾಜ್ಯಗಳ ಜನತೆಯು 'ಕೇರ್' ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮತ್ತೊಂದು ವಿಶೇಷವೆಂದರೆ ಭಾರತದ ಕ್ರಿಕೆಟ್ ತಂಡದ ಆಟಗಾರ ರಾಹುಲ್ ದ್ರಾವಿಡ ಅವರೂ ಸಹ ಡಾ. ರಾಯ್ ಅವರ ಕ್ಲೈಂಟ್ ಆಗಿದ್ದಾರೆ. ಒಟ್ಟಿನಲ್ಲಿ 'ಕೇರ್' ಬೆಂಗಳೂರಿನ ಏಕೈಕ ಸಂಪೂರ್ಣ ದಂತ ಚಿಕಿತ್ಸಾಲಯವಾಗಿ ಕಾರ್ಯ ನಿರ್ವಹಿಸುತ್ತಿದೆ.

○ ಉತ್ತನೂರು ವ್ಯಾಸ್



ಕೆ.ಎ.ಎಸ್ ಪೂರ್ವಭಾವಿ ಪರೀಕ್ಷೆ ಹೇಗೆ ಎದುರಿಸಬೇಕು?

ಕೆ.ಎ.ಎಸ್. ಎಂಬುದು ಕರ್ನಾಟಕ ಸರ್ಕಾರದ ಆಡಳಿತ ಸೇವೆಯಲ್ಲಿ ದೊಡ್ಡ ಹೆಸರು, ಕೆ.ಎ.ಎಸ್ ಅಧಿಕಾರಿಯೆಂದರೆ ಸಹಜವಾಗಿ ಎಲ್ಲರೂ ಗೌರವ ತೋರಿಸುತ್ತಾರೆ. ಆದರದಿಂದ ಪ್ರೀತಿಯಿಂದ ಮಾತನಾಡಿಸುತ್ತಾರೆ. ಇದರಿಂದಾಗಿ ಇಂದು ಕೆ.ಎ.ಎಸ್. ಪರೀಕ್ಷೆ ಎಂದರೆ ಎಲ್ಲರೂ ಕಾತರ, ಕುತೂಹಲ ವ್ಯಕ್ತಪಡಿಸುತ್ತಾರೆ. ಅಧಿಕಾರಿಯಾಗುವ ಹಂಬಲದಿಂದ ಕೆ.ಎ.ಎಸ್. ಪರೀಕ್ಷೆಯನ್ನು ತೆಗೆದುಕೊಳ್ಳಲು ಹಾತೊರೆಯುತ್ತಾರೆ. ಸುಮಾರು ಒಂದು ಲಕ್ಷದಷ್ಟು ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆಗಾಗಿ ಅರ್ಜಿ ಸಲ್ಲಿಸಬಹುದು. ಈ ಬಾರಿಯಂತೂ ಎಲ್ಲೆಡೆ ಯುವಕ ಯುವತಿಯರಲ್ಲಿ ಕೆ.ಎ.ಎಸ್. ಪರೀಕ್ಷೆಯೆಂಬ ಜ್ವರ ಹರಡಿಬಿಟ್ಟಿದೆ. ಯಾವುದೇ ಪದವಿ ಗಳಿಸಿರುವ ಯುವಕ/ಯುವತಿಯ ಬಾಯಲ್ಲಿ ಕೆ. ಎ.ಎಸ್. ಪರೀಕ್ಷೆಯ ವಿಷಯವೇ ತುಂಬಿರುತ್ತದೆ. ಆದ್ದರಿಂದ ಇದನ್ನು ಕೆ.ಎ.ಎಸ್. ಸನ್ನಿ ಎಂದು ಕರೆಯಬಹುದು. ಕರ್ನಾಟಕ ಸರ್ಕಾರದಲ್ಲಿ ಉನ್ನತ ಅಧಿಕಾರಿಯ ಪಟ್ಟವನ್ನು ಗಳಿಸಿಕೊಡುವ ಈ ಪರೀಕ್ಷೆಯನ್ನು ತೆಗೆದುಕೊಂಡಿರುವ ಎಲ್ಲರ ಮನಸ್ಸಿನಲ್ಲಿ ಕಾತರ, ಆತಂಕ, ತಲ್ಲಣ ಭಯ ತುಂಬಿರುತ್ತದೆ. ಏಕೆಂದರೆ ಪೂರ್ವಭಾವಿ ಪರೀಕ್ಷೆಯಲ್ಲಿ ಅರ್ಹತೆಯನ್ನು ಗಳಿಸದೆ ಪುನಃ ನಿರುದ್ಯೋಗಿಯರಾಗಿ ಇಲ್ಲವೇ ಸ್ನೇಹಿತರ ಎದುರಿಗೆ ಅಪಹಾಸ್ಯ ಅಪಮಾನಕ್ಕೆ ಒಳಗಾಗಬೇಕಾಗುತ್ತದಲ್ಲಾ ಎಂಬ ಆತಂಕ ಮೂಡುತ್ತದೆ. ಆದರೆ ಕ್ರಮವರಿತು ಅಭ್ಯಾಸ ಮಾಡಿ ಸಿದ್ದತೆಗಳೊಂದಿಗೆ ಪರೀಕ್ಷೆಯನ್ನು ಎದುರಿಸಿದರೆ ಖಂಡಿತವಾಗಿ ಅರ್ಹತೆಗಳಿಸಿ ಮುಖ್ಯ ಪರೀಕ್ಷೆಗೆ ಪ್ರವೇಶ ಖಂಡಿತವಾಗಿ ದೊರೆಯುತ್ತದೆ. ಅದಕ್ಕಾಗಿ ಈ ಕೆಳ ಕಂಡ ಸೂಚನೆ ಸಲಹೆಗಳನ್ನು ಅನುಸರಿಸಬೇಕು.

ಪೂರ್ವಭಾವಿ ಪರೀಕ್ಷೆ

ಕೆ.ಎ.ಎಸ್. ಪೂರ್ವಭಾವಿ ಪರೀಕ್ಷೆಗಾಗಿ ಈಗಾಗಲೇ ಅರ್ಜಿ ಸಲ್ಲಿಸಿರುವಿರಿ. ಅರ್ಜಿ ಸಲ್ಲಿಸಿರುವ ನೀವುಗಳೆಲ್ಲ ಕಡ್ಡಾಯವಾಗಿ ಸಾಮಾನ್ಯ ಅಧ್ಯಯನದ ಪ್ರಶ್ನೆ ಪತ್ರಿಕೆಯನ್ನು ಉತ್ತರಿಸಲೇ ಬೇಕು. ಎರಡನೆಯದು ಐಚ್ಛಿಕ ಪತ್ರಿಕೆ- ಐಚ್ಛಿಕ ಪತ್ರಿಕೆಯಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವುದಕ್ಕಾಗಿ 30 ವಿಷಯಗಳಿರುತ್ತವೆ. ಇವುಗಳಲ್ಲಿ ಒಂದನ್ನು ನೀವು ಈಗಾಗಲೇ ಆಯ್ಕೆ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸಿರುವಿರಿ.

ಸಾಮಾನ್ಯ ಅಧ್ಯಯನಧ ಸಿದ್ದತೆ

ಸಾಮಾನ್ಯ ಅಧ್ಯಯನದ ಪತ್ರಿಕೆ ಕಡ್ಡಾಯವಾದ ಪತ್ರಿಕೆ. ಪರೀಕ್ಷೆ ತೆಗೆದುಕೊಳ್ಳುವ ಎಲ್ಲರೂ ಇದನ್ನು ಉತ್ತರಿಸಲೇ ಬೇಕಾಗುತ್ತದೆ. ಸಾಮಾನ್ಯ ಅಧ್ಯಯನ (General Studies) ಪತ್ರಿಕೆಯಲ್ಲಿ

1. ಸಾಮಾನ್ಯ ವಿಜ್ಞಾನ (General Science)
2. ರಾಜ್ಯ-ರಾಷ್ಟ್ರ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಘಟಿಸಿರುವ ಪ್ರಚಲಿತ ಘಟನೆ ಸಂಗತಿಗಳು
3. ಭಾರತೀಯ ಇತಿಹಾಸ
4. ವಿಶ್ವ ಭೂಗೋಳ
5. ಭಾರತೀಯ ರಾಜನೀತಿ ಹಾಗೂ ಆರ್ಥಿಕ ನೀತಿ
6. ಭಾರತೀಯ ರಾಷ್ಟ್ರೀಯ ಚಳುವಳಿ
7. ಮಾನಸಿಕ ಸಾಮರ್ಥ್ಯದ ಪರೀಕ್ಷೆ.

ಈ ಮೇಲ್ಕಂಡ ವಿಷಯಗಳನ್ನು ಸಾಮಾನ್ಯ ಅಧ್ಯಯನದ ಪತ್ರಿಕೆ ಒಳಗೊಂಡಿದ್ದು ಉತ್ತರಿಸುವ ಅವಧಿ 3 ಗಂಟೆಯದಾಗಿರುತ್ತದೆ. ಸಾಮಾನ್ಯ ಅಧ್ಯಯನದ ಪತ್ರಿಕೆ 150 ಅಂಕಗಳನ್ನೊಳಗೊಂಡಿದ್ದರೂ ಸಿದ್ದತೆ ಸಾಕಷ್ಟು ಬೇಕಾಗುತ್ತದೆ. ಸಿದ್ದತೆ ಇಲ್ಲದಿದ್ದರೆ ಖಂಡಿತವಾಗಿಯೂ ಉತ್ತರಿಸಲು ಸಾಧ್ಯವಾಗುವುದೇ ಇಲ್ಲ. ಆದ್ದರಿಂದ ಪರೀಕ್ಷಾರ್ಥಿಗಳು ಮೊದಲಿಗೆ ದಿನಪತ್ರಿಕೆ ವಾರ ಪತ್ರಿಕೆಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆಂದು ಹೊರ ಬರುತ್ತಿರುವ ಮಾಸಪತ್ರಿಕೆಗಳನ್ನು ಅಧ್ಯಯನ ಮಾಡಬೇಕು. ಇದರ ಜೊತೆಗೆ ಮುಖ್ಯವಾಗಿ ಎನ್‌ಸಿ ಇ ಆರ್ ಟಿ ಹೊರತಂದಿರುವ ಪುಸ್ತಕಗಳು ದಿಲ್ಲೊ ಸಾಮಾನ್ಯವಿಜ್ಞಾನ, ಭಾರತೀಯ ಕೃಷಿ ಸಮೀಕ್ಷೆ, ಮನೋರಮಾ ವಾರ್ಷಿಕ ಗ್ರಂಥ, ಎಂ.ಎಂ ಪಬ್ಲಿಕೇಷನ್ಸ್ (ಪೂರ್ವಭಾವಿ ಪರೀಕ್ಷೆಗಾಗಿ) ಇಂಡಿಯನ್ ಇಯರ್ ಬುಕ್, ಪಬ್ಲಿಕೇಷನ್ ಡಿವಿಷನ್ ಯುನಿಕ್ ಜನರಲ್ ಸ್ಟಡಿಸ್, ಪೂರ್ವಭಾವಿ ಪರೀಕ್ಷೆಗಾಗಿ ಎನ್.ಬಿ.ಟಿ. ಪ್ರಕಟಿಸಿರುವ ಇಂಡಿಯಾ ಎ ಜನರಲ್ ಸರ್ವೆ, ಇತ್ಯಾದಿ ಪುಸ್ತಕಗಳನ್ನು ಸಂಗ್ರಹಿಸಿ ಓದಬೇಕು, ಮುಖ್ಯವಾದ ಘಟನೆಗಳನ್ನು ಸಂಗತಿಗಳನ್ನು ವಿಶೇಷಗಳನ್ನು ಮೆಲುಕು ಹಾಕುತ್ತಿರಬೇಕು. ಸಮಾನ ಮನಸ್ಕ ಗೆಳೆಯರೊಂದಿಗೆ ಕುಳಿತು ಸಾಮಾನ್ಯ ಅಧ್ಯಯನಕ್ಕೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆಯ ವಿಚಾರಗಳನ್ನು ಚರ್ಚಿಸಬೇಕು. ನಾವು ತಿಳಿದುಕೊಂಡಿರುವ ವಿಚಾರಗಳು ಸರಿಯಾಗಿವೆಯೆ ಇಲ್ಲವೇ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಒಟ್ಟಾರೆ ಓದಿದ್ದನ್ನು ಮನನ ಮಾಡಬೇಕು. ಪ್ರಚಲಿತ ಘಟನೆಗಳನ್ನು ದಿನನಿತ್ಯ ಪತ್ರಿಕೆಗಳಲ್ಲಿ ವರದಿಯಾಗುತ್ತಿರುತ್ತವೆ. ಅವುಗಳನ್ನು ಒಂದು ನೋಟ್ ಬುಕ್ಕಿನಲ್ಲಿ ವಿಷಯಕ್ಕನುಗುಣವಾಗಿ ಬರೆದುಕೊಳ್ಳುತ್ತಾ ಹೋಗುವುದರಿಂದ ನಿಮಗೆ ಆಗಾಗ ಅವುಗಳನ್ನು ಓದುವುದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಸಾಮಾನ್ಯ ಅಧ್ಯಯನ ಪತ್ರಿಕೆಯಲ್ಲಿ ಮಾನಸಿಕ

ಸಾಮರ್ಥ್ಯವನ್ನು ಅಳೆಯುವ ಪ್ರಶ್ನೆಗಳಿರುತ್ತವೆ. ಈ ಮಾನಸಿಕ ಸಾಮರ್ಥ್ಯವನ್ನು ಅಳೆಯುವ ಪ್ರಶ್ನೆಗಳಿಗೆ ಉತ್ತರಿಸುವಾಗ ಮನಸ್ಸಿನ ಸೂಕ್ಷ್ಮತೆ ಬಹಳ ಮುಖ್ಯ. ಆದ್ದರಿಂದ ಮಾನಸಿಕ ಸಾಮರ್ಥ್ಯದ ಪ್ರಶ್ನೆಗಳನ್ನು ಬಿಡಿಸಿ, ಯಾವ ರೀತಿ ಉತ್ತರಗಳನ್ನು ಬರೆಯಬೇಕೆಂಬುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆಂದೇ ಹೊರಬರುತ್ತಿರುವ ಪತ್ರಿಕೆಗಳಲ್ಲಿ ಹಾಗೂ 'ಬಿಸಿಲ ಬದುಕು' ಮತ್ತು 'ಸುಧಾ'ದಲ್ಲಿ ಈ ರೀತಿಯ ಮಾನಸಿಕ ಸಾಮರ್ಥ್ಯವನ್ನು ಅಳೆಯುವ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವ ಪುಟಗಳಿರುತ್ತವೆ, ಅವುಗಳನ್ನು ಮೊದಲು ಅಧ್ಯಯನ ಮಾಡಿ ಅನಂತರ ಅಲ್ಲಿ ನೀಡಿರುವ ಉತ್ತರಗಳೊಂದಿಗೆ ನಿಮ್ಮ ಉತ್ತರಗಳನ್ನು ತಾಳೆ ನೋಡಿ ಸರಿಯಾಗಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಈ ರೀತಿಯಾಗಿ ಮಾನಸಿಕ ಸಾಮರ್ಥ್ಯದ ಪ್ರಶ್ನೆಗಳಿಗೆ ಸಿದ್ಧರಾಗಬೇಕಾಗುತ್ತದೆ.

ಐಚ್ಛಿಕ ವಿಷಯ


ಸಾಮಾನ್ಯ ಅಧ್ಯಯನದ ಪತ್ರಿಕೆಯ ನಂತರದ್ದು ಪತ್ರಿಕೆ ಐಚ್ಛಿಕ ವಿಷಯದ್ದು. ಸುಮಾರು 30 ವಿಷಯಗಳಲ್ಲಿ ನೀವು ಯಾವುದಾದರೂ ಒಂದು ವಿಷಯವನ್ನು ಈಗಾಗಲೇ ಆಯ್ಕೆ ಮಾಡಿಕೊಂಡಿರುತ್ತೀರಿ. ಇದೂ ಕೂಡಾ ವಸ್ತುನಿಷ್ಠ ಪ್ರಶ್ನೆಗಳ ಪತ್ರಿಕೆಯಾಗಿರುತ್ತದೆ. ಪೂರ್ವಭಾವಿ ಪರೀಕ್ಷೆಗಾಗಿ ಆರಿಸಿಕೊಂಡಿರುವ ಐಚ್ಛಿಕ ವಿಷಯಕ್ಕೆ ಸಂಬಂಧಿಸಿದಂತೆ ನೀವು ಮೊದಲು ಮಾಡಬೇಕಾದ ಕೆಲಸವೆಂದರೆ ಆ ವಿಷಯಕ್ಕೆ ಸಂಬಂಧಿಸಿದ ಉತ್ತಮವಾದ ಪರಾಮರ್ಶನ ಗ್ರಂಥಗಳನ್ನು ಸಂಗ್ರಹಿಸುವುದು. ಇಲ್ಲಿ ವಸ್ತುನಿಷ್ಠ ಪ್ರಶ್ನೆಗಳಿರುವುದರಿಂದ ಹಾಗೂ 300 ಅಂಕಗಳ ಪತ್ರಿಕೆಯಾಗಿರುವುದರಿಂದ ವಿಷಯದ ಮೇಲೆ ಸಾಕಷ್ಟು ಪ್ರಭುತ್ವವಿರಬೇಕು. ಪ್ರಭುತ್ವ ಎಂಬುದಕ್ಕಿಂತ ಎಲ್ಲಾ ಸಂಗತಿಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಏಕೆಂದರೆ ಯಾವ ಅಧ್ಯಯನದಲ್ಲಿ, ಯಾವ ಘಟನೆಯಲ್ಲಿ ಯಾವುದೋ ಒಂದು ಚಿಕ್ಕ ಅಂಶವನ್ನು ಪ್ರಶ್ನೆಯನ್ನಾಗಿ ಕೇಳಿಬಿಡಬಹುದು. ಆದ್ದರಿಂದ ಯಾವ ಅಧ್ಯಾಯ ಇಲ್ಲವೇ ಅಂಶಗಳನ್ನು ಬಿಡದೆ ಎಲ್ಲವನ್ನು ಆಮೂಲಾಗ್ರವಾಗಿ ಓದಬೇಕು. ಟಿಪ್ಪಣಿಗಳನ್ನು ಮಾಡಿಕೊಳ್ಳಬೇಕು ಮನನ ಮಾಡಿಕೊಳ್ಳುತ್ತಿರಬೇಕು. ನೀವು ಆರಿಸಿಕೊಂಡಿರುವ ಐಚ್ಛಿಕ ವಿಷಯದ ಯಾವುದೇ ಒಂದು ಸಣ್ಣ ಅಂಶ ಕೇಳಿದರೂ ಹೇಳುವಂತಹ ಜಾಣತನ ನಿಮ್ಮಲ್ಲಿರಬೇಕು. ಆ ರೀತಿಯಲ್ಲಿ ನೀವು ಸಿದ್ಧರಾಗಬೇಕಾಗುತ್ತದೆ.

ಪ್ರವೇಶ ಪತ್ರ

ಪೂರ್ವಭಾವಿ ಪರೀಕ್ಷೆಗಾಗಿ ಸಿದ್ಧರಾಗಿ ಪರೀಕ್ಷೆಯ ಪ್ರವೇಶ ಪತ್ರದ ನಿರೀಕ್ಷೆಯಲ್ಲಿರುವಾಗ ಪ್ರವೇಶ ಪತ್ರದ ಲಕೋಟೆ ಅಂಚೆಯಲ್ಲಿ ನಿಮ್ಮ ವಿಳಾಸಕ್ಕೆ ಬರುತ್ತದೆ. ಪ್ರವೇಶ ಪತ್ರದಲ್ಲಿ ಪರೀಕ್ಷಾ ಕೇಂದ್ರದ ಹೆಸರು, ನಿಮ್ಮ ನೋಂದಣಿ ಸಂಖ್ಯೆ, ಪರೀಕ್ಷೆಯ ದಿನಾಂಕ ಹಾಗೂ ವಿಷಯಗಳನ್ನು ನಮೂದಿಸಿರಲಾಗುತ್ತದೆ. ಒಂದು ವೇಳೆ ಪ್ರವೇಶ ಪತ್ರ ಬಾರದೆ ಇದ್ದಲ್ಲಿ ಪರೀಕ್ಷೆ ಇನ್ನೊಂದೆರಡು ದಿನ ಇದೆ ಎನ್ನುವಾಗಲೇ ಕರ್ನಾಟಕ ಲೋಕ ಸೇವಾ ಆಯೋಗದ ಕಛೇರಿಗೆ ಹೋಗಿ ಡೂಪ್ಲಿಕೇಟ್ ಪ್ರವೇಶ ಪತ್ರವನ್ನು ಕೋರಿ ಅರ್ಜಿ ಸಲ್ಲಿಸಿ ಅದನ್ನು ಪಡೆದುಕೊಳ್ಳಬೇಕು.

ಪ್ರವೇಶ ಪತ್ರ ತಲುಪಿದ ನಂತರ ಯಾವುದೇ ರೀತಿಯ ಗೊಂದಲ, ಆತಂಕ ಗಾಬರಿಗೆ ಅವಕಾಶ ನೀಡದೆ ಸಮಾಧಾನಚಿತ್ತದಿಂದ ಓದಿರುವ ವಿಷಯವನ್ನು ಮನಸ್ಸಿನಲ್ಲಿಯೇ ನೆನಪಿಸಿಕೊಂಡು ಸಮಸ್ಯೆಗಳಿಗೆ ಸಂಬಂಧಿಸಿದ ಉತ್ತರಗಳು ಸರಿಯಾಗಿವೆಯೇ ಇಲ್ಲವೇ ಎಂಬುದನ್ನು ತಾಳೆ ನೋಡುತ್ತಾ ಉತ್ತರಗಳನ್ನು ಖಚಿತಪಡಿಸಿಕೊಳ್ಳಬೇಕು. ಪರೀಕ್ಷೆಯ ದಿನ ಬೆಳಿಗ್ಗೆ ಮನೆಯಿಂದ ಹೊರಡುವ ಮೊದಲು ಪ್ರವೇಶ ಪತ್ರ, ಎಚ್. ಬಿ. ಪೆನ್ಸಿಲ್, ಪೆನ್ಸಿಲ್‌ನ್ನು ಆಗಾಗ ಹರಿತ ಗೊಳಿಸಿಕೊಳ್ಳಲು ಮೆಂಡರ್, ರಬ್ಬರ್, ಬಾಲ್‌ಪಾಯಿಂಟ್ ಪೆನ್ನು ಇವುಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಪ್ರವೇಶ ಪತ್ರದಲ್ಲಿನ ನಮೂದಿಸಿರುವ ಪರೀಕ್ಷಾ ಕೇಂದ್ರಕ್ಕೆ ನಿಗದಿ ಪಡಿಸಿರುವ ಅವಧಿಗಿಂತ ಅರ್ಧ ಗಂಟೆ ಮೊದಲೇ ತಲುಪಬೇಕು.

ಪರೀಕ್ಷಾ ಕೇಂದ್ರವನ್ನು ತಲುಪಿದ ಕೂಡಲೇ ತನ್ನದು ಯಾವ ಕೊಠಡಿ ಎಂಬುದನ್ನು ನೋಟಿಸ್ ಬೋರ್ಡಿನಲ್ಲಿ ನೋಡಿ ತಿಳಿದುಕೊಂಡು ಪರೀಕ್ಷಾ ಕೊಠಡಿಗೆ ಹೋಗಿ ತನಗೆ ನಿಗಡಿಪಡಿಸಿರುವ ಅಂದರೆ ನೋಂದಣಿ ಸಂಖ್ಯೆ ಇರುವ ಬೆಂಚು ಇಲ್ಲವೇ ಡೆಸ್ಕಿನಲ್ಲಿ ಕುಳಿತುಕೊಳ್ಳಬೇಕು. ಪರೀಕ್ಷೆ ಪ್ರಾರಂಭವಾಗುವುದಕ್ಕೆ ಮೊದಲು ಕೊಠಡಿಯ ಮೇಲ್ವಿಚಾರಕರು ಬಂದು ಪ್ರಶ್ನೆಪತ್ರಿಕೆಗಳನ್ನು ನೀಡುವುದಕ್ಕೆ ಮೊದಲು ಎರಡು ಬಾರಿ ಗಂಟೆ ಬಾರಿಸುತ್ತಾರೆ. ಮೊದಲನೇ ಗಂಟೆ ಬಾರಿಸಿದಾಕ್ಷಣ ಕೊಠಡಿ ಮೇಲ್ವಿಚಾರಕರು ಬರುತ್ತಾರೆ. ಪರೀಕ್ಷಾರ್ಥಿಗಳೆಲ್ಲರೂ ಬಂದು ತಮಗೆ ನಿಗದಿ ಪಡಿಸಿರುವ ಸ್ಥಳಗಳಲ್ಲಿ ಕುಳಿತುಕೊಳ್ಳುತ್ತಾರೆ. ಎರಡನೇ ಗಂಟೆ ಬಾರಿಸಿದಾಕ್ಷಣ ಕೊಠಡಿ ಮೇಲ್ವಿಚಾರಕರು ಉತ್ತರಪತ್ರಿಕೆಗಳನ್ನು ಎಲ್ಲರಿಗೂ ನೀಡುತ್ತಾರೆ. ಈ ಸಮಯದಲ್ಲಿ ಪರೀಕ್ಷಾರ್ಥಿಗಳು ಯಾವುದೇ ಉದ್ವೇಗ, ಆವೇಶ, ಗಾಬರಿ, ಆತಂಕಕ್ಕೆ ಒಳಗಾಗಬಾರದು. ಏಕೆಂದರೆ ಆತಂಕಗೊಂಡರೆ ಓದಿದ್ದೆಲ್ಲವನ್ನು ಮರೆಯಬೇಕಾಗುತ್ತದೆ. ಆದ್ದರಿಂದ ಗಾಬರಿಗೊಳ್ಳದೆ ಸಮಾಧಾನದಿಂದ ಪ್ರಶ್ನೆಪತ್ರಿಕೆಯನ್ನು ತೆಗೆದುಕೊಂಡು ಅದನ್ನು ಎಚ್ಚರಿಕೆಯಿಂದ ಓದಬೇಕು.



ಮೊದಲೇ ತಿಳಿಸಿದಂತೆ ನೀವು ತೆಗೆದುಕೊಂಡು ಹೋಗಿರುವ ಪೆನ್ಸಿಲ್‌ನ್ನೋ ಇಲ್ಲವೇ ಬಾಲ್ ಪಾಯಿಂಟ್ ಪೆನ್ನನ್ನೋ ರೆಡಿಯಾಗಿರಿಸಿಕೊಂಡು, ಪ್ರಶ್ನೆಪತ್ರಿಕೆಯನ್ನು ಓದುತ್ತಾ ಹೋಗಬೇಕು. ಪ್ರಶ್ನೆ ಪತ್ರಿಕೆಯು ವಸ್ತುನಿಷ್ಠ ವಾಗಿರುವುದರಿಂದ ಪ್ರಶ್ನೆ ಪತ್ರಿಕೆಯಲ್ಲಿಯೇ ಉತ್ತರಗಳನ್ನು ಆಯ್ಕೆ ಮಾಡಿ ಗುರುತಿಸಬೇಕಾಗುತ್ತದೆ. ಪ್ರಶ್ನೆ ಪತ್ರಿಕೆ ಓದುತ್ತಿರುವಂತೆ ನಿಮಗೆ ಆಯಾ ಪ್ರಶ್ನೆಗೆ ಖಚಿತವಾಗಿ ಉತ್ತರ ಹೊಳೆದರೆ ಅದನ್ನು ತಕ್ಷಣ ಗುರುತು ಹಾಕಬೇಕು. ಇಡೀ ಪ್ರಶ್ನೆಪತ್ರಿಕೆಯನ್ನು ಓದುತ್ತಾ ಕಾಲಕಳೆಯಬಾರದು. ಒಂದು ಪ್ರಶ್ನೆ

ಓದಬೇಕು. ಉತ್ತರ ಹೊಳೆದರೆ ಗುರುತಿಸಬೇಕು ಹೊಳೆಯದಿದ್ದರೆ ಮುಂದಿನ ಪ್ರಶ್ನೆ ಓದಬೇಕು. ಅದಕ್ಕೂ ಖಚಿತ ಉತ್ತರ ಹೊಳೆಯದಿದ್ದರೆ ಮುಂದಿನ ಪ್ರಶ್ನೆ ಓದಬೇಕು. ಈ ರೀತಿ ಮೊದಲ ಸುತ್ತಿನಲ್ಲಿ ತಕ್ಷಣಕ್ಕೆ ಹೊಳೆಯುವ ಉತ್ತರಗಳನ್ನು ಗುರುತಿಸಿಬಿಡಬೇಕು.

ಎರಡನೇ ಹಂತದಲ್ಲಿ ಉತ್ತರಗಳು ಹೊಳೆಯದಿರುವ ಪ್ರಶ್ನೆಗಳನ್ನು ಆರಿಸಿಕೊಂಡು ಯೋಚಿಸಿ ಸರಿಯಾದ ಉತ್ತರಗಳನ್ನು ಆರಿಸಿ ಗುರುತಿಸಬೇಕು. ಸರಿ ಉತ್ತರಗಳು ಹೊಳೆಯದಿದ್ದರೆ ಅವುಗಳನ್ನು ಪುನಃ ಹಾಗೆಯೆ ಬಿಟ್ಟು ಮುಂದಿನ ಪ್ರಶ್ನೆಗಳಿಗೆ ಉತ್ತರಿಸಬೇಕು. ಈ ಹಂತದಲ್ಲಿ ಬಹಳಷ್ಟು ಪ್ರಶ್ನೆಗಳಿಗೆ ಉತ್ತರಗಳನ್ನು ಗುರುತಿಸುವ ಕಾರ್ಯ ಮುಗಿದಿರುತ್ತದೆ.

ಕೊನೆಯ ಹಂತದಲ್ಲಿ ಉಳಿದಿರುವ ಪ್ರಶ್ನೆಗಳನ್ನು ಓದುತ್ತಾ ಸರಿಯಾದ ಖಚಿತವಾದ ಉತ್ತರಗಳನ್ನು ಗುರುತಿಸುವ ಕೆಲಸ ಮಾಡಬೇಕು. ಈ ರೀತಿ ಮಾಡುವುದರಿಂದ ಸಮಯವನ್ನು ಉಳಿಸಬಹುದು. ಯಾವುದೋ ಪ್ರಶ್ನೆಗೆ ಉತ್ತರ ಹೊಳೆಯಲಿಲ್ಲವೆಂದು ಅದನ್ನೇ ಕುರಿತು ಯೋಚಿಸುತ್ತಾ ಕೆಣುಕುತ್ತಾ ಕುಳಿತುಕೊಂಡರೆ ಕಾಲ ಅಪವ್ಯಯವಾಗಿಬಿಡುತ್ತದೆ. ವೇಳೆ ಸಾಕಾಗದೆ ಗೊತ್ತಿರುವ ಪ್ರಶ್ನೆಗಳಿಗೂ ಉತ್ತರಗಳನ್ನು ಗುರುತು ಮಾಡಲಾಗದೆ ಪರೀಕ್ಷಾ ಕೊಠಡಿಯಿಂದ ಹೊರಬರಬೇಕಾಗುತ್ತದೆ. ಆದ್ದರಿಂದ ಮೇಲೆ ತಿಳಿಸಿದ ರೀತಿಯಲ್ಲಿ ಪ್ರಶ್ನೆಗಳಿಗೆ. ಉತ್ತರಗಳನ್ನು ಗುರುತು ಮಾಡುವುದು ಉಪಯುಕ್ತವಾದದ್ದು.

ಮಾನಸಿಕ ಸಾಮರ್ಥ್ಯವನ್ನು ಅಳೆಯುವ ಪ್ರಶ್ನೆಗಳನ್ನು ಉತ್ತರಿಸುವಾಗಲಂತೂ ಎಚ್ಚರಿಕೆಯಿಂದ ಗುರುತಿಸಬೇಕು. ಗಣಿತ, ಕೆಲವು ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸಿ ಉತ್ತರ ಗುರುತಿಸ ಬೇಕಾದರೆ ನೀವು ಪ್ರತ್ಯೇಕ ಹಾಳೆಯಲ್ಲಿ ಕಚ್ಚಾ ರೀತಿಯಲ್ಲಿ ಬರೆದು ಗುರುತಿಸಬೇಕು. ಅದಕ್ಕಾಗಿ ಪರೀಕ್ಷಾ ಕೊಠಡಿಯ ಮೇಲ್ವಿಚಾರಕರ ಅಪ್ಪಣೆಯನ್ನು ಪಡೆದು ಒಂದು ಖಾಲಿ ಹಾಳೆಯನ್ನು ಜೊತೆಯಲ್ಲಿಟ್ಟುಕೊಳ್ಳುವುದು ಉತ್ತಮ.

ಇದೇ ರೀತಿ ಐಚ್ಛಿಕ ಪ್ರಶ್ನೆ ಪತ್ರಿಕೆಯನ್ನು ಓದಿ ಉತ್ತರವನ್ನು ಗುರುತಿಸುವ ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ಸಮಯದ ಅಭಾವವುಂಟಾಗುತ್ತದೆ. ಸಮಯದ ಅಭಾವದಿಂದ ಗೊತ್ತಿರುವ ಪ್ರಶ್ನೆಗಳಿಗೂ ಉತ್ತರಗಳನ್ನು ಬರೆಯಲಾಗದ ಪರಿಸ್ಥಿತಿಯನ್ನು ಯಾವುದೇ ಕಾರಣಕ್ಕೂ ನಿರ್ಮಾಣ ಮಾಡಿಕೊಳ್ಳಬಾರದು.

ಪೂರ್ವಭಾವಿ ಪರೀಕ್ಷೆಯ ನಂತರ ಏನು ಮಾಡಬೇಕು ?

ಪೂರ್ವಭಾವಿ ಪರೀಕ್ಷೆಯಲ್ಲಿ ಸರಿಯಾಗಿ ಉತ್ತರಗಳನ್ನು ಗುರುತಿಸಿದ್ದೇನೆ, ಮುಖ್ಯ ಪರೀಕ್ಷೆಗೆ ಅರ್ಹನಾಗುತ್ತೇನೆ ಎಂಬ ವಿಷಯ ಪೂರ್ವಭಾವಿ ಪರೀಕ್ಷೆ ಮುಗಿದ ಕೂಡಲೇ ಪರೀಕ್ಷಾರ್ಥಿಗೆ ತಿಳಿಯುತ್ತದೆ. ಆಗ ಪೂರ್ವಭಾವಿ ಪರೀಕ್ಷೆಯ ಫಲಿತಾಂಶ ಬರಲಿ, ಆನಂತರ ಅಭ್ಯಾಸ ಮುಂದುವರಿಸೋಣ ಎಂದು ಕಾಲ ಹರಣ ಮಾಡುತ್ತಾ ಕುಳಿತುಕೊಳ್ಳಬಾರದು. ಪೂರ್ವಭಾವಿ ಪರೀಕ್ಷೆ ಮುಗಿದಾಕ್ಷಣ, ಮುಖ್ಯ ಪರೀಕ್ಷೆಗೆ ತೆಗೆದುಕೊಳ್ಳುವ ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳಬೇಕು. ಮುಖ್ಯಪರೀಕ್ಷೆಯಲ್ಲಿ ಈ ಕೆಳಗಿನಂತೆ ಪ್ರಶ್ನೆ ಪತ್ರಿಕೆಗಳಿರುತ್ತವೆ.

ಪತ್ರಿಕೆ - 1 ಕನ್ನಡ - 300 ಅಂಕಗಳು

ಪತ್ರಿಕೆ - 2 ಇಂಗ್ಲಿಷ್ - 300 ಅಂಕಗಳು.

ಪತ್ರಿಕೆ 3-4 ಸಾಮಾನ್ಯ ಅಧ್ಯಯನ ಪ್ರತಿ ಪತ್ರಿಕೆಗೆ 300 ಅಂಕಗಳು

ಪತ್ರಿಕೆ 5, 6 ಮತ್ತು 7 ಇದರಲ್ಲಿ ಎರಡು ಐಚ್ಛಿಕ ವಿಷಯಗಳನ್ನು ಐಚ್ಛಿಕ ಪಟ್ಟಿಯಲ್ಲಿ ಆರಿಸಿಕೊಳ್ಳಬೇಕು. ಪ್ರತಿ ಐಚ್ಛಿಕ ವಿಷಯದಲ್ಲಿ 2 ಪತ್ರಿಕೆಗಳಿರುತ್ತವೆ.

ಪತ್ರಿಕೆ - 1, ಮತ್ತು ಪತ್ರಿಕೆ 2 ಮತ್ತು ಪತ್ರಿಕೆ 3-4 ಇವು ಕಡ್ಡಾಯವಾಗಿರುತ್ತವೆ. ಪತ್ರಿಕೆ -1 ಮತ್ತು ಪತ್ರಿಕೆ-2 ಇವುಗಳಲ್ಲಿ ಕಡ್ಡಾಯವಾಗಿ ಶೇ. 35ರಷ್ಟು ಅಂಕಗಳು ಬರಲೇ ಬೇಕು. ಒಂದು ಪತ್ರಿಕೆಯಲ್ಲಿ ಶೇ. 40 ಬಂದಿದ್ದು ಮತ್ತೊಂದು ಪತ್ರಿಕೆಯಲ್ಲಿ ಶೇ. 30 ಬಂದರೂ ಅರ್ಹತೆಯನ್ನು ಗಳಿಸಲಾಗುತ್ತದೆ. ಪತ್ರಿಕೆ 1 ಮತ್ತು ಪತ್ರಿಕೆ 2 ಇವು ಪದವಿ ಪ್ರಶ್ನೆ ಪತ್ರಿಕೆಗಳ ಮಟ್ಟದಲ್ಲಿರುತ್ತವೆ. ಆದ್ದರಿಂದ ಇವುಗಳನ್ನು ಪರೀಕ್ಷಾರ್ಥಿಗಳು ಎಚ್ಚರಿಕೆಯಿಂದ ಓದತೊಡಗಬೇಕು. ಓದದಿದ್ದರೆ ಇದರಲ್ಲಿ ಅರ್ಹರಾಗುವುದಿಲ್ಲ. ಈ ವಿಷಯಗಳಲ್ಲಿ ಅರ್ಹತೆಯನ್ನು ಗಳಿಸದಿದ್ದರೆ ಮುಖ್ಯ ಪರೀಕ್ಷೆಯ ಇತರೆ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದಿಲ್ಲ. ಆದ್ದರಿಂದ ಪೂರ್ವಭಾವಿ ಪರೀಕ್ಷೆಯಾದಾಕ್ಷಣ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳ ವಿಷಯಾನುಕ್ರಮಣಿಕೆಯನ್ನು ಪರಿಶೀಲಿಸಿ ಓದತೊಡಗಬೇಕು.


ಪತ್ರಿಕೆ - 1 - ಕನ್ನಡ

1. ಗ್ರಹಣ ಸಾಮರ್ಥ್ಯ
2. ನುಡಿಗಟ್ಟುಗಳನ್ನು ಬಳಸುವುದು
3. ಸಂಕ್ಷಿಪ್ತಗೊಳಿಸುವುದು
4. ಶಬ್ದ-ಅರ್ಥಗಳ ತಿಳುವಳಿಕೆ
5. ಪ್ರಬಂಧ ರಚನೆ.
6. ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರ.


ಇಷ್ಟು ವಿಷಯಗಳನ್ನು ಕನ್ನಡ ಪತ್ರಿಕೆ ಒಳಗೊಂಡಿರುತ್ತದೆ. ಇದಕ್ಕೆ ಸಂಬಂಧಿಸಿದ ವ್ಯಾಕರಣ ಗ್ರಂಥಗಳನ್ನು ಕನ್ನಡ ವಾರ, ಮಾಸ ಪತ್ರಿಕೆಗಳನ್ನು ದಿನ ಪತ್ರಿಕೆಗಳನ್ನು ಓದಬೇಕು.

ಪತ್ರಿಕೆ - 2 ಇಂಗ್ಲಿಷ್

1. ಗ್ರಹಣ ಸಾಮರ್ಥ್ಯ



ಶಾಂತಿ ಒಪ್ಪಂದಕ್ಕೆ ಇರಾಕ್ ಸಹಿ



2. ಸಂಕ್ಷಿಪ್ತಗೊಳಿಸುವುದು
3. ನುಡಿಗಟ್ಟುಗಳನ್ನು ಬಳಸುವುದು
4. ಶಬ್ದ-ಅರ್ಥಗಳನ್ನು ಗುರುತಿಸುವುದು
5. ಪ್ರಬಂಧ ಬರೆಯುವುದು
6. ಸಂವಹನಾ ಸಾಮರ್ಥ್ಯ.

ಈ ಮೇಲಿನ ಅಂಶಗಳನ್ನು ಇಂಗ್ಲಿಷ್ ಪತ್ರಿಕೆ ಒಳಗೊಂಡಿರುತ್ತದೆ. ಆದ್ದರಿಂದ ಇದಕ್ಕೆ ಸಂಬಂಧಿಸಿದ ವ್ಯಾಕರಣ ಗ್ರಂಥಗಳನ್ನು, ಇಂಗ್ಲಿಷ್ ದಿನಪತ್ರಿಕೆ, ವಾರಪತ್ರಿಕೆಗಳನ್ನು ಓದಬೇಕು. ಓದಿ ಟಿಪ್ಪಣಿಗಳನ್ನು ಮಾಡಿಕೊಳ್ಳಬೇಕು. ಇವು ಕಡ್ಡಾಯ ಪತ್ರಿಕೆಗಳಾಗಿದ್ದು ಸರಾಸರಿ ಎರಡೂ ಪತ್ರಿಕೆಗಳಿಂದ ಶೇ. 35 ಅಂಕಗಳು ಬರಲೇಬೇಕಾಗಿರುವುದರಿಂದ ಹೆಚ್ಚಿನ ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು.

ಪತ್ರಿಕೆ 3 - ಸಾಮಾನ್ಯ ಅಧ್ಯಯನ

ಆಧುನಿಕ ಭಾರತದ ಸಂಸ್ಕೃತಿ, ಇತಿಹಾಸವನ್ನೊಳಗೊಂಡಿದ್ದು ವಿಶೇಷವಾಗಿ ಕರ್ನಾಟಕ ಸಂಸ್ಕೃತಿ ಮತ್ತು ಇತಿಹಾಸವನ್ನೇ ಸಂಬಂಧಿಸಿದ್ದಾಗಿರುತ್ತದೆ. ಆದ್ದರಿಂದ ಆಧುನಿಕ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಉತ್ತಮವಾದ ಆಕರ ಗ್ರಂಥಗಳನ್ನು ಅಧ್ಯಯನ ಮಾಡಬೇಕು ಹಾಗೂ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಗಳನ್ನು ಸಂಬಂಧಿಸಿದ ಗ್ರಂಥಗಳನ್ನು ಅಧ್ಯಯನ ಮಾಡಬೇಕು.

ಪತ್ರಿಕೆ-4 ಸಾಮಾನ್ಯ ಅಧ್ಯಯನ

ಭಾರತೀಯ ರಾಜನೀತಿ ವಿಶೇಷವಾಗಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಇರುತ್ತದೆ. ಭಾರತೀಯ ಆರ್ಥಿಕ ನೀತಿ, ಭೂಗೋಳವು ವಿಶೇಷವಾಗಿ ಕರ್ನಾಟಕವನ್ನು ದೃಷ್ಟಿಯಲ್ಲಿಟ್ಟು ಕೊಂಡಿರಲಾಗುತ್ತದೆ. ಹಾಗೆಯೇ ವಿಜ್ಞಾನ ತಾಂತ್ರಿಕತೆ, ಕಲೆ, ಸಾಹಿತ್ಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿರುತ್ತವೆ. ಆದ್ದರಿಂದ ಕರ್ನಾಟಕ ಮತ್ತು ಭಾರತದ ಸಾಂಸ್ಕೃತಿಕ ಇತಿಹಾಸ, ವಿಜ್ಞಾನ ಕಲೆ ಮತ್ತು ತಂತ್ರಜ್ಞಾನ ಇವುಗಳನ್ನು ಅಧ್ಯಯನ ಮಾಡಬೇಕಾಗುತ್ತದೆ.

ಪತ್ರಿಕೆ - 5,6, 7 ಮತ್ತು 8 ಐಚ್ಛಿಕ ವಿಷಯಗಳಾಗಿರುವುದರಿಂದ ಸುಲಭವಾಗಿ ಗ್ರಹಿಸಿ ಉತ್ತರ ಬರೆಯುತ್ತೇನೆಂಬ ಆತ್ಮವಿಶ್ವಾಸವಿರುವ ವಿಷಯಗಳನ್ನು ಆರಿಸಿಕೊಂಡು ಓದತೊಡಗಬೇಕು.

ಪೂರ್ವಭಾವಿ ಪರೀಕ್ಷೆಯಲ್ಲಿ ಮುಖ್ಯ ಪರೀಕ್ಷೆಗೆ ಅರ್ಹತೆ ಗಳಿಸಿದಾಗ ಮಾತ್ರ ಓದಲು ಪ್ರಾರಂಭಿಸಿಬೇಕು ಎಂದು ಕೈ ಕಟ್ಟಿ ಕೂರದೆ ಮೇಲಿನ ವಿಷಯಗಳನ್ನು ಓದಲು ತೊಡಗಬೇಕು. ಈ ರೀತಿ ಓದುತ್ತಾ ಹೋದಂತೆ ಪ್ರವೇಶ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿ ನೀವು ಅರ್ಹತೆಗಳಿಸಿದರೆ ಇಲ್ಲಿಯವರೆಗೂ ಓದಿರುವ ವಿಷಯಗಳಿಂದ ನಿಮ್ಮಲ್ಲಿ ಇನ್ನೂ ಹೆಚ್ಚಿನ ಆತ್ಮ ವಿಶ್ವಾಸ ಉಂಟಾಗುತ್ತದೆ. ಮತ್ತಷ್ಟು ಹೆಚ್ಚಿನ ಅಧ್ಯಯನದಿಂದ ಮುಖ್ಯ ಪರೀಕ್ಷೆಗಾಗಿ ಸಿದ್ಧವಾಗಲು ಮನಸ್ಸು ವಾಲುತ್ತದೆ. ಅಪ್ರಜ್ಞಾಪೂರ್ವಕವಾಗಿಯೇ ನಿಮ್ಮಲ್ಲಿ ಶ್ರದ್ಧೆ ಉತ್ಸಾಹಗಳು ಮೂಡುತ್ತವೆ. ಹೆಚ್ಚು ಹೆಚ್ಚು ಓದಲು ತೊಡಗಿ ಅನಾಯಾಸವಾಗಿ ಮುಖ್ಯ ಪರೀಕ್ಷೆಯನ್ನು ಎದುರಿಸಲು ಸಾಧ್ಯವಾಗುತ್ತದೆ.

ಒಂದು ವೇಳೆ ಪೂರ್ವಭಾವಿ ಪರೀಕ್ಷೆಯಲ್ಲಿ ಅರ್ಹತೆಗಳಿಸದಿದ್ದರೆ ನಿರಾಶರಾಗಬೇಕಿಲ್ಲ. ಮುಖ್ಯ ಪರೀಕ್ಷೆ ಪತ್ರಿಕೆ- 1, ಪತ್ರಿಕೆ -2, ಪತ್ರಿಕೆ- 3, ಮತ್ತು 4 ಕ್ಕೆ ಹಾಗೂ ಐಚ್ಛಿಕ ವಿಷಯ, ಪತ್ರಿಕೆ 5,6,7,8 ಇವುಗಳಿಗೆ ನೀವು ತಯಾರಿ ನಡೆಸಿ ಮಾನಸಿಕವಾಗಿ ಸಿದ್ಧರಾಗಿದ್ದು ಪುನಃ ನಿಮ್ಮ ನೆರವಿಗೆ ಬರುತ್ತದೆ. ಮತ್ತೊಂದು ಸಲ ಪೂರ್ವಭಾವಿ ಪರೀಕ್ಷೆಗೆ ನೀವು ಹಾಜರಾದರೆ ನಿಮಗೆ ಯಶಸ್ಸು ಕಟ್ಟಿಟ್ಟಬುತ್ತಿ. ನೀವು ಖಂಡಿತವಾಗಿಯೂ ಪೂರ್ವಭಾವಿ ಪರೀಕ್ಷೆ ಹಾಗೂ ಮುಖ್ಯ ಪರೀಕ್ಷೆಯನ್ನು ಯಶಸ್ವಿಯಾಗಿ ಎದುರಿಸಿ ಕರ್ನಾಟಕ ಸರ್ಕಾರದ ಆಡಳಿತ ಸೇವೆಯಲ್ಲಿ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸುವಂತಾಗುವಿರಿ. ಆದ್ದರಿಂದ ಇಂದೇ ಮೇಲಿನ ಸೂಚನೆಗಳನ್ನು ಪಾಲಿಸಿ ಜಯಶೀಲರಾಗಿ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳು ಗಮನಿಸಿ!

- ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಮಾನ್ಯತೆ ಪಡೆದ ಮೆಟ್ರಿಕ್ ನಂತರದ ಕೋರ್ಸುಗಳನ್ನು ಮುಂದುವರೆಸುವ ಸಲುವಾಗಿ ನೀವು ಮಾಸಿಕ ಶಿಷ್ಯವೇತನವನ್ನು ಪಡೆಯಬಹುದಾಗಿದೆ. ಹಾಸ್ಟಲರ್ ಆಗಿದ್ದರೆ ೪೨೫ ರೂಪಾಯಿಗಳು ಮತ್ತು ದೈನಂದಿನ ಶಿಷ್ಯವೇತನವಾದರೆ ೧೯೦ ರೂಪಾಯಿಗಳಾಗಿರುತ್ತವೆ.
- ಶೈಕ್ಷಣಿಕ ಸಂಸ್ಥೆಗಳು ವಿಧಿಸುವ ಮರುಪಾವತಿ ಮಾಡಲಾಗದ ಕಡ್ಡಾಯ ಶುಲ್ಕವನ್ನು ಸಹ ಒದಗಿಸಲಾಗುತ್ತದೆ.
- ಅಂಚೆತೆರಪಿನ, ದೂರದ ಹಾಗೂ ನಿರಂತರ ಶಿಕ್ಷಣ ಪದ್ಧತಿಗಳ ಮೂಲಕ ಮುಂದುವರೆಸುವ ಸಂಬಂಧದಲ್ಲಿನ ಕೋರ್ಸುಗಳಿಗೂ ಕೋರ್ಸ್‌ಶುಲ್ಕವನ್ನು ಒದಗಿಸಲಾಗುತ್ತದೆ. ಇದಲ್ಲದೇ ಅವಶ್ಯಕ ಪುಸ್ತಕಗಳಿಗಾಗಿ ವಾರ್ಷಿಕ ೫೦೦ ರೂಪಾಯಿಗಳನ್ನು ಮಂಜೂರು ಮಾಡಲಾಗುವುದು.
- ಮೇಲಿನ ನೆರವನ್ನು ಪಡೆಯುವ ಸಲುವಾಗಿ ಅರ್ಹತೆ ಗಳಿಸಲು ತಂದೆ ತಾಯಿಯ/ಪೋಷಕರ ವಾರ್ಷಿಕ ಆದಾಯ ೪೪,೫೦೦ ರೂಪಾಯಿಗಳನ್ನು ಮೀರಿರಬಾರದು.
- ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗಾಗಿ ನೀಡಲಾಗುವ ಮೆಟ್ರಿಕ್ ನಂತರದ ಶಿಷ್ಯವೇತನದ ಕೇಂದ್ರ ಆಯೋಜಿತ ಯೋಜನೆಯ ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ನಿಮ್ಮ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿರುವ ನಿಮ್ಮ ಶೈಕ್ಷಣಿಕ ಸಂಸ್ಥೆ ಹಾಗೂ ಜಿಲ್ಲಾ ಸಮಾಜ ಕಲ್ಯಾಣ ಕಛೇರಿಗಳು / ಸಮಾಜ ಕಲ್ಯಾಣ ನಿರ್ದೇಶನಾಲಯವನ್ನು (ಎಸ್‌ಸಿ ಮತ್ತು ಎಸ್‌ಟಿ ಅಭಿವೃದ್ಧಿ) ಸಂಪರ್ಕಿಸಿ.

1998-99ನೇ ಸಾಲಿಗೆ ಬಿ.ಇಡಿ ಕೋರ್ಸ್ ದಾಖಲಾತಿಗಾಗಿ ಅರ್ಜಿ

1998-99ನೇ ಸಾಲಿಗೆ ಬಿ.ಇಡಿ. ಕೋರ್ಸಿನ ವ್ಯಾಸಂಗಕ್ಕಾಗಿ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಮಾನ್ಯತೆ ಪಡೆದ ಶಿಕ್ಷಕ-ಶಿಕ್ಷಣ ಮಹಾವಿದ್ಯಾಲಯಗಳಿಗೆ ಸರ್ಕಾರಿ ಸೀಟುಗಳನ್ನು ತುಂಬಲು ಕರ್ನಾಟಕದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಏಪ್ರಿಲ್ 98ರಲ್ಲಿ ಅಂತಿಮ ವರ್ಷದ ಬಿ.ಎ/ ಬಿ.ಎಸ್ಸಿ ಪರೀಕ್ಷೆಗಳನ್ನು ತೆಗೆದುಕೊಂಡಿರುವ ಅಭ್ಯರ್ಥಿಗಳು ಪರೀಕ್ಷಾ ಪ್ರವೇಶ ಪತ್ರದ ಫೋಟೋ ಪ್ರತಿಯೊಂದಿಗೆ ಅರ್ಜಿ ಸಲ್ಲಿಸುವುದು. ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಕಡ್ಡಾಯವಾಗಿ ಸಿಂಧುತ್ವ ಪ್ರಮಾಣ ಪತ್ರ ಸಲ್ಲಿಸಬೇಕು. ಪ್ರವರ್ಗ - 1, 2ಎ, 2ಬಿ, 3ಎ, ಮತ್ತು 3ಬಿ ಗುಂಪಿಗೆ ಸೇರಿದ ಅಭ್ಯರ್ಥಿಗಳು ಮೀಸಲಾತಿ ಅನ್ವಯ ಕಾಯ್ದಿರಿಸಿದ ಸ್ಥಾನಗಳಲ್ಲಿ ಆಯ್ಕೆ ಬಯಸಿದಲ್ಲಿ ದಾಖಲಾತಿ ಸಮಯದಲ್ಲಿ ಕಡ್ಡಾಯವಾಗಿ ಸಿಂಧುತ್ವ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ತಪ್ಪಿದಲ್ಲಿ ಇಂತಹ ಅಭ್ಯರ್ಥಿಗಳನ್ನು ದಾಖಲು ಮಾಡಲಾಗುವುದಿಲ್ಲ.

1. ವಿದ್ಯಾರ್ಹತೆ :

ಬಿ.ಎ ಅಥವಾ ಬಿ.ಎಸ್ಸಿ ಪದವಿಯಲ್ಲಿ ತೇರ್ಗಡೆಯಾಗಿರಬೇಕು. ಒಟ್ಟು ಮೂರು ವರ್ಷಗಳ ಪದವಿಯಲ್ಲಿ ಆಂತರಿಕ ಮೌಲ್ಯ ಮಾಪನದ ಅಂಕಗಳು ಹಾಗೂ ತರಬೇತಿ ಪರೀಕ್ಷೆ ಅಂಕಗಳನ್ನು ಹೊರತು ಪಡಿಸಿ, ಕನಿಷ್ಠ ಶೇಕಡ 50 ಅಂಕಗಳನ್ನು ಪಡೆದಿರಬೇಕು. ಪರಿಶಿಷ್ಟ ಜಾತಿ, ಪ. ಪಂಗಡ, ಪ್ರವರ್ಗ - 1 ಮತ್ತು ಅಂಗವಿಕಲ ಅಭ್ಯರ್ಥಿಗಳು ಕನಿಷ್ಠ ಶೇಕಡ 45 ಅಂಕಗಳನ್ನು ಪಡೆದಿರಬೇಕು.

2. ಅರ್ಜಿ ಹಾಗೂ ನೋಂದಣಿ ಶುಲ್ಕ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ರೂ. 70.00- ಹಾಗೂ ಇತರೆ ಎಲ್ಲಾ ಅಭ್ಯರ್ಥಿಗಳಿಗೆ ರೂ. 120.00 ಜೊತೆಗೆ ಎಲ್ಲಾ ಅಭ್ಯರ್ಥಿಗಳು ಬ್ಯಾಂಕ್ ಕಮಿಷನ್ ರೂ. 5.00 ಅನ್ನು ಪ್ರತ್ಯೇಕವಾಗಿ ಪಾವತಿ ಮಾಡುವುದು. ಈ ಹಣವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ನಿಗದಿಪಡಿಸಿದ ಶಾಖೆಯಲ್ಲಿ ಬ್ಯಾಂಕ್ ಚಲನ್ ಮೂಲಕ ಪಾವತಿ ಮಾಡಬೇಕು. ಹಾಗೂ ಬ್ಯಾಂಕ್ ಚಲನ್ ಅನ್ನು ಸಂಬಂಧಪಟ್ಟ ವ್ಯವಸ್ಥಾಪಕ ಕೇಂದ್ರದಲ್ಲಿ ಸಲ್ಲಿಸಿ ಅರ್ಜಿ ನಮೂನೆ ಹಾಗೂ ಮಾಹಿತಿ ಪುಸ್ತಕ ಪಡೆಯುವುದು.

3. ಅರ್ಜಿ ದೊರೆಯುವ ದಿನಾಂಕ :

ದಿನಾಂಕ 1.6.1998 ರಿಂದ 10.6.1998

4. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ :

10.6.1998 ಸಂಜೆ 5.00 ಗಂಟೆಯೊಳಗೆ

ಅರ್ಜಿ ದೊರೆಯುವ ಮತ್ತು ಭರ್ತಿ ಮಾಡಿದ ಅರ್ಜಿ ಸಲ್ಲಿಸುವ ವ್ಯವಸ್ಥಾಪಕ ಕೇಂದ್ರಗಳು ಹಾಗೂ ಅರ್ಜಿ ಹಾಗೂ ನೋಂದಣಿ ಶುಲ್ಕ ಪಾವತಿ ಮಾಡುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ನಿಗದಿತ ಶಾಖೆಗಳು

1. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ನಂ. 250, ಕಾಮರಾಜ ರಸ್ತೆ, ಶಿವಾಜಿನಗರ, ಬೆಂಗಳೂರು - 560 042.
   ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಲೇಡಿಕರ್ಜನ್ ರಸ್ತೆ ಬ್ರಾಂಚ್, ಶಿವಾಜಿನಗರ, ಬೆಂಗಳೂರು.
2. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಬೆಂಗಳೂರು ಗ್ರಾಮಾಂತರ, ಬಸವೇಶ್ವರ ಪ್ರೌಢಶಾಲೆ ಸಮೀಪ, 2ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು - 560 010.
   ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ರಾಜಾಜಿನಗರ ಬ್ರಾಂಚ್ ನವರಂಗ್ ಚಿತ್ರಮಂದಿರದ ಹತ್ತಿರ, ಬೆಂಗಳೂರು - 560 010.
3. ಶಿಕ್ಷಕ-ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ
   ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಚಿತ್ರದುರ್ಗ
4. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ದಾವಣಗೆರೆ
   ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ದಾವಣಗೆರೆ
5. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೋಲಾರ
   ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೋಲಾರ
6. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ
   ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬಜಾರ್ ಶಾಖೆ, ಶಿವಮೊಗ್ಗ
7. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ತುಮಕೂರು
   ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ತುಮಕೂರು
8. ಶಿಕ್ಷಕ-ಶಿಕ್ಷಣ ಮಹಾವಿದ್ಯಾಲಯ, ಬೆಳಗಾಂ
   ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬೆಳಗಾಂ
9. ಶಿಕ್ಷಕ-ಶಿಕ್ಷಣ ಮಹಾವಿದ್ಯಾಲಯ, ಜಮಖಂಡಿ, ಬಾಗಲಕೋಟೆ ಜಿಲ್ಲೆ
   ಸ್ಟೇಟ್ ಬ್ಯಾಂಕ್ ಆಫ್ ಮೈಸೂ, ರಬಕವಿ ಶಾಖೆ, ಬಾಗಲಕೋಟೆ
10. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಇಳಕಲ್, ಬಾಗಲಕೋಟೆ ಜಿಲ್ಲೆ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಇಳಕಲ್ ಬ್ರಾಂಚ್
11. ಸರ್ಕಾರಿ ಉರ್ದು ಶಿಕ್ಷಕರ ತರಬೇತಿ ಸಂಸ್ಥೆ, ಬಿಜಾಪುರ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬಿಜಾಪುರ
12. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಧಾರವಾಡ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಧಾರವಾಡ
13. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕುಮಟ, ಉತ್ತರ ಕನ್ನಡ ಜಿಲ್ಲೆ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕುಮಟ
14. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬಳ್ಳಾರಿ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬಳ್ಳಾರಿ
15. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೀದರ್
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬೀದರ್
16. ಶಿಕ್ಷಕ-ಶಿಕ್ಷಣ ಮಹಾವಿದ್ಯಾಲಯ, ಗುಲ್ಬರ್ಗಾ ಜಿಲ್ಲೆ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಗುಲ್ಬರ್ಗಾ
17. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಯರಮರಸ್, ರಾಯಚೂರು ಜಿಲ್ಲೆ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ರಾಯಚೂರು.
18. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿಕ್ಕಮಗಳೂರು
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಚಿಕ್ಕಮಗಳೂರು.
19. ಶಿಕ್ಷಕ-ಶಿಕ್ಷಣ ಮಹಾವಿದ್ಯಾಲಯ ಮಂಗಳೂರು ದ.ಕ. ಜಿಲ್ಲೆ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಜನತಾ ಬಜಾರ್ ಶಾಖೆ, ಹಂಪನಕಟ್ಟೆ, ಮಂಗಳೂರು
20. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಹಾಸನ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹಾಸನ
21. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೂಡಿಗೆ, ಕೊಡಗು ಜಿಲ್ಲೆ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕುಶಾಲನಗರ, ಕೊಡಗು ಜಿಲ್ಲೆ
22. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮುಖ್ಯ ಶಾಖೆ ಮಂಡ್ಯ
23. ಶಿಕ್ಷಕ-ಶಿಕ್ಷಣ ಮಹಾವಿದ್ಯಾಲಯ ಜೆ. ಎಲ್.ಬಿ. ರಸ್ತೆ, ಮೈಸೂರು
    ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಶಿವರಾಂಪೇಟೆ ಶಾಖೆ, ಮೈಸೂರು

ಹೆಚ್ಚಿನ ಮಾಹಿತಿಗಳು ಅರ್ಜಿ ನಮೂನೆ ಹಾಗೂ ಮಾಹಿತಿ ಪುಸ್ತಿಕೆಯಲ್ಲಿ ಲಭ್ಯವಿರುತ್ತದೆ.

ಸೂಚನೆ : ಅಂಚೆ ಮೂಲಕ ಈ ಕಛೇರಿಗೆ ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ನೀವೂ ಇಂಗ್ಲಿಷ್ ಕಲಿಯಿರಿ | ಭಾಗ-೬

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

(ಹಿಂದಿನ ಸಂಚಿಕೆಯಿಂದ)

ಜಾನ್ : ಜಾನಕಿ, ಕೇಳಿಲ್ಲೆ. ಈಗಾಗಲೆ ಅಲಂಕಾರ ಓದಿ ಮತ್ತು Article (ಉಪಪದ) ಉಪಯೋಗ ಮಾಡುವ ನಿಯಮಗಳನ್ನೆಲ್ಲ ಅಭ್ಯಾಸ ಮಾಡಿದ್ದೇವೆ - ಏನಂತಿ?

ಜಾನಕಿ : ಹೌದಪಾ, ನೀ ಹೇಳಿದ್ದು ಖರೇ ಆದ, ಆದರ ಅವೆಲ್ಲ ನೆನಪಿಡುವುದು ನನಗ ಮಾತ್ರ ಕಷ್ಟ ಆಗೇದ.

ಜಾನ್ : ನೀನು ಏನೂ ಕಾಳಜಿ ಮಾಡಬೇಡ, ಅವೆಲ್ಲ ರೂಢಿಯಿಂದ ಬರ್ತಾವ. ದಿನಾಲೂ ಒಂದು ಪುಟ ಇಂಗ್ಲಿಷ್ ಪತ್ರಿಕೆ ಓದು.

ಜಾನಕಿ : ಆಗಲಿ. ಇವತ್ತ ಯಾವ ವಿಷಯ?

ಜಾನ್ : ಇವತ್ತ.
ಲಿಂಗ-gender ಇದರ ಬಗ್ಗೆ ಗೊತ್ತು ಮಾಡ್ತೇನಿ. ಸಜೀವಿಗಳಲ್ಲಿ ಎರಡು ಲಿಂಗಗಳನ್ನು ಗುರ್ತಿಸಿದ್ದಾರೆ.
i) ಪುಲ್ಲಿಂಗ - Masculine (male)
i) ಸ್ತ್ರೀಲಿಂಗ - Feminine (female)

ಜಾನಕಿ : ತಿಳಿತು. ಹೀಂಗಂದರ, ನೀನು ಮತ್ತು ನಾನು. ಆದರ ಮನೆ, ಪುಸ್ತಕ ಇವು?

ಜಾನ್ : ನೀನು ಬಹಳ ಅವಸರಾ ಮಾಡ್ತಿ. ನಾನು ಹೇಳುವುದನ್ನು ಕೇಳು. ಕೆಲವು ಉದಾಹರಣೆಗಳನ್ನು ಹೇಳ್ತೀನಿ.
i) Masculine (male) - ಪುಲ್ಲಿಂಗ - Boy, Man, Father, Lion, Hero.
ii) Feminine (female) - ಸ್ತ್ರೀಲಿಂಗ - Girl, Woman, mother, Lioness, Heroine.

ಜಾನಕಿ : ನೀನು ಎರಡು ಬೇರೆ ಬೇರೆ ಮಾಡ್ತಿಯಾ. ಯುಗಾದಿ ಹಬ್ಬದಾಗ ಒಂದು functionಗೆ ಹೋಗಿದ್ದೆ. ಅವರು ನಿನಗಿಂತ ಚಂದಾಗಿ ಹೇಳಿದರು. ಹೇಳ್ತೀನಿ ಕೇಳು.

She has he
Woman has man
Female has male

ಜಾನ್ : ಜಾನಕಿ. ಅಂದರ ಸ್ತ್ರೀಲಿಂಗದಾಗ ಪುಲ್ಲಿಂಗ ಅಡಕ ಆಗೇತಿ ಅಂತಿಯಾ.

ಜಾನಕಿ : ಪುರುಷ ಸ್ತ್ರೀಯರಲ್ಲಿ ಅಡಗಿ ಕುಳಿತಾನ. ಎತ್ತಿ ತೋರಿಸಿದ ಗೊತ್ತಾಗೋದು.

ಜಾನ್ : ಇರಲಿ, ಮುಂದೆ ಕೇಳು. ಮೂರನೇದು ನಿರ್ಜೀವ ವಸ್ತುಗಳಿಗೆ
Neuter Gender - ನಪುಂಸಕ ಲಿಂಗ ಅಂತಾರ.
Common Gender - ಸಾಮಾನ್ಯ ಲಿಂಗ

ಜಾನಕಿ : ಉದಾಹರಣೆ ಕೊಟ್ಟು ವಿವರಿಸಿ ಹೇಳಪಾ....

ಜಾನ್ : ಪುಲ್ಲಿಂಗನು ಅಲ್ಲ, ಸ್ತ್ರೀಲಿಂಗ ಅಲ್ಲ. ಅಂತಹ ನಾಮಪದಗಳು ಅದಾವ. ಅವು ಜೀವ ಇಲ್ಲದ್ದು ಉದಾ.
Pen, Paper, Chair, Table, Room, Bulbs, Stand, Radio, ಮುಂತಾದವುಗಳಿದ್ದಾವ.

ಜಾನಕಿ : Common Gender ಅಂದರ ಏನು?

ಜಾನ್ : ನೀನು ನಾನು ಕೂಡಿದ್ದನ್ನು ಒಂದೇ ಪದದಲ್ಲಿ ಹೇಳುವುದು. ಅಂದರ ಅಲ್ಲಿ ಗಂಡು ಇರಬಹುದು ಅಥವಾ ಹೆಣ್ಣು ಇರಬಹುದು.

ಜಾನಕಿ : (ಆಶ್ಚರ್ಯದಿಂದ) ಅದೆಂತಹದು? ನಾ ಹೇಳಿದೆನಲ್ಲ she-he-?

ಜಾನ್ : ಅದೆಲ್ಲ. ಕೇಳಿಲ್ಲ
Common Gender -ನಾವಿಬ್ಬರು Students ಈ ಪದ. ಹುಡುಗನಿಗೂ ಹೇಳಬಹುದು ಅಥವಾ ಹುಡುಗಿಗೂ ಅನ್ವಯ ಆಗುವದು. ಇದ ರೀತಿ - Pupil, Servant, Child, Person, Parent, Neighbour, Army.

ಜಾನಕಿ : ಹೌದಲ್ಲೊ! ಆದರ ಕೇಳಿಲ್ಲ 'ಮಗು ಬಂತು' ಅಂತಾ ಹೇಳ್ತೇವೆ. ಹಾಗಾದರ ಮಗು ನಪುಂಸಕ ಲಿಂಗ ಅಂತಿಯಾ.

ಜಾನ್ : ಅದಕ್ಕ ನಾನು ಹೇಳಿದ್ದು ಇದು Common Gender ಅಂತ. ಇಂಗ್ಲಿಷ್ ಭಾಷಾದಾಗ ರೂಢಿ ಏನು ಅಂದರ ನಿರ್ಜೀವಿಗಳು ಶಕ್ತಿಯನ್ನು ಸೂಚಿಸುತ್ತಿದ್ದರೆ ಅವುಗಳನ್ನು ಪುಲ್ಲಿಂಗ (Masculine) ಅಂತಾ ಉಪಯೋಗ ಮಾಡ್ತೇವೆ. ಉದಾ:
Sun - ಇದರ Pronoun - he ಅಂತ ಉಪಯೋಗಿಸ್ತೇವೆ.
The sun spreads his bright rays in noon.

ಜಾನಕಿ : ತಿಳಿತು ಬಿಡು. Moon ಇದು ಸ್ತ್ರೀಲಿಂಗ ಅಂತ.

ಜಾನ್ : ಹೌದು. ರೂಢಿಯಿಂದ ಕೆಲವು ವಿಷಯಗಳನ್ನು ಕಲಿಬೇಕು. ಯಾಕೆಂದರೆ ಇಂಗ್ಲಿಷದಾಗ 'Ship' ಇದು ಸ್ತ್ರೀಲಿಂಗ.
The Ship losts her steward
ಎಲ್ಲಾ ಸೇರಿಸಿ ಹೇಳ್ತೇನಿ. ಲಕ್ಷ ಕೊಟ್ಟು ಕೇಳು.
i) Masculine Gender - ಪುಲ್ಲಿಂಗ
ii) Femine Gender - ಸ್ತ್ರೀಲಿಂಗ
iii) Neuter Gender - ನಪುಂಸಕಲಿಂಗ
iv) Common Gender - ಸಾಮಾನ್ಯ ಲಿಂಗ

ಜಾನಕಿ : Articles- ಗೆ ನಿಯಮ ಹೇಳಿದಿ. ಹಂಗ ಇವುಗಳನ್ನ ಪರಿವರ್ತಿಸಬೇಕಾದ ನಿಯಮಗಳು ಅದಾವ.

ಜಾನ್ : Correct - ಪುಲ್ಲಿಂಗಕ್ಕೆ -ಸೂಕ್ತ ಸ್ತ್ರೀಲಿಂಗ ಬೇರೆ ಶಬ್ದಗಳ ಅದಾವ ಉದಾ -

ನಿಯಮ I

Masculine	Feminine
Boy	Girl
Father	Mother
Brother	Sister
Cock	Hen
Dog	Bitch

ಜಾನಕಿ : Dog ಅಂದ್ರ ಪುಲ್ಲಿಂಗ ಅಂತಿಯಾ.

ಜಾನ್ : ನಾ ಹೇಳಿದ್ದ, ತಿಳಿಲಿಲ್ಲಾ?

ಜಾನಕಿ : ಸರಿ. ಇನ್ನೊಂದಿಷ್ಟು ಉದಾಹರಣೆ ನಾನು ಹೇಳುತ್ತೇನೆ.

Masculine	**Feminine**
Husband	Wife
King	Queen
Lord	Lady
Uncle	Aunt
Man	Woman

ಜಾನ್ : ಸಾಕು. ನಿಮಗ ಗಂಡ-ಹೆಂಡತಿ ಆಂತ ಮಾತ್ರ ಗೊತ್ತು. ಹೌದಲ್ಲೊ?

ಜಾನಕಿ : ಸರಿ. ನನಗ ಗೊತ್ತು ಇರೊದನ್ನ ಹೇಳಿದೆ. ಮುಂದ....

ಜಾನ್ : ಕೇಳು- ಪುಲ್ಲಿಂಗ (ಆ ಪದಕ್ಕ) ಕ್ಕ -ess-ine, trix ಜೋಡಿಸಿದರೆ ಅದು ಸ್ತ್ರೀಲಿಂಗವಾಗುವದು. ಉದಾ.

ನಿಯಮ II

Masculine	**Feminine**
a) Lion	Lioness
Author	Authoress
Manager	Manageress
Heir	Heiress
b) Hero	Heroine
Czar	Czarina
c) Administrator	Administratix
Testator	Testatrix

ಜಾನಕಿ : ಸರಿ. ಆದರ Actor ಹ್ಯಾಂಗ -Actoress ಸರಿ?

ಜಾನ್ : ತಪ್ಪು. ಇಲ್ಲಿಯ ನಾಮಪದಗಳ ಕೊನೆಯ ಭಾಗದಲ್ಲಿರುವ ಸ್ವರಲೋಪವಾಗುವದು ಮತ್ತು - ess ಜೋಡಿಸಬೇಕು.

ನಿಯಮ II

Actor	Actress
Conductor	Conductress
Hunter	Huntress

ಜಾನಕಿ : ಮುಗಿಯಿತೇನು?

ಜಾನ್ : ಕೊನೆಯದು - ಶಬ್ದದ ಹಿಂದೆ ಅಥವಾ ಮುಂದೆ ಲಿಂಗಕ್ಕೆ ಅನುಸರಿಸಿ ಶಬ್ದವನ್ನು ಜೋಡಿಸಬೇಕು. ಉದಾ.

ನಿಯಮ IV

Masculine	**Femine**
He-goat	She-goat
Bull-Calf	Cow-calf
Peacock	Peahen
Jack-ass	Jenny-ass


ಕೊನೆ ಹನಿ

ಜಾನ್ : ಜಾನಕಿ, ಕೆಲವು ಶಬ್ದಗಳನ್ನು ಹೇಳ್ತೇನಿ. ಆವುಗಳ ಲಿಂಗ ಹೇಳು.
1.Chief 2. Roof 3. Lady 4. Bird 5. He-Elephant

ಜಾನಕಿ : 1.Chief, 2.Bird } ಇವೆರಡು Common gender

3. Roof - Neuter Gender
4. Lady - Feminine Gender
5. He-elephant - Masculine Gender

ಜಾನ್ : ಸರಿ. ಮುಂದಿನ ಸಲ - ಏಕವಚನ - (Singular)
ಬಹುವಚನ - (Plural)
ಕಲಿಯುವಾ.



ಶಬ್ದ ಸಂಪತ್ತು - ಶ್ರೀಮಂತ ವಾಗಿಸಿಕೊಳ್ಳಿರಿ

ವಾಕ್ಯಗಳು ಶಬ್ದಗಳಿಂದ ತುಂಬಿರುತ್ತದೆ. ವಾಕ್ಯಗಳು ಅಂದವಾಗಿ ಸುಂದರವಾಗಿ, ಅಲಂಕಾರಿಕವಾಗಿ, ಆಕರ್ಷಕವಾಗಿ, ಓದುಗರ ಕುತೂಹಲ ಕೆರಳಿಸುವಂತಾಗಬೇಕಾದರೆ ಸೂಕ್ತ -ಶಬ್ದಗಳನ್ನು ಉಪಯೋಗಿಸಬೇಕು.

ಹಾಗಾದರೆ ಶಬ್ದಗಳು ನಿಮ್ಮ ಸ್ಮರಣೆಯಲ್ಲಿ ಸದಾ ಹಸಿರಾಗಿರಬೇಕು. ಶಬ್ದ ಸಂಪತ್ತು ಶ್ರೀಮಂತವಾಗಬೇಕು. ಅದಕ್ಕಾಗಿ ಕಲಿಯಿರಿ - ಪ್ರತಿ ತಿಂಗಳು.

ಪ್ರತಿ ಶಬ್ದಕ್ಕೆ ೫ ಅರ್ಥಕೊಟ್ಟಿದ್ದು, ಶಬ್ದದ ಸಮಾನಾರ್ಥಪದ ಹುಡುಕಿ, ನಂತರ ಉತ್ತರ ನೋಡಿ.

a) Abandon - (ಅ) ಬಿಟ್ಟು, ಕೊಡು, (ಬ) ಸ್ವೀಕರಿಸು, (ಕ) ಅಂಟಿಕೊಳ್ಳು, (ಡ) ತುತ್ತೂರಿ (ಇ) ಅಳಿಸಿಹಾಕು

b) Ability - (ಅ) ಪ್ರಯತ್ನ (ಬ) ಸಾಮರ್ಥ್ಯ, (ಕ) ಜಾಣ, (ಡ) ದಡ್ಡ, (ಇ) ಬಲಹೀನ

c) Eternal - (ಅ) ಕ್ಷಣಿಕ, (ಬ) ಬದಲಾಗುವ, (ಕ) ಶಾಶ್ವತ, (ಡ) ನಾಶವಾಗುವ, (ಇ) ನೆವಹೇಳು

d) Novel - (ಅ) ಹೊಸದಾದ (ಬ) ಹಳೇಯದು (ಕ) ಪ್ರಶಸ್ತಿ (ಡ) ಹೆಸರು (ಇ) ಸಾಮಾನ್ಯ

e) Nuisance - (ಅ) ತೊಂದರೆ (ಬ) ಸುಖ (ಕ) ಮಕ್ಕಳಾಟ (ಡ) ವಿಶ್ರಾಂತಿ (ಇ) ಸಮಾಧಾನ

f) Offence - (ಅ) ನ್ಯಾಯ (ಬ) ಅಪರಾಧ (ಕ) ನಿರಪರಾಧ (ಡ) ಗುಣ (ಇ) ದುಷ್ಟ

ಉತ್ತರಗಳು:

a) ಅ b) ಬ c) ಕ d) ಅ e) ಅ f) ಬ



ಮಾರ್ಗದರ್ಶಿ

○ ಡಾ. ಎಸ್.ಸಿ. ಶರ್ಮಾ
ಪ್ರಾಧ್ಯಾಪಕರು
ಆರ್.ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - ೫೬೦ ೦೫೯

ರಾಜು, ಸುರೇಬಾನ

ಪಿ.ಯು.ಸಿ. (ವಿಜ್ಞಾನ)ದಲ್ಲಿ ಅನುತ್ತೀರ್ಣನಾದ ನನಗೆ ೨೩ ವರ್ಷ. ಮುಂದೆ 'ಅಂಚೆ ಶಿಕ್ಷಣ'ದ ಮೂಲಕ ಬಿ.ಎ. ಮುಗಿಸಬೇಕೆಂದಿರುವೆ. ಹೀಗೆ ಪಡೆದ ಪದವಿಗೆ ''ಐ.ಪಿ.ಎಸ್., ಐ.ಎ.ಎಸ್., ಐ.ಎಫ್.ಎಸ್.'' ಮುಂತಾದ ಪದವಿ ಆಧಾರಿತ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಮಾನ್ಯತೆ ಇದೆಯೇ? ಅಂಚೆ ತೆರಪಿನ ಶಿಕ್ಷಣ ಪಡೆಯಲು ಯಾವ ವಿಶ್ವವಿದ್ಯಾಲಯವನ್ನು ಅಲ್ಲಿ ಯಾರನ್ನು ಮತ್ತು ಹೇಗೆ ಸಂಪರ್ಕಿಸಬೇಕು. ಉತ್ತರಿಸಿ.

ನೀವು ವಯಸ್ಸಿನ ಆಧಾರದ ಮೇಲೆ ''ಅಂಚೆ ಶಿಕ್ಷಣದ'' ಮೂಲಕ ಪದವಿಯನ್ನು ಪಡೆಯಬಹುದು. ಈ ಪದವಿಯ ಆಧಾರದ ಮೇಲೆ ನೀವು ಐ.ಎ.ಎಸ್., ಐ.ಪಿ.ಎಸ್. ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ನೀವು ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು. ನೇರವಾಗಿ ಅಥವಾ ಪತ್ರಮುಖಾಂತರ ಸಂಪರ್ಕಿಸಬಹುದು. ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು - ೫೬೦ ೦೦೧

ಹೆಸರು ಬೇಡ, ಮರಳಿ.

ಸರ್, ನಾನು ಪ್ರಥಮ ಪಿ.ಯು.ಸಿ. (ವಿಜ್ಞಾನ)ದವರೆಗೂ ಓದಿ ಅನಿವಾರ್ಯ ಕಾರಣಗಳಿಂದ ಮುಂದುವರಿಸಲಿಲ್ಲ. ೨೧ ವರ್ಷದ ನಾನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮಾನಸ ಗಂಗೋತ್ರಿಯ ಮೂಲಕ ನೇರವಾಗಿ ಎಂ.ಎ. (ಹಿಂದಿ) ಕೋರ್ಸನ್ನು ಮಾಡಲು ಇಚ್ಛಿಸಿದ್ದೇನೆ. ಇದು ಸಾಧ್ಯವೆ? ಸಾಧ್ಯವಾದಲ್ಲಿ ಈ ಸ್ನಾತಕೋತ್ತರ ಪದವಿಯ ಅರ್ಹತೆಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳಾದ ಕೆ.ಎ.ಎಸ್., ಐ.ಎ.ಎಸ್. ಮತ್ತಿನ್ನಿತರ ಪರೀಕ್ಷೆಗಳನ್ನು ಕಟ್ಟಲು ಅರ್ಹನೆ? ದಯಮಾಡಿ ತಿಳಿಸಿ.

ಕೆ.ಎ.ಎಸ್., ಐ.ಎ.ಎಸ್. ಮತ್ತಿನ್ನಿತರ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಕನಿಷ್ಟ ಯಾವುದಾದರೂ ವಿಶ್ವವಿದ್ಯಾಲಯದಿಂದ ಪಡೆದ ಪದವಿ ಅವಶ್ಯಕವಾಗಿರುತ್ತದೆ. ಆದ್ದರಿಂದ ನೀವು ಯಾವುದಾದರೂ ಪದವಿ ಮಾಡುವುದು ಒಳ್ಳೆಯದು.

ಯು. ರಜಾಕ್‌ಸಾಬ, ಹೊಳಗುಂದಿ

ನಾನು ಬಾಹ್ಯ ವಿದ್ಯಾರ್ಥಿಯಾಗಿ ಎಂ.ಎ. ಅಂತಿಮ ವರ್ಷದಲ್ಲಿ ಓದುತ್ತಿರುವೆ. ಕರ್ನಾಟಕ ಕಾಲೇಜ್ ಶಿಕ್ಷಣ ಇಲಾಖೆಯು ನಡೆಸುವ ಎನ್.ಇ.ಟಿ. ಅಥವಾ ಯು.ಜಿ.ಸಿ. ಪರೀಕ್ಷೆ ಬರೆಯಬಯಸುವೆ. ಎಂ.ಎ. ಬಾಹ್ಯ ವಿದ್ಯಾರ್ಥಿಯಾದ ನನಗೆ ಅದು ಸಾಧ್ಯವೆ? ಅರ್ಹನಾಗಿರುವೆನಾದರೆ ಅರ್ಜಿ ಎಲ್ಲಿ ಸಿಗುತ್ತವೆ? ಮಾಹಿತಿ ನೀಡಿ.

ನೀವು ಅಗತ್ಯವಾಗಿ ಎನ್.ಇ.ಟಿ. ಅಥವಾ ಯು.ಜಿ.ಸಿ. ಪರೀಕ್ಷೆಗಳನ್ನು ಬರೆಯಬಹುದು. ಕರ್ನಾಟಕ ಸರ್ಕಾರ ನಡೆಸುವ ಇತರ ಪರೀಕ್ಷೆಗಳನ್ನು ಕರ್ನಾಟಕ ಕಾಲೇಜ್ ಶಿಕ್ಷಣ ಇಲಾಖೆ ನಡೆಸುತ್ತದೆ. ಇದರ ಸಂಬಂಧ, ಡೈರೆಕ್ಟರ್, ಕರ್ನಾಟಕ ಕಾಲೇಜ್ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರನ್ನು ಸಂಪರ್ಕಿಸಿ.

ವೈ. ಸ್ವರ್ಣ ಪ್ರಕಾಶ

ನಾನು ಪಿ.ಯು.ಸಿ. (ವಾಣಿಜ್ಯ) ಪಾಸಾಗಿರುವೆ, ಮುಂದೆ ಓದಲಿಲ್ಲ. ಕರ್ನಾಟಕ ಹಿಂದಿ ಪ್ರಚಾರ ಸಮಿತಿ ಜಯನಗರ, ಬೆಂಗಳೂರು. ಇವರು ನಡೆಸಿದ ರಾ.ಬಾ. ವಿದ್ವಾನ್ (ಹಿಂದಿ) ಪರೀಕ್ಷೆಯಲ್ಲಿ ಪಾಸಾಗಿದ್ದೇನೆ. ಪ್ರಮಾಣಪತ್ರದಲ್ಲಿ ಇದು ಪದವಿಗೆ ತತ್ಸಮ ಎಂದು ಪ್ರಕಟಿಸಲಾಗಿದೆ. ಹಾಗಿದ್ದರೆ ನಾನು ಕೆ.ಎ.ಎಸ್.ಪರೀಕ್ಷೆಗೆ ಅರ್ಹನೆ? ನಿಮ್ಮ ಉತ್ತರದ ನಿರೀಕ್ಷೆಯಲ್ಲಿ.

ನೀವು ರಾ.ಬಾ.ವಿದ್ವಾನ್ (ಹಿಂದಿ) ಪರೀಕ್ಷೆಯಲ್ಲಿ ಪಾಸಾಗಿರುವುದರಿಂದ ಮತ್ತು ಇದು ಪದವಿಗೆ ತತ್ಸಮಾನವಾದ್ದರಿಂದ ಖಂಡಿತವಾಗಿಯೂ ನೀವು ಕೆ.ಎ.ಎಸ್. ಪರೀಕ್ಷೆ ಅರ್ಹರು.

ದಶವಂತ ಎಚ್. ಕುನಾಳೆ, ಕೋಹಿನೂರವಾಡಿ

'ಮೈಸೂರು ಹಿಂದಿ ಪ್ರಚಾರ ಪರಿಷದ್ ಬೆಂಗಳೂರು' ಇವರು ಹಿಂದಿಯಲ್ಲಿ ನಡೆಸುವ ಬಿ.ಎ. (ರತ್ನ)ದಲ್ಲಿ ಪಾಸಾಗಿರುವೆ. ಮುಂದೆ ಎಂ.ಎ. (ಹಿಂದಿ) ಸೆಮಿಸ್ಟರ ಪದ್ಧತಿಯಲ್ಲಿ ಕಲಿಯ ಇಚ್ಛಿಸಿದ್ದೇನೆ. ಈ ವಿದ್ಯಾಭ್ಯಾಸವು ಅಂಚೆ ಮೂಲಕ ಕಲಿಯಬಹುದೇ ಅಥವಾ ರೆಗ್ಯೂಲರ್ ಆಗಿ ಕಲಿಯಬಹುದೇ? ದಯಮಾಡಿ ವಿವರ, ವಿಳಾಸ ಕೊಡಿ.

ಎಂ.ಎ. (ಹಿಂದಿ)ಯು ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಲಭ್ಯ. ನೀವು ನೇರವಾಗಿ ಎಂ.ಎ. (ಹಿಂದಿ) ಕಲಿಯಬಹುದು. ಇದಕ್ಕಾಗಿ ಕರ್ನಾಟಕದಲ್ಲಿರುವ ಯಾವುದೇ ವಿಶ್ವವಿದ್ಯಾಲಯವನ್ನು ಸಂಪರ್ಕಿಸುವುದು ಒಳ್ಳೆಯದು. ಈ ವಿದ್ಯಾಭ್ಯಾಸವನ್ನು ಅಂಚೆ ಮುಖಾಂತರ ಸಹ ಕಲಿಯಬಹುದು. ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

ಯೂನಿವರ್ಸಿಟಿ ಆಫ್ ಮೈಸೂರು,
ಇನ್ಸಿಟ್ಯೂಟ್ ಆಫ್ ಕರೆಸ್ಪಾಂಡೆನ್ಸ್ ಕೋರ್ಸ್ ಅಂಡ್ ಕಂಟಿನಿಯಂಗ್ ಎಜುಕೇಷನ್
ಮಾನಸ ಗಂಗೋತ್ರಿ,
ಮೈಸೂರು - ೫೭೦ ೦೦೬

ಶಿವರಾಜ ನುಗಡೋಣಿ, ಕೊಪ್ಪಳ.

ನಾನು ಬಿ.ಇಡಿ. ಪಾಸಾಗಿದ್ದೇನೆ. ಈಗ ಅಂಚೆ ತೆರಪಿನ ಶಿಕ್ಷಣ ಮೂಲಕ ಎಂ.ಎ. ಮಾಡಬೇಕೆಂದಿದ್ದೇನೆ. ಜೊತೆಗೆ ರೆಗ್ಯೂಲರ್ ಆಗಿ ಎಲ್.ಎಲ್.ಬಿ. ಮಾಡಬೇಕೆಂದಿರುವೆ. ಹೀಗೆ ಎರಡೂ ಕೋರ್ಸ್ ಒಮ್ಮೆಲೇ ಮಾಡಲು ಬರುವುದೆ? ತಿಳಿಸಿ.

ನೀವು ಅಂಚೆ ತೆರಪಿನ ಶಿಕ್ಷಣ ಮೂಲಕ ಎಂ.ಎ.ಯನ್ನು ಜೊತೆಗೆ ಎಲ್.ಎಲ್.ಬಿ.ಯನ್ನು ಒಮ್ಮೆಲೇ ಮಾಡಬಹುದು.

ಎಚ್.ಕೆ. ದೇವಾನಂದ, ಹಾಸನ.

೧೯೯೬ರಲ್ಲಿ ಮೆಕ್ಯಾನಿಕಲ್ ಇಂಜನಿಯರಿಂಗ್ (ಬಿ.ಇ.)ಯ ಅಂತಿಮ ಪರೀಕ್ಷೆಯನ್ನು ಪ್ರತಿಶತ ೫೧ ಅಂಕ ಪಡೆದು ಪಾಸಾಗಿರುತ್ತೇನೆ. ಮುಂದೆ ಐ.ಸಿ.ಡಬ್ಲ್ಯೂ. ಕರೆಸ್ಪಾಂಡೆನ್ಸ್ ಕೋರ್ಸ್ ಮಾಡಬಯಸುವೆ, ಸಾಧ್ಯವೆ?

ಸಾಧ್ಯವಿದ್ದಲ್ಲಿ ಅದರ ಸಂಪೂರ್ಣ ವಿವರ ಮತ್ತು ವಿಳಾಸ ತಿಳಿಯಲು ಕೋರುತ್ತೇನೆ.

ನೀವು ಅಗತ್ಯವಾಗಿ ಐ.ಸಿ.ಡಬ್ಲ್ಯೂ. ಕೋರ್ಸ್ ಮಾಡಬಹುದು. ನೇರವಾಗಿ ಈ ವಿದ್ಯಾಭ್ಯಾಸಕ್ಕೆ ದಾಖಲಾತಿ ಪಡೆಯಬಹುದು ಇದರ ವಿಳಾಸ ಈ ರೀತಿ ಇದೆ.

ಸದರನ್ ಇಂಡಿಯನ್ ರೀಜನ್ ಕೌನ್ಸಿಲ್ ಆಫ್ ದಿ ಐ.ಸಿ.ಡಬ್ಲ್ಯೂ.ಎ.ಐ., ೬೫, ಮಾನ್ಟಿಯತ್ ಲೇಸ್, ಇನ್‌ಮೋರ್, ಮದ್ರಾಸ್ - ೬೦೦ ೦೦೮

ಸುಭಾಶ್ ರಾಠೋಡ, ರುಧನೂರ ತಾಂಡಾ.

೨೫ ವರ್ಷದವನಾದ ನಾನು ಪಿ.ಯು.ಸಿ. (ವಿಜ್ಞಾನ) ಪಾಸಾಗಿ, ಡಿಪ್ಲೊಮಾ (ಸಿವಿಲ್) ಪಾಸಾಗಿ ಈಗ ಸೈಟ್ ಇಂಜನಿಯರ್ ಆಗಿ ಪ್ರೈವೆಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವೆ. ಮುಂದೆ ಅಂಚೆ ತೆರಪಿನ ಶಿಕ್ಷಣದ ಮೂಲಕ ಎಂ.ಬಿ.ಎ. (Mater of Business Administration) ಕಲಿಯಬೇಕೆಂದಿರುವೆ. ಆದರೆ ಪದವಿ ಪಾಸಾಗಿಲ್ಲ. ಅದೂ ಕೂಡ ಹಾಗೆ ಕಲಿಯಬೇಕೆಂದು ಆಸೆ. ಹೀಗಾಗಿ ತಾವು ಅಂಚೆ ತೆರಪಿನ ಶಿಕ್ಷಣ ಕುರಿತು ವಿವರ ಮತ್ತು ವಿಳಾಸ ಕೇಳುತ್ತಿರುವೆ.

ನೀವು ವಯಸ್ಸಿನ ಆಧಾರದ ಮೇಲೆ ಎಂ.ಬಿ.ಎ.ಯನ್ನು ಅಂಚೆ ತೆರಪಿನ ಮೂಲಕ ಕಲಿಯಬಹುದು. ಈ ಸಂಬಂಧ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ.

IGNOU
Directorate of Collegiate Education Premises
Sheshadri Road, Bangalore - 560 001

ಮಹಾನಂದರೆಡ್ಡಿ ಎನ್.ಆರ್., ಚೋಳಶೆಟ್ಟಿಹಳ್ಳಿ

ನಾನು ದ್ವಿತೀಯ ಪಿ.ಯು.ಸಿ.ಯಲ್ಲಿ ಪಾಸಾಗಿದ್ದು, ಮುಂದೆ ಮುಕ್ತ ವಿಶ್ವವಿದ್ಯಾಲಯದಿಂದ ಪದವಿ ಪಡೆಯಬೇಕೆಂದು ಆಸೆ. ಕರ್ನಾಟಕದಲ್ಲಿರುವ ಮುಕ್ತ ವಿಶ್ವವಿದ್ಯಾಲಯಗಳ ವಿಳಾಸವನ್ನು ತಿಳಿಸಲು ವಿನಂತಿ.

ನೀವು ಅಗತ್ಯವಾಗಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆಯಬಹುದು. ವಿಳಾಸ ಕೆಳಗಿನಂತೆ ಇರುತ್ತದೆ.

ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ,
ಮೈಸೂರು - ೫೭೦ ೦೦೬

ಗುರುರಾಜ, ಬೆಣಕಲ್.

ವಿಜ್ಞಾನದ ಪಿ.ಯು.ಸಿ.ಯವರೆಗೆ ಓದಿದ್ದು ಮುಂದೆ ಓದಲಾಗಿಲ್ಲ. ಈಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮಾನಸ ಗಂಗೋತ್ರಿ, ಮೈಸೂರಿನ ಮೂಲಕ ಎಂ.ಎ. (ಹಿಂದಿ) ಪಾಸಾಗಿರುವೆ. ನನಗೆ ಈಗ ೨೩ ವರ್ಷ. ಪದವಿಯ ಅರ್ಹತೆ ಇಲ್ಲದೇ ನೇರವಾಗಿ ಪಡೆದ ಈ ಸ್ನಾತಕೋತ್ತರ ಪದವಿಯಿಂದ ಐ.ಎ.ಎಸ್., ಕೆ.ಎ.ಎಸ್. ನಂತಹ ಪರೀಕ್ಷೆಗಳಿಗೆ ಹಾಗೂ ಸರ್ಕಾರಿ ಉದ್ಯೋಗಗಳಿಗೆ ಅರ್ಜಿ ಸಲ್ಲಿಸಲು, ಎಂ.ಎಡ್. ಅಥವಾ ಬಿ.ಎಡ್., ಎಂ.ಫಿಲ್. ಕೋರ್ಸ್‌ಗಳಿಗೆ ಸೇರಲು ಅರ್ಹನೆ? ತಿಳಿಸಿ.

ಐ.ಎ.ಎಸ್., ಕೆ.ಎ.ಎಸ್. ನಂತಹ ಪರೀಕ್ಷೆಗಳಿಗೆ ವಿದ್ಯಾರ್ಹತೆ ಕನಿಷ್ಟ ವಿಶ್ವವಿದ್ಯಾಲಯಗಳಿಂದ ಪಡೆದ ಪದವಿಯಾಗಿರುತ್ತದೆ. ನೀವು ಎಂ.ಫಿಲ್. ಕೋರ್ಸ್‌ಗೆ ಅರ್ಹರಾಗಿರುತ್ತೀರಿ. ಆದರೆ ಬಿ.ಎಡ್. ಮಾಡಲು ಕನಿಷ್ಟ ಪದವಿಗಳಿಸಿರಬೇಕು. ಅದೇ ರೀತಿ ಎಂ.ಎಡ್.ಗೆ ಬಿ.ಎಡ್. ಆಗಿರಬೇಕು.

ಕೆ.ವಿಶ್ವ, ಸತ್ಯಂಪೇಟ

ನಾನು ಪದವಿ ಮುಗಿಸಿದ್ದು ಪ್ರತಿಶತ ೪೭.೫ ಅಂಕಗಳೊಂದಿಗೆ ಮೀಸಲಾತಿ ದೃಷ್ಟಿಯಿಂದ ನಾನು ಜಿ.ಎಂ. (ಸಾಮಾನ್ಯ ಅಭ್ಯರ್ಥಿ) ಯಾಗಿರುವೆ. ಮುಂದೆ ಅಂಚೆ ತೆರಪಿನ ಶಿಕ್ಷಣದ ಮೂಲಕ ಎಂ.ಎ. ಅಥವಾ ಬಿ.ಪಿ.ಎಡ್. ಮಾಡಬೇಕೆಂದು ಕೊಂಡಿರುವೆ, ಮಾರ್ಗದರ್ಶನ ಮಾಡಿ.

ನೀವು ಅಗತ್ಯವಾಗಿ ಅಂಚೆ ತೆರಪಿನ ಮೂಲಕ ಎಂ.ಎ. ಶಿಕ್ಷಣವನ್ನು ಮುಂದುವರೆಸಬಹುದು. ಇದರ ಸಂಬಂಧ ಈ ವಿಳಾಸವನ್ನು ಸಂಪರ್ಕಿಸಿ.

ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ,
ಮೈಸೂರು - ೫೭೦ ೦೦೬.

ನೀವು ಬಿ.ಪಿ.ಎಡ್.ನ್ನು ಸಹ ಅಂಚೆ ತೆರಪಿನ ಶಿಕ್ಷಣದ ಮೂಲಕ ಮಾಡಬಹುದು. ಈ ಶಿಕ್ಷಣ ಈ ಕೆಳಗಿನ ಆದ್ಯತೆಯ ಮೇಲೆ ಕೊಡಲಾಗುವುದು.

ಎ. ಪದವೀಧರ ಶಿಕ್ಷಕರಾಗಿ ಸೇವೆ ಸಲ್ಲಿಸುವವರು
ಬಿ. ಸ್ನಾತಕೋತ್ತರ ಪದವೀಧರರ
ಸಿ. ಪದವೀಧರರು
ಡಿ. ಎಂ.ಎಡ್. (ಇಂಗ್ಲಿಷ್)

ಹೆಚ್ಚಿನ ವಿವರಗಳಿಗಾಗಿ ಈ ವಿಳಾಸವನ್ನು ಸಂಪರ್ಕಿಸಿ.

Director
Directorate of Distance Education,
Annamalai University, Annamalainagar - 608 002

ಚಂದ್ರಶೇಖರ, ಶಕ್ತಿನಗರ.

ನನಗೀಗ ೨೪ ವರ್ಷ ಪಿ.ಯು.ಸಿ.ಯನ್ನು ಮುಗಿಸಲಾಗಿಲ್ಲ. ಉಸ್ಮಾನಿಯಾ ವಿಶ್ವವಿದ್ಯಾಲಯದ ಒಂದು ವರ್ಷದ ಬಿ.ಎ. ಪದವಿ ಮಾಡಬೇಕೆಂದುಕೊಂಡಿದ್ದೇನೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ 'ಒಂದು ವರ್ಷದಲ್ಲಿ ಬಿ.ಎ.' ಕೋರ್ಸ್ ಇದೆಯೇ? ಹಾಗಿದ್ದಲ್ಲಿ ಯಾವಾಗ, ಯಾರನ್ನು, ಹೇಗೆ ಸಂಪರ್ಕಿಸಬೇಕು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ, ಒಂದು ವರ್ಷದಲ್ಲಿ ಬಿ.ಎ. ಕೋರ್ಸ್ ಮಾಡಲು ಅವಕಾಶವಿರುವುದಿಲ್ಲ.

ಕೆ.ಕೃಷ್ಣ, ಬೆಂಗಳೂರು.

ಸರ್, ನಾನು ಪಿ.ಯು.ಸಿ. ಪಾಸಾಗಿ ಮೂರು ವರ್ಷಗಳಾದವು. ಆರ್ಥಿಕ ಕಾರಣದಿಂದ ಬಿ.ಎ. ಓದಲಿಲ್ಲ. ಈಗ ಬಿ.ಎ. ಅಂತಿಮ ವರ್ಷದ ಪರೀಕ್ಷೆ ತೆಗೆದುಕೊಳ್ಳಬೇಕೆಂದು ಮಾಡಿದ್ದೇನೆ. ಯಾವ ವಿಶ್ವವಿದ್ಯಾಲಯ ಒಳ್ಳೆಯದು ಮತ್ತು ಅದಕ್ಕೆ ತಗಲುವ ವೆಚ್ಚವೆಷ್ಟು ತಿಳಿಸುವಿರಾ?

ನೀವು ಅಗತ್ಯವಾಗಿ ಅಂತಿಮ ಬಿ.ಎ. ಪರೀಕ್ಷೆಯನ್ನು ತೆಗೆದು. ಕೊಳ್ಳಬಹುದು. ಇದಕ್ಕೆ ಅಣ್ಣಾಮಲೈ ವಿಶ್ವವಿದ್ಯಾಲಯವನ್ನು ಸಂರ್ಕಿಸಿ.

ಮಾರ್ಗದರ್ಶಿ ವಿಭಾಗಕ್ಕೆ ಕಳುಹಿಸುವ ನಿಮ್ಮ ಪತ್ರಗಳನ್ನು ಈ ವಿಳಾಸಕ್ಕೆ ಕಳುಹಿಸಿರಿ :

ವಿಳಾಸ:

ಬಿಸಿಲ ಬದುಕು ಮಾಸಪತ್ರಿಕೆ
ಮಾರ್ಗದರ್ಶಿ ವಿಭಾಗ, ಅಂಚೆ ಪೆಟ್ಟಿಗೆ ೭೯೫೧
ಬಸವೇಶ್ವರನಗರ, ಬೆಂಗಳೂರು - ೫೬೦ ೦೭೯

KAS ಅಭ್ಯರ್ಥಿಗಳಿಗಾಗಿ ಪ್ರಚಲಿತ ಸಂಗತಿಗಳ ಬಹು ಆಯ್ಕೆಯ ವಸ್ತುನಿಷ್ಠ ಪ್ರಶ್ನೋತ್ತರಗಳು

ಸಾಮಾನ್ಯ ಅಧ್ಯಯನ

1. ಇನ್‌ಸೈಡರ್' ಕೃತಿಯನ್ನು ರಚಿಸಿರುವ ಮಾಜಿ ಪ್ರಧಾನಿ?
ಅ. ಚಂದ್ರಶೇಖರ್ ಬ. ವಿ.ಪಿ. ಸಿಂಗ್
ಕ. ದೇವೇಗೌಡ ಡ. ಪಿ.ವಿ.ನರಸಿಂಹರಾವ್
2. ಫ್ಯಾಕ್ಸ್ ಎಂದರೇನು?
ಅ. ದೂರವಾಣಿಯ ಮೂಲಕ ಮಾತನಾಡುವುದು
ಬ. ಕಂಪ್ಯೂಟರ್‌ನಲ್ಲಿ ಗೆರೆಗಳನ್ನು ಮಾಡಿಸುವುದು
ಕ. ಯಾವುದೇ ಪಠ್ಯ ಅಥವಾ ಚಿತ್ರವನ್ನು ಯಥಾವತ್ತಾಗಿ ನಕಲು ಮಾಡಿ ದೂರವಾಣಿ ತಂತಿಯ ಮೂಲಕ ರವಾನಿಸುವ ಪುಟ್ಟ ಯಂತ್ರ.
ಡ. ಮೇಲಿನ ಯಾವುದೂ ಅಲ್ಲ.
3. ಚೀನಾದ 'ಕಣ್ಣೀರ ನದಿ' ಎಂದು ಹೆಸರು ಪಡೆದಿರುವ ನದಿ?
ಅ. ಹ್ವಾಂಗ್‌ಹೋಗೆ ಬ. ಅಮೆಜಾನ್
ಕ. ಸಿಂಧೂ ನದಿ ಡ. ಬ್ರಹ್ಮಪುತ್ರ
4. ವಿಶ್ವದಲ್ಲೆ ಮೊದಲ ಬಾರಿಗೆ ಚುನಾಯಿತ ಕಮ್ಯುನಿಸ್ಟ್ ಸರ್ಕಾರದ ಮುಖ್ಯಮಂತ್ರಿಯಾಗಿ ಆಳ್ವಿಕೆ ನಡೆಸಿದವರು?
ಅ. ಜ್ಯೋತಿ ಬಸು ಬ. ಜಿ.ಕೆ. ಮೆನನ್
ಕ. ಇ.ಎಂ. ಎಸ್. ನಂಬೂದರಿಪಾದ್ (1957)
ಡ. ಜವಾಹರಲಾಲ್ ನೆಹರು
5. ಸುಬ್ರಹ್ಮಣ್ಯ ಅವರಿಗೆ ಭಾರತ ರತ್ನ ಪ್ರಶಸ್ತಿ ದೊರೆತದ್ದು?
ಅ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಸಾಧನೆಗಾಗಿ
ಬ. ಆಹಾರದ ಕೊರತೆಯನ್ನು ನೀಗಿಸಿದ್ದಕ್ಕಾಗಿ
ಕ. ಶ್ರೇಷ್ಠ ರಾಜಕಾರಣಿಯಾಗಿದ್ದಕ್ಕೆ
ಡ. ಕೃಷಿಕರ ಕುಟುಂಬದ ವ್ಯಕ್ತಿಯೆಂಬ ಕಾರಣಕ್ಕಾಗಿ
6. ಎಂ.ಎಸ್. ಸುಬ್ಬುಲಕ್ಷ್ಮಿಯವರಿಗೆ ಭಾರತರತ್ನ ಪ್ರಶಸ್ತಿ ದೊರೆತದ್ದು?
ಅ. ಭಾವಗೀತೆಯ ಹಾಡುಗಾರ್ತಿಯೆಂದು
ಬ. ಶಾಸ್ತ್ರೀಯ ಸಂಗೀತವನ್ನು ಹಾಡಿ ಸಂಗೀತ ವಿದುಷಿ ಎಂಬ ಬಿರುದನ್ನು ಗಳಿಸಿದ್ದಕ್ಕಾಗಿ
ಕ. ನಾಟಕಕಾರ್ತಿಯೆಂದು ಡ. ಕವಯಿತ್ರಿಯೆಂದು
7. 1997ರ ಗಾಂಧಿ ಶಾಂತಿ ಪ್ರಶಸ್ತಿ ಪಡೆದವರು
ಅ. ಎಚ್. ಡಿ. ದೇವೇಗೌಡ ಬ. ರಾಜೀವ್‌ಗಾಂಧಿ
ಕ. ಡಾ|| ಗರ್‌ಹಾರ್ಡ್ ಫಿಷರ್ ಡ. ಕೆ. ಆರ್. ನಾರಾಯಣನ್
8. ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಎಳೆಯ ವಯಸ್ಸಿನಲ್ಲಿ ಶತಕ ಬಾರಿಸಿದ ದಾಖಲೆ ಹೊಂದಿರುವವರು?
ಅ. ಸಚಿನ್ ತೆಂಡೂಲ್ಕರ್ ಬ. ಅಜರುದ್ದೀನ್
ಕ. ಹನೀಫ್ ಮಹಮದ್ ಡ. ಅನಿಲ್ ಕಾಂಬ್ಳೆ
9. ಭಾರತದ ಅತಿ ಉದ್ದ ರೈಲು ಪ್ಲಾಟ್ ಫಾರಂ
ಅ. ದೆಹಲಿ ಬ. ಆಗ್ರಾ ಕ. ಕಲ್ಕತ್ತ ಡ. ಖರಗಪುರದಲ್ಲಿದೆ
10. ಸಾಲುಮರಗಳನ್ನು ಬೆಳೆಸಿ ಪ್ರಶಸ್ತಿ ಪಡೆದವರು
ಅ. ಇಂದಿರಾಗಾಂಧಿ ಬ. ತಿಮ್ಮಕ್ಕ
ಕ. ಸೋನಿಯಾಗಾಂಧಿ ಡ. ದೇವೇಗೌಡ ಎಚ್. ಡಿ.
11. ಪ್ರಖ್ಯಾತ ವಿಜ್ಞಾನಿ ಅಬ್ದುಲ್ ಕಲಂ ಅವರಿಗೆ ದೊರೆತಿರುವ ರಾಷ್ಟ್ರದ ಅತ್ಯುನ್ನತ ಪದವಿ
ಅ. ಭಾರತರತ್ನ ಬ. ಪದ್ಮವಿಭೂಷಣ
ಕ. ಪದ್ಮಭೂಷಣ ಡ.ಪದ್ಮಶ್ರೀ
12. ಘೋರಿ ಎಂಬ ಹೆಸರು
ಅ. ಐತಿಹಾಸಿಕ ವ್ಯಕ್ತಿ ಬ. ಭಯಾನಕ ಕ್ಷಿಪಣಿ
ಕ. ಪುರಾಣ ಪುರುಷ ಡ. ಅರಬ್ ದೇಶದವನು
13. 1997ರಲ್ಲಿ 70ನೇ ಆಸ್ಕರ್ ಪ್ರಶಸ್ತಿ ಗಳಿಸಿದ ಇತಿಹಾಸ ಸೃಷ್ಟಿಸಿದ ಚಲನಚಿತ್ರ
ಅ. ಬೆನೆಹರ್ ಬ. ಡ್ಯಾನ್ಸಸ್ ವಿಥ್ ವೂಲ್ಫ್
ಕ. ಟೈಟಾನಿಕ್ ಡ. ಮೇರಿ ಪಾಪ್ಪಿನ್ಸ್
14. ಪ್ರಧಾನಿ ಅಟಲ್‌ಬಿಹಾರಿ ವಾಜಪೇಯಿ ಯಾವ ಕ್ಷೇತ್ರದಿಂದ ಲೋಕ ಸಭೆಗೆ ಸ್ಪರ್ಧಿಸಿದ್ದರು
ಅ. ರಾಯ್‌ಬರೇಲಿ ಬ. ಲಖನೌ
ಕ. ಹಾಸನ ಡ. ದೆಹಲಿ
15. ಕ್ವಟ್ರೋಚಿ ಎಂಬ ವ್ಯಕ್ತಿಯು
ಅ. ಹವಾಲ ಹಗರಣಕ್ಕೆ ಸಂಬಂಧಿಸಿದವನು
ಬ. ಬೋಫೋರ್ಸ್ ಹಗರಣಕ್ಕೆ ಸಂಬಂಧಿಸಿದವನು
ಕ. ಮೇವು ಹಗರಣಕ್ಕೆ ಸಂಬಂಧಿಸಿದವನು
ಡ. ಯಾವುದೂ ಅಲ್ಲ.
16. ಪೃಥ್ವಿ ಎಂಬುದು
ಅ. ವಿಮಾನ ಬ. ಕ್ಷಿಪಣಿ
ಕ. ಬಂದರು ಡ. ಸಮುದ್ರ
17. 'ಐನ್‌ಸ್ಟೀನ್ ಉಂಗುರ' ವೆಂಬುದು
ಅ. ನಕ್ಷತ್ರಗಳ ಸಮೂಹ
ಬ. ಗ್ರಹಗಳ ಸಮೂಹ
ಕ. ದೂರದ ನಕ್ಷತ್ರ ಪುಂಜಗಳಿಂದ ಹೊರಗೆ ತೆರಳುವ ಬೆಳಕು ಗುರುತ್ವಾಕರ್ಷಣ ಕ್ರಿಯೆಗಳಲ್ಲಿ ಬದಲಾವಣೆಗಳ್ಳಾಗುತ್ತದೆ ಎಂಬುದನ್ನು ಸೂಚಿಸುತ್ತದೆ
ಡ. ಆಕಾಶದ ಸ್ವರೂಪ
18. ಸ್ವಯಃ ಚಾಲಿತ ಬಾಗಿಲಿನ ಸಂಶೋಧನೆ
ಅ. ವಿಶ್ವೇಶ್ವರಯ್ಯ ಬ. ಸರ್. ಸಿ.ವಿ. ರಾಮನ್
ಕ. ಜಗದೀಶ ಚಂದ್ರ ಬೋಸ್ ಡ. ಐನ್‌ಸ್ಟೀನ್

19. ಸೊನ್ನೆಯು
ಅ. ಭಾರತದ ಕೊಡುಗೆ ಬ. ಪಾಕಿಸ್ತಾನದ ಕೊಡುಗೆ
ಕ. ಅಮೇರಿಕಾದ ಕೊಡುಗೆ ಡ. ಇಂಗ್ಲೇಂಡಿನ ಕೊಡುಗೆ

20. 'ಹವಾಲಾ ಎಂಬುದು
ಅ. ಸ್ಟಾಕ್ ಕೇಂದ್ರದ ಮೂಲಕ ಮಾರಾಟವಾಗದೆ ವಿನಿಮಯವಾಗುವ ಷೇರಿಗಾಗಿ ಪಡೆದ ಹಣ.
ಬ. ವಿದೇಶಿ ವಿನಿಮಯದ ಒಂದು ರೂಪ
ಕ. ಅನಿವಾಸಿ ಬಂಡವಾಲ ಹೂಡಿಕೆ
ಡ. ವಿದೇಶಿ ಹಣದ ಬದಲು ರೂಪಾಯಿಗಳಲ್ಲಿ ಮತ್ತು ರೂಪಾಯಿಯ ಬದಲು ವಿದೇಶೀ ಹಣದ ರೂಪದಲ್ಲಿ ಕಾನೂನು ಬಾಹಿರ ಚಾಲನೆ.

21. ಮೇ 11-1998ರಂದು ಹಂಸ-3 ಎಂಬುದನ್ನು ಬಿಡುಗಡೆ ಮಾಡಲಾಗಿದೆ. ಇದೊಂದು
ಅ. ಹಡಗು ಬ. ಕ್ಷಿಪಣಿ
ಕ. ಮೋಟಾರು ವಾಹನ ಡ. ಲಘು ವಿಮಾನ

22. ಭಾರತದಲ್ಲಿರುವ ಭಾಷೆಗಳ ಸಂಖ್ಯೆ
ಅ. 3,000 ಬ. 2000
ಕ. 1000 ಡ. 5000

23. ಅಟಲ್‌ಬಿಹಾರಿ ವಾಜಪೇಯಿ ಅವರು ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ದಿನಾಂಕ
ಅ. 19-3-1998 ಬ. 19-2-1998
ಕ. 19-1-1998 ಡ. 20-3-1998

24. ಅಟಲ್ ಬಿಹಾರಿ ವಾಜಪೇಯಿ ಅವರು ಭಾರತದ ಎಷ್ಟನೇ ಪ್ರಧಾನ ಮಂತ್ರಿಯಾಗಿದ್ದಾರೆ?
ಅ. 15, ಬ. 13, ಕ. 20 ಡ. 11

25. 12ನೇ ಲೋಕಸಭೆ ಅಸ್ತಿತ್ವಕ್ಕೆ ಬಂದಿದ್ದು
ಅ. 20-3-1998 ಬ. 12-2-1998
ಕ. 23-3-1998 ಡ. 19-3-1998

26. ಒಂದು ದಿನದ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿರುವ ಭಾರತೀಯ?
ಅ. ತೆಂಡೂಲ್ಕರ್ ಬ. ಜಡೇಜ
ಕ. ಕಪಿಲ್‌ದೇವ್ ಡ. ಅಜರುದ್ದೀನ್


27. ಭಾರತದ ಪ್ರಥಮ ಮಹಿಳಾ ಐ.ಎ.ಎಸ್. ಅಧಿಕಾರಿ
ಅ. ಕಿರಣ್ ಬೇಡಿ ಬ. ಗೌರಿ ತ್ರಿವೇದಿ
ಕ. ಉಷಾಗಣೇಶ್ ಡ. ಎ.ಜೆ. ರಾಜಮ್ಮ

28. ವಿಶ್ವಸಂಸ್ಥೆಯ ಇದುವರೆಗಿನ ಮಹಾ ಕಾರ್ಯಾನಿರ್ಶಿಗಳ ಸಂಖ್ಯೆ
ಅ. ಒಂಭತ್ತು ಬ. ಏಳು
ಕ. ಐದು ಡ. ಮೂರು

29. 'ಪ್ರಾಚ್ಯ ಮತ್ತು ಸಂಶೋಧನಾ ಇಲಾಖೆ' ಭಾರತದಲ್ಲಿ ಪ್ರಾರಂಭಗೊಂಡಿದ್ದು ಇವರ ಕಾಲದಲ್ಲಿ?
ಅ. ಲಾರ್ಡ್ ರಿಪ್ಪನ್ ಬ. ಲಾರ್ಡ್ ವೆಲ್ಲೆಸ್ಲಿ
ಕ. ಲಾರ್ಡ್ ಡೌಲ್‌ಹೌಸಿ ಡ. ಕರ್ಜನ್

30. 'ಗ್ಯಾಟ್' ಎಂಬುದು
ಅ. ವಿಶ್ವ ಮಾರುಕಟ್ಟೆ ಬ. ಹಣಕಾಸಿನ ಸಂಸ್ಥೆ
ಕ. ಚಲನಚಿತ್ರ ಪ್ರೇಮಿಗಳ ಸಂಘ
ಡ. ವಿಶ್ವದ ರಾಷ್ಟ್ರಗಳ ನಡುವೆ ವ್ಯಾಪಾರ ವಹಿವಾಟು ನಡೆಸುವುದಕ್ಕೆ ಒಂದು ಸ್ಥಿರ ಹಾಗೂ ವಿಶ್ವಾಸನೀಯ ಸ್ವರೂಪ ನೀಡುವ ವ್ಯವಸ್ಥೆ.

31. 'ಉರುಗ್ವೆ ಸುತ್ತಿನ ಮಾತುಕತೆ'ಯೆಂಬುದು



ಅ. ಜಗತ್ತಿನಲ್ಲಿ ಶಾಂತಿ ಸ್ಥಾಪನೆ.
ಬ. ಅಂತರರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚು ಉದಾರೀಕರಣ ಗೊಳಿಸುವುದು
ಕ. ವಿದೇಶಿ ವಿನಿಮಯದ ಚರ್ಚೆ ಡ. ಯಾವುದೂ ಇಲ್ಲ

32. ವಿಶ್ವದಲ್ಲಿ ಬಡ ಮತ್ತು ಶ್ರೀಮಂತ ರಾಷ್ಟ್ರಗಳೆಂದು ಗುರುತಿಸುವುದು?
ಅ. ತಲಾ ವರಮಾನ ಹಾಗೂ ಜನರ ಜೀವನ ಮಟ್ಟದಿಂದ
ಬ. ಹೆಚ್ಚು ಉತ್ಪಾದನೆ ಮಾಡುವ ಅಂಶಗಳಿಂದ
ಕ. ಕಡಿಮೆ ಖರ್ಚ ಮಾಡುವ ಅಂಶಗಳಿಂದ
ಡ. ಹೆಚ್ಚು ವಿದೇಶಿ ವಿನಿಮಯಗಳಿಸುವುದರಿಂದ

33. ಭಾರತದ ಅರ್ಥ ವ್ಯವಸ್ಥೆಯನ್ನು ಈ ಹೆಸರಿನಿಂದ ಕರೆಯಲಾಗುತ್ತದೆ.
ಅ. ಮಿಶ್ರ ಅರ್ಥ ವ್ಯವಸ್ಥೆ ಬ. ಪ್ರಜಾತಾಂತ್ರಿಕ ಅರ್ಥ ವ್ಯವಸ್ಥೆ
ಕ. ಸಮಾಜವಾದಿ ಅರ್ಥ ವ್ಯವಸ್ಥೆ ಡ. ಮಿಶ್ರ ಅರ್ಥ ವ್ಯವಸ್ಥೆ.

34. ಆಲಮಟ್ಟಿ ಅಣೆಕಟ್ಟನ್ನು ಯಾವ ನದಿಗೆ ಕಟ್ಟಲಾಗಿದೆ?
ಅ. ಕಬಿನಿ ಬ. ಕಾವೇರಿ
ಕ. ಶರಾವತಿ ಡ. ಕೃಷ್ಣ

35. ಕೊಂಕಣ ರೈಲ್ವೆ ಯಾವ ಯಾವ ಪ್ರದೇಶವನ್ನು ಸೇರಿಸುತ್ತದೆ?
ಅ. ಮಂಗಳೂರು-ಮದ್ರಾಸ್ ಬ. ಮಂಗಳೂರು-ಬೆಂಗಳೂರು
ಕ. ಕುರ್ಲಾ ಮತ್ತು ಮಂಗಳೂರು ಡ. ದೆಹಲಿ-ಬೆಂಗಳೂರು

36. ಮದರ್ ತೆರೆಸಾ ಅವರು ನಿಧನರಾದದ್ದು
ಅ. 13-10-1997 ಬ. 20-3-1998
ಕ. 11-11-1997 ಡ. 20-120-1997

37. ಪ್ರತಿಷ್ಠಿತ ಬೂಕರ್ ಪ್ರಶಸ್ತಿಯನ್ನು ಪಡೆದಿರುವ ಮೊದಲ ಭಾರತೀಯ ಲೇಖಕಿ
ಅ. ಅಮೃತಾ ಪ್ರೀತಂ ಬ. ಅರುಂದತಿ ರಾಯ್
ಕ. ಕಮಲಾದಾಸ್ ಡ. ಯಾರೂ ಇಲ್ಲ

38. ಕೊಲಂಬಿಯಾ ಬಾಹ್ಯಾಕಾಶ ನೌಕೆಯ 88ನೆಯ ಯಾನ ಮಾಡಿದ ಪ್ರಥಮ ಭಾರತದ ಮಹಿಳೆ?
ಅ. ಜೂಹಿ ಚಾವ್ಲಾ ಬ. ಮೇನೇಕಾ ಗಾಂಧಿ
ಕ. ಕಲ್ಪನಾ ಚಾವ್ಲಾ ಡ. ಯಾರೂ ಇಲ್ಲ

39. ಮೇಧಾ ಪಾಟ್ಕರ್
ಅ. ಕವಿಯಿತ್ರಿ ಬ. ನೃತ್ಯಗಾತಿ
ಕ. ಸಮಾಜಸೇವಕಿ ಡ. ನರ್ಮದ ಉಳಿಸಿ ಚಳುವಳಿಯ ನಾಯಕಿ

40. ಡಯನಾ ಹೇಡನ್
ಅ. ಭಾರತಕ್ಕೆ ಮೂರನೇ ಬಾರಿಗೆ ವಿಶ್ವಸುಂದರಿ ಪ್ರಶಸ್ತಿ ತಂದು ಕೊಟ್ಟವರು
ಬ. ಕವಿಯಿತ್ರಿ
ಕ. ಸಮಾಜ ಸುಧಾರಕಿ
ಡ. ಖ್ಯಾತ ಅಭಿನೇತ್ರಿ

41. ಮಾರ್ಗರೇಟ್ ಥ್ಯಾಚೆರ್
ಅ. ಉಕ್ಕಿನಮಹಿಳೆ ಎಂದು ಹೆಸರಾದ ಇಂಗ್ಲೆಂಡಿನ ಪ್ರಥಮ ಪ್ರಧಾನಿ
ಬ. ಶ್ರೇಷ್ಠ ಮಹಿಳಾ ವಾದಿ

ಕ. ಭಾರತಕ್ಕೆ ಬೇಟಿ ನೀಡಿದ್ದ ಕ್ರಿಶ್ಚಿಯನ್ ಮಹಿಳೆ

ಡ. ನೊಬೆಲ್ ಪ್ರಶಸ್ತಿ ವಿಜೇತೆ.

42. ಅಂಗಸಾನ್ ಸೂಕಿ

ಅ. ಮಯಾನ್ಮಾರ್‌ನ ರಾಷ್ಟ್ರೀಯ ಚಳುವಳಿ ನಾಯಕಿ ಹಾಗೂ ನೊಬೆಲ್ ಪ್ರಶಸ್ತಿ ವಿಜೇತೆ.

ಬ. ಭಾರತಕ್ಕೆ ರಾಯಭಾರಿಯಾಗಿ ಬಂದವರು

ಕ. ಮಹಿಳಾ ವಿಮೋಚನಾ ನಾಯಕಿ

ಡ. ಪ್ರಪಂಚದ ಪ್ರಮುಖ ರಾಜಕೀಯ ಮಹಿಳೆ

43. ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ಅ. ಜಾನ್‌ಬಿಲ್ ಕ್ಲಿಂಟನ್ ಬ. ಕೋಫಿ ಅನ್ನಾನ್

ಕ. ಸೋನಿಯಾ ಗಾಂಧಿ ಡ. ಐ.ಕೆ. ಗುಜ್ರಾಲ್

44. ಪೇಟೆಂಟ್ ಎಂದರೇನು?

ಅ. ಮೂಲ ಸಂಶೋಧನೆಗಾಗಿ ಅದರ ಸಂಶೋದಕನಿಗೆ ದೊರೆಯುವ ನ್ಯಾಯ ಸಮ್ಮತ ಹಕ್ಕು

ಬ. ವ್ಯಾಪಾರ ನಡೆಸುವ ಪ್ರಮುಖ ಬಂದರು

ಕ. ದೇಶ-ವಿದೇಶಗಳೊಡನೆ ವಾಣಿಜ್ಯ ಸಂಪರ್ಕದ ಒಂದು ಸಂಸ್ಥೆ.

ಡ. ಪ್ರಮುಖ್ಯ ವಾಣಿಜ್ಯ ಕೇಂದ್ರದ ಹೆಸರು.

45. ಒಂಭತ್ತನೇ ಪಂಚವಾರ್ಷಿಕ ಯೋಜನೆಯ ಕರಡನ್ನು ಸಿದ್ಧಗೊಳಿಸಿದ್ದು?

ಅ. 1997 ಜೂನ್, ಮನ್ಮೋಹನ ಸಿಂಗ್

ಬ. 1998 ಮಾರ್ಚ್, ಉಪಾಧ್ಯಾಕ್ಷರಾದ ಮಧುದಂಡವತೆ

ಕ. 1998 ಡಿಸೆಂಬರ್, ರಾಮಕೃಷ್ಣ ಹೆಗಡೆ

ಡ. 1997 ಏಪ್ರಿಲ್, ಚಿದಂಬರಂ

46. ಒಂಭತ್ತನೇ ಪಂಚವಾರ್ಷಿಕ ಯೋಜನೆಯ ಅಂದಾಜು ಎಷ್ಟು?

ಅ. 2190,000 ಕೋಟಿ ಬ. 20,00000 ಕೋಟಿ

ಕ. 1900000 ಕೋಟಿ ಡ. 30,00000 ಕೋಟಿ

47. 1998ರಲ್ಲಿ ಪದ್ಮಭೂಷಣ ಪ್ರಶಸ್ತಿ ಪಡೆದ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ.

ಅ. ಯು. ಆರ್. ಅನಂತಮೂರ್ತಿ ಬ. ದ.ರಾ. ಬೇಂದ್ರೆ

ಕ. ವಿ.ಕೃ. ಗೋಕಾಕ್ ಡ. ಪಿ. ಲಂಕೇಶ್

48. ಮಿಡ್ನಾಪುರದ ಸುಂಟರಗಾಳಿಯ ದುರಂತ ಸಂಭವಿಸಿದ್ದು?

ಅ. 24-3-1998 ಬ. 25-8-1998

ಕ. 21-4-1998 ಡ. 22-2-1998

49. ಮಿಡ್ನಾಪುರದ ದುರಂತ ಸಂಭವಿಸಿದ್ದು?

ಅ. ಅಗ್ನಿಯಿಂದ ಬ. ಭೂಕಂಪದಿಂದ

ಕ. ಸುಂಟರಗಾಳಿಯಿಂದ ಡ. ರೈಲು ಹಳಿತದಿಂದ

50. ಮಿಡ್ನಾಪುರವಿರುವುದು

ಅ. ಒರಿಸ್ಸಾದಲ್ಲಿ ಬ. ಕರ್ನಾಟಕದಲ್ಲಿ

ಕ. ಪಶ್ಚಿಮ ಬಂಗಾಳದಲ್ಲಿ ಡ. ಆಂಧ್ರ ಪ್ರದೇಶದಲ್ಲಿ

51. ವಾಯುಶಕ್ತಿ-98

ಅ. 21-3-1998ರಂದು ರಾಜಾಸ್ತಾನದ ಪೋಖರಾನ್ ವಾಯುಪಡೆ ತರಬೇತಿ ವಲಯದಲ್ಲಿ ವಾಯುಪಡೆ ಸಾಮರ್ಥ್ಯವನ್ನು ತೋರಿಸಲು ಏರ್ಪಡಿಸಿದ್ದ ಹಾರಾಟದ ಪ್ರದರ್ಶನದ ಹೆಸರು.

ಬ. ಬೆಂಗಳೂರಿನಲ್ಲಿ ನಡೆದ ವಾಯುಪಡೆಯ ಪ್ರದರ್ಶನ

ಕ. ಪಾಕಿಸ್ತಾನದ ವಾಯುಪಡೆ ವಿಮಾನದ ಹೆಸರು

ಡ. ಬಾಂಗ್ಲಾದೇಶದ ನೂತನ ಯುದ್ಧ ವಿಮಾನ

52. ಅಂತರರಾಷ್ಟ್ರೀಯ ಆಹಾರ ಸಂಸ್ಕರಣ ಪ್ರದರ್ಶನ ನಡೆದದ್ದು?

ಅ. 16ರಿಂದ 20 ಮಾರ್ಚ್ 1998

ಬ. 11 ರಿಂದ 18 ಮಾರ್ಚ್ ೧೯೯೮

ಕ. ೧ ರಿಂದ ೨೨ಮಾರ್ಚ್ ೧೯೯೮

ಡ. ೭ ರಿಂದ ೧೯ ಮಾರ್ಚ್ ೧೯೯೮

53. ವಿಶ್ವದ ಶ್ರೀಮಂತ ಭಾರತೀಯನ ಹೆಸರು?

ಅ. ಇಂದಿರಾ ಗಾಂಧಿ ಬ. ಎಲ್. ಎನ್. ಮಿತ್ರಲ್

ಕ. ರಾಬರ್ಟ್ ವಡೇರ್ ಡ. ಪ್ರಿಯಾಂಕ ಗಾಂಧಿ

54. ಏಷಿಯಾದಲ್ಲಿ ಎರಡನೆಯದೆನಿಸಿರುವ ಸೂಪರ್ ಕಂಪ್ಯೂಟರ್ ಹೆಸರು?

ಅ. ಘೋರಿ ಬ. ಪೃಥ್ವಿ

ಕ. ಅರುಣ್ ಡ. ಪರಮ್ 10,000

55. ಭಾರತದ ಅರ್ಥ ವ್ಯವಸ್ಥೆಯಲ್ಲಿ ಈಗಿನ ಸರಾಸರಿ ಉಳಿತಾಯ ದರದ ಶ್ರೇಣಿ.

ಅ. ಶೇ. 20 ರಿಂದ 25 ಬ. ಶೇ. 15 ರಿಂದ 20

ಕ. ಶೇ. 10 ರಿಂದ 15 ಡ. ಶೇ. 40 ರಿಂದ 50

56. ಇರಾಕ್ ಮತ್ತು ಅಮೇರಿಕಾದ ಯುದ್ಧವನ್ನು ತಪ್ಪಿಸುವುದರ ಮೂಲಕ ಜಾಗತಿಕ ಮಹಾಯುದ್ಧವನ್ನು ತಪ್ಪಿಸಿ ಶಾಂತಿದೂತನೆಂದು ಪ್ರಸಿದ್ಧಿ ಪಡೆದ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ಅ. ಬಿಲ್ ಕ್ಲಿಂಟನ್ ಬ. ಕೋಫಿ ಅನ್ನಾನ್

ಕ. ಸೋನಿಯಾಗಾಂಧಿ ಡ. ಐ.ಕೆ. ಗುಜ್ರಾಲ್

57. ದಿನಾಂಕ 11-5-1998ರಂದು 3 ಅಣು ಸಾಧನದ ಯಶಸ್ವಿ ಪರೀಕ್ಷಾರ್ಥ ಸ್ಫೋಟಗೊಳಿಸಿ ಅಣುರಾಷ್ಟ್ರವೆಂದು ಭಾರತ ಪ್ರಸಿದ್ಧಿ ಪಡೆಯಿತು. ಸ್ಫೋಟಗೊಳಿಸಿದ ಸ್ಥಳದ ಹೆಸರು?

ಅ. ರಾಜಸ್ತಾನದ ಪೋಖ್ರಾನ್ ಬ. ಕರ್ನಾಟಕದ ಬೀದರ್

ಕ. ಪಂಜಾಬಿನ ಅಮೃತಸರ ಡ. ಆಂಧ್ರದ ಕರ್ನೂಲು.

58. ವಿಶ್ವಸಂಸ್ಥೆ 1998ನ್ನು ಯಾವ ವರ್ಷಾಚರಣೆ ಎಂದು ಘೋಷಿಸಿದೆ?

ಅ. ಮಾನವ ಹಕ್ಕುಗಳ ವರ್ಷ ಬ. ವೃದ್ಧರ ವರ್ಷ

ಕ. ಮಕ್ಕಳ ವರ್ಷ ಡ. ಯುವಕರ ವರ್ಷ

59. ಭಾರತದ ವಾಯು ಪಡೆಯ ಮುಖ್ಯಸ್ಥ?

ಅ. ಏರ್‌ಚೀಫ್ ಮಾರ್ಷಲ್ ನಂದಾ

ಬ. ಏರ್‌ಚೀಫ್ ಮಾರ್ಷಲ್ ಸತೀಶ್‌ಕುಮಾರ್ ಸರೀನ್

ಕ. ಏರ್‌ಚೀಫ್‌ಮಾರ್ಷಲ್ ಸಂತೋಷಕುಮಾರ್

ಡ. ಏರ್‌ಚೀಫ್ ಮಾರ್ಷಲ್ ಅರುಣ್ ತಾಂಡೆ.

60. NAM ನಲ್ಲಿ ಎಷ್ಟು ರಾಷ್ಟ್ರಗಳು ಸದಸ್ಯತ್ವ ಪಡೆದಿವೆ?

ಅ. 110 ಬ. 115 ಕ. 113 ಡ. 120

61. 2004 ಒಲಿಂಪಿಕ್ಸ್ ಕ್ರೀಡೆಗಳು ನಡೆಯುವ ಸ್ಥಳ

ಅ. ಅಥೆನ್ಸ್ ಬ. ಕಲ್ಲತ್ತ ಕ. ದೆಹಲಿ ಡ. ದೆಹಲಿ

62. ನೆಲ್ಸನ್ ಮಂಡೆಲಾಗೆ ದೊರೆತಿರುವ ಭಾರತದ ಅತ್ಯುನ್ನತ ಪ್ರಶಸ್ತಿ?

ಅ. ಪದ್ಮ ವಿಭೂಷಣ ಬ. ಭಾರತರತ್ನ

ಕ. ಪದ್ಮಶ್ರೀ ಡ. ಕಬೀರ್ ಸಮ್ಮಾನ್

63. ಅಮೆರಿಕಾದ ಅಪೀಲ್ ಆಫ್ ಕಾನ್ಸಿಯಾನ್‌ಸ ಪ್ರತಿಷ್ಠಾನವು ಇತ್ತೀಚೆಗೆ ಕೆ. ಆರ್. ನಾರಾಯಣನ್‌ಗೆ ನೀಡಿದ ಪುರಸ್ಕಾರ ಯಾವುದು?

ಅ. ವಿಶ್ವ ಮುತ್ಸದ್ದಿ ಬ. ಶಾಂತಿದೂತ

ಕ. ಅಪದ್ಬಾಂಧವ ಡ. ಶ್ರೇಷ್ಠರಾಜಕಾರಣಿ

64. ನೇಪಾಳದ ಪ್ರಧಾನ ಮಂತ್ರಿ?

ಅ. ಆರ್. ಪಿ. ಕೊಯಿರಾಲ ಬ. ಫೀ ಸಿಂಘ್

ಕ. ಜಿ.ಪಿ. ಕೊಯಿರಾಲ ಡ. ಪೃಥ್ವಿರಾಜ್ ಸಿಂಘ್

65. ನಾನು ಚಲನಚಿತ್ರ ಜಗತ್ತಿನ ರಾಜ ಎಂದು ಹೇಳಿದ ಚಲನ ಚಿತ್ರ ನಿರ್ದೇಶಕ?
ಅ. ಟೈಟಾನಿಕ್‌ಗೆ ಆಸ್ಕರ್ ಪ್ರಶಸ್ತಿ ಪಡೆದ ನಿರ್ದೇಶಕ ಜೇಮ್ಸ್ ಕ್ಯಾಮರೂನ್
ಬ. ಬೆನ್‌ಹರ್‌ನ ನಿರ್ದೇಶಕ
ಕ. 'ಗಾಂಧಿ' ಚಿತ್ರದ ನಿರ್ದೇಶಕ ಅಟೆನ್‌ಬರೋ
ಡ. ತಾಯಿ ಸಾಹೇಬಾದ ಗಿರೀಶ್ ಕಾಸರವಳ್ಳಿ

66. ಶತಮಾನದ ಚಿತ್ರ ಎಂದು ಅಗ್ಗಳಿಕೆಗೆ ಪಾತ್ರವಾದ ಚಲನಚಿತ್ರ?
ಅ. ಗಾನ್‌ವಿದ್‌ವಿಂಡ್ ಬ. ಟೈಟಾನಿಕ್
ಕ. ಕಾಮಸೂತ್ರ ಡ. ಗಾಂಧಿ

67. ಸಿನಿಮಾ ಜಗತ್ತಿಗೆ ನವ ಟಾನಿಕ್ ಎಂದು ಕರೆಸಿಕೊಂಡಿರುವ ಚಲನ ಚಿತ್ರ?
ಅ. ಟೈಟಾನಿಕ್ ಬ. ಬೆನ್‌ಹರ್
ಕ. ಕಾಮಸೂತ್ರ ಡ. ಗಾನ್ ವಿಕ್‌ದಿ ವಿಂಡ್

68. ಭಾರತದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಸಂಖ್ಯೆ?
ಅ. 20, ಬ. 19. ಕ. 30 ಡ. 25

69. ಪ್ರಪಂಚದಲ್ಲಿ ಅಧಿಕ ತಲಾ ಸರಾಸರಿ ಆದಾಯ ಹೊಂದಿದ ದೇಶ
ಅ. ಭಾರತ ಬ. ಇಂಗ್ಲೆಂಡ್
ಕ. ಅಮೆರಿಕಾ ಡ. ಚೀನಾ

70. ಜಿ. 8ರಲ್ಲಿ ಇತ್ತೀಚೆಗೆ ಸೇರಿದ ರಾಷ್ಟ್ರ?
ಅ. ಪಾಕಿಸ್ತಾನ ಬ. ರಷ್ಯಾ
ಕ. ಜಪಾನ್ ಡ. ನೇಪಾಳ

71. ವಿಶ್ವ ಆಹಾರ ದಿನವನ್ನು ಯಾವ ದಿನದಂದು ಆಚರಿಸುತ್ತಾರೆ?
ಅ. ಆಗಸ್ಟ್ 15, ಬ. ಜುಲೆ 30
ಕ. ಅಕ್ಟೋಬರ್ 16 ಡ. ಜನವರಿ 26

72. ಭಾರತದ ಪಂಚವಾರ್ಷಿಕ ಯೋಜನೆಯನ್ನು ಅಂತಿಮವಾಗಿ ಅನುಮೋದಿಸುವ ಸಂಸ್ಥೆ?
ಅ. ಲೋಕಸಭೆ ಬ. ರಾಜ್ಯಸಭೆ
ಕ. ಯೋಜನಾ ಆಯೋಗ ಡ. ರಾಷ್ಟ್ರೀಯ ಅಭಿವೃದ್ಧಿ ಮಂಡಳಿ

73. ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಸ್ಥಾಪಿಸಿರುವ ರಾಜ್ಯ
ಅ. ಕರ್ನಾಟಕ ಬ. ಉತ್ತರ ಪ್ರದೇಶ
ಕ. ಆಂಧ್ರಪ್ರದೇಶ ಡ. ಮಧ್ಯಪ್ರದೇಶ


74. ರೈಟ್ ಲೈವ್ಲಿವುಡ್ ಪ್ರಶಸ್ತಿ ವಿಜೇತ ಏಕೈಕ ಕನ್ನಡಿಗ ಎಂಬ ಅರ್ಹತೆ ಗಳಿಸಿದವರು?
ಅ. ಡಾ. ಸುದರ್ಶನ್ ಬ. ಪಿ. ಲಂಕೇಶ್
ಕ. ಡಾ। ಚಿದಾನಂದ ಮೂರ್ತಿ ಡ. ಎಚ್. ನರಸಿಂಹಯ್ಯ

75. 1997ರ ಸಾಹಿತ್ಯ ನೊಬೆಲ್ ಪ್ರಶಸ್ತಿ ವಿಜೇತರು.
ಅ. ಅಕ್ಟೋವಿಯಾ ಪಾಜ್ ಬ. ವಿಕ್ರಮ್ ಸೇಠ್
ಕ. ದೇರಿಯಫೊ ಡ. ಜಾರ್ಜ್ ಬರ್ನಾಡ್ ಷಾ

76. ಗಂಗಾ ನದಿಯ ಉಗಮ
ಅ. ಕರ್ನಾಟಕ ಬ. ಉತ್ತರ ಪ್ರದೇಶ
ಕ. ಗಂಗೋತ್ರಿ ಡ. ಮಧ್ಯಪ್ರದೇಶ

77. ಬಾಕ್ಸೈಟ್ ಯಾವುದಕ್ಕೆ ಉಪಯೋಗಿಸುತ್ತಾರೆ.
ಅ. ಅಲ್ಯುಮಿನಿಯಂ ಬ. ಕಬ್ಬಿಣ
ಕ. ಚಿನ್ನ ಡ. ಬೆಳ್ಳಿ

78. ಪ್ರಪಂಚದಲ್ಲಿ ಅತಿ ದೊಡ್ಡ ಖಂಡ
ಅ. ಏಷ್ಯಾ ಬ. ಆಫ್ರಿಕಾ



ಕ. ಯುರೋಪ್ ಡ. ಆಸ್ಟ್ರೇಲಿಯಾ

79. 'ದಿ ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಕೃತಿ ಕರ್ತೃ
ಅ. ಅಮೃತಾ ಪ್ರೀತಮ್
ಬ. ಇಂದಿರಾಗಾಂಧಿ
ಕ. ಕಮಲಾದಾಸ್
ಡ. ಅರುಂಧತಿ ರಾಯ್

ಉತ್ತರಗಳು

1. ಡ	2. ಕ	3. ಅ	4. ಕ	5. ಅ	6. ಬ
7. ಕ	8. ಕ	9. ಡ	10. ಬ	11. ಅ	12. ಬ
13. ಕ	14. ಬ	15. ಬ	16. ಬ	17. ಕ	18. ಅ
19. ಅ	20. ಡ	21. ಡ	22. ಡ	23. ಅ	24. ಬ
25. ಡ	26. ಡ	27. ಡ	28. ಬ	29. ಡ	30. ಡ
31. ಬ	32. ಅ	33. ಡ	34. ಡ	35. ಡ	36. ಅ
37. ಬ	38. ಕ	39. ಡ	40. ಅ	41. ಅ	42. ಅ
43. ಬ	44. ಅ	45. ಬ	46. ಅ	47. ಅ	48. ಅ
49. ಕ	50. ಕ	51. ಅ	52. ಅ	53. ಬ	54. ಡ
55. ಅ	56. ಬ	57. ಅ	58. ಅ	59. ಬ	60. ಕ
61. ಅ	62. ಬ	63. ಅ	64. ಕ	65. ಅ	66. ಬ
67. ಅ	68. ಬ	69. ಕ	70. ಬ	71. ಕ	72. ಡ
73. ಡ	74. ಅ	75. ಕ	76. ಕ	77. ಅ	78. ಅ
79. ಡ					

ವರ್ಧಮಾನ ಪ್ರಶಸ್ತಿ

ಮೂಡಬಿದಿರೆಯ ವರ್ಧಮಾನ ಪ್ರಶಸ್ತಿ ಪೀಠವು ೧೯೯೭ನೇ ಇಸವಿಯಲ್ಲಿ ಪ್ರಥಮಾವೃತ್ತಿಯಾಗಿ ಪ್ರಕಟವಾದ ಕತೆ, ಕಾದಂಬರಿ, ನಾಟಕ, ಕವನ ಸಂಗ್ರಹ ವಿಮರ್ಶಾ ಸಂಕಲನವೇ ಮೊದಲಾದವುಗಳಲ್ಲಿ ಎರಡನ್ನು ವರುಷದ ಶ್ರೇಷ್ಠ ಕೃತಿಗಳೆಂದು ಆಯ್ಕೆ ಮಾಡಿ ೧೯೯೭-೯೮ನೆ ಸಾಲಿನ ಪ್ರಶಸ್ತಿ ನೀಡಿ ಗೌರವಿಸಲಿದೆ. ಮೊದಲನೆಯದ್ದು ವರ್ಧಮಾನ ಸಾಹಿತ್ಯ ಪ್ರಶಸ್ತಿ, ಇದು ಹಿರಿಯ ಸಾಹಿತಿಗಳ ವರುಷದ ಶ್ರೇಷ್ಠ ಕೃತಿಗೆ ಮೀಸಲು. ಎರಡನೆಯದು ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ. ಇದು ತಮ್ಮ ಮೊದಲನೆಯ, ಎರಡನೆಯ ಅಥವಾ ಮೂರನೆಯ ಕೃತಿಗಳಿಂದ ವಿಮರ್ಶಕರ ಗಮನ ಸೆಳೆದು ಪ್ರತಿಭಾವಂತರೆಂದು ಪರಿಗಣಿಸಲ್ಪಟ್ಟ ಹೊಸಬರ ಕೃತಿಗೆ ಮೀಸಲು.

ಸಾಹಿತ್ಯಾಸಕ್ತರು, ಪ್ರಕಾಶಕರು, ಸಾಹಿತಿಗಳು ೧೯೯೭ರಲ್ಲಿ ಪ್ರಕಟವಾದ ಮಹತ್ವವೆಂದು ಪರಿಗಣಿಸಬಹುದಾದ ಕೃತಿಗಳ ಮೂರು ಪ್ರತಿಗಳನ್ನು ಅಥವಾ ಅವುಗಳ ಹೆಸರನ್ನಾದರೂ ದಯವಿಟ್ಟು ಮುನಿರಾಜ, ರೆಂಜಾಳ, ಸಹನಿರ್ದೇಶಕರು, ವರ್ಧಮಾನ ಪ್ರಶಸ್ತಿ ಪೀಠ, ಅಂಚೆ ಮೂಡಬಿದ್ರೆ - ೫೭೪೨೨೭ ದ.ಕ. ಈ ವಿಳಾಸಕ್ಕೆ ಕಳಿಸಬಹುದು.

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿರಿ


೧. 'ಗರ್ಭ' ಈ ನೃತ್ಯ ಯಾವ ರಾಜ್ಯಕ್ಕೆ ಸೇರಿದ್ದು?
೨. ಗೋದಾನ ಕಾದಂಬರಿ ಬರೆದವರು ಯಾರು?
೩. ದಾದ್ರಾ ಮತ್ತು ನಗರ ಹವೇಲಿ ರಾಜಧಾನಿ ಯಾವುದು?
೪. ಅಂತರಿಕ್ಷದಲ್ಲಿ ಪ್ರವೇಶಿಸಿದ ಮೊದಲ ಭಾರತೀಯನ ಹೆಸರೇನು?
೫. ಮೊದಲ ಲೋಕಸಭೆ ಚುನಾವಣೆ ನಡೆದದ್ದು ಯಾವ ವರ್ಷ?
೬. ಮೊದಲ ಬಾರಿ ಲೋಕಸಭೆ ಅಸ್ತಿತ್ವಕ್ಕೆ ಬಂದಾಗ ಸದಸ್ಯರ ಸಂಖ್ಯೆ ಎಷ್ಟು ಇದ್ದಿತು.
೭. ಪ್ರಸ್ತುತ ಲೋಕಸಭೆಯಲ್ಲಿ ಇರುವ ಸದಸ್ಯ ಸ್ಥಾನಗಳ ಸಂಖ್ಯೆ?
೮. ಲೋಕಸಭೆಗೆ ಸ್ಪರ್ಧಿಸಬೇಕಾದರೆ ಕನಿಷ್ಟ ವಯಸ್ಸು ಎಷ್ಟು?
೯. ಲೋಕಸಭೆ ಚುನಾವಣಾ ಪ್ರಚಾರಕ್ಕೆ ಅಭ್ಯರ್ಥಿಗಳ ಖರ್ಚು ಪರಿಮಿತಿ ಎಷ್ಟು?
೧೦. ಅತ್ಯಧಿಕ ಲೋಕಸಭಾ ಸ್ಥಾನಗಳನ್ನು ಹೊಂದಿದ ರಾಜ್ಯ ಯಾವುದು?
೧೧. ಪ್ರಸ್ತುತ ಲೋಕಸಭೆಯಲ್ಲಿ ಮೀಸಲಾತಿಗೆ ಒಳಪಟ್ಟ ಸ್ಥಾನಗಳ ಸಂಖ್ಯೆ ಎಷ್ಟು?
೧೨. ಲೋಕಸಭೆ ರದ್ದಾದ ನಂತರ ಎಷ್ಟು ಅವಧಿಯಲ್ಲಿ ಹೊಸ ಸಭೆ ವ್ಯವಸ್ಥೆಯಾಗಬೇಕು?
೧೩. ಇಂದಿರಾ ಆವಾಸ್ ಯೋಜನೆ ಆರಂಭಗೊಂಡಿದ್ದು ಯಾವಾಗ?
೧೪. ಪರಿಸರ ವಾಹಿನಿ ಯೋಜನೆ ಪ್ರಾರಂಭಿಸಿದ್ದು ಯಾವಾಗ?
೧೫. ಜಗತ್ಪಸಿದ್ಧ 'ಪೀಸಾ ಟವರ್'ನ ಮೂಲ ಹೆಸರೇನು?
೧೬. ಪೀಸಾ ಟವರ್ ಯಾವ ದೇಶದಲ್ಲಿದೆ?
೧೭. ದೇಶದ ಅಧಿಕ ಜನ ಸಾಂದ್ರತೆ ಹೊಂದಿದ ರಾಜ್ಯ ಯಾವುದು?
೧೮. ಅತೀ ಕಡಿಮೆ ಜನಸಾಂದ್ರತೆ ಹೊಂದಿದ ರಾಜ್ಯ ಯಾವುದು?
೧೯. ಪ್ರಪಂಚದಲ್ಲಿ ಇಲ್ಲಿಯವರೆಗೆ ನೊಬೆಲ್ ಪ್ರಶಸ್ತಿ ಪಡೆದ ಮಹಿಳೆಯರ ಸಂಖ್ಯೆ ಎಷ್ಟು?
೨೦. ದೇಶದಲ್ಲಿಯೇ ಕಡಿಮೆ ಜನಸಂಖ್ಯೆ ಹೊಂದಿದ ಏಕೈಕ ರಾಜ್ಯ ಯಾವುದು?
೨೧. ಇರಾಕ್ ದೇಶದ ಕರೆನ್ಸಿ ಯಾವುದು?
೨೨. ಆಪರೇಷನ್ ನೈಟ್ ಡಾಮಿನೆನ್ಸ್ ಯಾವುದಕ್ಕೆ ಸಂಬಂಧಿಸಿದ್ದು?
೨೩. ವರದಕ್ಷಿಣೆ ನಿಷೇಧ ಕಾನೂನು ಯಾವ ವರ್ಷ ಜಾರಿಗೆ ತಂದಾಗಿದೆ?
೨೪. ಭಾರತದೇಶದಲ್ಲಿ ಮೊದಲ ಹರಿಜನ ಮುಖ್ಯ ಮಂತ್ರಿಯಾರು?
೨೫. ಯಾವ ರಾಜ್ಯದಲ್ಲಿ ಮೊದಲ ಬಾರಿ ಹರಿಜನ ಮುಖ್ಯ ಮಂತ್ರಿಯಾದದ್ದು?
೨೬. ಅರುಣಾಚಲ ಪ್ರದೇಶ ಪ್ರತೀಕ ರಾಜ್ಯವಾಗಿ ಯಾವಾಗ ಅಸ್ತಿತ್ವಕ್ಕೆ ಬಂದೀತು?
೨೭. ರಾಜ್ಯ ಸಭೆಯ ಅಧ್ಯಕ್ಷರು ಯಾರು?
೨೮. ಲೋಕಸಭೆಯ ಮೊದಲ ಅಧ್ಯಕ್ಷರು ಯಾರು?
೨೯. ೧೮ನೇ ವಯಸ್ಸಿಗೆ ಮತದಾನದ ಹಕ್ಕು ಒದಗಿಸಿದ ಸಂವಿಧಾನ ತಿದ್ದುಪಡಿ ಎಷ್ಟನೆಯದು?
೩೦. ೧೮ನೇ ವಯಸ್ಸಿಗೆ ಮತದಾನ ಮಾಡುವ ಅವಕಾಶ ಒದಗಿಸಿದ್ದು ಯಾವ ವರ್ಷ?
೩೧. ರಾಜರಾಮ ಮೋಹನರಾಯ ಪ್ರಾರಂಭಿಸಿದ ಪತ್ರಿಕೆ ಯಾವುದು?
೩೨. ಬರ್ಮಾದೇಶ ಯಾವಾಗ ಸ್ವಾತಂತ್ರ ಹೊಂದಿತು?
೩೩. ಭೂದಾನ ಚಳುವಳಿ ಆರಂಭಿಸಿದವರು ಯಾರು?
೩೪. ಭಾರತ ಪಾಕಿಸ್ತಾನ ಮಧ್ಯೆ ಜರುಗಿದ ಸಿಮ್ಲಾ ಒಪ್ಪಂದ ಯಾವಾಗ?
೩೫. ದೆಹಲಿ ಸಿಂಹಾಸನವನ್ನು ಅಲಂಕರಿಸಿದ ಏಕೈಕ ಮಹಿಳಾ ಸುಲ್ತಾನ ಯಾರು?
೩೬. ಬಾರ್ಡೋಲಿ ಸತ್ಯಾಗ್ರಹ ಆರಂಭಿಸಿದವರು ಯಾರು?
೩೭. ಡ್ಯೂರಾಂಡ್ ರೇಖೆ ಯಾವ ದೇಶದ ಮಧ್ಯೆ ಇದೆ?
೩೮. ಸಿಖ್ ಮತ ಸ್ಥಾಪಕರು ಯಾರು?
೩೯. ಸ್ವರಾಜ್ಯ ಪಕ್ಷ ಸ್ಥಾಪನೆ ಮಾಡಿದವರು ಯಾರು?
೪೦. ಭಾರತ ಕೊನೆಯ ಬ್ರಿಟಿಷ್ ವೈಸರಾಯ ಯಾರು?
೪೧. ಪ್ರಪಂಚ ಪ್ರಸಿದ್ಧ ಮೊನಾಲಿಸಾ ಚಿತ್ರ ರಚಿಸಿದವರು ಯಾರು?
೪೨. ಪ್ರಸ್ತುತ ಹಣಕಾಸು ಆಯೋಗದ ಅಧ್ಯಕ್ಷರು ಯಾರು?
೪೩. ಪ್ರಸಾರ ಭಾರತ ಮಂಡಳಿಯ ಅಧ್ಯಕ್ಷರಾಗಿ ನೇಮಕ ಗೊಂಡವರ ಹೆಸರೇನು?
೪೪. ಇಸ್ರೊದ ಅಧ್ಯಕ್ಷರು ಯಾರು?
೪೫. ಗೋವಾದ ರಾಜ್ಯ ಪಾಲರಾಗಿ ನೇಮಕಗೊಂಡವರು ಯಾರು?
೪೬. ಕೇರಳದ ರಾಜ್ಯಪಾಲರಾಗಿ ನೇಮಿತರಾದ ನ್ಯಾಯಾದೀಶರ ಹೆಸರೇನು?
೪೭. ದೇಶದಲ್ಲಿ ಮೊದಲ ಭಾಷಾವಾರು ಪ್ರಾಂತ ರಚನೆಯಾದದ್ದು ಯಾವುದು?
೪೮. ಮಹಾತ್ಮಗಾಂಧಿ ಜಲ ವಿದ್ಯುತ್ ಕೇಂದ್ರ ಎಲ್ಲಿದೆ?
೪೯. ಸಿಂಗರಣೆ ಕಲ್ಲಿದ್ದಲು ಗಣಿ ಯಾವ ರಾಜ್ಯದಲ್ಲಿದೆ?
೫೦. ಅಸ್ಸಾಂನಲ್ಲಿರುವ ದಿಗ್ಬೋಯಿ ಯಾವುದಕ್ಕೆ ಪ್ರಸಿದ್ಧಿ ಪಡೆದಿದೆ?

ಉತ್ತರಗಳು

೧. ಗುಜರಾತ, ೨. ಪ್ರೇಮಚಂದ, ೩. ನಿಲ್ವಸಾ, ೪. ರಾಕೇಶ್ ಶರ್ಮ,೫. ೧೯೫೨,೬. ೪೮೯, ೭. ೫೪೫, ೮. ೨೫ ವರ್ಷ, ೯. ೧೫ ಲಕ್ಷ, ೧೦. ಉತ್ತರ ಪ್ರದೇಶ, ೧೧. ೧೧೯, ೧೨. ೬ ತಿಂಗಳು, ೧೩. ೧೯೮೫, ೧೪. ೧೯೯೨, ೧೫. ಲೀನಿಂಗ್ ಟವರ್, ೧೬. ಇಟಲಿ, ೧೭. ಕೇರಳ, ೧೮. ಅರುಣಾಚಲ ಪ್ರದೇಶ, ೧೯. ೩೦, ೨೦. ಸಿಕ್ಕಿಂ, ೨೧. ದೀನಾರ್, ೨೨. ಪಂಜಾಬನಲ್ಲಿ ರಾತ್ರಿ ಉಗ್ರವಾದಿಗಳನ್ನು ಬಂಧಿಸುವುದು, ೨೩. ೧೯೬೧, ೨೪. ದಾಮೋದರ ಸಂಜೀವಯ್ಯ, ೨೫. ಆಂಧ್ರಪ್ರದೇಶ, ೨೬. ೧೯೮೭, ೨೭. ಉಪರಾಷ್ಟ್ರಪತಿ, ೨೮. ಜಿ.ವಿ. ಮಾವಲಂಕರ್, ೨೯. ೬೨ನೇ, ೩೦. ೧೯೮೯, ೩೧. ಸಂವಾದ ಕೆಮುದಿ, ೩೨. ೧೯೪೭ ಜನವರಿ ೪, ೩೩. ಆಚಾರ್ಯ ವಿನೋಭಾ ಭಾವೆ, ೩೪. ಜುಲೆ ೨, ೧೯೭೨, ೩೫. ರಜೀಯಾ ಬೇಗಂ, ೩೬. ಸರ್ದಾರ ವಲ್ಲಭಬಾಯಿ ಪಟೇಲ, ೩೭. ಭಾರತ-ಅಪ್ಘಾನಿಸ್ತಾನ, ೩೮. ಗುರುನಾನಕ್, ೩೯. ಸಿ.ಆರ್. ದಾಸ್. ನೆಹರು, ೪೦. ಮೌಂಟ್‌ಬಾಟನ್, ೪೧. ಲಿಯೊನಾರ್ಡ್ ಡಾದಿನ್ಸಿ, ೪೨. ಕೆ.ಸಿ. ಪಂತ್, ೪೩. ನಿಖಿಲ್ ಚಕ್ರವರ್ತಿ, ೪೪. ಕೆ. ಕಸ್ತೂರಿ ರಂಗನ್, ೪೫. ಟಿ. ಆರ್. ಸತೀಶ್ ಚಂದ್ರನ್, ೪೬. ಸುಖದೇವ್‌ಸಿಂಗ್ ಕಾಂಗ್, ೪೭. ಆಂಧ್ರಪ್ರದೇಶ, ೪೮. ಜೋಗ್ ಫಾಲ್ಸ್ (ಸಾಗರ), ೪೯. ಆಂಧ್ರಪ್ರದೇಶ, ೫೦. ಪೆಟ್ರೋಲ್.

○ ಶಿ.ಕಾ. ಬಡಿಗೇರ

ಬಹು ಆಯ್ಕೆ ರೂಪದ ಪ್ರಶ್ನೆಗಳು



ಇತಿಹಾಸ

೧. ವೇದಕಾಲದಲ್ಲಿ 'ತಂಡೂಲ' ಎಂಬ ಪದ ಯಾವುದಕ್ಕೆ ಸಂಬಂಧಿಸಿದ್ದು?
ಅ. ಗೋಧಿ ಬ. ಭತ್ತ
ಕ. ಚಾಲಿಕ ಡ. ಮಾದಕ ಪಾನೀಯ

೨. ಹರ್ಷನ ಮುಖ್ಯಮಂತ್ರಿ ಯಾರು?
ಅ. ಹುಯಾನ್ ತ್ಸಾಂಗ್ ಬ. ಬಾಣಭಟ್ಟ
ಕ. ಭಂಡಿ ಡ. ಗುಪ್ತನು

೩. ಪಲ್ಲವರ ರಾಜ್ಯ ಭಾಷೆ
ಅ. ಪ್ರಾಕೃತ ಬ. ತಮಿಳು
ಕ. ಸಂಸ್ಕೃತ ಡ. ಪಾಲಿ

೪. ಈ ಕೆಳಗೆ ಕಾಣಿಸಿದವುಗಳಲ್ಲಿ ಶಂಕರಾಚಾರ್ಯರು ಮಠ ಸ್ಥಾಪಿಸಿದ ಪ್ರದೇಶ?
ಅ. ಶೃಂಗೇರಿ ಬ. ಪುರಿ
ಕ. ಬದರಿನಾಥ್ ಡ. ಮಥುರ

೫. ಕುತುಬ್‌ದ್ದೀನ್ ಐಬಕ್ ರಾಜಧಾನಿ
ಅ. ದೆಹಲಿ ಬ. ಲಾಹೋರ್
ಕ. ಆಗ್ರ ಡ. ಫತೆಪುರಸಿಕ್ರಿ

೬. ಶಿವಾಜಿ ಯಾವ ವರ್ಷದಲ್ಲಿ ಪಟ್ಟಾಭಿಷೇಕ ಹೊಂದಿದನು
ಅ. ಕ್ರಿ.ಶ. ೧೬೫೪ ಬ. ೧೬೭೪
ಕ. ೧೬೮೦ ಡ. ೧೬೮೨

೭. ಗಾಂಧೀಜಿ ಯಾರನ್ನು ತನ್ನ ರಾಜಕೀಯ ಗುರು ಎಂದು ಕರೆದುಕೊಂಡರು
ಅ. ತಿಲಕ್ ಬ. ಗೋಖಲೆ
ಕ. ದಾದಾಬಾಯಿನವರೋಜಿ
ಡ. ನೆಹರು

೮. ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ ಸ್ಥಾಪನೆಯಾದ ವರ್ಷ
ಅ. ೧೯೨೦ ಬ. ೧೯೨೫
ಕ. ೧೯೩೦ ಡ. ೧೯೨೭

೯. ಭಾರತದೇಶ ಸ್ವತಂತ್ರ ಪಡೆದಾಗ ಬ್ರಿಟೀಷ್ ಪ್ರಧಾನಿ ಯಾರಾಗಿದ್ದರು
ಅ. ಲಾರ್ಡ್ ವೇಜೆಲ್
ಬ. ದಿನ್‌ಸ್ಟನ್ ಚರ್ಚಿಲ್
ಕ. ಅಟ್ಲೆ ಡ. ಮೌಂಟ್‌ಬ್ಯಾಟನ್

೧೦. ರಾಮಕೃಷ್ಣ ಮಿಷನ್ ಯಾವಾಗ ಸ್ಥಾಪಿಸಲಾಯಿತು
ಅ. ೧೮೯೯ ಬ. ೧೮೯೭
ಕ. ೧೮೯೨ ಡ. ೧೮೮೮

೧೧. ಹೋಂ ರೋಲ್ ಚಳುವಳಿ ಮೊದಲು ಆರಂಭಿಸಿದ್ದು
ಅ. ತಿಲಕ್ ಬ. ಅನಿಬೆಸೆಂಟ್
ಕ. ಜಾರ್ಜ್ ಅಮಂಡೇಲ್
ಡ. ಸುಬ್ರ ಮತ್ತು ಅಯ್ಯರ್

೧೨. ಗಾಂಧೀಜಿ ಸಬರಮತಿ ಆಶ್ರಮವನ್ನು ಯಾವಾಗ ಸ್ಥಾಪಿಸಿದರು?
ಅ. ೧೯೧೫ ಬ. ೧೯೧೬
ಕ. ೧೯೧೭ ಡ. ೧೯೧೮

೧೩. ನಾಗಸಾಕಿಯ ಮೇಲೆ ಯಾವಾಗ ಬಾಂಬ್ ಹಾಕಲಾಯಿತು
ಅ. ೧೯೪೫ ಆಗಸ್ಟ್ ೬
ಬ. ೧೯೪೫ ಆಗಸ್ಟ್ ೯
ಕ. ೧೯೪೫ ಆಗಸ್ಟ್ ೧೭
ಡ. ೧೯೪೫ ಸೆಪ್ಟೆಂಬರ್ ೨

೧೪. ಹರಪ್ಪ ನಾಗರಿಕತೆಗೆ ಸೇರಿದ ಯಾವ ಪ್ರಾಂತದಲ್ಲಿ 'ಕುದುರೆ ಅಸ್ತಿಪಂಜರ' ದೊರೆಯಿತು
ಅ. ರುಪಾರ್ ಬ. ಕಾಲಿ ಬಂಗಾಸ್
ಕ. ಸುರ್ಕ್‌ಟೊಡ್ ಡ. ಲೋಥಾಲ್

೧೫. ತಾಮ್ರದ ನಾಣ್ಯಗಳನ್ನು ಬಿಡುಗಡೆ ಮಾಡಿದ ದೆಹಲಿ ಸುಲ್ತಾನ್
ಅ. ಮಹ್ಮದ್ ಬಿನ್ ತುಗಲಕ್
ಬ. ಅಲ್ಲವುದ್ದಿನ್ ಖಿಲ್ಜಿ
ಕ. ಫಿರೋಜಷಾ ತುಗಲಕ್
ಡ. ಜಲಾಲುದ್ದೀನ್ ಖಿಲ್ಜಿ

೧೬. ಅಮಿರ್‌ಖುಸ್ರೊ ಯಾವ ಸೂಫಿ ವರ್ಗಕ್ಕೆ ಸೇರಿದವರು
ಅ. ಚಿಷ್ಟಿ ಬ. ಸಹ್ರಸದಳ
ಕ. ಫಿರ ದೋಸಿ ಡ. ನಕ್ಷಬಂದ್

೧೭. ತಾಳಿಕೋಟೆ ಯುದ್ಧ ನಡೆದಾಗ ವಿಜಯನಗರ ಅರಸ ಯಾರು
ಅ. ರಾಮರಾಯರು
ಬ. ಸದಾಶಿವರಾಯರು
ಕ. ಕೃಷ್ಣದೇವರಾಯ
ಡ. ನರಸಿಂಹರಾಯರು

೧೮. ಹೈದರಾಬಾದ್ ರಾಜ್ಯ ಸ್ಥಾಪಕರು
ಅ. ಚಿನ್‌ಕಿಲಿಚಿಕಾನ್
ಬ. ಮಹ್ಮದ್ ಷಾ
ಕ. ಅಹ್ಮದ ಷಾ
ಡ. ಷಾ ಆಲಂ

೧೯. ನೆಪೋಲಿಯನ್ ಕೋಡ್ ಯಾವಾಗ ರಚಿಸಲಾಯಿತು
ಅ. ೧೮೦೩ ಬ. ೧೮೦೪
ಕ. ೧೮೦೫ ಡ. ೧೮೦೬

೨೦. 'ಗೆಸ್ಟೆಹೊ' ಎಂಬ ರಹಸ್ಯ ಪೊಲೀಸ್ ಸಂಘ ಸ್ಥಾಪಕರು
ಅ. ಮಾಜಿನಿ ಬ. ಹಿಟ್ಲರ್
ಕ. ಮುಸ್ಸೊಲಿನಿ ಡ. ಸ್ಟಾಲಿನ್

ರಾಜ್ಯಶಾಸ್ತ್ರ

೨೧. ಲೋಕಸಭೆಗೆ ಸ್ಪರ್ಧಿಸಲು ಯಾರು ಅನರ್ಹರು
ಅ. ೨೫ ವರ್ಷ ವಯಸ್ಸು ತುಂಬದವರು
ಬ. ರಾಜ್ಯಸಭೆ ಸದಸ್ಯರು
ಕ. ೬೦ ವರ್ಷ ವಯಸ್ಸಾದವರು
ಡ. ಮೇಲೆ ಸೂಚಿಸಿದ ಎಲ್ಲರು

೨೨. ಸರ್ಕಾರಿಯಾ ಕಮಿಷನ್ ಯಾವ ವರ್ಷ ರಚಿಸಲಾಯಿತು
ಅ. ೧೯೮೪ ಬ. ೧೯೮೩
ಕ. ೧೯೮೫ ಡ. ೧೯೮೨

೨೩. ಭಾರತದ ೧೧ನೇ ಪ್ರಧಾನಿ ಯಾರು
ಅ. ವಾಜಪೇಯಿ ಬ. ದೇವೆಗೌಡ
ಕ. ನರಸಿಂಹರಾವ್ ಡ. ಐ.ಕೆ.ಗುಜ್ರಾಲ್

೨೪. 'ಬಂದ್'ಗಳು ಸಂವಿಧಾನ ವಿರುದ್ಧವೆಂದು ತೀರ್ಪುನೀಡಿದ ಕೋರ್ಟು ಯಾವುದು
ಅ. ತಮಿಳುನಾಡು ಬ. ಕೇರಳ
ಕ. ಪಂಜಾಬ್ ಡ. ದೆಹಲಿ

೨೫. ಭಾರತದಲ್ಲಿ ಮೊದಲ ಬಾರಿ ಎಷ್ಟನೆ ಲೋಕಸಭೆ 'ಹಂಗ್' ಸ್ಥಿತಿ ಏರ್ಪಟ್ಟಿತು
ಅ. ಒಂಭತ್ತನೆ ಬ. ಹತ್ತನೆ
ಕ. ಹನ್ನೊಂದನೆ ಡ. ಎಂಟನೆ

೨೬. ಅಂಡಮಾನ್ ನಿಕೋಬಾರ್ ಯಾವ ಕೋರ್ಟ್ ಪರಿಧಿಗೆ ಸೇರುತ್ತದೆ.
ಅ. ಚೆನ್ನೈ ಬ. ಕಲಕತ್ತಾ
ಕ. ತ್ರಿವೆಂಡ್ರಮ್ ಡ. ಮುಂಬಯಿ

೨೭. ಸಂವಿಧಾನದ ೩೭೦ ನೇ ನಿಧಿ ಯಾವುದಕ್ಕೆ ಸಂಬಂಧಿಸಿದ್ದು
ಅ. ಜಮ್ಮು ಮತ್ತು ಕಾಶ್ಮೀರ ಪ್ರತ್ಯೇಕ ಅಧಿಕಾರಗಳು

ಬ. ರಾಷ್ಟ್ರಪತಿ ಆಡಳಿತ
ಕ. ರಾಜ್ಯಪಾಲರ ಅಧಿಕಾರಗಳು
ಡ. ಪ್ರಧಾನಮಂತ್ರಿ ಅಧಿಕಾರಗಳು

೨೮. ಬಲವಂತರಾಯ್ ಮೆಹತಾ ಸಮಿತಿ ಯಾವಾಗ ರಚಿಸಲಾಯಿತು?
ಅ. ೧೯೫೫ ಬ. ೧೯೫೮
ಕ. ೧೯೫೭ ಡ. ೧೯೫೬

೨೯. ಅಶೋಕ ಮೆಹತಾ ಸಮಿತಿ ನೀಡಿದ ಸೂಚನೆ ಯಾವುದು?
ಅ. ಎರಡು ಹಂತದ ಪಂಚಾಯತ್
ಬ. ಪ್ರತ್ಯಕ್ಷ ಚುನಾವಣೆ
ಕ. ರಾಜ್ಯ ಚುನಾವಣೆ ಕಮಿಷನ್ ವ್ಯವಸ್ಥೆ
ಡ. ಅ.ಬ.

೩೦. ನಮ್ಮ ಸಂವಿದಾನ
ಅ. ಅಲಿಖಿತ ಬ. ಲಿಖಿತ
ಕ. ಸರ್ವಶ್ರೇಷ್ಟ ಡ. ನಿರ್ವಿಕಾರ

ಸಾರ್ವಜನಿಕ ಆಡಳಿತ

೩೧. ಸರ್ದಾರ ವಲ್ಲಭಭಾಯ್ ಪಟೇಲ ರಾಷ್ಟ್ರೀಯ ಪೊಲೀಸ್ ಅಕಾಡೆಮಿ ಯಾವ ರಾಜ್ಯದಲ್ಲಿದೆ?
ಅ. ಉತ್ತರ ಪ್ರದೇಶ
ಬ. ಮಧ್ಯಪ್ರದೇಶ
ಕ. ಕೇರಳ
ಡ. ಆಂಧ್ರಪ್ರದೇಶ

೩೨. ರಾಷ್ಟ್ರೀಯ ಯೋಜನಾ ವರದಿಯನ್ನು ಯಾರು ಸಿದ್ಧಪಡಿಸುವುದು?
ಅ. ಹಣಕಾಸು ಆಯೋಗ
ಬ. ಕಾನೂನು ಆಯೋಗ
ಕ. ಯೋಜನಾ ಆಯೋಗ
ಡ. ಅಭಿವೃದ್ಧಿ ಮಂಡಳಿ

೩೩. ರಾಷ್ಟ್ರಪತಿ ಹುದ್ದೆಯಲ್ಲಿದ್ದಾಗ ನಿಧನ ಹೊಂದಿದ ಮೊದಲ ವ್ಯಕ್ತಿ ಯಾರು?
ಅ. ರಾಜೇಂದ್ರಪ್ರಸಾದ
ಬ. ಜಾಕಿರ್ ಹುಸೇನ್
ಕ. ಫಕ್ರುದ್ದೀನ್ ಅಹ್ಮದ್
ಡ. ಜೈಲ್ ಸಿಂಗ್

೩೪. ರಾಜ್ಯಸಭೆಗೆ ರಾಷ್ಟ್ರಪತಿ ಎಷ್ಟು ಜನ ಆಂಗ್ಲೊ ಇಂಡಿಯನ್ಸ್‌ರನ್ನು ನೇಮಕ ಮಾಡುತ್ತಾರೆ.
ಅ. ೨ ಬ. ೪ ಕ.೧
ಡ.ನೇಮಕದ ಅವಕಾಶವಿಲ್ಲ

೩೫. ಕೇಂದ್ರ ರಾಜ್ಯ ಸಂಬಂಧಗಳ ಸಮೀಕ್ಷೆಗೆ ಕೇಂದ್ರ ನೇಮಿಸಿದ ಆಯೋಗದ ಹೆಸರು
ಅ. ರಾಜಮನ್ನಾರ್ ಸಮಿತಿ
ಬ. ಗಜೇಂದ್ರ ಗಡಕರ್ ಸಮಿತಿ
ಕ. ಮುರಾರ್ಜಿ ಸಮಿತಿ
ಡ. ಸರ್ಕಾರಿಯಾ ಆಯೋಗ

೩೬. ಭಾರತ ಸರಕಾರ ನೇಮಿಸಿದ ಭ್ರಷ್ಟಾಚಾರ ನಿರೋಧ ಸಮಿತಿ ಅಧ್ಯಕ್ಷರು ಯಾರು?
ಅ. ನಟರಾಜನ್ ಬ. ನಾಗರಾಜನ್
ಕ. ಸಂತಾನಂ ಡ. ಭಕ್ತವತ್ಸಲಂ

೩೭. ಲೋಕಪಾಲ್ ವ್ಯವಸ್ಥೆ ಯಾವ ವರ್ಷ ಏರ್ಪಾಟು ಮಾಡಿದರು
ಅ. ೧೯೯೭ ಬ. ೧೯೬೬
ಕ. ೧೯೮೬ ಡ. ಏರ್ಪಾಟು ಮಾಡಿಲ್ಲ

೩೮. ಪಂಚಾಯಿತ್‌ರಾಜ್ ವ್ಯವಸ್ಥೆಯನ್ನು ಮೊದಲ ಬಾರಿ ಶಿಫಾರಸು ಮಾಡಿದ ಸಮಿತಿ ಅಧ್ಯಕ್ಷ
ಅ. ಅಶೋಕ ಮೆಹತಾ
ಬ. ಬಲ್ವಂತ್ ರಾಯ್ ಮೆಹತಾ
ಕ. ಗ್ರೋವರ್
ಡ. ಮಧು ದಂಡವತೆ

೩೯. ಪ್ರಸ್ತುತ ಭಾರತ ಚುನಾವಣಾ ಆಯೋಗದ ಕಮಿಷನರ್ ಸಂಖ್ಯೆ ಎಷ್ಟು
ಅ.೨ ಬ.೩.
ಕ.೧ ಡ.೪

೪೦. ಲೋಕಸಭೆ ರದ್ದಾದ ನಂತರ ಎಷ್ಟು ಅವಧಿಯೊಳಗೆ ಹೊಸ ಲೋಕ ಸಭೆ ರಚನೆಯಾಗಬೇಕು.
ಅ. ಒಂದು ವರ್ಷ
ಬ. ೬ ತಿಂಗಳು
ಕ. ೩ ತಿಂಗಳು
ಡ. ೨ ತಿಂಗಳು

ಸಂಸ್ಕೃತಿ

೪೧. ಏಷಿಯಾಟಿಕ್ ಸೊಸೈಟಿ ಆಫ್ ಕಲಕತ್ತಾ' ಇದರ ಸ್ಥಾಪಕರು
ಅ. ರವೀಂದ್ರನಾಥ ಟಾಗೋರ
ಬ. ಸ್ವಾಮಿ ವಿವೇಕಾನಂದ
ಕ. ವಿಲಿಯಂ ಜೋನ್ಸ್
ಡ. ವಿಲಿಯಂ ಕಾರೆ

೪೨. ವಿಂದ್ಯ ಪರ್ವತದ ದಕ್ಷಿಣ, ಕೃಷ್ಣಾ ನದಿಯ ಉತ್ತರ ಭಾಗದಲ್ಲಿ ವಿಕಸಿನಿದ ಶಿಲ್ಪಕಲಾ ಶೈಲಿಯ ಹೆಸರೇನು
ಅ. ದ್ರಾವಿಡ ಶೈಲಿ ಬ. ವೇಸಾರ ಶೈಲಿ
ಕ. ನಾಗರ ಶೈಲಿ ಡ. ಮಾಮಲ್ಲ ಶೈಲಿ

೪೩. ಕರ್ನಾಟಕ ಸಂಗೀತದಲ್ಲಿ ಒಟ್ಟು ಎಷ್ಟು ರಾಗಗಳಿವೆ
ಅ. ೭೨ ಬ. ೮೪
ಕ. ೬ ಡ. ೧೮

೪೪. 'ದ್ವೈತಾ ದ್ವೈತ' ಪ್ರತಿ ಪಾದನೆ ಮಾಡಿದವರು ಯಾರು
ಅ. ನಿಂಬಕಾಚಾರ್ಯ
ಬ. ರಾಮಾಯಣ ಚಾರ್ಯ
ಕ. ಮಧ್ವಾಚಾರ್ಯ
ಡ. ಶ್ರೀ ಕಾಂತಚಾರ್ಯ

೪೫ 'ಸಾದಿರ್' ಎಂದು ಹೆಸರು ಪಡೆದ ನೃತ್ಯ ಯಾವುದು
ಅ. ಕಥಕ್ ಬ. ಭರತನಾಟ್ಯ
ಕ. ಕಥಕಳಿ ಡ. ಮೋಹಿನಿ ಅಟ್ಟಾ

೪೬. ರವೀಂದ್ರನಾಥ ಟ್ಯಾಗೋರರು ಯಾವ ಶಾಸ್ತ್ರೀಯ ನೃತ್ಯದ ಅಭ್ಯಾಸವನ್ನು ಶಾಂತಿನಿಕೇತನದಲ್ಲಿ ಆರಂಭಿಸಿದರು?
ಅ. ಒಡಿಸ್ಸಿ ಬ. ಕಥಕ್
ಕ. ಭರತನಾಟ್ಯಂ ಡ. ಮಣಿಪುರಿ

೪೭. 'ಮಧುಬನಿ' ಚಿತ್ರಕಲೆ ಯಾವ ರಾಜ್ಯದಲ್ಲಿದೆ
ಅ. ಬಿಹಾರ ಬ. ಕೇರಳ
ಕ. ಒರಿಸ್ಸಾ ಡ. ಮಹಾರಾಷ್ಟ್ರ

೪೮. ನ್ಯಾಷನಲ್ ಸ್ಕೂಲ್ ಆಫ್ ಡ್ರಾಮ' ಯಾವ ವರ್ಷ ಆರಂಭವಾಯಿತು
ಅ. ೧೯೫೯ ಬ. ೧೯೫೭
ಕ. ೧೯೭೦ ಡ. ೧೯೭೨


೪೯. ಔರಂಗಜೇಬು ಅವರ ಕೈಯಲ್ಲಿ ಕೊಲೆಯಾದ ಸಿಖ್‌ಪಂಥದ ಗುರು
ಅ. ಗುರುತೇಜ ಬಹದೂರ
ಬ. ಗುರುಅರ್ಜುನ್‌ದೇವ
ಕ. ಗುರು ಗೋವಿಂದ ಸಿಂಗ್
ಡ. ಗುರು ಅಂಗದ್

೫೦. 'ದಿ ಫಿಲ್ಮ್ ಅಂಡ್ ಟೆಲಿವಿಜನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ' ಎಲ್ಲಿದೆ?
ಅ. ಪುಣೆ ಬ. ಮುಂಬಯಿ
ಕ. ಹೈದ್ರಾಬಾದ್ ಡ. ಭೂಪಾಲ್

ಉತ್ತರಗಳು

೧. ಬ, ೨. ಕ, ೩. ಕ, ೪. ಡ, ೫. ಬ, ೬. ಬ, ೭. ಬ, ೮. ಬ, ೯. ಕ ೧೦. ಬ, ೧೧. ಅ, ೧೨. ಬ, ೧೩. ಬ, ೧೪. ಕ, ೧೫. ಅ, ೧೬. ಅ, ೧೭. ಬ ೧೮. ಅ, ೧೯. ಬ, ೨೦. ಬ, ೨೧. ಅ, ೨೨. ಕ, ೨೩. ಅ, ೨೪. ಬ, ೨೫. ಅ, ೨೬. ಬ, ೨೭. ಅ, ೨೮. ಕ, ೨೯. ಡ, ೩೦. ಬ, ೩೧. ಡ, ೩೨. ಕ, ೩೩. ಬ, ೩೪. ಡ, ೩೫. ಅ, ೩೬. ಕ, ೩೭. ಡ, ೩೮. ಬ, ೩೯. ಅ, ೪೦. ಬ, ೪೧. ಡ, ೪೨. ಬ, ೪೩. ಅ, ೪೪. ಅ, ೪೫. ಕ, ೪೬. ಅ, ೪೭. ಅ, ೪೮. ಅ, ೪೯. ಅ, ೫೦. ಅ

ವಿದ್ಯಾರ್ಥಿಯ ಯಶಸ್ಸಿನ ದಾರಿ



ಎಣಿಸಿಕೊಂಡ ಗುರಿಯನ್ನು ಸಾಧಿಸುವ ಬಗೆ ಹೇಗೆ?

'ಈ ವರ್ಷ ಹೀಗಾಗಬೇಕು... .ಹಾಗಾಗಬೇಕು, ಫಸ್ಟ್ ಕ್ಲಾಸ್ ಬರಬೇಕು' ಎಂಬೆಲ್ಲ ಗುರಿಯನ್ನೇನೋ ಎಲ್ಲರೂ ಎಣಿಸಿಕೊಳ್ಳಬಹುದು, ಆದರೆ ಎಲ್ಲರೂ ಫಸ್ಟ್ ಕ್ಲಾಸ್ ಬರುವುದಿಲ್ಲವಲ್ಲಾ! ಹೆಚ್ಚಿನವರು ಅದನ್ನು ಸಾಧಿಸುವಲ್ಲಿ ವಿಫಲರಾಗುತ್ತಾರಲ್ಲಾ! ಇದಕ್ಕೇನು ಕಾರಣ ಗೊತ್ತೇ? ಹೆಚ್ಚಿನವರು ಗುರಿಯನ್ನೆಣಿಸಿಕೊಂಡೊಡನೆಯೇ ಆ ಗುರಿಯೇ ವರ್ಷಾಂತ್ಯದಲ್ಲಿ ಬಂದು ಪ್ರತ್ಯಕ್ಷವಾಗುತ್ತದೆಂದು ಭ್ರಮಿಸುತ್ತಾರೆ. ಇನ್ನು ಕೆಲವರು ಆ ಗುರಿಯ ನೆನಕೆಯಲ್ಲೇ ಗುರಿ ಸೇರಿದ ಹಗಲುಗನಸು ಕಾಣುತ್ತ ದಿನಗಳೆಯುತ್ತಾರೆ. ಮಾವಿನ ಗೊರಟವನ್ನು ತೋಟದಲ್ಲಿ ಬಿತ್ತಿದರೆ ಸಾಕು ವರ್ಷಾಂತ್ಯದಲ್ಲದು ಮರವಾಗಿ ಸಮೃದ್ಧ ಫಲಗಳನ್ನೀಯುತ್ತದೆಂದು ಭ್ರಮಿಸುವಂತೆಯೇ ಇದು! ಸಮೃದ್ಧ ಫಲ ಬರುವಂತಾಗಲು ಆ ಬೀಜ ಮೊಳೆತು ಬೆಳೆಯುವಂತೆ, ವರ್ಷವಿಡೀ ಸಾರ ನೀರನ್ನು ಹಾಕಿ ಅದನ್ನು ಪೋಷಿಸಬೇಡವೇ? ದನಕರುಗಳ ಬಾಯಿಗದು ಬೀಳದಂತೆ ಅದನ್ನು ರಕ್ಷಿಸಬೇಡವೇ? ಆದೇ ರೀತಿ ಎಣಿಸಿದ ಗುರಿ ಸಾಧಿತವಾಗಲೂ ವರ್ಷದುದ್ದಕ್ಕೂ ಆ ಕಡೆಗೆ ಹೆಚ್ಚು ಗಮನ ಹರಿಸಿ ವಿಶೇಷ ಆಸಕ್ತಿಯಿಂದ ಏಕಾಗ್ರತೆಯಿಂದ ಅರಿತು ಅಭ್ಯಸಿಸಬೇಕು, ಓದಿ ಬರೆಯಬೇಕು, ಚಿಂತನಮಂಥನ ಮಾಡಬೇಕು - ಒಟ್ಟಿನಲ್ಲಿ ಸತತ ಪ್ರಯತ್ನದ ದಾರಿಯನ್ನು ತುಳಿಯಬೇಕು. ಗುಡ್ಡದ ತುದಿ ಸೇರಲು ಪ್ರತಿಯೊಂದು ಮೆಟ್ಟಿಲನ್ನೂ ಎಚ್ಚರದಿಂದ ಏರಲೇಬೇಕಾದಂತೆ, ಆ ಗುರಿ ಸೇರಲು ದಿನದಿನವೂ ನಿಷ್ಠೆಯಿಂದ ಪ್ರಯತ್ನಶೀಲರಾಗಲೇಬೇಕು ಅಥವಾ ಸಾಧನೆಯಲ್ಲಿ ತೊಡಗಲೇಬೇಕು. ಸರಪಳಿಯೊಂದು ಬಲವಾಗಲು ಆದರ ಗೊಣಸು ಗೊಣಸೂ ಬಲವಾಗಿರಬೇಕಾದಂತೆ, ಇಡೀ ವರ್ಷದ ಸಾಧನೆ ಸಮರ್ಪಕವಾಗಲು, ದಿನದಿನದ, ಗಂಟೆ ಗಂಟೆಯ, ನಿಮಿಷ ನಿಮಿಷದ ಸಾಧನೆಯೂ ಸಮರ್ಪಕವಾಗಿರಬೇಕು.

ಟ್ಯಾಂಕಿಯ ಒಳಸೇರುವ ನೀರು ಶುದ್ಧವಾಗಿದ್ದರೆ ಅದರಿಂದ ಟ್ಯಾಪಿನ ಮೂಲಕ ಹೊರ ಬರುವ ನೀರೂ ಶುದ್ಧವಾಗಿರುವಂತೆ ಕಲಿಕೆಯಲ್ಲೂ ವಿಚಾರಗಳು ಚೆನ್ನಾಗಿ ಮನದಟ್ಟಾದಲ್ಲಿ ಸ್ಮರಿಸಿದಾಕ್ಷಣ ಸುಲಭದಲ್ಲಿ ಅವು ನೆನಪಿಗೆ ಬರುತ್ತವೆ. ಅಂದರೆ ವಿದ್ಯಾರ್ಥಿ ಜೀವನದ ಯಶಸ್ಸು ಈ ಮನದಾಳಕ್ಕಿಳಿಯುವ ಹಾಗೂ ಸ್ಮರಿಸಿದಾಕ್ಷಣ ನೆನಪಿಗೆ ಬರುವ ಅಥವಾ Input ಹಾಗೂ output ಕ್ರಿಯೆಗಳ ಯಶಸ್ಸನ್ನೇ ಹೊಂದಿಕೊಂಡಿದೆ. Input ಸಮರ್ಪಕವಾಗಿ output ಸಲೀಸಾದಲ್ಲಿ ಯಶಸ್ಸು ಕಟ್ಟಿಟ್ಟದ್ದು. ಯಾವಾಗಲೂ ನೋಡುವುದರ, ಕೇಳುವುದರ ಮೂಲಕ ಒಳ ಸೇರುವ ಸಂವೇದನೆಗಳು ಯೋಚನೆಯನ್ನು ಹುಟ್ಟಿಸಿ, ಭಾವನೆಯನ್ನು ಪ್ರಚೋದಿಸಿ, ಕಾರ್ಯಪ್ರವೃತ್ತರಾಗಲು ಕಾರಣೀಭೂತವಾಗುತ್ತವೆ. ಆದ್ದರಿಂದ ಈ ನೋಡುವ ಹಾಗೂ ಕೇಳುವ ಕೆಲಸ ಸಮರ್ಪಕವಾಗುವಂತೆ ಆಸಕ್ತಿ, ಏಕಾಗ್ರತೆಗಳನ್ನು ಹೆಚ್ಚಿಸಿಕೊಳ್ಳಬೇಕು. ಮನೆಯಲ್ಲಾಗಲೀ, ಶಾಲೆಯಲ್ಲಾಗಲೀ ಇಷ್ಟು ಹೊತ್ತಿಗೆ ಈ ಕೆಲಸ ಎಂಬ ಯೋಜನೆ ರೂಪಿಸಿಕೊಂಡು ಮಾಡುವ ಪ್ರತಿಯೊಂದು ಕೆಲಸವನ್ನೂ ಚೆನ್ನಾಗಿ ಮಾಡಲು ಕಲಿಯಬೇಕು. ಅಚಲ ಶ್ರದ್ಧೆಯಿಂದ, ಬಿಡದ ಛಲದಿಂದ ಗುರಿ ಸೇರಲೇಬೇಕೆಂಬ ಹಂಬಲದಿಂದ ಮಾಡುವ ಕೆಲಸ ತಪಸ್ಸಾಗುತ್ತದೆ. ವಿದ್ಯಾಭ್ಯಾಸವೂ ಒಂದು ತಪಸ್ಸೆಂಬುದನ್ನು ಮರೆಯಬಾರದು. ತಪಸ್ವಿಯೊಬ್ಬ ತನ್ನ ಗುರಿಸೇರಲು ದಿನದಿನವೂ ಹೊಸ ಉತ್ಸಾಹದಿಂದ ತಪೋನಿರತನಾಗುವಂತೆ, ವಿದ್ಯಾರ್ಥಿಯೂ ಗುರಿಸೇರಲು ಏಕಾಗ್ರತೆಯಿಂದ ದಿನದಿನವೂ ಓದಿ ಬರೆಯುವುದರಲ್ಲಿ ತೊಡಗಬೇಕು. ಶಿಲ್ಪಿಯೊಬ್ಬ ದಿನ ದಿನವೂ ಶಿಲ್ಪದ ಒಂದೊಂದೇ ಅಂಗಾಂಗವನ್ನು ಸುಂದರವಾಗಿ ಮೂಡಿಸುತ್ತ ಮೂಡಿಸುತ್ತ ಕಟ್ಟಕಡೆಗೆ ಸುಂದರ ಶಿಲ್ಪವನ್ನೇ ನಿರ್ಮಿಸುವಂತೆ, ವಿದ್ಯಾರ್ಥಿಯೂ ದಿನದಿನವೂ ಈ ಓದಿ ಬರೆಯುವ ಕೆಲಸವನ್ನೇ ಚೆನ್ನಾಗಿ ಮಾಡುತ್ತ ಹೋದರೆ ಇಡೀ ವರ್ಷದ ಕಲಿಕೆಯೇ ಚೆನ್ನಾಗಿ ಆಗಿ ಎಣಿಸಿಕೊಂಡ ಗುರಿಯನ್ನು ಸುಲಭದಲ್ಲಿ ಸಾಧಿಸಬಲ್ಲವನಾಗುತ್ತಾನೆ.

ಕಲಿಕೆಯಲ್ಲಿ ಆಸಕ್ತಿ ವೃದ್ಧಿಸಲು ಏನು ಮಾಡಬೇಕು?

ಯಾವ ವಿಚಾರ ನಮಗೆ ಪ್ರಿಯವಾಗಿರುತ್ತದೋ ಅದರಲ್ಲಿ ನಮಗೆ ತನ್ನಿಂದ ತಾನಾಗಿ ಆಸಕ್ತಿ ಮೂಡುತ್ತದೆ. ಆದ್ದರಿಂದ ಕಲಿಕೆಯಲ್ಲಿ ಆಸಕ್ತಿ ವೃದ್ಧಿಸಲು ಮೊತ್ತಮೊದಲು ಕಲಿಕೆಯನ್ನು, ಕಲಿಯುವ ಪಾಠಗಳನ್ನು ಪ್ರೀತಿಸುವುದನ್ನು ಕಲಿಯಬೇಕು, ಆ ಪಾಠಗಳನ್ನು ಚೆನ್ನಾಗಿ ಕಲಿಯುವುದರಲ್ಲೇ ಆನಂದವನ್ನು ಪಡೆಯಬೇಕು.

ಯಾವಾಗಲೂ ಬೆಳಗ್ಗೆ ಏಳುವಾಗ ಮೂಡುವ ಭಾವನೆಗಳೇ ಚಿಗುರಿ ದಿನವಿಡೀ ಫಲಿಸಿದರೆ, ರಾತ್ರಿ ಮಲಗುವಾಗಿನ ಭಾವನೆಗಳ ಬೇರು ಮನದಾಳಕ್ಕಿಳಿಯುತ್ತದೆ. ಆದ್ದರಿಂದ ಬೆಳಗ್ಗೆ ಎದ್ದೊಡನೆಯೇ ಹಾಸಿಗೆಯಲ್ಲಿ ನೆಟ್ಟಗೆ ಕುಳಿತುಕೊಂಡು ಹತ್ತುಬಾರಿಯಾದರೂ "Day by day in every way I am becoming better and better' 'ನಾನು ದಿನೇ ದಿನೇ ಎಲ್ಲ

ಎಸೆಸ್ಸೆಲ್ಸಿ ಖಾಸಗಿ ಅಭ್ಯರ್ಥಿಗಳಿಗೆ ಜೂ. ೩ ಗಡುವು

ಅಕ್ಟೋಬರ್ ೯೮ರಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳಲು ಇಚ್ಛಿಸುವವರು ಜೂನ್ ೩ ರೊಳಗೆ ಯಾವುದೇ ದಂಡವಿಲ್ಲದೆ ಹಾಗೂ ಜೂನ್ ೧೦ ರವರೆಗೆ ದಂಡ ಸಹಿತ ಹೆಸರು ನೋಂದಣಿ ಮಾಡಿಕೊಳ್ಳಬಹುದು.

ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಳನ್ನು ರಾಜ್ಯದ ಯಾವುದೇ ಪ್ರೌಢಶಾಲೆ ಹಾಗೂ ಕಿರಿಯ ಕಾಲೇಜುಗಳಿಂದ ಪಡೆಯಬಹುದು ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

ವಿಧಗಳಲ್ಲೂ ಉತ್ತಮಗೊಳ್ಳುತ್ತಿದ್ದೇನೆ' ಎಂದು ತುಟಿ ಬಿಚ್ಚಿ ಹೇಳಿಕೊಳ್ಳಬೇಕು. 'ಎಲ್ಲಾ ವಿಧಗಳಲ್ಲೂ' ಎನ್ನುವಾಗ ಬೇರೆ ಬೇರೆ ಪಾಠಗಳಲ್ಲಿ ನಿಮ್ಮ ಗುರಿಯ ಚಿತ್ರ ನಿಮ್ಮ ಮನದಲ್ಲಿ ಮೂಡಿ ಆ ವಿಚಾರದಲ್ಲಿ ನಿಮ್ಮ ಆಸಕ್ತಿ ವೃದ್ಧಿಸುತ್ತಿದೆ ಎಂದು ನೀವು ಭಾವಿಸಿಕೊಂಡು ಆ ಗುರಿಯೆಡೆಗೆ ಆ ದಿನದ ನಿಮ್ಮ ನಡಿಗೆಯ ಬಗ್ಗೆಯೂ ನೀವು ಖಚಿತ ನಿಲುವನ್ನು ತಳೆಯುವಂತಾಗಬೇಕು. ಗಣಿತದಲ್ಲಿ ನೂರಕ್ಕೆ ನೂರು ಅಂಕಗಳನ್ನು ಗಳಿಸುವ ಗುರಿ ನಿಮ್ಮದಾಗಿದ್ದರೆ ಅದರ ನೆನಹು ಆಗ ಮೂಡಬೇಕು. ಜೊತೆಗೆ ಗಣಿತದಲ್ಲಿ ದಿನದಿಂದ ದಿನಕ್ಕೆ ಆಸಕ್ತಿ ವೃದ್ಧಿಸುತ್ತದೆ ಎಂದೆಣಿಸಿಕೊಂಡು 'ಇವತ್ತು ಲೆಕ್ಕ ಪಾಠದಲ್ಲಿ ಕೊಡುವ ಎಲ್ಲಾ ಲೆಕ್ಕಗಳನ್ನು ಸರಿಯಾಗಿ ಮಾಡಲೇಬೇಕು' ಎಂಬ ನಿರ್ಧಾರವನ್ನೂ ಆಗ ನೀವು ತಳೆಯಬೇಕು. ಎಲ್ಲಾ ಪಾಠಗಳ ಬಗ್ಗೆಯೂ ಹೀಗೆಯೇ ಆಸಕ್ತಿ ವೃದ್ಧಿಯಾಗುವ ಬಗ್ಗೆ ಮನಸ್ಸಿಗೆ ಸರಿಯಾದ ಸೂಚನೆಕೊಟ್ಟು ಆ ವಿಚಾರಗಳಲ್ಲಿ ವಿಶೇಷ ಒಲವನ್ನು ಹುಟ್ಟಿಸಿಕೊಳ್ಳಬೇಕು. ಆ ಪಾಠಗಳಿಗೆ ಸಂಬಂಧಿಸಿದ ಕೆಲಸಗಳನ್ನೂ ಸಂತೋಷದಿಂದ ಮಾಡಿ ಮುಗಿಸಬೇಕು. ರಾತ್ರಿ ಮಲಗುವ ಮೊದಲು ಹಾಸಿಗೆಯಲ್ಲಿ ಕುಳಿತು ಕೊಂಡು ಇದೇ ರೀತಿ ಹತ್ತು ಬಾರಿಯಾದರೂ 'ನಾನು ದಿನೇ ದಿನೇ ಎಲ್ಲ ವಿಧಗಳಲ್ಲೂ ಉತ್ತಮಗೊಳ್ಳುತ್ತಿದ್ದೇನೆ' ಎಂದುಚ್ಚರಿಸಬೇಕು. ಆಗ 'ಎಲ್ಲ ವಿಧಗಳಲ್ಲೂ' ಎನ್ನುವಾಗ ನಿಮ್ಮ ಗುರಿಯ ನೆನಪಿನೊಂದಿಗೆ ಆ ದಿನದ ನಿಮ್ಮ ನಿರ್ವಹಣೆಯ ನೆನಹು ಮೂಡಿ ಇನ್ನೂ ಆಸಕ್ತಿಯಿಂದ ಮರುದಿನ ಕಲಿಯುವ ಛಲಬಲ ನಿಮ್ಮಲ್ಲಿ ಉಕ್ಕಬೇಕು. ನಿಮ್ಮ ಹೊರ ಮನಸ್ಸು ಮತ್ತೆ ನಿದ್ರೆ ಮಾಡಿದರೂ, ಒಳಮನಸ್ಸಿನಾಳಕ್ಕೆ 'ದಿನೇ ದಿನೇ ನನ್ನ ಆಸಕ್ತಿ ವೃದ್ಧಿಸುತ್ತಿದೆ, ಪಾಠಗಳು ನನಗೆ ತುಂಬ ಪ್ರಿಯವಾಗುತ್ತವೆ' ಎಂಬ ಸೂಚನೆ ಇಳಿಯುವುದರಿಂದ ಮರುದಿನ ನಿಜವಾಗಿಯೂ ಆ ಬಗ್ಗೆ ಹೊಸ ಆಸಕ್ತಿ ಚಿಗುರುತ್ತದೆ. ಪ್ರತಿದಿನವೂ ಈ ರೀತಿ ಕಲಿಕೆಯಲ್ಲಿ ಆಸಕ್ತಿಯನ್ನು ಆವಾಹಿಸಿಕೊಳ್ಳುವುದರಿಂದ ನೀರನ್ನು ಸುರಿಯುತ್ತ ಹೋದಂತೆ ಪಾತ್ರೆಯಲ್ಲಿ ನೀರಿನ ಮಟ್ಟ ಏರುವಂತೆ, ಕಲಿಕೆಯಲ್ಲಿ ನಿಮ್ಮ ಆಸಕ್ತಿ ವೃದ್ಧಿಸಿಯೇ ವೃದ್ಧಿಸುತ್ತದೆ. ಈ ರೀತಿ ಒಳಗಿನಿಂದಲೇ ಆಸಕ್ತಿಯನ್ನು ಪ್ರೇರಿಸಿಕೊಳ್ಳುವುದಲ್ಲದೆ, ಮಾತ್ರೆ-ಔಷಧಗಳಿಂದ ಅದನ್ನು ಸ್ಫುರಿಸಿಕೊಳ್ಳಲು ಸಾಧ್ಯವಿಲ್ಲ. ಒಮ್ಮೆ ಆಸಕ್ತಿ ವೃದ್ಧಿಸಿತೆಂದರೆ ಅದು ಸರಪಳಿ ಕ್ರಿಯೆಯಂತೆ ಮತ್ತೆ ವೃದ್ಧಿಸುತ್ತಲೇ ಹೋಗುತ್ತದೆ. ವಿಜ್ಞಾನದಲ್ಲಿ ಆಸಕ್ತಿ ಉಂಟಾದರೆ ವಿಜ್ಞಾನ ಪಾಠ ಕೇಳುವಾಗ ಮಾತ್ರ ಖುಷಿಯಾಗುವುದಲ್ಲ, ವಿಜ್ಞಾನಕ್ಕೆ ಸಂಬಂಧಿಸಿದ ಬೇರೆ ಬೇರೆ ಪುಸ್ತಕ ಓದುವ, ಚಿತ್ರ ನೋಡುವ ಎಂಬ ತುಡಿತ ವೃದ್ಧಿಸುತ್ತದೆ. ಆ ಪುಸ್ತಕ ಓದಿದಂತೆ, ಚಿತ್ರ ನೋಡಿದಂತೆ ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ ಆಸಕ್ತಿ ಹೆಚ್ಚುತ್ತಲೇ ಹೋಗುತ್ತದೆ.

ಯಾವುದೇ ವಿಷಯಕ್ಕೆ ಸಂಬಂಧಿಸಿದ ಒಂದು ಅಧ್ಯಾಯದ ವಿಚಾರಗಳು ಬೇಗ ಮನದಟ್ಟಾಗಲು ಯಾವ ಕ್ರಮ ಅನುಸರಿಸಬೇಕು?

ಪಾಠಕ್ಕೂ ಮೊದಲು ಪುಸ್ತಕ ಬಿಡಿಸಿ ಆ ಅಧ್ಯಾಯದ ಪುಟಗಳನ್ನೆಲ್ಲ ಮೊದಲು ತಿರುವಿಹಾಕಬೇಕು. ಆ ಅಧ್ಯಾಯದ ಅಂತ್ಯದಲ್ಲಿನ ಪ್ರಶ್ನೆಗಳನ್ನೆಲ್ಲ ಒಮ್ಮೆ ಓದಿ ನೋಡಬೇಕು. ಯಾವ ವಿಚಾರಗಳ ಕಡೆ ಹೆಚ್ಚು ಗಮನ ಕೊಡಬೇಕೆಂಬುದನ್ನು ಆ ಪ್ರಶ್ನೆಗಳೇ ಸೂಚಿಸುತ್ತವೆ. ಆ ಮೇಲೆ ಆ ಅಧ್ಯಾಯವನ್ನೊಮ್ಮೆ ಓದಿಕೊಂಡು ತರಗತಿಗೆ ಹೋಗಬೇಕು. ತರಗತಿಯಲ್ಲಿ ಅಧ್ಯಾಪಕರು ಪಾಠ ಮಾಡುವಾಗ ಗಮನಕೊಟ್ಟು ನಿಮಗೆ ಈ ಮೊದಲು ಅರ್ಥವಾಗದ ಅಂಶವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಆ ಅಧ್ಯಾಯದಲ್ಲಿ ಯಾವ ವಿಚಾರಗಳು ಪ್ರಾಮುಖ್ಯವಾದವುಗಳೆಂದೂ ಅಧ್ಯಾಪಕರ ಮಾತಿನಿಂದ ನಿಮಗಾಗ ತಿಳಿಯುತ್ತದೆ. ಅದೇ ದಿನ ಮನೆಗೆ ಬಂದವರೇ ಪುನಃ ಆ ಅಧ್ಯಾಯವನ್ನು ಏಕಾಗ್ರತೆಯಿಂದ ಓದಿ. ಪುಸ್ತಕವನ್ನು ಮಡಚಿಟ್ಟು ಆ ಬಗ್ಗೆ ಕೂಡಲೇ ಮನನ ಮಾಡಬೇಕು. ಕಾಗದ ತೆಗೆದುಕೊಂಡು ಅದರ ಮುಖ್ಯಾಂಶಗಳನ್ನು ನೋಡದೆ ಬರೆಯಲು ಪ್ರಯತ್ನಿಸಬೇಕು. ಒಂದೊಮ್ಮೆ ಆಗದಿದ್ದಲ್ಲಿ ಮತ್ತೊಮ್ಮೆ ಓದಿ, ಪುನಃ ಪುಸ್ತಕವನ್ನು ಮಡಚಿಟ್ಟು ಬರೆಯಲು ಪ್ರಯತ್ನಿಸಬೇಕು. ಇದೇ ರೀತಿ ಆ ಅಧ್ಯಾಯದ ಅತ್ಯಂದ ಪ್ರಶ್ನೆಗಳಿಗೂ ಪುಸ್ತಕ ನೋಡದೆ ಉತ್ತರ ಬರೆಯಲು ಪ್ರಯತ್ನಿಸಬೇಕು. ಕಲಿಯುವ ವಿಷಯ ವಿಜ್ಞಾನದ್ದಿರಲಿ, ಗಣಿತದ್ದಿರಲಿ, ಸಾಹಿತ್ಯದ್ದೇ ಇರಲಿ, ಆಗ ಖಂಡಿತವಾಗಿಯೂ ಆ ಅಧ್ಯಾಯದ ಸಾರವೆಲ್ಲ ಬಹುಬೇಗ ನಿಮ್ಮ ಕರಗತವಾಗಿರುತ್ತದೆ.

ಹೆಚ್ಚು ಹೆಚ್ಚು ಓದಿದಷ್ಟೂ ಹೆಚ್ಚು ಹೆಚ್ಚು ವಿಚಾರಗಳನ್ನು ಮನಸ್ಸು ಗ್ರಹಿಸುವುದರಿಂದ ಹೆಚ್ಚು ಬುದ್ಧಿವಂತರಾಗಬಹುದೇ?

ಹೆಚ್ಚು ಹೆಚ್ಚು ಊಟ ಮಾಡಿದಷ್ಟೂ ಹೆಚ್ಚು ಬಲಶಾಲಿಗಳಾಗಬಹುದು, ಹೆಚ್ಚು ಹೆಚ್ಚು ಗಳಿಸಿದಷ್ಟೂ ಹೆಚ್ಚು ಶ್ರೀಮಂತರಾಗಬಹುದು ಎಂದಷ್ಟೇ ಅಸಮಂಜಸವಾದುದು ಹೆಚ್ಚು ಹೆಚ್ಚು ಓದಿದಷ್ಟೂ ಹೆಚ್ಚು ಬುದ್ಧಿವಂತರಾಗಬಹುದೆಂಬುದು. ಬಲಶಾಲಿಗಳಾಗುವುದು ಊಟ ಮಾಡಿದ ಪ್ರಮಾಣದಿಂದಲ್ಲ, ಅರಗಿಸಿ ಆರೋಗ್ಯ ವೃದ್ಧಿಸಿಕೊಳ್ಳುವುದರಿಂದ; ಶ್ರೀಮಂತರಾಗುವುದು ಹೆಚ್ಚು ಗಳಿಸುವುದರಿಂದಲ್ಲ, ಹೆಚ್ಚು ಉಳಿಸುವುದರಿಂದ ಅಲ್ಲವೇ? ಅದೇ ರೀತಿ ಬುದ್ಧಿವಂತರಾಗುವುದೂ ಹೆಚ್ಚು ಓದುವುದರಿಂದಲ್ಲ, ಓದಿದ್ದನ್ನು ಹೆಚ್ಚು ಮನದಟ್ಟು ಮಾಡಿಕೊಳ್ಳುವುದರಿಂದ.

ನೀರಿಗಾಗಿ ಒಂದೆಡೆ ೨ ಮೀಟರ್ ತೋಡುವುದು, ಆ ಜಾಗ ಸರಿಯಲ್ಲವೆಂದು

ಜೂ. ೧೫ರಿಂದ ವಾಣಿಜ್ಯ ಪರೀಕ್ಷೆ

ವಾರ್ಷಿಕ ವಾಣಿಜ್ಯ ಪರೀಕ್ಷೆಗಳು ಜೂನ್ ೧೫ರಂದು ಪ್ರಾರಂಭವಾಗಲಿದ್ದು, ವಿವರವಾದ ವೇಳಾಪಟ್ಟಿಯನ್ನು ಪ್ರವೇಶ ಪತ್ರಗಳೊಂದಿಗೆ ಮಾನ್ಯತೆ ಪಡೆದ ಎಲ್ಲ ವಾಣಿಜ್ಯ ಶಾಲೆಗಳಿಗೆ ಈ ತಿಂಗಳ ಅಂತ್ಯದಲ್ಲಿ ಕಳಿಸಿ ಕೊಡುವುದಾಗಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ. ●

ಕಾವ್ಯಾನಂದ ಪುರಸ್ಕಾರಕ್ಕೆ ಸಾಹಿತ್ಯ ಕೃತಿಗಳಿಗೆ ಆಹ್ವಾನ

ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ೧೯೯೭ರಲ್ಲಿ ಪ್ರಕಟವಾದ, ಸಂಶೋಧನೆಗೆ ಸಂಬಂಧಿಸಿದ ಮತ್ತು ಭಾರತೀಯ ಸ್ವಾತಂತ್ರ್ಯ ಚಳುವಳಿ ಹಾಗೂ ಸಾಧನೆಗಳನ್ನು ಕುರಿತು ಬರೆದ ಎರಡು ಕೃತಿಗಳಿಗೆ ಕಾವ್ಯಾನಂದ ಪುರಸ್ಕಾರ ನೀಡಲಿದೆ.

ಪುರಸ್ಕಾರದ ಮೊತ್ತ ಪ್ರತಿ ಕೃತಿಗೆ ೭,೫೦೦ ರುಪಾಯಿ. ಆಸಕ್ತರು ತಮ್ಮ ಕೃತಿಯ ಮೂರು ಪ್ರತಿಗಳನ್ನು ಜೂನ್ ೩೦ರೊಳಗೆ ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಶ್ರೀಗಿರಿ, ೪-೫ಎ, ಅಲಿ ಅಸ್ಕರ್ ರಸ್ತೆ, ಬೆಂಗಳೂರು-೫೨ ಈ ವಿಳಾಸಕ್ಕೆ ಕಳುಹಿಸಲು ಕೋರಲಾಗಿದೆ.

ಇನ್ನೊಂದೆಡೆ ೩ ಮೀಟರ್, ಪುನಃ ಮತ್ತೊಂದೆಡೆ ೪ ಮೀಟರ್ ಹೀಗೆ ನಾಲ್ಕಾರು ಕಡೆ ತೋಡುವ ಬದಲು ಒಂದೇ ಕಡೆಯೇ ೬-೭ ಮೀಟರ್ ತೋಡುತ್ತಲೇ ಹೋದರೆ ಖಂಡಿತ ನೀರು ಉಕ್ಕದೇ? ಅದೇ ರೀತಿ ಕೆಲವರು ಒಂದು ವಿಚಾರಕ್ಕೆ ಸಂಬಂಧಿಸಿ ಅನೇಕ ಪಠ್ಯಪುಸ್ತಕಗಳನ್ನು ಓದುತ್ತಾರೆ. ಇದರಿಂದ ಮನಸ್ಸು ಹೆಚ್ಚು ವಿಚಾರಗಳನ್ನು ಗ್ರಹಿಸಿದರೂ ಹೆಚ್ಚು ವಿಚಾರಗಳನ್ನು ಉಳಿಸಿಕೊಳ್ಳಲಾರದು. ಪಾತ್ರೆಯೇನೋ ದೊಡ್ಡದು - ಆದರೆ ಬುಡದಲ್ಲಿ ತೂತಿದೆ ಎಂದಾಗ ಎಷ್ಟು ಸುರಿದರೂ ಅದು ತುಂಬಿ ಬಂದೀತೇ? ಅದೇ ರೀತಿ ಓದುವುದಕ್ಕೇನೋ ಮಿತಿಯಿಲ್ಲ - ಆದರೆ ಮಾತ್ರ ಯಾವುದೂ ನೆನಪಿಲ್ಲ ಎಂಬಂತಾಗುತ್ತದೆ ಆ ವಿದ್ಯಾರ್ಥಿಯ ಅವಸ್ಥೆ. ಅದಕ್ಕಾಗಿ ಓದು ವಿಶಾಲವಾಗುವ ಮೊದಲು ಆಳವಾಗಬೇಕು. ಆದ್ದರಿಂದ ಬುದ್ಧಿವಂತರಾಗಲು ನೀವು ಯಾವುದಾದರೊಂದು ಒಳ್ಳೆಯ ಪಠ್ಯಪುಸ್ತಕವನ್ನವಲಂಬಿಸಿ ಅದರ ಮುಖ್ಯಾಂಶಗಳನ್ನೆಲ್ಲ ನೋಟ್ಸ್ ಮಾಡಿಕೊಳ್ಳಿ, ಬೇರೆ ಪಠ್ಯಪುಸ್ತಕಗಳ ಒಳ್ಳೆಯ ಅಂಶಗಳನ್ನೂ ಆ ನೋಟ್ಸ್‌ನಲ್ಲಿಯೇ ಬರೆದಿಟ್ಟುಕೊಳ್ಳಿ. ಆ ಮೇಲೆ ಆ ಪಠ್ಯಪುಸ್ತಕ, ಈ ಪಠ್ಯಪುಸ್ತಕ ಎಂದೆಲ್ಲ ಓದುತ್ತ ಕುಳಿತುಕೊಳ್ಳದೆ ಆ ನೋಟ್ಸನ್ನೇ ಪದೇ ಪದೇ ಓದಿ ಬರೆಯಬೇಕು, ಬರೆದು ಓದಬೇಕು, ತಿರುತಿರುಗಿ ಮನನ ಮಾಡಬೇಕು. ಅಂತೂ ನೀವು ಎಷ್ಟು ಬಾರಿ ಓದುವಿರೆಂಬುದಕ್ಕಿಂತಲೂ ಎಷ್ಟು ಚೆನ್ನಾಗಿ ಅರ್ಥಮಾಡಿಕೊಂಡು ಓದುವಿರೆಂಬುದನ್ನೇ ಅವಲಂಬಿಸಿದೆ ಬುದ್ಧಿವಂತಿಕೆ.

ಬೋನಸ್ಸು


ಶಾಲೆ ಟ್ಯೂಶನ್
ಓದು ಬರಹದ
ಕಿರಿಕಿರಿ ಕಾಟಕೆ ಬೇಸತ್ತು!
ಮಕ್ಕಳ ಬಳಗ
ಕಾಡಿಗೆ ಹೋಗಿ
ಉಗ್ರ ತಪಸ್ಸಿಗೆ ನಿಂತಿತ್ತು!
ಊಟ ನೀರು
ಆಟ ಬಿಟ್ಟು
ದೇವನ ನಾಮವ ಸ್ಮರಿಸಿತ್ತು!
ಮೆಚ್ಚಿದ ದೇವರು
ವರವನು ಕೊಟ್ಟ
ಬೇಸಿಗೆ ರಜೆಯ ಬೋನಸ್ಸು!

-ಚಂದ್ರಗೌಡ ಕುಲಕರ್ಣಿ

ಬೆಳಗ್ಗೆ ಬೇಗೆ ಎದ್ದು ಓದುವ ಅಭ್ಯಾಸ, ರಾತ್ರಿಯೆಲ್ಲ ಓದುವ ಅಭ್ಯಾಸ - ಇವುಗಳಲ್ಲಿ ಯಾವುದು ಶ್ರೇಯಸ್ಕರ?

ಗೋಡೆಗೆ ಸವರಿದ ಬಣ್ಣ ಅಲ್ಲಿ ನೆಲೆನಿಲ್ಲಲು ಗೋಡೆಯ ಮೇಲ್ಮೈಯೂ ಚೊಕ್ಕವಾಗಿರಬೇಕು, ಸುತ್ತಣ ಪರಿಸರವೂ ತೇವರಹಿತವಾಗಿರಬೇಕು ಅಲ್ಲವೇ? ಅದೇ ರೀತಿ ಓದಿದ ವಿಚಾರ ಮನದಟ್ಟಾಗಲು ಮನಸ್ಸೂ ಶಾಂತವಾಗಿ ಉಲ್ಲಸಿತವಾಗಿರಬೇಕು, ಪರಿಸರವೂ ಶಾಂತವಾಗಿರಬೇಕು. ಬೆಳಗಿನ ಹೊತ್ತು ಪರಿಸರವೂ ಶಾಂತವಾಗಿರುವುದಲ್ಲದೆ, ಆಯಾಸವೆಲ್ಲ ಪರಿಹಾರವಾಗಿ ಮನಸ್ಸೂ ಉಲ್ಲಸಿತವಾಗಿರುತ್ತದೆ. ಆದ್ದರಿಂದ ಬೆಳಗ್ಗೆ ಬೇಗ ಎದ್ದು ಓದುವುದು ತುಂಬ ಪರಿಣಾಮಕಾರಿ. ಆದರೆ ಅರ್ಧ ನಿದ್ರೆಯಲ್ಲೆದ್ದು ಓದಲು ಕುಳಿತರೆ ನಿದ್ರೆಯ ಜೊಂಪಿನಲ್ಲಿ ಖಂಡಿತ ಓದು ಸಾಗದು. ಆದ್ದರಿಂದ ಬೇಗ ಏಳುವ ಮನಸ್ಸಿರುವವರು ಬೇಗ ಮಲಗಬೇಕು. ರಾತ್ರಿ ಮಿತವಾಗಿ ಊಟ ಮಾಡಿ, ಕೈಕಾಲು ಮುಖಗಳನ್ನೆಲ್ಲ ಚೆನ್ನಾಗಿ ತೊಳೆದುಕೊಂಡು, ಆ ದೇವರೊಡನೆ 'ಬೆಳಗ್ಗೆ ಬೇಗ ನಾಲ್ಕು ಗಂಟೆಗೋ-ನಾಲ್ಕೂವರೆ ಗಂಟೆಗೋ ಎಚ್ಚರವಾಗಿಸು' ಎಂದು ಹೃತ್ಪೂರ್ವಕವಾಗಿ ಬೇಡಿ ಆ ದೇವರ ಧ್ಯಾನದಲ್ಲೇ ಮಲಗಿದರೆ ಖಂಡಿತ ಅಲಾರಾಂ ಇಲ್ಲದೆ ಅಷ್ಟು ಹೊತ್ತಿಗೇ ಟಕ್ಕೆಂದು ಎಚ್ಚರವಾಗಿಯೇ ಆಗುತ್ತದೆ. ನಿದ್ರೆಯೆಲ್ಲ ಮುಗಿದು ಹಾಗೆ ಎಚ್ಚರವಾದಾಗ ಮನಸ್ಸು ಪ್ರಶಾಂತವಾಗಿದ್ದು ಅತ್ಯಂತ ಉಲ್ಲಸಿತವಾಗಿರುತ್ತದೆ.

ಬೆಳಗ್ಗೆ ಬೇಗ ಏಳುವ ಈ ಅನಿಶ್ಚಿತತೆಯ ಅವಾಂತರ ಯಾಕೆಂದು ಕೆಲವರು ನಡುರಾತ್ರಿಯವರೆಗೂ, ಆನಂತರವೂ ಓದುತ್ತಾರೆ. ಜಗತ್ತೆಲ್ಲ ನಿದ್ರೆಯಲ್ಲಿ ಮುಳುಗಿರುವುದರಿಂದ ಆಗ ಹೊರಗಿನ ಪರಿಸರವು ಸದ್ದುಗದ್ದಲದಿಂದ ದೂರವಾಗಿರುತ್ತದೆ ನಿಜ. ಆದರೆ ಇಡೀ ದಿನದ ಕೆಲಸಕಾರ್ಯಗಳಿಂದ ಮನಸ್ಸು ಮಾತ್ರ ಆಯಾಸಗೊಂಡಿರುತ್ತದೆ. ಆದರೂ ಪ್ರಯತ್ನಪೂರ್ವಕವಾಗಿ ಮನಸ್ಸಿಟ್ಟು ಓದಿದರೆ ಮನಸ್ಸು ವಿಚಾರಗಳನ್ನು ಗ್ರಹಿಸುತ್ತದೆ. ರಾತ್ರಿಯೆಲ್ಲ ಓದಿ ಬೆಳಗಿನ ಜಾವ ನಿದ್ರಿಸಿದಾಗ ಗ್ರಹಿಸಿದ ಆ ವಿಚಾರಗಳು ಮನದಾಳಕ್ಕಿಳಿಯುತ್ತವೆ ಎನ್ನುವವರಿದ್ದಾರೆ. ಅಂತೂ ನೀವು ಯಾವಾಗ ಓದುವಿರಿ ಎಂಬುದಕ್ಕಿಂತಲೂ ಹೇಗೆ ಓದುವಿರಿ ಎಂಬುದು ಮುಖ್ಯ. ನಿಮಗೆ ಒಗ್ಗುವ ಅಭ್ಯಾಸವನ್ನಂತೂ



ರೂಢಿಸಿಕೊಂಡು ನಿಷ್ಠೆಯಿಂದ ಪಾಲಿಸುತ್ತ ಹೋಗಿ.

ವಿದ್ಯಾರ್ಥಿ ದಿನಾಲೂ ಎಷ್ಟು ಕಾಲ ಓದಿ ಬರೆಯಬೇಕು?

ಯಶಸ್ಸಿಗಾಗಿ ಹಾತೊರೆಯುವ ವಿದ್ಯಾರ್ಥಿಯೊಬ್ಬ ಕಡಿಮೆ ಎಂದರೆ ದಿನಂಪ್ರತಿ ೩ ಗಂಟೆಯ ಕಾಲವನ್ನಾದರೂ ಓದಿ ಬರೆಯಲು ವಿನಿಯೋಗಿಸಲೇಬೇಕು. ಆ ಕಾರ್ಯದಲ್ಲಿ ಆತನಿಗೆ ಬೇಸರವಾಗಲಿ, ಆಲಸ್ಯವಾಗಲೀ ಇರಲೇ ಬಾರದು. ಸಾಮಾನ್ಯವಾಗಿ ಆರೋಗ್ಯವಂತ ದೇಹಕ್ಕೆ ೬ ಗಂಟೆ ಕಾಲ ನಿದ್ರೆ ಬೇಕೇಬೇಕು. ಈ ಅವಧಿ ಅವರವರ ದೇಹ ಪ್ರಕೃತಿಯನ್ನೂ, ಆಟ - ವ್ಯಾಯಾಮವನ್ನು ಹೊಂದಿಕೊಂಡು ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು. ಅದೇನೇ ಇರಲಿ, ಚೆನ್ನಾಗಿ ಆಟವನ್ನೂ ಆಡಿ, ಆಯಾಸ ಪರಿಹಾರಕ್ಕಾಗಿ ಸುಖ ನಿದ್ರೆಯನ್ನೂ ಮಾಡಿ. ಉಳಿದ ಸಮಯದಲ್ಲಿ ಓದಿ ಬರೆಯಲು ಮೂರು ಗಂಟೆಗಳಷ್ಟು ಅವಧಿಯನ್ನಾದರೂ ಮೀಸಲಿಡಿ. ರಜಾದಿನಗಳಲ್ಲಿ ಈ ಅವಧಿಯನ್ನು ಇನ್ನಷ್ಟು ವಿಸ್ತರಿಸಿ. ನೆಟ್ಟ ಗುಲಾಬಿ ಗಿಡಕ್ಕೆ ದಿನದಿನವೂ ನೀರನ್ನು ಹಾಕದಿದ್ದರೆ ಅದು ಹೇಗೆ ಬದುಕಲಾರದೋ ಹಾಗೆ ದಿನದಿನವೂ ೩ ಗಂಟೆಯ ಕಾಲವನ್ನಾದರೂ ಓದಿ ಬರೆಯಲು ವಿನಿಯೋಗಿಸದಿದ್ದರೆ ಹೆಚ್ಚಿನ ಯಶಸ್ಸು ನಿಮ್ಮದಾಗದೆಂಬುದನ್ನು ಮಾತ್ರ ತಿಳಿಯಿರಿ. ಬ್ಯಾಂಕಿನಿಂದ ಬಡ್ಡಿ ಬರಲು ಅಲ್ಲಿ ನಿಮ್ಮ ಬಂಡವಾಳ ಇರಲೇಬೇಕಾದಂತೆ, ಯಶಸ್ಸು ನಿಮ್ಮದಾಗಲು ದಿನದಿನವೂ ನಿಷ್ಠೆಯಿಂದ ಓದಿ ಬರೆಯುವ ಪರಿಶ್ರಮ ನಿಮ್ಮದಾಗಲೇಬೇಕು.

ಪಠ್ಯ ಪುಸ್ತಕ ಇದ್ದರೂ ನೋಟ್ಸ್ ಮಾಡಿಕೊಳ್ಳಬೇಕೇನು? ಚೆನ್ನಾಗಿ ನೋಟ್ಸ್ ಮಾಡಿಕೊಳ್ಳುವ ಬಗೆ ಹೇಗೆ?

ಹೌದೇ ಹೌದು. ಖಂಡಿತ ಮಾಡಿಕೊಳ್ಳಬೇಕು.

ಪಠ್ಯಪುಸ್ತಕದಲ್ಲಿ ಅನೇಕ ವಿಚಾರಗಳಿರುತ್ತವೆ. ಅವುಗಳಲ್ಲಿ ಅದೆಷ್ಟೋ ವಿಚಾರಗಳು ಪರೀಕ್ಷಾದೃಷ್ಟಿಯಿಂದೇನೂ ಪ್ರಮುಖವಾದವು

ಮೊಲ ಸಾಕಾಣೆ

ಜಾನುವಾರು ಸಂವರ್ಧನಾ ಕ್ಷೇತ್ರವು ಜೂನ್ ೪ ರಿಂದ ೬ರವರೆಗೆ 'ಮೊಲ ಸಾಕಾಣಿಕೆ' ಬಗ್ಗೆ ಸಾರ್ವಜನಿಕರಿಗೆ ಉಚಿತ ತರಬೇತಿ ನೀಡಲಿದೆ. ತರಬೇತಿ ಅವಧಿಯಲ್ಲಿ ವಸತಿ ಸೌಕರ್ಯ ಕಲ್ಪಿಸಲಾಗುವುದು. ಊಟದ ವ್ಯವಸ್ಥೆ ಇರುವುದಿಲ್ಲ.

ಆಸಕ್ತರು ಜೂನ್ ೪ ರಂದು ಉಪನಿರ್ದೇಶಕರು, ಜಾನುವಾರು ಸಂವರ್ಧನಾ ಕ್ಷೇತ್ರ, ಹೆಸರಘಟ್ಟ, ಬೆಂಗಳೂರು - ೮೯. ಇವರನ್ನು ಸಂಪರ್ಕಿಸಬೇಕು.

ಗಳಲ್ಲ. ಮುಖ್ಯವಾದವುಗಳನ್ನು ಮಾತ್ರ ಹುಡುಕಿ ಹುಡುಕಿ ಓದುವುದು ತುಂಬ ಪ್ರಯಾಸಕರ. ಮೇಲಾಗಿ ಅಧ್ಯಾಪಕರು ತಮ್ಮ ಜ್ಞಾನದ, ಅನುಭವದ ಹಿನ್ನೆಲೆಯಲ್ಲಿ ಪುಸ್ತಕದಲ್ಲಿರದ, ಆದರೆ ಪರೀಕ್ಷೆಗೆ ಉಪಯುಕ್ತವಾದ ಅದೆಷ್ಟೋ ವಿಚಾರಗಳನ್ನೂ ಹೇಳುತ್ತಾರೆ. ಪಾಠ ಕೇಳುವಾಗ ಅವೆಲ್ಲ ಅರ್ಥವಾದರೂ ಮರುಕ್ಷಣದಲ್ಲವು ಮರೆತೇಹೋಗುತ್ತವೆ. ಅವುಗಳನ್ನೆಲ್ಲ ಚೆನ್ನಾಗಿ ಬರೆದಿಟ್ಟುಕೊಂಡರೆ - ನೋಟ್ಸ್ ಮಾಡಿಟ್ಟುಕೊಂಡರೆ, ಪುನಃ ಪುನಃ ಓದಿ ಮನನ ಮಾಡಲು ಸುಲಭವಾಗುತ್ತದೆ. ನೋಟ್ಸ್ ಮಾಡುವುದರ ಕಡೆಗೆ ಗಮನ ಹರಿಸುವುದರಿಂದ ಕಣ್ಣು, ಕಿವಿ, ಕೈಗಳೆಲ್ಲ ಪಾಠದಲ್ಲೇ ಮುಳುಗಿದ್ದು ಆ ಏಕಾಗ್ರತೆಯಿಂದಾಗಿಯೂ ಪಾಠ ಬೇಗ ಅರ್ಥವಾಗುತ್ತದೆ. ಆದ್ದರಿಂದ ನೋಟ್ಸ್ ಮಾಡಿಕೊಳ್ಳುವ ಅಭ್ಯಾಸ ರೂಢಿಸಿಕೊಳ್ಳಲೇಬೇಕು.

ಅಧ್ಯಾಪಕರು ಪಾಠ ಮಾಡುವಾಗಲೇ ವಿಚಾರಗಳ ಓಘಕ್ಕನು ಗುಣವಾಗಿ heading, sub-heading ಕೊಟ್ಟು ವಿಚಾರಗಳನ್ನು ಚೊಕ್ಕವಾಗಿ, ಚೆನ್ನಾಗಿ, ಚುಟುಕಾಗಿ ಒಂದರ ಕೆಳಗೊಂದರಂತೆ point by point ಬರೆದುಕೊಳ್ಳಬೇಕು. ಬೇಕಾದ ತಖ್ತೆ, ಚಿತ್ರ, ಸಮೀಕರಣಗಳನ್ನೆಲ್ಲ ನಾಜೂಕಾಗಿ ಅಲ್ಲಲ್ಲೇ ಬರೆದುಕೊಳ್ಳಬೇಕು.

ಕೆಲವರು ತರಗತಿಯಲ್ಲಿ ಬರೆದುಕೊಂಡ ನೋಟ್ಸ್‌ನ್ನು ಮನೆಗೆ ಹೋಗಿ ಬೇರೊಂದು ಪುಸ್ತಕದಲ್ಲಿ ನಿಧಾನವಾಗಿ ಸುಂದರವಾಗಿ ಬರೆದುಕೊಳ್ಳುವ ಕ್ರಮ ರೂಢಿಸುತ್ತಾರೆ. ಆದರೆ ಈ ಅಭ್ಯಾಸ ಒಳ್ಳೆಯದಲ್ಲ. ಬೇಗ ಬೇಗ ಚೆನ್ನಾಗಿ ಬರೆಯುವ ಅಭ್ಯಾಸದಿಂದ ಮಾತ್ರ ಪರೀಕ್ಷೆಗೂ ಅನುಕೂಲ. ಆದ್ದರಿಂದ ನೋಟ್ಸ್ ಮಾಡಿಕೊಳ್ಳುವಾಗಲೂ ಪರೀಕ್ಷೆಗೂ ಪೂರಕವಾಗುವಂತೆ ಬೇಗ ಬೇಗ ಚೆನ್ನಾಗಿ ಬರೆಯುವುದನ್ನು ಕಲಿಯಬೇಕು. ಮನೆಗೆ ಹೋಗಿ ಅದರ ಯಥಾಪ್ರತಿ ತಯಾರಿಸಲು ವಿನಿಯೋಗಿಸುವ ಸಮಯವನ್ನು ಆ ನೋಟ್ಸ್‌ನ್ನು ಪುನಃ ಓದಲು ವಿನಿಯೋಗಿಸುವಂತಾಗಬೇಕು.

ಮನೆಯಲ್ಲಿ ಪಠ್ಯಪುಸ್ತಕವನ್ನೋದಿ, ಪಾಠದ ಕೊನೆಯಲ್ಲಿರುವ ಪ್ರಶ್ನೆಗಳನ್ನೂ, ಈ ಹಿಂದೆ ಪರೀಕ್ಷೆಯಲ್ಲಿ ಆ ಪಾಠದ ಮೇಲೆ ಬಂದ ಪ್ರಶ್ನೆಗಳನ್ನೂ ಗಮನಿಸಿ, ತರಗತಿಯಲ್ಲಿ ಬರೆದುಕೊಂಡ ನೋಟ್ಸ್‌ಗೆ ಅದಿದನ್ನು ಸೇರಿಸಿ ಇನ್ನಷ್ಟು ಪರಿಪುಷ್ಟಗೊಳಿಸಬೇಕು. bold ಆಗಿ ಬರೆದು underline ಮಾಡಿ, ಮಾರ್ಜಿನ್‌ನಲ್ಲಿ Imp. ಅಥವಾ V. Imp. ಎಂದೆಲ್ಲ ಬೇಕಾದರೆ ಕೆಂಪು ಬಣ್ಣದಲ್ಲೇ ನಮೂದಿಸಿ, ಹಿಂದೆ ಬಂದ ಪ್ರಶ್ನೆಗಳನ್ನೂ ಉಲ್ಲೇಖಿಸಿ ಗಮನ ಸೆಳೆಯಲ್ಪಡುವಂತೆ ಮಾಡಬೇಕು. ಆ ನೋಟ್ಸ್ ಅನ್ನು ಪದೇ ಪದೇ ಓದಿ ಬರೆಯಬೇಕು. ಹೀಗೆ ಚೆನ್ನಾಗಿ ನೋಟ್ಸ್ ಮಾಡುವುದರಿಂದ ಪಠ್ಯಪುಸ್ತಕದ ೨೦ ಪುಟ ಓದುವ ಬದಲು ನೋಟ್ಸ್ ಪುಸ್ತಕದ ೪ ಪುಟ ಓದಿದರೆ ಸಾಕಾಗುತ್ತದೆ. ಇದರಿಂದ ಸಮಯದ ಅಪವ್ಯಯವೂ ತಪ್ಪುತ್ತದೆ, ಸ್ವಂತ ಪರಿಶ್ರಮದಿಂದಾಗಿ ನೆನಪಿನಲ್ಲಿಟ್ಟುಕೊಳ್ಳಲೂ ಬಹಳಷ್ಟು ಅನುಕೂಲವಾಗುತ್ತದೆ.

ಮಿತ್ರರೆಲ್ಲ ಕಲೆತು ಚರ್ಚಿಸುವುದರಿಂದ ಲಾಭ ಇದೆಯೇ?

ಹೌದು. ಯಾವಾಗಲೂ ಓದುವಿಕೆಯಿಂದ ಜ್ಞಾನಕ್ಕೆ ಪೂರ್ಣತೆಯು ಬರುತ್ತದೆ, ಬರೆಯುವಿಕೆಯಿಂದ ತಿಳಿವಿಗೆ ನಿಖರತೆ ಸಿದ್ಧಿಸುತ್ತದೆ, ಒಮ್ಮನಸ್ಕರೆಲ್ಲ ಕಲೆತು ಚರ್ಚಿಸುವುದರಿಂದ ಪಟುತ್ವವು ಕರಗತವಾಗುತ್ತದೆ, ಒಬ್ಬರ ತಿಳಿವಿನ ಲಾಭ ಇನ್ನೊಬ್ಬರಿಗಾಗುತ್ತದೆ, ಒಬ್ಬರ ಸಂದೇಹ-ಗೊಂದಲಗಳು ಇನ್ನೊಬ್ಬರ ವಿವರಣೆ-ವಿಶ್ಲೇಷಣೆಗಳಿಂದ ದೂರವಾಗುತ್ತವೆ. ಆದರೆ ಕಲೆತು ಚರ್ಚಿಸತೊಡಗಿದಾಗ ವಿಚಾರಗಳ ಜಾಡು ಪಾಠವನ್ನು ಅತಿಕ್ರಮಿಸಿ ಎಲ್ಲೆಲ್ಲೋ ಲೋಕಾಭಿರಾಮವಾಗಿ ಹೋಗುವ ಒಂದು ಅಪಾಯ ಇಲ್ಲಿದೆ. ಆದ್ದರಿಂದ ಕಲೆತು ಚರ್ಚಿಸುವುದು ಹರಟೆಯ ಬಣ್ಣ ತಳೆಯುವಂತಾಗದಿದ್ದರೆ ಖಂಡಿತವಾಗಿಯೂ ಅದರಿಂದ ಲಾಭ ಇದೆ.

ಕೃಪೆ: ವಿದ್ಯಾರ್ಥಿಗಳೇ, ಯಶಸ್ಸು ಕನಸಲ್ಲ!
ಬೆಲೆ: ರೂ. ೧೦/-
ಪ್ರ: ವಿವೇಕ ಪ್ರಕಾಶನ, ಡಿವೈನ್ ಪಾರ್ಕ್‌ಟ್ರಸ್ಟ್ (ರಿ), ಸಾಲಿಗ್ರಾಮ-೫೭೬ ೨೨೫, ದಕ್ಷಿಣ ಕನ್ನಡ.

ಆಂಧ್ರ ಟೊಮೊಟೋ ಹಣ್ಣಿನ ಚಟ್ನಿ

ಮಾಡುವ ವಿಧಾನ

೨-೩ ಕೆ.ಜಿ ನಾಟಿ ಟೊಮೊಟೋ ಹಣ್ಣುಗಳನ್ನು ಹಚ್ಚಿ, ರಸವನ್ನು ತೆಗೆಯಬೇಕು. ರಸ ತೆಗೆದ ಸಿಪ್ಪೆಯನ್ನು ೨-೩ ದಿನ ಚೆನ್ನಾಗಿ ಬಿಸಿಲಿಗೆ ಒಣಗಿಸಿ ರಸದ ಜೊತೆಯಲ್ಲಿ ಸ್ವಲ್ಪ ಹುಣಸೆ ಹಣ್ಣು ಹಾಕಿ ಆ ರಸವನ್ನು ಬಿಸಿಲಿಗೆ ಇಡಿ. ನಂತರ ಒಣಗಿದ ಸಿಪ್ಪೆಯನ್ನು ರಸವನ್ನು ಎರಡೂ ಜೊತೆಯಲ್ಲಿ ರುಬ್ಬಿ ಅದಕ್ಕೆ ಸ್ವಲ್ಪ ಸಾಸಿವೆ, ಮೆಂತೆ, ಜೀರಿಗೆಯನ್ನು ಹುರಿದು ಹಾಕಿ, ಖಾರದ ಪುಡಿ, ಅರಿಸಿನ ಪುಡಿ ಹಾಕಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ರುಬ್ಬಿ ನಂತರ ಎಣ್ಣೆಯಲ್ಲಿ ಸಾಸಿವೆ, ಬೆಳ್ಳುಳ್ಳಿಯನ್ನು ಹಾಕಿ ಒಗ್ಗರಿಸಿ ಚಟ್ನಿಗೆ ಸೇರಿಸಿ. ೨-೩ ದಿನ ಚಟ್ನಿಯನ್ನು ಸ್ವಲ್ಪ ಹೊತ್ತು ಬಿಸಿಲಿಗೆ ಇಡಿ. ಈ ಚಟ್ನಿ ಒಂದು ವರ್ಷದವರೆಗೆ ಕೆಡದಂತೆ ಇರುವುದು.



ಆಂಧ್ರ ಕೊತ್ತಂಬರಿ ಸೊಪ್ಪಿನ ಚಟ್ನಿ

ಮಾಡುವ ವಿಧಾನ

೭-೮ ದೊಡ್ಡ ದೊಡ್ಡ ಕೊತ್ತಂಬರಿ ಸೊಪ್ಪಿನ ಕಟ್ಟನ್ನು ತೆಗೆದುಕೊಂಡು, ಸ್ವಲ್ಪ ಎಣ್ಣೆಯನ್ನು ಸೊಪ್ಪನ್ನು ಹುರಿದುಕೊಳ್ಳಿ, ಕೊತ್ತಂಬರಿ ಕಾಳು, ಜೀರಿಗೆ, ಒಣಮೆಣಸು ಇವನ್ನು ಎಣ್ಣೆಯಲ್ಲಿ ಸ್ವಲ್ಪ ಹುರಿದುಕೊಂಡು, ಸ್ವಲ್ಪ ಹಸಿ ಶುಂಠಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ, ಸ್ವಲ್ಪ ಹುಣಸೆ ಹಣ್ಣಿನ ರಸ ಹಾಕಿ ರುಬ್ಬಿ. ನಂತರ ರುಬ್ಬಿದ ಚಟ್ನಿಯನ್ನು ಎಣ್ಣೆಯಲ್ಲಿ ಸಾಸಿವೆ ಹಾಕಿ ಚಟ್ನಿಯನ್ನು ಸ್ವಲ್ಪ ಬಾಣಲೆಯಲ್ಲಿ ಬಿಸಿ ಮಾಡಿ ಆರಿಸಿ ಜಾಡಿಯಲ್ಲಿ ತುಂಬಿಡಿ. ಈ ಚಟ್ನಿಯನ್ನು ತುಂಬಾ ದಿನದವರೆಗೆ ಇಡಬಹುದು.

ಸವಿತಾ ಸುಬ್ರಹ್ಮಣ್ಯಂ
ಬೆಂಗಳೂರು

ಜೋಳದ ವಡೆ

ಬೇಕಾಗುವ ಸಾಮಗ್ರಿಗಳು

೧. ಕೆ.ಜಿ. ಜೋಳ, ೧/೪ ಕೆ.ಜಿ. ಗೋಧಿ, ೧/೮ ಕೆ.ಜಿ. ಉದ್ದಿನ ಬೇಳೆ, ೧/೮ ಕೆ.ಜಿ. ಕಡ್ಲಿಬೇಳೆ, ಒಂದು ಸಣ್ಣ ಚಮಚೆ ಕೊತ್ತಂಬರಿ ಕಾಳು, ೮-೧೦ ಮೆಂತೆ ಕಾಳು, ಹಸಿಮೆಣಸಿನ ಕಾಯಿ, ಬೆಳ್ಳುಳ್ಳಿ, ಹಸಿ ಕೊತ್ತಂಬರಿ, ಕರಿ ಬೇವು, ಹಸಿಶುಂಠಿ, ಬಿಳಿ ಎಳ್ಳು, ಉಪ್ಪು.



ಮಾಡುವ ವಿಧಾನ

ಜೋಳ, ಗೋಧಿ, ಉದ್ದಿನ ಬೇಳೆ ಕಡ್ಲಿಬೇಳೆ, ಕೊತ್ತಂಬರಿ ಕಾಳು, ಮೆಂತೆಕಾಳು ಎಲ್ಲವನ್ನು ಗಿರಣಿಯಲ್ಲಿ ಬೀಸಿ ಹಿಟ್ಟು ಮಾಡಬೇಕು. ವಡೆ ಮಾಡುವ ಹಿಂದಿನ ದಿನ ರಾತ್ರಿ ಬೇಕಾದಷ್ಟು ಹಿಟ್ಟಿಗೆ, ಹಸಿಮೆಣಸಿನ ಕಾಯಿ, ಹಸಿಕೊತ್ತಂಬರಿ, ಕರಿಬೇವು, ಹಸಿಶುಂಠಿ ಸಣ್ಣಗೆ ತಿರುವಿ ಹಾಕಬೇಕು. ಎಳ್ಳು ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಗಟ್ಟಿಯಾಗಿ (ಹಪ್ಪಳದ ಹಿಟ್ಟಿನಂತೆ) ನಾದಿ ಇಡಬೇಕು. ಮರುದಿನ ಮುಂಜಾನೆ ಕೈಯಲ್ಲಿ ಹಪ್ಪಳದ ಉರುಳಿಯಷ್ಟು ಹಿಟ್ಟನ್ನು ತೆಗೆದುಕೊಂಡು ಬೇಕಾದ ಆಕಾರಕ್ಕೆ (ಇಲ್ಲವೇ ದುಂಡಗೆ) ತಟ್ಟಿ ಅತೀ ಬಿಸಿಯಾದ ಎಣ್ಣೆಯಲ್ಲಿ ಹಾಕಿ ಕರಿಯಬೇಕು. ಬೆಂಕಿಯ ಉರಿಯನ್ನು ಕಡಿಮೆ ಮಾಡಬಾರದು. ಬಿಸಿ ವಡೆಯನ್ನು ಬೆಣ್ಣೆ ಕೊಬ್ಬರಿ ಚಟ್ನಿಯೊಂದಿಗೆ ತಿಂದರೆ ಅದರ ರುಚಿಯೋ ರುಚಿ! ತಣ್ಣಗಾದರೆ ಕೆನೆ ಮೊಸರಿನೊಂದಿಗೆ ಸವಿಯಿರಿ.

- ನಾಗರತ್ನ ತವರದ,
ಬ್ಯಾಡಗಿ

ಅಕ್ಕಿಹಿಟ್ಟಿನ ಕೇಕ್

ಬೇಕಾಗುವ ಸಾಮಗ್ರಿಗಳು

೨೫೦ ಗ್ರಾಂ ಹುರಿದ ಅಕ್ಕಿ ಹಿಟ್ಟು, ೫೦ ಗ್ರಾಂ ಹಾಲಿನಪುಡಿ, ೨೧೫ ಗ್ರಾಂ ತುಪ್ಪ, ೨೫೦ ಗ್ರಾಂ ಕಲ್ಲು ಸಕ್ಕರೆ, ೧ ೧/೨ ಚಮಚ ಏಲಕ್ಕಿಪುಡಿ, ೧ ಟೀ ಚಮಚ ಪಿಸ್ತಾ ಚೂರುಗಳು, ಗೋಡಂಬಿ ದ್ರಾಕ್ಷಿ ಚೂರುಗಳು, ಚೆರ್ರಿ ಹಣ್ಣುಗಳು.



ಮಾಡುವ ವಿಧಾನ

ಅಕ್ಕಿಯ ಹಿಟ್ಟು, ಸಕ್ಕರೆ, ಹಾಲಿನಪುಡಿ, ಏಲಕ್ಕಿ, ಕಲ್ಲು ಸಕ್ಕರೆ ಎಲ್ಲವನ್ನು ಚೆನ್ನಾಗಿ ಮಿಶ್ರಣಮಾಡಿರಿ, ತುಪ್ಪವನ್ನು ಕಾಸಿ ಹಾಕಿರಿ. ಚೆನ್ನಾಗಿ ನಾದಿರಿ. ಮಿಶ್ರಣ ಚೆನ್ನಾಗಿ ಬೆರೆಯುವ ವರೆಗೂ ನಾದಬೇಕು. ಪೂರಾ ಮಿಶ್ರಣವನ್ನು ಟ್ರೈಯಾಂಗಲ್ ಆಕಾರದ ಕೇಕ್‌ನಂತೆ ರೂಪ ಮಾಡಿ, ಸ್ವಲ್ಪ ಜಾಸ್ತಿ ಹಾಕಿ, ಒಂದು ಟ್ರೇ ಬಾಕ್ಸ್‌ಲ್ಲಿ ಹಾಕಿಡಿ. ಪಿಸ್ತು, ಗೋಡಂಬಿ ದ್ರಾಕ್ಷಿ ಹಾಗೂ ಚೆರ್ರಿಯಿಂದ ಅಲಂಕರಿಸಿ ಒಂದೆರಡು ಗಂಟೆ ಕಾಲ ಹಾಗೆ ಬಿಟ್ಟು ನಂತರ ಕಟ್ ಮಾಡಿ. ಸವಿಯಲು ಕೊಡಿ.

- ಪರಶುರಾಮ ಓಲೇಕಾರ
ಹಿರೇಕೆರೂರು



ಕಾತ್ರಾಳ ರತ್ನಿಯ ಚಾದಂಗಡಿ

(ಕಾದಂಬರಿ)

ಲೇ : **ದು. ನಿಂ. ಬೆಳಗಲಿ**
ಪ್ರ: ವಿಶ್ವಕರ್ನಾಟಕ ಸಾಹಿತ್ಯ ಮಂಟಪ 'ಕಾದಂಬರಿ' ಸೋಮವಾರ ಪೇಟೆ, ಬನಹಟ್ಟಿ - ೫೮೭ ೩೧೧. ಜಿ. ಬಾಗಲಕೋಟೆ. ಮುದ್ರಣ : ಏಪ್ರಿಲ್ ೧೯೯೮ ಪುಟ:೩೪೬ ಬೆಲೆ: ರೂ. ೭೨/-

ದೇಶದ ' ಸ್ವಾತಂತ್ರ್ಯ ಸುವರ್ಣ' ಸಂದರ್ಭದಲ್ಲಯೂ ಹದಗಟ್ಟಿ, ನಮ್ಮ ಹಳ್ಳಿಗಾಡಿನ ಒಂದು ಜ್ವಲಂತ ಜೀವಂತ ಚಿತ್ರಣ ಇದಾಗಿದೆ. ನೂರಾರು ಬಗೆಯ ನೂರಾರು ಪಾತ್ರಗಳು ಹಾಸು ಹೊಕ್ಕಾಗಿರುವ ಈ ಕೃತಿ ಕನ್ನಡ ಪ್ರಾದೇಶಿಕ ಕಾದಂಬರಿ ಪ್ರಪಂಚಕ್ಕೆ ಒಂದು ವಿಶಿಷ್ಟ ಕೊಡುಗೆಯಾಗಿದೆ.

ವಾಸ್ತವ

(ಕವನ ಸಂಕಲನ)

ಸಂ: **ಮಲ್ಲಿಕಾರ್ಜುನ ಯಾಳವಾರ**
ಪ್ರ: ಮಂಕಸಂಕೀಲಿ ಪ್ರಕಾಶನ, ಕುಂದರಗಿ, ತಾಲೂಕ: ಬೀಳಗಿ. ಜಿಲ್ಲೆ: ವಿಜಾಪೂರ. ಮುದ್ರಣ: ೧೯೯೬ ಪುಟ: ೪೯ ಬೆಲೆ: ರೂ. ೨೦/-

ಈ ಸಂಕಲನದ ಎಲ್ಲ ಕವನ, ಕವನದ ಎಲ್ಲ ಸಾಲುಗಳು ಉತ್ತಮ ರಚನೆಗಳೇ ಎಂದುಹೇಳ ಬಾರದು. ಕವಿಯಾದವನು ತನ್ನ ಅನುಭವಗಳನ್ನು ಪರಿಣಮಾಕಾರಿಯಾಗಿ ಹೆಣೆದಿಡುವುದು ಜೀವನ ದುದ್ದಕ್ಕೂ ಮಾಡಬೇಕಾದ ಸಾಧನೆ. ಆ ದಾರಿಯಲ್ಲಿ ಸಾಗುತ್ತಲಿರುವ ಶ್ರೀ ಯಾಳವಾರ ಅವರಿಗೆ ಯಶಸ್ಸು ಸಿಗಲಿ ಎಂದು ಹೃದಯಾರೆ ಹಾರೈಸುವೆ.

– ಡಾ|| ಬಿ.ಕೆ. ಹಿರೇಮಠ

ಸುಂದ್ರಿ

(ನಗೆ ಬರಹಗಳ ಸಂಗ್ರಹ)

ಸಂ: **ಅನಸೂಯಾ ಸಿದ್ಧರಾಮ**
ಪ್ರ : ಚೈತನ್ಯ ಪ್ರಕಾಶನ, ಗೋಕಾಕ. ಮುದ್ರಣ:೧೯೯೭ ಪುಟ:೧೦೦ ಬೆಲೆ: ರೂ.೪೦/-

ಒಟ್ಟಿನ ಮೇಲೆ ವಿನೋದದ ವಿವಿಧ ಮಾದರಿಗಳು ಈ ಸಂಕಲನದ ಅಳವಟ್ಟಿವೆ. ವಿನೋದ ತೀರ ವಾಚ್ಯವಾಗದೇ ಸೂಚ್ಯವಾಗದೇ ಸೂಚ್ಯವಾಗಿರೋದರಲ್ಲಿಯೆ ಸಾರ್ಥಕ್ಯ! Brevity is the soul of wit ವಿನೋದ ಸೋಲ ಬಾರದೆಂದರೆ ಈ soul ಅಗತ್ಯ. ದಿವಂಗತ ತೀ. ನಂ. ಶ್ರೀ ಈ ಬಗೆಯ ಬರಹಗಳನ್ನು ಶಿಥಿಲ ಬಂಧ ಎಂದು ಹೆಸರಿಸಿದ್ದರು. ಸಡಿಲಾದರೂ ಸೆ. ಕಟ್ಟು ಇದ್ದರೇನೇ ರುಚಿಕಟ್ಟಾಗೋದು, ಅನ್ಯಥಾ ರುಚಿ Cut ಆಗೋದು.

ಸವದತ್ತಿ ಎಲ್ಲಮ್ಮ

(ಒಂದು ಸಾಂಸ್ಕೃತಿಕ ಅಧ್ಯಯನ)

ಲೇ: **ಡಾ. ಕಮಲಾ ಹೆಮ್ಮಿಗೆ**
ಪ್ರ :ವಿಮೋಚನಾ ಪ್ರಕಾಶನ, ವಿಮೋಚನಾ ದೇವದಾಸಿ ಪುನರ್ವಸತಿ ಸಂಘ, ಅಥಣಿ, ಜಿ. ಬೆಳಗಾವಿ. ಮುದ್ರಣ : ೧೯೯೮ ಪುಟ : ೧೯೮ ಬೆಲೆ :೧೦೦/-

ನಮ್ಮ ಭಾಗದ ಸಮಕಾಲೀನ ಜ್ವಲಂತ, ಬಹುಮುಖ್ಯವಾದ ಸಮಸ್ಯೆಗಳಲ್ಲಿ ಒಂದಾದ, ಎಲ್ಲಮ್ಮನ ಹೆಸರಿನಲ್ಲಿ ನಡೆದು ಬಂದ ದೇವದಾಸಿ ಪದ್ಧತಿಯನ್ನು ತಮ್ಮ ಸಂಶೋಧನೆ ತೆಕ್ಕೆಗೆ ತೆಗೆದುಕೊಂಡು, ತಮ್ಮ ವೈಚಾರಿಕ ಹಿನ್ನೆಲ್ಲೆಯಲ್ಲಿಯೇ ಪರಿಹಾರ ಸೂಚಿಸುತ್ತ ಸಮಗ್ರ ಚಿತ್ರವನ್ನು ಕೊಟ್ಟ ಮತ್ತು ಪೌರಾಣಿಕ ಹಿನ್ನೆಲೆಗಳ ಜತಗೆ ಜನಪದೀಯ ಅಂಶಗಳನ್ನೂ ನಿರೂಪಿಸಿದ ಈ ಮಹಾ ಪ್ರಬಂಧ ಕನ್ನಡಕ್ಕೆ ಒಂದು ಬಗೆಯ ವಿಶಿಷ್ಟ ಕೊಡುಗೆಯಾಗಿದೆ ಎಂದು ಹೇಳಬಹುದು. ಇಲ್ಲಿ ಡಾ. ಕಮಲಾ ಹೆಮ್ಮಿಗೆಯವರ ಶ್ರಮ ಸಾರ್ಥಕವಾಗಿದೆ. ಈ ದಿಕ್ಕಿನಲ್ಲಿ ಅವರಿಂದ ಇನ್ನೂ ಈ ಬಗೆಯ ಅನೇಕ ಕಾರ್ಯಗಳು ಸಾಧ್ಯ ಎಂದು, ಈ ಕೃತಿ ಭರವಸೆ ಹುಟ್ಟಿಸುತ್ತದೆ.


ಮಕ್ಕಳ ಚುಟುಕುಗಳು


(ಸಚಿತ್ರ ಮಕ್ಕಳ ಚುಟುಕು ಸಂಕಲನ)


ಲೇ: **ಹೆಚ್. ಎಸ್. ಸೋಮಶೇಖರ**
ಪ್ರ : ಮೈಲಾರೇಶ್ವರ ಪ್ರಕಾಶನ ನಂ. ೫೬, ೪ನೇ ತಿರುವು, ರಾಜೇಂದ್ರ ನಗರ ಶಿವಮೊಗ್ಗ - ೫೭೭ ೨೦೧. ಮುದ್ರಣ : ೧೯೯೮ ಪುಟ:೪೪ ಬೆಲೆ: ರೂ. ೨೦/-


ಮಕ್ಕಳ ಸಚಿತ್ರ ಸಾಹಿತ್ಯ ರಚನೆ, ಚಿಂತನೆ, ಕಲಪನೆಯ ಒಂದು ಅದ್ಬುತ. ಈ ಕ್ಷೇತ್ರದಲ್ಲಿ ಕೃತಿಗಳ ಪ್ರಕಟಣೆ ಬಹು ಅಪರೂಪವಾಗಿರುವ ಈ ಕಾಲದಲ್ಲಿ ಶ್ರೀ ಸೋಮಶೇಖರ್‌ರವರ ಪ್ರಯತ್ನ ನಿಜಕ್ಕೂ ಮೆಚ್ಚುಗೆಗೆ ಪಾತ್ರವಾಗಿದೆ.

ಈ ಕೃತಿಯಲ್ಲಿ ರಚನೆಯಾಗಿರುವ ಚಿತ್ರ - ಅದಕ್ಕೆ ಹೊಂದಿಕೊಂಡಿರುವ ಕವಿತೆ-ಚಿಕ್ಕದಾಗಿ ಚೊಕ್ಕವಾಗಿದೆ. ಉಟ ಮ್ಕಕಳಿಗೆ ಅಗತ್ಯವಿರುವ ಇಂತಹ ಕೃತಿಯ ರಚನಾ ಪ್ರಯತ್ನವೂ ಪ್ರಶಂಸೆಗೆ









ಪಾತ್ರವಾಗಿದೆ. ಶ್ರೀ ಸೋಮಶೇಖರ್ ರವರು ಅಭಿನಂದನಾರ್ಹರು.

– ಕೆ. ವಾಸುದೇವಾಚಾರ್


ನೀನೇ ನಾನು ನಾನೇ ನೀನು

(ಕವನ ಸಂಕಲನ)

ಲೇ: **ಗುರುಲಿಂಗಯ್ಯಾ ಹಿರೇಮಠ**
ಶಾಂತಾದೇವಿ ಹಿರೇಮಠ

ಪ್ರ: ಆಲೋಚನ ಪ್ರಕಾಶನ, ಪ್ರಭುಸಿದ್ಧ ನಿಲಯ, ಕೊಪ್ಪಳ ೫೮೩ ೨೩೧. ಮುದ್ರಣ : ೧೯೯೭ ಪುಟ: ೪೮ ಬೆಲೆ: ರೂ. ೨೫/-

ಪ್ರೀತಿ ಎಲ್ಲರಿಗೂ ಅರ್ಥವಾಗುವ ಹೃದಯದ ಭಾಷೆ. ಬವಣೆಗಳ ಬಿಸಿಗಾಳಿಯ ಬದುಕಿನಲ್ಲಿ ಬೀಸುವ ತಂಗಾಳಿಯೆಂದರೆ ಪ್ರೀತಿಯೊಂದೇ. ಪ್ರೀತಿಯಿಂದದ ಕುಡಿಯೊಡೆವ ಅನ್ಯೋನ್ಯತೆ ದಾಂಪತ್ಯ ಜೀವನದ ಬಲು ದೊಡ್ಡ ಭಾಗ್ಯ. ಸಮಾನ ಮನಸ್ಕ ಬದುಕು ಸಂತಸಮಯವಾದರೆ ಸಮಾನ ಆಸಕ್ತಿಯ ಬಾಳು ಸಾರ್ಥಕ ಎಂಬುದಕ್ಕೆ ನಿದರ್ಶನವಾಗಿ ಈ ಕವನ ಸಂಕಲನ 'ನೀನೇ ನಾನು ನಾನೇ ನೀನು' ಮೂಡಿ ಬಂದಿದೆ. ಕೂಡಿ ಬಾಳುವುದರ ಜೊತೆಗೆ ಕೂಡಿ ಕಾವ್ಯಸಿರಿಯ. ಕೃಷಿ ಮಾಡುವ ಹಾಗೂ ಕೃತಿ ನೀಡುವ ಕಾರಣದಿಂದಾಗಿ ಈ ಸಂಕಲನ ವಿಶಿಷ್ಟ. ಸಾಹಿತ್ಯ ಆರಾಧನೆಯಿಂದ ಉನ್ನತ ಉದಾತ್ತ ಆಸಕ್ತಿಯನ್ನು ಆಪ್ತ ಕಾಳಜಯನ್ನಾಗಿಸಿಕೊಂಡ ಎರಡು ಚೇತನಗಳು ಬದುಕಿನಲ್ಲಿ ಕೂಡಿ ನಡೆದಂತೆ ಈ ಸಂಕಲನದಲ್ಲಿ ಕೂಡಿ ನುಡಿದಿವೆ. ಪರಸ್ಪರ ಅರಿತು ಅರ್ಥೈಸಿಕೊಂಡ ಮೇಲೆ ಭಿನ್ನತೆಗೆ ಎಳ್ಳಷ್ಟೂ ಅವಕಾಶ ಇರಲಾರದು. ಸಂಕಲನದ ಅಚ್ಚುಕಟ್ಟುತನಕ್ಕಾಗಿ ಇಬ್ಬರ ಕವನಗಳು ಎರಡು ಭಾಗಗಳಿದ್ದರೂ ಕವನಗಳ ಸಾಲಸಾಲುಗಳಲ್ಲಿ ಪ್ರವಹಿಸಿದ ಭಾವಗಂಗೆಗೆ ಒಂದೇ ನಾದವಿದೆ.



ನವ ಕರ್ನಾಟಕ ಪ್ರಕಾಶನದ ಹೊಸ ಪುಸ್ತಕಗಳು

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್,
ಕ್ರೆಸೆಂಟ್ ರಸ್ತೆ, ಬೆಂಗಳೂರು - ೫೬೦ ೦೦೧.

ಸೋತ ವ್ಯಾಪಾರಿ

(ಕವನ ಸಂಕಲನ)

ಲೇ: **ರಾಮಕೃಷ್ಣ ಶಾಸ್ತ್ರಿ**
ಮುದ್ರಣ: ೧೯೯೮
ಪುಟ: ೪೦
ಬೆಲೆ: ರೂ. ೧೨/-

ಕಣ್ಣು

(ನೂರಾರು ಪ್ರಶ್ನೆಗಳು)

ಲೇ: **ಡಾ. ಎಚ್. ಎಸ್. ಮೋಹನ್**
ಮುದ್ರಣ: ೧೯೯೭
ಪುಟ: ೫೬
ಬೆಲೆ: ರೂ. ೧೫/-

ತಲೆನೋವು ಏಕೆ ಪರಿಹಾರ ಎಂತು

ಲೇ: **ಡಾ. ಸಿ. ಆರ್. ಚಂದ್ರಶೇಖರ್**
ಮುದ್ರಣ: ೧೯೯೭
ಪುಟ: ೪೮
ಬೆಲೆ: ರೂ. ೧೩/-

ಗಾಂಧಿ ಮತ್ತು ಅಂಬೇಡ್ಕರ್

(ಧ್ಯೇಯ ಮತ್ತು ಧೋರಣೆ)

ಲೇ: **ಡಾ. ಮ. ನ. ಜವರಯ್ಯ**
ಮುದ್ರಣ: ೧೯೯೭
ಪುಟ: ೬೪
ಬೆಲೆ: ರೂ. ೨೦/-

ಯುಗಚೇತನ ಪ್ರೇಮಚಂದ್

(ಸಂಘರ್ಷಮಯ ಜೀವನ ಹಾಗೂ ಕ್ರಾಂತಿಯ ಕಿಡಿಕಾರಿದ ಕೃತಿಗಳು)

ಲೇ: **ದು. ನಿಂ. ಬೆಳಗಲಿ**
ಮುದ್ರಣ: ೧೯೯೭
ಪುಟ: ೨೧೬
ಬೆಲೆ: ರೂ. ೭೫/-

ದಂಗೆ

(ಕಾದಂಬರಿ)

ಲೇ: **ಗೀತಾ ನಾಗಭೂಷಣ**
ಮುದ್ರಣ: ೧೯೯೭
ಪುಟ: ೧೭೬
ಬೆಲೆ: ರೂ. ೬೫/-

ಆರ್ಥಿಕತೆಯ ಸವಾಲುಗಳು

ಲೇ: **ಕಮಲ ನಯನ ಕಾಬ್ರ**
ಮುದ್ರಣ: ೧೯೯೮
ಪುಟ: ೧೧೨
ಬೆಲೆ: ರೂ. ೩೫/-

ಶತಮಾನದ ಅಂಚಿನಲ್ಲಿ ಶಿಕ್ಷಣ

ಲೇ: **ಪ್ರೊ|| ಕೆ. ಕೆ. ಥೇಕೆಡತ್**
ಮುದ್ರಣ: ೧೯೯೮
ಪುಟ: ೧೦೪
ಬೆಲೆ: ರೂ. ೩೫/-

ಮಹಿಳಾ ಚಳುವಳಿಯ ಮಜಲುಗಳು

ಲೇ: **ಎನ್. ಗಾಯತ್ರಿ**
ಮುದ್ರಣ: ೧೯೯೮
ಪುಟ: ೧೧೨
ಬೆಲೆ: ರೂ. ೩೫/-

ಸ್ವಾತಂತ್ರ್ಯೋತ್ತರ ಕೃಷಿರಂಗ

ಲೇ: **ವೈ. ವಿ. ಕೃಷ್ಣರಾವ್**
ಮುದ್ರಣ: ೧೯೯೮
ಪುಟ: ೧೨೦
ಬೆಲೆ: ರೂ. ೩೫/-

ಮಾಧ್ಯಮ ಮತ್ತು ಸ್ವಾತಂತ್ರ್ಯ

ಲೇ: **ಜಿ. ಎನ್. ಮೋಹನ್**
ಮುದ್ರಣ: ೧೯೯೮
ಪುಟ: ೧೦೪
ಬೆಲೆ: ರೂ. ೩೫/-

ಸ್ವಾತಂತ್ರ್ಯಕ್ಕೆ ಐವತ್ತು ವರ್ಷ

ಲೇ: **ವ್ಯಾಸರಾಯ ಬಲ್ಲಾಳ**
ಮುದ್ರಣ: ೧೯೯೮
ಪುಟ: ೧೦೪
ಬೆಲೆ: ರೂ. ೩೫/-

ಬದಿ

ಲೇ: **ಇಂದಿರಾ ಹೆಗ್ಗಡೆ**
ಮುದ್ರಣ: ೧೯೯೭
ಪುಟ: ೧೫೨
ಬೆಲೆ: ರೂ. ೫೦/-

ಭೂಮಿಗೆ ಬೆಡಗು ತರುವ 'ಸಿಡಿಲು'

○ ಮಲ್ಲಿಕಾರ್ಜುನ ಕುಂಬಾರ

ಇಷ್ಟೆಲ್ಲಾ ಉಪಕಾರ ಮಾಡುವ ಈ ಸಿಡಿಲನ್ನು ಪ್ರಾಚೀನರು ದೈವವೆಂದು ಬಗೆದದ್ದರಲ್ಲಿ ತಪ್ಪೇನು ಇಲ್ಲವೆಂದು ಅನ್ನಿಸುತ್ತದೆ.

ಪ್ರಾಚೀನ ಕಾಲದ ಮಾನವ ಪ್ರಕೃತಿಯಲ್ಲಿನ ಗಿಡ, ಮರ, ಬಳ್ಳಿ ಹಾಗೂ ಆಕಾಶಕಾಯಗಳೊಂದಿಗೆ ತನ್ನ ಸ್ನೇಹವನ್ನು ಬಂಧುರಗೊಳಿಸಿಕೊಂಡಿದ್ದನು. ಇಂತಹ ಪ್ರಕೃತಿದತ್ತವಾದ ಸ್ನೇಹ ಹೊಂದಾಣಿಕೆ ಆರಂಭದಿಂದಲೇ ಅವನಿಗೆ ಸಾಧ್ಯವಾದದ್ದರಿಂದ ಪ್ರಕೃತಿಯಲ್ಲಿ ನಡೆಯುವ ಪ್ರತಿಯೊಂದು ಕಾರ್ಯಾಚರಣೆಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಇಲ್ಲದಿದ್ದರೆ ಅವನ ಮನೋವಿಕಾಸವಾಗದೇ ಆದಿ ಮಾನವನಾಗಿಯೆ ಉಳಿದು ಬಿಡುತ್ತಿದ್ದನು. ಇದರೊಂದಿಗೆ ಸೂರ್ಯ, ಚಂದ್ರ, ನಕ್ಷತ್ರ, ಗ್ರಹ, ಮಳೆ, ಮಿಂಚು ಗುಡುಗುಗಳು ಸಿಡಿಲುಗಳು, ಕಾಮನಬಿಲ್ಲಿನಂತ ಪ್ರಕೃತಿ ವೈಚಿತ್ರ್ಯಗಳು ಆತನ ಕುತೂಹಲ ಕೆರಳಿಸಿ ಅದರಲ್ಲಿ ದೈವಿಭಾವನೆ ಬೆಳೆಯುವಂತೆ ಮಾಡಿದವು. ಅವುಗಳೊಂದಿಗೆ ತನಗೆ ಯಾವುದೋ ಸಂಬಂಧವಿದೆ ಎಂದು ಭಾವಿಸಿಬಿಟ್ಟನು ಜೊತೆಗೆ ಅವುಗಳಿಂದ ತನಗೇನೋ ಪ್ರಯೋಜನವಿದೆ ಎಂದು ನಂಬಿದ್ದ. ಆದರೆ ಆ ನಂಬಿಕೆ ಅವನಿಗೆ ಅರಿವಿಲ್ಲದಂತೆ ಹುಸಿಯೂ ಆಗಿರಲಿಲ್ಲ.

ಪ್ರಾಚೀನ ಜನಪದರು ಈ ಆಶ್ಚರ್ಯ ಹುಟ್ಟಿಸಿದ ಗುಡುಗನ್ನು ಸಿಡಿಲನ್ನು ತಮ್ಮದೇ ಆದ ರೀತಿಯಲ್ಲಿ ಕಲ್ಪಿಸಿ ಅದಕ್ಕೆ ಸಾಕಷ್ಟು ಕಥೆ ಕಟ್ಟಿದರು. ಪ್ರಕೃತಿಯ ಈ ಅಸಮಾನ್ಯ ಘಟನೆಯು ಸಾಮಾನ್ಯವೇ? ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಂಡನು. ಏಕೆಂದರೆ ಒಂದು ಸಿಡಿಲೇನಾದರೂ ನೇರವಾಗಿ ಬಡಿಯುವದಾದರೆ ಅದು ನಮ್ಮ ಅರಿವಿಗೆ ಬರುವ ಸಂಭವ ತೀರಾ ಕಡಿಮೆ. ನಮ್ಮ ಜ್ಞಾನೇಂದ್ರಿಯ ಅದನ್ನು ಗ್ರಹಿಸುವದಕ್ಕಿಂತ ವೇಗವಾಗಿ ಸಿಡಿಲು ಈ ಕೆಲಸ ಮಾಡಿರುತ್ತದೆ. ಕಾರಣ ಇದರಿಂದ ತಪ್ಪಿಸಿಕೊಳ್ಳಲು ಜಾಗ್ರತರಾಗುವದು ತೀರಾ ವ್ಯರ್ಥ. ಆದರೆ ಸಿಡಿಲು ನಿರೋಧಕ ಬಳಸಬಹುದೇ ವಿನಹ ಬೇರೆ ಏನು ಮಾಡಲಿಕ್ಕೆ ಆಗದು ಪ್ರಾಚೀನರು ಈ ಸಿಡಿಲು, ಗುಡುಗುಗಳನ್ನು ಅರ್ಜುನನು (ಇಂದ್ರಪುತ್ರ) ತನ್ನ ಚಾವಡಿಯಿಂದ ಕುದುರೆಗಳಿಗೆ ಹೊಡೆದಾಗ ಉಂಟಾಗುವ ಶಬ್ದವೇ ಸಿಡಿಲು-ಗುಡುಗು ಎಂಬ ಕಲ್ಪನೆ ಇದೆ. ಅಂತೇ ಅವರು ಅದಕ್ಕೊಂದು ಒಗಟು ಕೂಡಾ ಕಟ್ಟಿದರು.

''ಅಲ್ಲೂ ಇಲ್ಲ ಇಲ್ಲೂ ಇಲ್ಲ
ಯಾವ ಸಂತ್ಯಾಗೂ ಇಲ್ಲ
ಸಾವಿರ ರೂಪಾಯಿ ಕೊಟ್ಟರೂ
ಮಗ ಸನಮಾತ ಆಗುವಲ್ಲ''

ಎಂದು ಒಗಟಿನ ರೂಪದಲ್ಲಿ ಸಿಡಿಲಿಗೆ ಅರ್ಥ ಕಲ್ಪಿಸಿದರು. ಸಮಾಧಾನವಾಗದ ಮಗನಿಗೆ ಹೋಲಿಸಿದರು.

ಸುಣ್ಣದ ಗಡಿಗೆ ಸುತ್ತಲಾರೆ
'ಬಣ್ಣದ ಬಡಿಗೆ' ಹಿಡಿಯಲಾರೆ
ಹವಳ ಮುತ್ತು ಎಣಿಸಲಾರೆ.


ಎನ್ನುವಲ್ಲಿ ಮುಗಿಲು, ಸಿಡಿಲು, ಚಿಕ್ಕೆಗಳ ಬಗ್ಗೆ ಹೇಳಿ ಬಣ್ಣದ ಬಡಿಗೆ ಸ್ವರೂಪವಾದ ಸಿಡಿಲನ್ನು ಹಿಡಿಯುವದು ಅಸಾಧ್ಯವೆಂದು ತಿಳಿದ ಹಿನ್ನೆಲೆ ಅವರ ವೈಜ್ಞಾನಿಕತೆಗೆ ಹಿಡಿದ ಕನ್ನಡಿಯಾಗಿದೆ. ಇದೇ ಸಿಡಿಲು ಟಿಬೇಟಿನ ಜನರಿಗೆ ವಜ್ರದ ಸಂಕೇತವಾಗಿದೆ ಈ ಸಿಡಿಲನ್ನು ದೈವತ್ವದ ಪ್ರಕಟನೆಯಾಗಿ ಎಲ್ಲ ಸಾಂಸ್ಕೃತಿಗಳಲ್ಲೂ ನಂಬಿದ್ದಾರೆ. ಕೋಪದ ಹಾಗೂ ಶಿಕ್ಷೆಯ ಅಭಿವ್ಯಕ್ತಿಯಾಗಿ ಅದು ಕಾಣಿಸುತ್ತದೆ. ಗುಡುಗು ಎಚ್ಚರಿಕೆ ಧ್ವನಿಯಾಗಿದೆ ಎಂದು ನಂಬಿದ್ದರು.

ಸಿಡಿಲು ಬಡಿದು ಆಕಸ್ಮಾತ್ ಆತ ಬದುಕಿ ಉಳಿದರೆ ಆತನು ಧನಿಕನಾಗುತ್ತಾನೆಂಬ ನಂಬಿಗೆ ಇದೆ ಆದರೆ ವರ್ಜಿನಿಯಾದ ಆರ್.ಸಿ. ಸಲಿವಾನ್ ಎಂಬುವನಿಗೆ ಶ್ರೀಮಂತನಾಗುವದು ಬೇಕಿಲ್ಲ. ಈ ಸಿಡಿಲಿನಿಂದ ಬದುಕಿದರೆ ಸಾಕೆಂದು ಪರಿತಪಿಸುತ್ತಿದ್ದಾನೆ. ಗಿನ್ನಿಸ್ ಪುಸ್ತಕದಲ್ಲಿ ದಾಖಲಾದ ಅರಣ್ಯ ಇಲಾಖೆಯ ನೌಕರ ಆಗಿರುವ ಈತನಿಗೆ ಸುಮಾರು ಏಳು ಸಾರಿ ಸಿಡಿಲು ಬಡಿದು ಉಳಿದು ಗಿನ್ನಿಸ್ ಪುಸ್ತಕದಲ್ಲಿ ಹೆಸರು ಮಾಡಿದ್ದಾರೆ.

೧೯೪೨ರಲ್ಲಿ ಆತನಿಗೆ ಸಿಡಿಲು ಬಡಿದು ಕಾಲಿನ ಹೆಬ್ಬೆರಳನ್ನೆ ಕಳೆದುಕೊಂಡನು. ೧೯೬೯ರಲ್ಲಿ ಕಣ್ಣು ಹುಬ್ಬಿನ ಕೂದಲು, ೧೯೭೦ರಲ್ಲಿ ಎಡಭುಜಕ್ಕೆ (ಗಾಯ); ೧೯೭೨ರಲ್ಲಿ ತಲೆ ಕೂದಲು; ೧೯೭೩ರಲ್ಲಿ ತಲೆ ಹ್ಯಾಟಿಗೆ, (ಈ ಸಿಡಿಲು ಬಡಿದ ಹ್ಯಾಟನ್ನು ಗಿನ್ನಿಸ್ ವಸ್ತು ಪ್ರದರ್ಶನಕ್ಕೆ ಕಾಣಿಕೆಯಾಗಿ ನೀಡಿದ್ದಾನೆ); ೧೯೭೬ರಲ್ಲಿ ಕಾಲಿನ ಮಂಡಿಗೆ, ೧೯೭೭ರಲ್ಲಿ ಹೊಟ್ಟೆ ಮತ್ತು ಎದೆಗೆ ಸಿಡಿಲು ಬಡಿದು ಗಾಯವಾಗಿ ಬದುಕಿ ಉಳಿದಿದ್ದಾನೆ. ಸಿಡಿಲಿನ ಕಾಟದಿಂದ ಆತನು ಬೇಸತ್ತಿದ್ದಾನೆ, ಅಷ್ಟೇ ಅಲ್ಲ ಆತನ ಸ್ನೇಹ ಬೆಳೆಸಲು ಕೂಡಾ ಯಾರೂ ಮುಂದೆ ಬರುತ್ತಿಲ್ಲ. ಹೀಗಾಗಿ ಆತನನ್ನು ಏಕಾಂಗಿತನ ಹಿಂಡಿ ಹಿಪ್ಪೆ ಮಾಡಿದೆ. ಈ ಸಿಡಿಲು ಮೇಲಿಂದ ಮೇಲೆ ಆತನಿಗೆ ಎರಗಲು ಕಾರಣ ಆತನೂ ತಿಳಿಯನು! ವಿಜ್ಞಾನಿಗಳ ಪಾಲಿಗೆ ಈತ ಅಚ್ಚರಿ. ನಮ್ಮ ಜನಪದರ ದೃಷ್ಟಿಯಲ್ಲಿ ಈತ ಶ್ರೀಮಂತನಾಗಬೇಕಾಗಿತ್ತು ಆದರೆ ಅದು ಆತನಿಗೆ ಈಗ ಬೇಕಾಗಿಲ್ಲ ಈ ಸಿಡಿಲಿನ ಬೇತಾಳನ ಕಾಟ ತಪ್ಪಿದರೆ ಸಾಕೆಂದು ಆತನು ಬೇಜಾರುಪಟ್ಟು ಕೊಂಡಿದ್ದಾನೆ. ಇಂತಹ ಅನಾಹುತದ ಸಿಡಿಲು ನಮಗೇನಾದರೂ ಉಪಕಾರ ಮಾಡುತ್ತದೆಯೇ ಎಂದರೆ ಹೌದು ಸಿಡಿಲು ನಮಗೆ ನೀಡಿದ ಉಪಕಾರ ಅಸದಳವಾಗಿದೆ.

ಇಂದು ನಾವು ಬಿತ್ತನೆಗೆ ರಾಸಾಯನಿಕ ಗೊಬ್ಬರದ ಬಳಕೆ ಮಾಡುತ್ತೇವೆ. ಈ ಗೊಬ್ಬರದಲ್ಲಿ ಸಾರಜನಕವೂ ಕೂಡಾ ಇರುತ್ತದೆ. ಇದು ಸಸ್ಯ ಶ್ಯಾಮಲೆಯ ಚೈತನ್ಯಕ್ಕೆ ಕಾರಣವಾಗುತ್ತದಲ್ಲವೇ? ಈ ಸಾರಜನಕವನ್ನು ನಮಗೆ ನಮ್ಮ ಭೂಮಿಗೆ ಪುಕ್ಕಟೆಯಾಗಿ ಈ ಸಿಡಿಲು ಪೂರೈಕೆ ಮಾಡುತ್ತದೆ ಎಂದರೆ ಆಶ್ಚರ್ಯಪಡಬೇಕಿಲ್ಲ. ಈ ಸಿಡಿಲಿನಿಂದ ಅನೇಕರು ಸತ್ತರೂ ಕೂಡಾ, ಸಾವಿಗಿಂತ ಹೆಚ್ಚಾಗಿ ಈ ಸಿಡಿಲು ಸಸ್ಯ ಶ್ಯಾಮಲೆಗೆ ಜೀವದಾನ ಮಾಡಿ ಮನುಷ್ಯರನ್ನು ಬದುಕಿಸಿದೆ. ನೀರಿನಲ್ಲಿ ಕರಗದ ಸಾರಜನಕ ಅನಿಲವು ಪ್ರತಿ ಚದರ ಮೈಲು ಜಾಗದಲ್ಲಿ ೨೨ ಮಿಲಿಯನ್ ಟನ್‌ಗಳಷ್ಟು ಭೂಮಿಯ ಮೇಲೆ ಗಾಳಿಯಲ್ಲಿ ಸಾರಜನಕವು

ಇರುತ್ತದೆ. ಈ ಅನಿಲವು ರಾಸಾಯನಿಕ ಕ್ರಿಯೆಗೆ ಒಳಪಡದೇ ಸಸ್ಯಗಳಿಗೆ ದೊರಕಲಾರದು. ಈ ರಾಸಾಯನಿಕ ಕ್ರಿಯೆಯನ್ನು ಸಿಡಿಲು ಮಾಡುತ್ತದೆ. ಸಿಡಿಲಿನ ಮಳೆ ಆರಂಭವಾದಾಗ, ಸಿಡಿಲು ಮೋಡದಿಂದ ಮೋಡಕ್ಕೆ ಚಲಿಸತೊಡಗಿದಾಗ; ಮೋಡದೊಳಗಿನ ಗಾಳಿ ಮತ್ತು ನೀರಿನ ಕಣಗಳು ಅಗಾಧ ಶಾಖಕ್ಕೆ ಒಳಗಾಗಿ ಕೆಂಪಾಗುತ್ತವೆ. ಅಲ್ಲಿ ೩೦,೦೦೦ ಸೆಂ.ಗ್ರೇ. ಶಾಖ ಹೊರಡುತ್ತದೆ. ಈ ಭಾರಿ ಪ್ರಮಾಣದಲ್ಲಿನ ಶಾಖದಿಂದ ಗಾಳಿಯಲ್ಲಿನ ಆಮ್ಲಜನಕವು ಸಾರಜನಕದೊಂದಿಗೆ ಬೆರೆತು. ಸಾರಜನಕ ಆಕ್ಸೈಡ್‌ಗಳು ಉತ್ಪತ್ತಿಯಾಗುತ್ತವೆ. ಈ ಆಕ್ಸೈಡುಗಳು ನೀರಿನಲ್ಲಿ ಕರಗುತ್ತವೆ. ಅದು ಮಳೆ ಹನಿಯ ಮೂಲಕ ಸಾರಜನಕ ಆಮ್ಲವಾಗಿ ಭೂಮಿಗೆ ಇಳಿದು ಮಣ್ಣಿನಲ್ಲಿನ ಲೋಹಗಳೊಡನೆ ಬೆರೆತು ನೈಟ್ರೇಟ್‌ಗಳಾಗಿ ಪರಿವರ್ತನೆಗೊಳ್ಳುತ್ತದೆ. ಈ ನೈಟ್ರೇಟ್‌ಗಳು ಸಸ್ಯಗಳಿಗೆ ಬೇಕಾದ ಅಮೂಲ್ಯ ಜೀವ ಸತ್ವವನ್ನು ಒದಗಿಸುತ್ತವೆ. ವಾತಾವರಣದ ಮೇಲಿರುವ ಸಾರಜನಕವನ್ನು ಸಿಡಿಲುಗಳು ಈ ರೀತಿಯಾಗಿ ಸಸ್ಯ ವರ್ಗಕ್ಕೆ ಬೇಕಾದ ಗೊಬ್ಬರವನ್ನಾಗಿ ಭೂಮಿಗೆ ಕಳಿಸುತ್ತವೆ. ಈ ಕಾರಣದಿಂದಲೇ ಸಿಡಿಲಿನಿಂದ ಮಳೆ ಬಿದ್ದ ದಿನ ಸಸ್ಯ ಸಂಪತ್ತು ಸಮೃದ್ಧಿಯಾಗಿ ಕಾಣುತ್ತದೆ. ಹೀಗೆ ಅಪ್ರತ್ಯಕ್ಷವಾಗಿ ಈ ಸಿಡಿಲುಗಳು ಮಾನವನಿಗೆ ಪರೋಪಕಾರಿಗಳೇ ಆದರೆ ಸಿಡಿಲೆಂದರೆ ಮಾನವರು ಜೀವನ ರಕ್ಷಣೆಗಾಗಿ ಸಿಡಿದು ಬೀಳುತ್ತಾರೆ ನಿಜ ಅದರಿಂದ ಪಾರಾದರೆ ಸಾಕೆಂದು ಮಳೆ ಬೀಳುವಾಗ ಬಾಗಿಲಿಗೆ ಕಬ್ಬಿಣದ ತುಂಡು ಹಾಕಿಯೋ, ಚೊಚ್ಚಲು ಮಕ್ಕಳಿಗೆ ಈ ಸಿಡಿಲುಗಳು ಬಲು ಪ್ರೀತಿಯಂತೆ, ಈ ಕಾರಣದಿಂದ ಅವರನ್ನು ಹೊರಗೆ ಬಿಡದೇ ಬಚಾಯಿಸುತ್ತಾರೆ. ಇಷ್ಟೆಲ್ಲಾ ಉಪಕಾರ ಮಾಡುವ ಈ ಸಿಡಿಲನ್ನು ಪ್ರಾಚೀನರು ದೈವವೆಂದು ಬಗೆದದ್ದರಲ್ಲಿ ತಪ್ಪೇನು ಇಲ್ಲವೆಂದು ಅನ್ನಿಸುತ್ತದೆ.



ಹೆಜ್ಜೆ - ೧೧

ನಮ್ಮ ಬೆನ್ನು ನಮಗೆ ಕಾಣದು



ವ್ಯಕ್ತಿತ್ವವನ್ನು ಅಳೆಯುವಾಗ ಗಣನೆಗೆ ತೆಗೆದುಕೊಳ್ಳಬೇಕಾದ ವಿಚಾರಧಾರೆಗಳತ್ತ ಕಳೆದ ಸುತ್ತಾಟದಲ್ಲಿ ತೀಕ್ಷ್ಣ ದೃಷ್ಟಿ ಹಾಯಿಸಿದೆವಲ್ಲವೇ? ಬನ್ನಿ, ಈಗ ವ್ಯಕ್ತಿತ್ವ ವರ್ಗೀಕರಣದ ಬಗೆಗಿಷ್ಟು ಮೊದಲು ತಿಳಿಯೋಣ.

ವ್ಯಕ್ತಿತ್ವದ ಬೇರೆ ಬೇರೆ ಮಾದರಿಗಳನ್ನು ವ್ಯಕ್ತಿಗಳನ್ನು ವರ್ಗಿಕರಿಸುವ ಮೂಲಕ ಕಂಡು ಕೊಳ್ಳುವ ಪ್ರಯತ್ನವೊಂದಿತ್ತು. ಅದರನ್ವಯ: ರಕ್ತಾಧಿಕ್ಯದ ದಪ್ಪಗಿನ ವ್ಯಕ್ತಿಗಳನ್ನು ಸುಸ್ವಭಾವಿ ಹಾಗೂ ಆಶಾವಾದಿಗಳೆಂದೂ, ಪಿತ್ತಾಧಿಕ್ಯದ ತೆಳ್ಳಗಿನವರನ್ನು ಕಟುಮನಸ್ಸಿನ ನಿರಾಶಾವಾದಿಗಳೆಂದೂ, ಕಫಾಧಿಕ್ಯದವರನ್ನು ಶಾಂತರೂ, ವಿಲಂಬ ಮನೋವೃತ್ತಿಯ ನಿರಾಸಕ್ತರೆಂದೂ, ಕಪ್ಪು ಪಿತ್ತಾಧಿಕ್ಯದವರನ್ನು ನಿರಂತರ ವಿಷಣ್ಣಭಾವದವರು, ಮಂಕು ಪ್ರವೃತ್ತಿಯವರು ಎಂದು ತಿಳಿಯಲಾಗಿತ್ತು. ಇದು ಅಸಾಧು ವರ್ಗೀಕರಣವೆಂಬುದು ಸದ್ಯದ ಅಭಿಪ್ರಾಯ.

ಈಗ ಇನ್ನೊಂದು ಅಳತೆಗೋಲು ಪ್ರಚಲಿತವಿದೆ. ಇದು ವ್ಯಕ್ತಿಯ ಅತ್ಯಂತ ಪ್ರಮುಖ ಲಕ್ಷಣಾಧಾರಿತ ವರ್ಗೀಕರಣ. ಹಾಗಾಗಿ ನಮ್ಮ ಸುತ್ತಮುತ್ತ ದೈಹಿಕ, ಬೌದ್ಧಿಕ, ಭಾವನಾಪ್ರಧಾನ, ಭಾವನಾರಹಿತ ವ್ಯಕ್ತಿಗಳು ಕಾಣಬರುತ್ತಾರೆ. ವ್ಯಕ್ತಿ ತೋರ್ಪಡಿಸುವ ಮುಖ್ಯ ಲಕ್ಷಣ ಆತನ ಮಾದರಿಯನ್ನು ನಿರ್ಧರಿಸುವದರಿಂದ ಕೆಲಕಾಲ ಒಂದು ವರ್ಗಕ್ಕೆ ಸೇರಿದ ವ್ಯಕ್ತಿ ಇನ್ನೊಂದು ವರ್ಗಕ್ಕೆ ವಲಸೆ ಹೋಗುವ ಸಂಭವ ಹೆಚ್ಚಾಗಿರುತ್ತದೆ.

ಸಮಾಜಶಾಸ್ತ್ರಿಗಳೂ ವ್ಯಕ್ತಿಗಳನ್ನು ವರ್ಗೀಕರಿಸುತ್ತಾರೆ. ಅವರು ವ್ಯಕ್ತಿಗಳ ಮಾನಸಿಕ ವ್ಯವಸ್ಥೆಗೆ ಒತ್ತು ಕೊಡುತ್ತಾರೆ. ಅದರನ್ವಯ ಅವರಿಗೆ ಸಮಾಜದಲ್ಲಿ ಸಕ್ರಿಯ-ನಿಷ್ಕ್ರಿಯ; ಕಠಿಣ ಮನಸ್ಸಿನ - ಮೃದು ಮನಸ್ಸಿನ; ಕ್ರಿಯಾ-ಭಾವನಾ-ವಿಚಾರ ಪ್ರಧಾನ ವ್ಯಕ್ತಿಗಳು ಮಾದರಿಗಳಾಗುತ್ತಾರೆ.

ವ್ಯಕ್ತಿಗಳನ್ನು ಪರಸಹವಾಸಪ್ರಿಯರನ್ನಾಗಿಯೂ, ಅಂತರ್ಮುಖಿಗಳನ್ನಾಗಿಯೂ ವರ್ಗೀಕರಿಸಲಾಗಿದೆ. ಪರಸಹವಾಸಪ್ರಿಯತೆಯು ವಿವಿಧ ಪ್ರಮಾಣದಲ್ಲಿರುವಂತೆಯೇ ಅಂತರ್ಮುಖತೆಯೂ ಸಹ. ಈ ಸ್ವಭಾವಗಳು ಅನುವಂಶೀಯವೂ ಆಗಿರಬಹುದು. ಕೆಲವು ವ್ಯಕ್ತಿಗಳು ಸಮಯ, ಸಂದರ್ಭಗಳೊಡನೆ ಮತ್ತು ಇನ್ನು ಕೆಲವರು 'ಪರರು ಯಾರು?; ಎಂಬುದನ್ನವಲಂಬಿಸಿ ತಾವಿದ್ದ ಮಾದರಿಯಿಂದ ಬೇರೊಂದು ಮಾದರಿಯಲ್ಲಿ ಸುಳಿದಾಡಬಹದು. ಆದುದರಿಂದ ಈ ವರ್ಗೀಕರಣವೂ ಅಷ್ಟು ವೈಜ್ಞಾನಿಕವೆಂದೆನಿಸದು.

ವ್ಯಕ್ತಿಗಳ ವರ್ಗೀಕರಣಕ್ಕೆ ಸಹಾಯಮಾಡುವ ಎರಡು ತಳಹದಿಗಳುಂಟು: ಲಿಂಗ ಮತ್ತು ಕುಲ. ವ್ಯಕ್ತಿಯಲ್ಲಿ ಕಾಣಬರುವ ಕುಲದ ವಿಶಿಷ್ಟ ದೈಹಿಕ ಲಕ್ಷಣಗಳು, ಆತ/ಆಕೆ ಅನುವಂಶೀಯವಾಗಿ ಪಡೆದ ದೈಹಿಕ ಲಕ್ಷಣಗಳು, ತರಬೇತಿಯ ಮುಖಾಂತರ ಗಳಿಸಿದ ಸಾಮಾಜಿಕ ದೃಷ್ಟಿಕೋನ, ವೃತ್ತಿ ಬಗೆಗಿನ ಗುರಿಗಳು ವ್ಯಕ್ತಿಗಳನ್ನು ಬೇರ್ಪಡಿಸುತ್ತವೆ.

ಪ್ರತಿ ಹೆಣ್ಣು ಗಂಡು ಸಮಾಜಕ್ಕೊಂದು ವಿಶಿಷ್ಟ ಕೊಡುಗೆ. ದೈಹಿಕ, ಬೌದ್ಧಿಕ, ಮಾನಸಿಕ ಮತ್ತು ಭಾವನಾತ್ಮಕ ಗುಣವಿಶೇಷತೆಗಳ ಪಾಕವಾದ ಪ್ರತಿಯೊಬ್ಬರೂ ಈ ಕಾರಣ ಸಮಾಜಕ್ಕೆ 'ಅನುಪಮ ಕೊಡುಗೆ'. ಈ ಪಾಕದ ಕಾರಣವೇ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಸೋಲುಗೆಲುವುಗಳನ್ನು ಅನುಭವಿಸುತ್ತಾರೆ. ಆದುದರಿಂದ ವ್ಯಕ್ತಿಗಳ ನಿಖರ ವರ್ಗೀಕರಣ ಸಾಧ್ಯವೇ? ಎಂಬ ಪ್ರಶ್ನೆ ಉದ್ಭವಿಸಿದರೂ ಸಹ ಎಲ್ಲರಿಗೂ ಅನ್ವಯಿಸುವ ಕೆಲವನ್ನು ಹೆಸರಿಸಬಹುದು. ಆಕರ್ಷಣೆ, ವಿಕರ್ಷಣೆಯ ನಿಯಮಗಳು ಹೊಂದಾಣಿಕೆಯ-ನಾಯಕತ್ವದ ತತ್ವಗಳು; ತೃಪ್ತಿ, ಸುಖ, ಪ್ರಭಾವಗಳನ್ನು ನಿರ್ಧರಿಸುವ ಚಲನಶೀಲ ಘಟಕಗಳು.

ವ್ಯಕ್ತಿತ್ವವನ್ನಾವರಿಸಿರುವ ವ್ಯಕ್ತಿ ವೈಶಿಷ್ಟ್ಯಗಳನ್ನಳೆಯಲು ಹಲವಾರು ಪರೀಕ್ಷೆಗಳನ್ನು ಕೈಗೊಳ್ಳಲಾಗಿದೆ. ಯಾವುದಾದರೊಂದು ಬದಲಾಗದ ವ್ಯಕ್ತಿತ್ವ ಸ್ವರೂಪವನ್ನೇ ಅರಗಿಸಿಕೊಂಡು ನಾವು ಜನಿಸಿರುತ್ತೇವೆಂದಾಗಲೀ, ಜನ್ಮಾತಃ ದೋಷಯುಕ್ತವಾದ ವ್ಯಕ್ತಿತ್ವವನ್ನು ಬದಲಾಯಿಸಲು ಸಾಧ್ಯವೇ ಇಲ್ಲಾವೆಂದಾಗಲೀ, ನಮ್ಮಲ್ಲಿ ಕೆಲವರಿಗೆ ವ್ಯಕ್ತಿತ್ವವೇ ಇಲ್ಲವೆಂದಾಗಲೀ ಈ ಹಿಂದೆ ಕಲ್ಪಿಸಲಾಗಿದ್ದುದು ಇಂದು ಗ್ರಾಹ್ಯವಾಗಿರುತ್ತಿದ್ದರೆ ವ್ಯಕ್ತಿತ್ವ ಮಾಪನ ಪ್ರಶ್ನೆ ಏಳುತ್ತಲೇ ಇರಲಿಲ್ಲ. ಆದರೆ ಮೇಲಿನವೆಲ್ಲವೂ ತಿರಸ್ಕೃತ ತಿಳುವಳಿಕೆಗಳು.

ಪ್ರತಿ ಹೆಣ್ಣು ಗಂಡು
ಸಮಾಜಕ್ಕೊಂದು ವಿಶಿಷ್ಟ
ಕೊಡುಗೆ. ದೈಹಿಕ, ಬೌದ್ಧಿಕ,
ಮಾನಸಿಕ ಮತ್ತು
ಭಾವನಾತ್ಮಕ
ಗುಣವಿಶೇಷತೆಗಳ
ಪಾಕವಾದ ಪ್ರತಿಯೊಬ್ಬರೂ
ಈ ಕಾರಣ ಸಮಾಜಕ್ಕೆ
'ಅನುಪಮ ಕೊಡುಗೆ'.

○ 'ಕೃಶಾಂಗ'

ಆದುದರಿಂದ ವ್ಯಕ್ತಿತ್ವ ವಿಕಾಸ ತರಬೇತಿ ವರ್ಗಗಳಲ್ಲಿ ಕೈಗೊಳ್ಳಲಾದ ಕ್ರಮಗಳ ಸಾಫಲ್ಯದ ಮಟ್ಟವನ್ನು ಗೊತ್ತುಪಡಿಸಲು ವ್ಯಕ್ತಿತ್ವ ಮಾಪನ ಅಗತ್ಯ ಎಂದಾಯಿತು.

ಯಾರೊಬ್ಬರ ವ್ಯಕ್ತಿತ್ವ ಮಾಪನಕ್ಕಾಗಿ ಸಾಮಾನ್ಯವಾಗಿ ಐದು ಆಧಾರಗಳನ್ನು ಗುರುತಿಸಲಾಗುತ್ತಿದೆ.

ಎಲ್ಲ ಸಮಾಜಗಳಲ್ಲಿಯೂ ರೂಢಿಗಳು, ಸಂಪ್ರದಾಯಗಳೂ ಇವೆ. ಇವು ಸಾಮಾಜಿಕ ಸಂಬಂಧಗಳನ್ನು ರೂಡಿಸುತ್ತವೆ. ಇವುಗಳ ಬಗೆಗೆ ವ್ಯಕ್ತಿಗಿರುವ ಮಾಹಿತಿ, ತಿಳಿವಳಿಕೆ, ಜ್ಞಾನ.

ವ್ಯಕ್ತಿ ಜೀವನದಲ್ಲಿ ಯಶಸ್ವಿಯೇ? ಆ ವ್ಯಕ್ತಿಯ ಬುದ್ಧಿ ಮತ್ತು ಹಲವು ವಿಧದಲ್ಲಿ ವ್ಯಕ್ತವಾದಾಗ ಯಶಸ್ಸು ಸಾಧ್ಯ. ಜೀವನದಲ್ಲಿ ಯಶಸ್ಸು ಸಾಮಾಜಿಕ ವರ್ತನೆ, ವಾಕ್‌ಚಾತುರ್ಯ, ನಾಯಕತ್ವ ಐಶ್ವರ್ಯ, ಸಂಗ್ರಹ, ಸಾಮಾಜಿಕ ಹೊಂದಾಣಿಕೆಗಳ ಮೊತ್ತ.

ನಮ್ಮೆಲ್ಲರಿಗೂ ಒಂದು ಸಾಮಾಜಿಕ ಕರ್ತವ್ಯವಿದೆ. ನಮ್ಮ ಸಾಮಾಜಿಕ ಸಂಬಂಧಗಳನ್ನು ಸಾಧ್ಯವಿದ್ದಷ್ಟು ಪರಿಣಾಮಕಾರಿಯಾಗಿ ನಿಭಾಯಿಸುವದೇ ಅದು. ಈ ಕರ್ತವ್ಯ ಪಾಲನೆಯಲ್ಲಿ ವ್ಯಕ್ತಿ ಎಷ್ಟು ಸಫಲವಾಗಿದ್ದಾನೆಂಬುದು ಪರರು ಅವನಿಗೆ ನೀಡುವ ಗೌರವ, ತೋರುವ ಪ್ರೀತಿ, ಆತನ ಬಗೆಗೆ ಇರಿಸಿಕೊಂಡಿರುವ ಅಭಿಪ್ರಾಯಗಳನ್ನವಲಂಬಿಸಿದೆ.

ದೈಹಿಕ, ಮಾನಸಿಕ, ಭಾವನಾತ್ಮಕ ಮತ್ತು ಸಾಮಾಜಿಕ ಗುಣಗಳಿಂದ ರೂಪುಗೊಂಡ ವ್ಯಕ್ತಿತ್ವವೆಂಬುದೊಂದು ಜಟಿಲ ತತ್ವ. ಈ ಘಟಕಗಳಲ್ಲಿ ಯಾವುದಾದರೂ ಒಂದು ಘಟಕವು ದೋಷಪೂರ್ಣವಾಗಿದ್ದರೂ ಸಹ ಅದು ಒಟ್ಟು ವ್ಯಕ್ತಿತ್ವವನ್ನೇ ದೋಷಪೂರ್ಣಗೊಳಿಸುತ್ತದೆ, ಒಂದು ಹನಿ ಮಸಿ ಇಡೀ ಚಿತ್ರದ ಸೌಂದರ್ಯವನ್ನು ನುಂಗುವಂತೆ. ಆದುದರಿಂದ ವ್ಯಕ್ತಿತ್ವ ಮಾಪನವೆಂದರೆ ಈ ಎಲ್ಲ ಘಟಕಗಳ ಸೂಕ್ಷ್ಮ ಅಭ್ಯಾಸವೇ ಆಗಿದೆ.

ನಮ್ಮ ಬೆನ್ನು ನಮಗೆ ಕಾಣದು' ಬೇರೆಯವರದು ಕಾಣುತ್ತದೆ. ಆದುದರಿಂದ ಇತರರ ಲೋಪಗಳು ತಿಳಿದು ಅವುಗಳನ್ನು ಲೇವಡಿ ಮಾಡುತ್ತೇವೆ, ಅವುಗಳಿಂದ ಪಾಠಕಲಿಯುವುದು ಕಡಿಮೆ. ನಮ್ಮಲ್ಲಿ ಲೋಪಗಳೇ ಇಲ್ಲವೆಂಬ 'ಭ್ರಮೆ' ಆವರಿಸುತ್ತದೆ. 'ಅಹಂ' ಪುಟಿದೇಳುತ್ತದೆ. ನಮ್ಮ ಬಗೆಗಿನ ಸಾಮಾಜಿಕ ಪ್ರತಿಕ್ರಿಯೆಯ ಸ್ವರೂಪವೇ ನಮ್ಮ ಲೋಪಗಳನ್ನರಿಯಲು ಸಹಾಯಮಾಡುತ್ತದೆ. ಜನ ನಮ್ಮೆದುರು ಏನು ನುಡಿಯುತ್ತಾರೆ ಅಥವಾ ಹೇಗೆ ಪ್ರತಿಕ್ರಿಯಿಸುತ್ತಾರೆನ್ನುವದು ಪ್ರಾಮಾಣಿಕ ಅಭಿಪ್ರಾಯ ಅಥವಾ ಪ್ರತಿಕ್ರಿಯೆ ಆಗಿರಲೇಬೇಕಿಲ್ಲ. ಸಾಮಾಜಿಕ ಶಿಷ್ಟಾಚಾರ ಅವರಿಗೆ ಅಡ್ಡವಾಗಬಹುದು. ಆದರೆ ನಮ್ಮ ತಪ್ಪುಗಳನ್ನು ನಿಮ್ಮೆದುರೇ ಪಟ್ಟಿಮಾಡಬಲ್ಲ'ನಿಜವಾದ' ಸ್ನೇಹಿತರು ನಿಮ್ಮೊಡವಿದ್ದರೆ ನೀವು ಪುಣ್ಯವಂತರು! ನಮ್ಮ ವ್ಯಕ್ತಿತ್ವದಲ್ಲಿಯ ಧನಾತ್ಮಕ ಅಂಶಗಳೊಡನೆ ಋಣಾತ್ಮಕ ಅಂಶಗಳನ್ನು ಗುರುತಿಸಿಕೊಳ್ಳಲು ನಮಗೆ ಇತರರ ಸಹಾಯ ಸಿಗುವಂತಿದ್ದರೆ ನಮ್ಮ ವ್ಯಕ್ತಿತ್ವ ವಿಕಾಸವಾಗುವದರಲ್ಲಿ ಸಂಶಯವೇ ಇಲ್ಲ.

ಮೇಲಿನ ಐದೂ ಅಂಶಗಳನ್ನು ವ್ಯಕ್ತಿತ್ವ ಮಾಪನಗಳಲ್ಲಿ ಪರಿಗಣಿಸಿಬೇಕೆಂದಾಯಿತು. ವ್ಯಕ್ತಿತ್ವ ಮಾಪನವನ್ನೂ ಅಂಕಿಗಳ ಮೂಲಕವೂ ಮಾಡಬಹುದಾಗಿದ್ದು ಆಗ ಅದು ವ್ಯಕ್ತಿತ್ವ ಮೌಲ್ಯೀಕರಣವೆಂದೆನಿಸುತ್ತದೆ.

ಮೌಲ್ಯೀಕರಣ ತಪಶೀಲಿನಲ್ಲಿ ವ್ಯಕ್ತಿತ್ವದ ನಾಲ್ಕು ಮುಖ್ಯ ಭಾಗಗಳಿದ್ದು ಒಂದೊಂದಕ್ಕು ಒಟ್ಟು ಇಪ್ಪತ್ತು ಗುಣಗಳಿವೆ. ಒಟ್ಟು ೮೦ ಗುಣಗಳು. ಪ್ರತಿ ಮುಖ್ಯಭಾಗದಲ್ಲೂ ಒಟ್ಟು ಐದೈದು ಅಂಕಗಳ ನಾಲ್ಕು ಉಪವಿಭಾಗಗಳಿವೆ (೫x೪ =೨೦). ಪ್ರತಿ ಉಪವಿಭಾಗಕ್ಕೆ ಮೀಸಲಾಗಿರುವ ಗರಿಷ್ಠ ಗುಣಗಳಲ್ಲಿ ಅತಿ ನಿಕೃಷ್ಠ ದರ್ಜೆಗೆ ೧, ನಿಕೃಷ್ಠಕ್ಕೆ ೨, ಸಾಮಾನ್ಯಕ್ಕೆ ೩, ಉತ್ತಮಕ್ಕೆ ೪, ಹಾಗು ಅತ್ಯುತ್ತಮಕ್ಕೆ ೫ ರಂತೆ ನೀಡಲಾಗುತ್ತದೆ. ವ್ಯಕ್ತಿತ್ವ ಮೌಲ್ಯಾಂಕಣದ ನಾಲ್ಕು ಮುಖ್ಯ ಭಾಗಗಳು: ದೈಹಿಕ (೨೦), ಮಾನಸಿಕ (೨೦), ಭಾವನಾತ್ಮಕ(೨೦) ಹಾಗು ಸಾಮಾಜಿಕ (೨೦).

ದೈಹಿಕ ಭಾಗದಲ್ಲಿ, ದೇಹ-ಮುಖ-ಶೀವಿ-ಪೋಷಾಕುಗಳ ಮಾನಸಿಕ ಭಾಗದಲ್ಲಿ, ಶಿಕ್ಷಣ,-ಜಾಗ್ರತೆ, ವ್ಯಾಪ್ತಿ- ಆಕ್ರಮಣ -ಶೀಲತೆಗಳ


ಭಾವನಾತ್ಮಕ ಭಾಗದಲ್ಲಿ, ಸಮರ್ಪಕತೆ-ಗುಣ-ಸ್ಥಿರತೆ-ಅಭಿವ್ಯಕ್ತಿಗಳ ಹಾಗೂ ಸಾಮಾಜಿಕ ಭಾಗದಲ್ಲಿ, ಪರಪ್ರೀತಿ-ಸಾಮರಸ್ಯ-ಸಮಯೋಗಪಾಯ- ಔದಾರ್ಯಗಳ ಮೌಲ್ಯೀಕರಣ ಮಾಡಲಾಗುತ್ತೆ. ನಾಲ್ಕು ಭಾಗಗಳ ಮೌಲ್ಯೀಕರಣದ ನಂತರ ಸರಾಸರಿ ಕಂಡುಹಿಡಿದು ವ್ಯಕ್ತಿತ್ವದ ಅಖೈರು ಮೌಲ್ಯೀಕರಣವನ್ನು ಸಿದ್ಧಗೊಳಿಸಲಾಗುತ್ತದೆ.

ವ್ಯಕ್ತಿತ್ವ ಮೌಲ್ಯಾಂಕಣದ ಮುಖ್ಯ ಉದ್ದೇಶ, ವ್ಯಕ್ತಿತ್ವ ಸುಧಾರಣೆಗೆ ಅವಕಾಶ ಕಲ್ಪಿಸುವುದು. ಹಾಗಾದರೆ ವ್ಯಕ್ತಿತ್ವದ ಎಲ್ಲ ಘಟಕಗಳು ದೇವರ ದೇಣಿಗೆ ಮತ್ತು ಬದಲಿಸಲಾರದಂಥವು ಎಂಬ ಕಲ್ಪನೆಯಲ್ಲಿ ಪೂರ್ಣ ಹುರುಳಿಲ್ಲವೆಂದಾಯಿತು. ಇದು ಶತಮಾನಗಳಿಂದ ನಡೆಯುತ್ತಿರುವ ವಸ್ತುನಿಷ್ಠ ವೈಚಾರಿಕತೆಯ ಫಲ. ದೈಹಿಕ, ಮಾನಸಿಕ, ಭಾವನಾತ್ಮಕ ಹಾಗೂ ಸಾಮಾಜಿಕ ಸ್ತಾರಗಳಲ್ಲಿ ವ್ಯಕ್ತಿಗಳಲ್ಲಿ ಕಂಡುಬರುವ ಲೋಪದೋಷಗಳನ್ನು ಮೌಲ್ಯಾಂಕಣದಲ್ಲಿ ಕಂಡುಕೊಂಡು ಅವುಗಳ ನಿವಾರಣೆಗೆ ಹೆಜ್ಜೆಯಿರಿಸುವದೇ ವ್ಯಕ್ತಿತ್ವ ಸುಧಾರಣೆ.

ವ್ಯಕ್ತಿತ್ವದಲ್ಲಿ ನಾಲ್ಕು ಬಗೆಯ ಲಕ್ಷಣಗಳು ಮಿಳಿತಗೊಂಡಿರುವದನ್ನು ತಿಳಿದಿದ್ದೇವೆ. ಇವುಗಳಲ್ಲಿ ಮೊದಲನೆಯದು ದೈಹಿಕ ಲಕ್ಷಣ. ನಮ್ಮ ಎತ್ತರ, ಆಕಾರ ಮುಂತಾದವುಗಳನ್ನು ನಮ್ಮ ಆಕಾಂಕ್ಷೆಗಳಿಗನುಸಾರ ಬದಲಾಯಿಸಲು ಸಾಧ್ಯವಿಲ್ಲದ್ದರಿಂದ ಅವುಗಳಿಗೆ ಹೊಂದುವ ಗುರಿಗಳ ನ್ನಿರಿಸಿಕೊಳ್ಳುವ ಮೂಲಕ ಅನಿವಾರ್ಯ ನಿರಾಸೆಯನ್ನು ಕಡಿಮೆಗೊಳಿಸಲು ಪ್ರಯತ್ನಿಸುವದೊಳಿತು. ಆದರೆ ಆರೋಗ್ಯ ಮಟ್ಟ, ಶರೀರದ ಮೇಲಿನ ನಿಯಂತ್ರಣ ಮುಂತಾದವುಗಳನ್ನು ಅಭ್ಯಾಸ ಬದಲಾವಣೆಯ ಮೂಲಕ ಮಾರ್ಪಡಿಸಿಕೊಳ್ಳಬಹುದು. ಬೆರಳಚ್ಚುಗಾರ್ತಿಯರು, ಗಣಕ ಯಂತ್ರ ಚಾಲಕರು ಕಾರ್ಯಾಲಯ ಸಹಾಯಕರು, ದೈಹಿಕ ಪರಿಶ್ರಮಿಗಳು ತಮ್ಮ ಒಂದೇ ಬಗೆಯ ಕುಳಿತುಕೊಳ್ಳುವ/ದೈಹಿಕ ಭಂಗಿಯ ಘಾತಕ ಪರಿಣಾಮಗಳನ್ನು ದುರ್ಬಲಗೊಳಿಸುವ ದೈಹಿಕ ಪ್ರತಿಕ್ರಮಗಳನ್ನು ಕೈಕೊಳ್ಳಲೇಬೇಕು; ಸರಿಯಾದ ವಿಶ್ರಾಂತಿ ಶೈಲಿಗಳನ್ನು ಅವರು ಅಳವಡಿಸಿಕೊಳ್ಳಲೇಬೇಕು. ಮುಖದ ಉಬ್ಬು-ತಗ್ಗುಗಳ ಅಥವ ಮುಖ ಚರ್ಮದ ಬಣ್ಣ ಮಾತ್ರವೇ ಮುಖವನ್ನೂ ಆಕರ್ಷಕವನ್ನಾಗಿಸುತ್ತಿದ್ದರೆ ಬಹಳಷ್ಟು ಜನ ಅನಾಕರ್ಷಕರಾಗಿರುತ್ತಿದ್ದರು. ಏಕೆಂದರೆ ಸುಲಭವಾಗಿ ಇವುಗಳನ್ನು ಸರಿಪಡಿಸುವದು ಸಾಧ್ಯ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಮುಖದಲ್ಲಿ ಕಂಗೊಳಿಸುವ ಸುಸಂಸ್ಕೃತ, ಮೃದು ಭಾವನೆಗಳು ಅದರ ನಿಜವಾದ ಆಕರ್ಷಣೆ, ಅಭ್ಯಾಸ ಬಲದಿಂದ ನಿಮ್ಮ ದುಃಖವನ್ನು ನೀವು ಆಕರ್ಷಕಗೊಳಿಸುವದು ಸಾಧ್ಯ. ನಿಮ್ಮ ದೈಹಿಕ ಶಕ್ತಿ ಸಮಾಜಕ್ಕೆ ಅನುಕೂಲಕರ ಸೊತ್ತಾಗಬೇಕು. ಹಾಗಾಗ ಬೇಕಾದರೆ ಅಂಥ ಸದೃಢಬೇಕು. ಇದನ್ನೇ 'ರಮ್ಯಭಂಗಿ' ಎನ್ನುವದು. ಈ ಗುಣಗಳನ್ನು ಪ್ರಯತ್ನ ಬಟ್ಟೆಗಳೂ ಸಹ ತಮ್ಮದೇ ಆದ ಅಳಿಲು ಕೊಡುಗೆಯನ್ನು ವ್ಯಕ್ತಿತ್ವ ಸುಧಾರಣೆಗೆ ನೀಡುತ್ತವೆ. ಹಣದ ಅಭಾವದಿಂದಾಗಿ ನಿಮಗೆ ಹೊಸ ಬೆಲೆಯುಳ್ಳ ಬಟ್ಟೆಗಳನ್ನು ಕೊಳ್ಳಲು-ಆಗುತ್ತಿರಲಿಕ್ಕಿಲ್ಲ; ಬಟ್ಟೆಗಳನ್ನು ಆಧುನಿಕ ಶೈಲಿಗೆ ಪರಿವರ್ತಿಸಲೂ ಆಗದಿರಬಹುದು. ಆದರೆ ಈ ವಿಷಯ ಅಷ್ಟು ಮಹತ್ವದ್ದಲ್ಲ. ಇದ್ದ ಬಟ್ಟೆಗಳನ್ನೇ ಸ್ವಚ್ಛವಾಗಿ, ಅಚ್ಚು ಕಟ್ಟಾಗಿ, ಗರಿಗರಿಯಾಗಿಟ್ಟುಕೊಳ್ಳುವದು ನಿಮಗೆ ಸಾಧ್ಯವಾದೀತಲ್ಲವೇ?

●

ಬ್ಲ್ಯಾಕ್ ಬೆಲ್ಟ್ ಪಡೆದ ಬಾಲಕ ರಘು



ಕರಾಟೆ, ಜುಡೋ ಶೈಲಿಯ ವೈವಿಧ್ಯಮಯ ವಿದ್ಯೆ ಟೇಕೊಂಡೊ. ಇದರಲ್ಲಿ ಕಿಕ್ಸ್ ಹಾಗೂ ಪಂಚ್‌ಗಳು ವಿಭಿನ್ನವಾಗಿರುತ್ತವೆ. ಈ ವಿದ್ಯಾಭ್ಯಾಸದಲ್ಲಿ ಶ್ರಮವಹಿಸಿ, ತನ್ನ ಹದಿನಾಲ್ಕನೇ ವಯಸ್ಸಿಗೆ ಬ್ಲ್ಯಾಕ್ ಬೆಲ್ಟ್ ಪಡೆದ ಬಾಲಕ ಕೆ. ರಘು.

ಯಲಹಂಕದ ಕೇಂದ್ರೀಯ ವಿದ್ಯಾಲಯದಲ್ಲಿ ಒಂಭತ್ತನೇ ತರಗತಿಯಲ್ಲಿ ಓದುತ್ತಿರುವ ಕೆ. ರಘು ಸದಾ ಕ್ರೀಡೆಗಳಲ್ಲಿ ಭಾಗವಹಿಸುವುದನ್ನು ಹವ್ಯಾಸವಾಗಿರಿಸಿಕೊಂಡಿರುವ ಬಾಲಕ. ಓದಿನ ಜೊತೆಯಲ್ಲೇ ಟೇಕೊಂಡೋ ಅಭ್ಯಾಸವನ್ನು ಇಲ್ಲಿನ ಡಬ್ಲ್ಯು ಅಂಡ್ ಎ.ಪಿ. ಕೇಂದ್ರದ ಕರ್ನಾಟಕ ಟೇಕೊಂಡೊ ಅಸೋಸಿಯೇಷನ್(ರಿ) ಸಂಸ್ಥೆಯಲ್ಲಿ ಮಾಡುತ್ತಿದ್ದಾನೆ.

ರಘು ಈಗಾಗಲೇ ವೈಟ್, ಗ್ರೀನ್ ಬ್ಲೂ-ಬೆಲ್ಟ್‌ಗಳನ್ನು ಪಡೆದಿರುವುದಲ್ಲದೆ ಇತ್ತೀಚೆಗೆ 'ಬ್ಲಾಕ್ ಬೆಲ್ಟ್'ನ್ನೂ ಪಡೆಯುವುದರೊಂದಿಗೆ ಉತ್ತಮ ಪ್ರತಿಭೆಯನ್ನು ತೋರಿದ್ದಾನೆ.

೧೯೯೩ರಲ್ಲಿ ಟೇಕೊಂಡೊ ಅಭ್ಯಾಸವನ್ನು ರೂಢಿಸಿಕೊಂಡ ರಘು ಒಂದೊಂದೇ ಮೆಟ್ಟಿಲೇರುತ್ತಾ ನಿರಾಯಾಸವಾಗಿ ಬ್ಲ್ಯಾಕ್ ಬೆಲ್ಟ್‌ನ್ನು ಪಡೆದಿದ್ದಲ್ಲದೆ ಅನೇಕ ಪ್ರಶಸ್ತಿ ಹಾಗೂ ಬಹುಮಾನಗಳನ್ನು ಪಡೆದಿರುತ್ತಾನೆ.

೧೯೯೫ರಲ್ಲಿ ಚಿತ್ರದುರ್ಗದಲ್ಲಿ ನಡೆದ ೧೪ನೇ ರಾಜ್ಯಮಟ್ಟದ ಟೇಕೊಂಡೋ ಚಾಂಪಿಯನ್‌ಷಿಪ್‌ನಲ್ಲಿ ಗೋಲ್ಡ್‌ಮೆಡಲ್, ೧೯೯೬ರಲ್ಲಿ ಬೆಂಗಳೂರಿನಲ್ಲಿ ನಡೆದ ೧೫ನೇ ರಾಜ್ಯಮಟ್ಟದ ಟೇಕೊಂಡೊ ಚಾಂಪಿಯನ್‌ಷಿಪ್‌ನಲ್ಲಿ ಗೋಲ್ಡ್‌ಮೆಡಲ್, ೧೯೯೭ರಲ್ಲಿ ನಡೆದ ೧೬ನೇ ರಾಜ್ಯಮಟ್ಟದ ಟೇಕೊಂಡೋ ಚಾಂಪಿಯನ್‌ಷಿಪ್‌ನಲ್ಲಿ ಗೋಲ್ಡ್ ಮೆಡಲ್‌ಗಳನ್ನು ಪಡೆದಿರುವ ರಘು, ಈಗ ನವೆಂಬರ್‌ನಲ್ಲಿ ನಡೆಯಲಿರುವ ಕರ್ನಾಟಕದ ಮಿನಿಒಲಿಂಪಿಕ್ಸ್‌ಗೆ ಆಯ್ಕೆಯಾಗಿರುತ್ತಾನೆ.

ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾದಿಂದ ಸ್ಕಾಲರ್‌ಷಿಪ್ ಪಡೆಯುತ್ತಿರುವ ರಘು, ೧೯೯೬ರಲ್ಲಿ ಲೂದಿಯಾನಾದಲ್ಲಿ ನಡೆದ ೧೬ನೇ ರಾಷ್ಟ್ರಮಟ್ಟದ ಟೇಕೊಂಡೊ ಚಾಂಪಿಯನ್‌ಷಿಪ್‌ನಲ್ಲಿಯೂ ಭಾಗವಹಿಸಿದ್ದು, ತನ್ನ ಭವಿಷ್ಯ ಜೀವನದಲ್ಲಿ ಅತ್ಯುನ್ನತ ಶ್ರೇಣಿ ಪಡೆಯುವ ಗುರಿ ಹೊಂದಿರುವುದಲ್ಲದೆ, ತನ್ನ ಶ್ರೇಯಸ್ಸಿಗೆ ತಂದೆ-ತಾಯಿಯ ಸತತ ಪ್ರೋತ್ಸಾಹ ಹಾಗೂ ತರಬೇತಿ ನೀಡಿದ ರಾಮು ಅವರೇ ಕಾರಣ ಎಂದು ತಿಳಿಸುತ್ತಾನೆ.

ಇವರ ತಂದೆ ಕೃಷ್ಣಪ್ಪ ವೀಲ್ ಅಂಡ್ ಆ್ಯಕ್ಸಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೆ, ತಾಯಿ ಕೆ.ಇ.ಬಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕ್ರೀಡೆ ಬಗ್ಗೆ ತಿಳಿಯಿರಿ

೧. ವಿಂಬುಲ್ಡನ್ ಟೆನ್ನಿಸ್ ಸ್ಪರ್ಧೆಗಳಲ್ಲಿ ಜ್ಯೂನಿಯರ್ ಪ್ರಶಸ್ತಿ ಗಳಿಸಿದ ಮೊದಲ ಭಾರತೀಯ ಆಟಗಾರನಾರು?

೨. ಸ್ಟೇಡಿಯಾ ಎಂಬ ಶಬ್ದ ಬಳಕೆಗೆ ಬಂದದ್ದು ಹೇಗೆ?

೩. ಷಟಲ್ ಬ್ಯಾಡ್ಮಿಂಟನ್‌ನಲ್ಲಿ ಉಪಯೋಗಿಸಿರುವ ಕಾಕ್‌ನಲ್ಲಿ ಎಷ್ಟು ಪುಕ್ಕಗಳಿರುತ್ತವೆ?

೪. ಜಗತ್ತಿನ ಅತ್ಯಂತ ಪ್ರಾಚೀನ ಎನ್ನಿಸಿರುವ ಆಟ ಯಾವುದು?

೫. 'ಗಾಲ್ಫ್'ನ ತವರು ಎನ್ನಿಸಿಕೊಂಡಿರುವ ರಾಷ್ಟ್ರ ಯಾವುದು?

೬. ಸ್ಕೇಟಿಂಗ್‌ನಲ್ಲಿ ಪರಿಣತನಾಗಿದ್ದ ಖ್ಯಾತ ಇಂಗ್ಲಿಷ್ ಕವಿ ಯಾರು?

೭. ಪ್ರಪಂಚದಲ್ಲಿ ಯಾವ ಕ್ರೀಡೆ ಕುರಿತು ಅತಿ ಹೆಚ್ಚು ಪುಸ್ತಕಗಳು ಪ್ರಕಟವಾಗಿವೆ?

೮. ಈಜಿನಲ್ಲಿ 'ಬ್ಯಾಕ್‌ಸ್ಟ್ರೋಕ್' ಕಂಡು ಹಿಡಿದ ದೇಶ ಯಾವುದು?

೯. ಇಂಗ್ಲೆಂಡಿನ ಪ್ರಥಮ ಸೈಕಲ್ ಕ್ಲಬ್‌ನ ಹೆಸರೇನು?

೧೦. ವಿಂಬುಲ್ಡನ್ ಪಂದ್ಯಾವಳಿ ಪ್ರಥಮವಾಗಿ ಟೆಲಿವಿಷನ್‌ನಲ್ಲಿ ಮೂಕೀಯವಾಗಿ ಬಂದದ್ದು ಯಾವ ವರ್ಷದಲ್ಲಿ?

೧೨. ಕ್ರಿಕೆಟ್ ಟೆಸ್ಟ್ ಪಂದ್ಯವೊಂದರ ಎರಡೂ ಇನ್ನಿಂಗ್ಸ್‌ನಲ್ಲೂ ಶತಕ ಬಾರಿಸಿದ ಮೊದಲ ಭಾರತೀಯ ಆಟಗಾರನಾರು?

೧೩. ೨೩ನೇ ಪೋಪ್ ಜಾನ್ ಅವರು ಯಾವ ಒಲಿಂಪಿಕ್ಸ್ ಕೂಟ ಉದ್ಘಾಟಿಸಿದರು?

೧೪. ೧೯೭೪ ಹಾಗೂ ೧೯೮೧ ರಲ್ಲಿ ವಿಶ್ವ ಅಮೇಚೂರ್ ಬಾಕ್ಸಿಂಗ್ ಚಾಂಪಿಯನ್ ಷಿಪ್ ಪ್ರಶಸ್ತಿ ಗಳಿಸಿದ ದೇಶ ಯಾವುದು?

೧೫. ಹಾರ್ಮ್ಸ್‌ವರ್ತ್ ಟ್ರೋಫಿ ಯಾವ ಕ್ರೀಡೆಗೆ ಸಂಬಂಧಿಸಿದೆ?

೧೬. ಭಾರತದ ಪರ ಪ್ರಥಮ ಟೆಸ್ಟ್ ಶತಕ ಗಳಿಸಿದವರು ಯಾರು?

೧೭. ಈ ಶತಮಾನದ ಆರಂಭದಲ್ಲಿ ಸರ್ವಶ್ರೇಷ್ಠ ಅಥ್ಲೇಟ್ ಎನ್ನಿಸಿದ ಕ್ರೀಡಾಳು ಯಾರು?

೧೮. 'ಕ್ವೀನ್ ಬಿ' ಎಂದು ಕರೆಯಲ್ಪಡುತ್ತಿದ್ದ ಕ್ರೀಡಾಪಟು ಯಾರು?

೧೯. ಟೆಸ್ಟ್ ಪಂದ್ಯಗಳಲ್ಲಿ ಜ್ಯೂನಿಯರ್ ಪಟಾಡಿ ಅವರು ಗಳಿಸಿದ ಶತಕಗಳೆಷ್ಟು?

೨೦. ಕ್ರಿಕೆಟಿಗ ಸುನೀಲ್ ಗವಾಸ್ಕರ್ ನಟಿಸಿರುವ ಮರಾಠಿ ಚಲನಚಿತ್ರದ ಹೆಸರೇನು?

೨೧. ಡಾ. ಜೇಮ್ಸ್ ನಾಯ್ಸ್‌ಸ್ಮಿತ್ ಕಂಡು ಹಿಡಿದ ಕ್ರೀಡೆ ಯಾವುದು?

೨೨. ೧೯೬೮ರ ಮೆಕ್ಸಿಕೋ ಒಲಿಂಪಿಕ್ಸ್‌ನಲ್ಲಿ ಲಾಂಗ್‌ಜಂಪ್ ವಿಭಾಗದಲ್ಲಿ ದಾಖಲೆ ಸ್ಥಾಪಿಸಿದ ಆಟಗಾರ ಯಾರು?

೨೩. ಅಂತರ್ ರಾಷ್ಟ್ರೀಯ ಆಟೋಮೋಬೆಲ್ ಫೆಡರೇಷನ್ ಕೇಂದ್ರ ಕಚೇರಿ ಇರುವ ಯುರೋಪಿಯನ್ ನಗರ ಯಾವುದು?

೨೪. ೧೮೯೨ರಲ್ಲಿ ಉದ್ಘಾಟನೆಯಾದ ಪ್ರಪಂಚದ ಅತ್ಯಂತ ಪ್ರಸಿದ್ಧ ಡರ್ಬಿ ಯಾವುದು?

೨೫. ವಿಶ್ವ ಅಮೇಚೂರ್ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ ಎರಡು ಬಾರಿ ಗೆದ್ದ (೧೯೫೮ ರಲ್ಲಿ ಮತ್ತು ೧೯೬೪ರಲ್ಲಿ) ಭಾರತೀಯನಾರು?

೨೬. ನಾಲ್ಕು ದಶಕಗಳ ಕಾಲ ಪ್ರಪಂಚದ ಮಾಂತ್ರಿಕನಾಗಿದ್ದವರು ಯಾರು?

೨೭. ಪೋಲೋ ಆಟವನ್ನು ಟಿಬೆಟ್ ಭಾಷೆಯಲ್ಲಿ ಏನೆಂದು ಕರೆಯುತ್ತಾರೆ?

೨೮. ೧೯೮೪ರಲ್ಲಿ ವಿಶ್ವ ಅಮೇಚೂರ್ ಸ್ನೂಕರ್ ಚಾಂಪಿಯನ್ ಆಗಿದ್ದ ಸ್ನೂಕರ್ ಆಟಗಾರ ಯಾರು?


೨೯. ಜಪಾನಿನ ರಾಷ್ಟ್ರೀಯ ಕ್ರೀಡೆ ಯಾವುದು?

೩೦. 'ಟನ್‌ವಾರ್' ಎಂಬ ಕ್ರೀಡೆಯನ್ನು ಎಲ್ಲಿ ಕಂಡು ಹಿಡಿಯಲಾಯಿತು?


ಉತ್ತರಗಳು

೧. ರಾಮನಾಥನ್ ಕೃಷ್ಣನ್
೨. ಸ್ಟೇಡ್ ಎಂಬ ಓಟದ ಸ್ಪರ್ಧೆಯಿಂದ
೩. ೧೬ ಪುಕ್ಕಗಳು
೪. ಪೋಲೋ
೫. ಸ್ಕಾಟ್‌ಲ್ಯಾಂಡ್
೬. ವಿಲಿಯಂ ವರ್ಡ್ಸ್‌ವರ್ತ್
೭. ಚದುರಂಗ
೮. ಅಮೆರಿಕಾ, ೧೯೬೮ರಲ್ಲಿ
೯. ಈಜಿಪ್ಟ್
೧೦. ದ ಲೀವರ್‌ಪೂಲ್ ವೆಲೋ ಕಿಪೆಡ್ ಕ್ಲಬ್
೧೧. ೧೮೩೭ ರಲ್ಲಿ
೧೨. ವಿಜಯ್ ಹಜಾರೆ
೧೩. ರೋಂ ಒಲಿಂಪಿಕ್ಸ್ (೧೯೬೦)
೧೪. ಅಮೆರಿಕಾ
೧೫. ಪವರ್‌ಬೋಟ್ ರೇಸ್
೧೬. ಲಾಲಾ ಅಮರ್‌ನಾಥ್
೧೭. ಜಿಮ್ ತೋರ್ಪೆ
೧೮. ಬಿಲ್ಲ ಜೀನ್ ಕಿಂಗ್
೧೯. ೬ ಶತಕಗಳು
೨೦. ಸವತಿ ಪ್ರೇಮಾಚಿ
೨೧. ಬಾಸ್ಕೆಟ್ ಬಾಲ್
೨೨. ಬಾಬ್ ಬಿಮನ್
೨೩. ಪ್ಯಾರಿಸ್
೨೪. ಸ್ಕೀಯಿಂಗ್ ಡರ್ಬಿ
೨೫. ವಿಲ್ಸನ್ ಜೋನ್ಸ್
೨೬. ಬಿಲ್ಲಿ ಮೆರ್ಡೆರ್ತ್
೨೭. ಪುಲು
೨೮. ಓಮ್ ಅಗರ್‌ವಾಲ್
೨೯. ಜುಡೋ
೩೦. ಅಸ್ಸಾಮ್‌ನಲ್ಲಿ

○ **ಶಂಕರಗೌಡ ವೈ. ಪಾಟೀಲ, ಬಾದಾಮಿ**



ಪದಬಂಧ - ೬



ಪದಬಂಧ ೫ರ ಸರಿಯುತ್ತರ

ಎಡದಿಂದ ಬಲಕ್ಕೆ:

೧. ದೇವಸ್ಥಾನ, ೪. ಕಳ್ಳಗಂಟು, ೬. ಗನಾ, ೮. ಹಲ್ಲಿ, ೯. ಗಾಲಿ, ೧೦. ಕವಿತೆ, ೧೨. ಗಿಡ, ೧೫. ರಾಕೇಶ ಶರ್ಮಾ, ೧೮. ಹಾಲು, ೧೯. ಕಾನನ, ೨೧. ಭಾವ, ೨೨. ಕಣಿ, ೨೩. ಕುಜ, ೨೫. ನತದೃಷ್ಟ, ೨೬. ನವರತ್ನ,

ಮೇಲಿನಿಂದ ಕೆಳಕ್ಕೆ :

೨. ವರದಿಗಾರ, ೩. ನಗೆ, ೪. ಕಲ್ಲಿ, ೫. ಗಂಡ ಹೆಂಡತಿ, ೭. ನಾಯಕ, ೮. ಹಣತೆ, ೧೧. ವಿದೇಶಯಾನ, ೧೩. ಕುರಾನ, ೧೪. ದುರ್ಮಾರ್ಗ, ೧೬. ಮಹಾಪರ್ವತ, ೧೭. ಕಾವಲುಗಾರ, ೧೯. ಕಾಮಣಿ, ೨೦. ನಸುಕು, ೨೨. ಕಷ್ಟ, ೨೪. ಜನ.

ಎಡದಿಂದ ಬಲಕ್ಕೆ

೧. ಅಂದವಾದ ಹೂವಿನಿಂದ ದುಂಬಿ ಹೀರಿದ ಮಧುರವಾದ ರಸ .... (೪)
೪. ಮದುವೆಯಾಗಲು ಶೃಂಗಾರವಾಗಿರುವ ಸುಪುತ್ರ .... (೪)
೬. ಅವಿರತವಾಗಿ ಬೆಳಕು ನೀಡಲು ಬರುವ ಸೂರ್ಯ .... (೨)
೮. ಹಜಾರದಲ್ಲಿ ಕುಳಿತು ಪೂಜಿಸಿಕೊಂಡ ಶಿವ .... (೨)
೯. **ಚಟ್, ಚಟ್** ಎಂದು ಸಪ್ಪಳ ಮಾಡುವ ಬಾರಕೋಲು........... (೨)
೧೦. ಮುಗಿಲು ಮುಟ್ಟುವಂತೆ ಕಾಣುವ ಅಂತಸ್ತಿನ ಮನೆ................ (೩)
೧೨. ಗಮನ ಸೆಳೆಯುವಂತಹ ಕೆಲಸ ಮಾಡಿದ ಪುತ್ರ...................... (೨)
೧೫. ಮನ ನೊಂದಾಗಲೂ ಸಂತರಿಗಾದ ಅತೀ ಆನಂದ.................. (೫)
೧೮. ರಿವಾಜು ಪ್ರಕಾರ ಮಾಡಿದ ಸಹಿ........................ .... (೨)
೧೯. ಸ್ವಾಸ ಬಿಗಿಹಿಡಿದು ಬಹುಮಾನ ಗೆಲ್ಲಲು ಮಾಡಿದ ಪರಾಕ್ರಮ...... (೩)
೨೧. ಕಬ್ಬಿಣ ತೀಡುವ ಕಮ್ಮಾರ ಗಾಳಿ ತುಂಬಿದ ಚರ್ಮದ ಚೀಲ........... (೨)
೨೨. ಗರ್ವದಿಂದ ಬಂದು ಜಾರಿ ಬಿದ್ದ ಆನೆ ತಿರುಗಿದೆ.......... .... (೨)
೨೩. ಆಯುಷ್ಯದಲ್ಲಿ ಕಂಡ ಜಯ.......... .... (೨)
೨೫. ಕಡ ಕೊಡದಿದ್ದಾಗ ಬಂದ ಅತೀ ಸಿಟ್ಟು.............................. (೪)
೨೬. ಮಧುರ ಜೀವನದ ಕನಸು ಕಾಣಲು ಹಸೆಮಣೆಯ ಮೇಲೆ ಕುಳಿತ ಹೆಣ್ಣು-ಗಂಡು.......................... .... (೪)

ಮೇಲಿನಿಂದ ಕೆಳಕ್ಕೆ

೨. ಕಳೆದ ವರ್ಷ ಅಂತರಿಕ್ಷಯಾನ ಮಾಡಿದ ಭಾರತೀಯ ಪ್ರಥಮ ಮಹಿಳೆ.. (೫)
೩. ಆತುರದಿಂದ ಕೇಳಿದ ವಸ್ತುವಿನ ಬೆಲೆ.................. .... (೨)
೪. ಅಜರಾಮರವಾಗಿ ಹೆಸರು ಉಳಿಸಿಕೊಳ್ಳಲು ವರ್ಷಕ್ಕೊಂದು ನೆಟ್ಟ ವೃಕ್ಷ.. (೨)
೫. ಮದುವೆ ಮೂಹೂರ್ತಕ್ಕೆ ಸಿದ್ಧಳಾಗಿರುವ ವಧು.................. (೫)
೭. ರಾಮನ ಹೆಸರು ಜಪಿಸಲು ಸಿಕ್ಕ ವಿಶ್ರಾಂತಿಯ ಸಮಯ............. (೩)
೮. ಅಹವಾಲು ನೀಡಲು ಬಂದಿದ್ದು ರಾತ್ರಿಯಲ್ಲ- ದಿನದ ವೇಳೆ......... (೩)
೧೧. ಹಗರಣಕ್ಕೆ ಕಾರಣವಾದ ಜನರಿಂದ ವಸೂಲಾದ ಧನ ಸಂಚಯ.. (೫)
೧೩. ಮನಃಪೂರ್ವಕವಾಗಿ ಮಾಡಿದ ನಮಸ್ಕಾರ.......................... (೩)
೧೪. ವೇದಿಕೆಯ ಮೇಲೆ ಜನರನ್ನುದ್ದೇಶಿಸಿ ಮಾಡಿದ ಮಾತುಗಾರಿಕೆ..... (೩)
೧೬. ಮಡು ನೀರಿನಲ್ಲಿ ಮುಳುಗುವವರನ್ನು ಕಂಡು ಕನಿಕರ ಗೊಳ್ಳು..... (೫)
೧೭. ಆಧುನಿಕತೆಯಿಂದ ದೂರಾಗಿದ್ದ ಭೂಮಿಯ ಮೇಲಿನ ಮೂಲ ಮನುಷ್ಯ...... .... (೫)
೧೯. ಸಾಗರದಲ್ಲಿ ಈಜಲು ಹೆದರಿದ ಜಿಂಕೆ......... .... (೩)
೨೦. ಸಂಯಮದಿಂದ ಗತಿಸಿದ ವೇಳೆ........ .... (೩)
೨೨. ಜಳಕದ ನಂತರ, ತುಳಸಿ ಮಾಲೆ ಹಿಡಿದು, ಮಾಡಿದ ದೇವರ ಸ್ಮರಣೆ (೨)
೨೪. ಅಶ್ವದ ಮೇಲೆ ಮಲಗಿ ಬಂದ ಹೆಣ................ .... (೨)

○ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ಪ್ರಕೃತಿ ಉಳಿಸು ಪ್ರೀತಿ ಗಳಿಸು

ಒಂದು ದಿನ ಮುಂಜಾವು ಸಕ್ಕರೆ
ನಿದ್ದೆಯಲಿ
ಮಲಗಿದ್ದೆ ನಮ್ಮಯ ಭತ್ತದ ಗದ್ದೆಯಲಿ
ಸದ್ದೊಂದು ಕೇಳಿತು ಬದಿಯ
ಹೊಲದಿಂದ
ಕಣ್ಣುಜ್ಜಿ ನೋಡಿದೆನು
ಹೊದಿಕೆಯೊಳಗಿಂದ
ಎರಡು ಮರಗಳು ಹರಟುತಿದ್ದವು
ಹೀಗೆ:
ಮಾನವನ ಕೃತ್ಯಕ್ಕೆ ಕನ್ನಡಿಯ ಹಾಗೆ
ಪಿಸು ಪಿಸು ಪಿಸು ಪಿಸು ಮಾತುಗಳನಾಡಿ
ಗಳಗಳ ಗಳಗಳ ಅಳುತಿರಲು ನೋಡಿ
'ಈ ಮನುಜ ಬಹು ಕ್ರೂರ ಸಂಕುಚಿತ
ನೋಡು
ಹಸಿರಾಗಿ ಇರಲು ಬಿಡ ಈ ಧರೆಯ
ಪಾಡು
ನಮ್ಮ ಗೆಳೆಯರ ಕತ್ತು ಕುಯ್ದಿರುವ
ಎನಿತೋ
ಭೂಮಿ ಆಗಿದೆ ಬೋಳು ಇದು ಏನು
ಒಳಿತೋ?
ದಯೆವಿರದೆ ಪ್ರಾಣಿಗಳ ಕತ್ತನೂ
ಕೊಯ್ವ
ಮೇಲೆ ಬುದ್ಧ, ಗಾಂಧಿ, ಹೊಗಳಿಕೆಯ
ಗೈವ
ನಮ್ಮ ಹಾಗೆಯೆ ಅವೂ ಆಗುತಿವೆ ನಾಶ
ಪ್ರಕೃತಿಯೇ ಆಗಿಹುದು ಬರಿಯ
ವಿಷಕೋಶ!
ಈ ಸಮಸ್ಯೆಗೆ ಅಂತ್ಯವಿಲ್ಲವೋ ಹೇಗೆ?
ಗಿಡ-ಪ್ರಾಣಿಗಳ ಬಾಳು ವಿಷಮಿಸಿದೆ
ಹೀಗೆ!''
ಈ ಮಾತು ಕೇಳುತಲೆ ಅಳು ಎನಗೆ
ಬಂತು
ಕ್ರೂರಿ ನಾನೆಂತೆಂಬ ಅಳುಕನೂ ತಂತು!
ನನಗೆ ಎನಿಸಿದರೆ ಇಂದು ನಾವೆಲ್ಲ ಕೂಡಿ
ಅಚಲರಾಗಿಯೆ ದೃಢ ಪಣವೊಂದ
ಮಾಡಿ
ಈ ಪ್ರಕೃತಿ ಈ ಪ್ರಾಣಿ ಎಲ್ಲ ಉಳಿಸೋಣ
ಪರಿಸರವ ರಕ್ಷಿಸುತ ಪ್ರೀತಿ ಗಳಿಸೋಣ



ಪುಟಾಣಿ ಪ್ರಾಸಗಳು

ಸೊಳ್ಳೆಯ ಜಂಬ!

ಮ್ಯಾಚಿನಲ್ಲಿ ಸಚಿನ್ ಹೊಡೆದ
ರನ್ನುಗಳ ಕೊಳ್ಳೆ;
'ನಾನೇ ಹೊಡದೆ'' ಎಂದಿತವನ
ಮೇಲೆ ಕುಳಿತ ಸೊಳ್ಳೆ!

ಗುಂಡ

ಶಾಲೆಯಲ್ಲಿ ಕೊನೆಯ ಬೆಂಚಿ
ನಲ್ಲಿ ಕುಳಿತ ಗುಂಡ,
ಅದೇ ಬೆಂಚು ಮೂರು ವರ್ಷ
ಗಟ್ಟಿ ಹಿಡಿದುಕೊಂಡ!

ಸಂಬಳದ ದಿನ

ಅಪ್ಪನ ಮೂಗ ನೋಡಬೇಕು
ಸಂಬಳದ ದಿನ
ಹೂವು ಹಣ್ಣು ಬಿಟ್ಟು ನಿಂತ
ಸೌಗಂಧಿಕ ವನ!

ತುಂಟ ತಮ್ಮ

ತಂಗಿ ಬೇಕೆ, ತಮ್ಮ ಬೇಕೆ
ಎನಲು ಬಸುರಿ 'ಅಮ್ಮ
ನಾಯಿ ಮರಿ ಬೇಕು' ಎಂದ
ನನ್ನ ತುಂಟ ತಮ್ಮ!

ಏನು ಗೊತ್ತು?

ಜಹಾಂಗೀರ ಚಕ್ರವರ್ತಿ
ಬಗೆಗೆ ಏನು ಗೊತ್ತು?
ಎಂದು ಕೇಳೆ ತಮ್ಮ ನುಡಿದ
'ಅವನು ಇಹನು ಸತ್ತು!'

○ **ಗುರುರಾಜ ಬೆಣಕಲ್**

ಮಕ್ಕಳೇ

ಅಂತೂ ರಜಾ ದಿನಗಳನ್ನು ಮಜವಾಗಿ ಕಳೆದು ಮತ್ತೆ ಶಾಲೆಗೆ ಹೋಗಲು ಪ್ರಾರಂಭಿಸಿದ್ದೀರಿ. ರಜೆಯನ್ನು ತಾವು ಹೇಗೆ ಕಳೆದೆವೆಂದು ಬಹಳಷ್ಟು ಮಕ್ಕಳು ಬರೆದಿದ್ದಾರೆ. ಅವುಗಳನ್ನಿಲ್ಲಿ ಪ್ರಕಟಿಸುತ್ತಿದ್ದೇವೆ.

ಹಾಗೆಯೇ ಈ ತಿಂಗಳು ನಿಮಗೆ ನೀಡುತ್ತಿರುವ ವಿಷಯ : ನನ್ನ ಶಾಲೆ. ಈ ವರ್ಷ ನೀವು ಓದುತ್ತಿರುವ ಶಾಲೆ ಹೇಗಿದೆ? ಅಲ್ಲಿಯ ಶಿಕ್ಷಕರು ಹೇಗಿದ್ದಾರೆ? ಶಾಲಾ ಕಟ್ಟಡ, ಗ್ರಂಥಾಲಯ, ಆಟದ ಉಪಕರಣಗಳು, ಪ್ರಯೋಗಾಲಯ ಹೇಗಿವೆ? ಈ ಬಗ್ಗೆ ಪುಟ್ಟದಾಗಿ ಬರೆದು ಕಳಿಸಿ. ಚಿಕ್ಕದಾಗಿ ಚೆನ್ನಾಗಿ ಬರೆದ ಬರಹಗಳು ಮುಂದಿನ 'ಬದುಕು' ಸಂಚಿಕೆಯಲ್ಲಿ ನಿಮ್ಮ ಹೆಸರಿನೊಂದಿಗೆ ಪ್ರಕಟವಾಗುತ್ತವೆ. ೧೫ ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಮಾತ್ರ ಇದರಲ್ಲಿ ಭಾಗವಹಿಸಲು ಅವಕಾಶವಿದೆ. ನಿಮ್ಮ ಬರಹ ನಮಗೆ ತಲುಪಲು ಕೊನೆಯ ದಿನಾಂಕ: ೧೬.೧೯೯೮.

ವಿಳಾಸ :

ಸಂಪಾದಕರು ,ಬಿಸಿಲ ಬದುಕು, ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ: ೭೯೫೧,
ಬಸವೇಶ್ವರನಗರ, ಬೆಂಗಳೂರು : ೫೬೦ ೦೭೯.

ರಜೆಯ ಮಜ

ರಜೆಯಲ್ಲಿ ನಾನು ನಮ್ಮ ಅವ್ವನ ಮನೆ ಕೆಲಸದಲ್ಲಿ ತೊಡಗಿದೆನು. ಕಾಪಿ ಬರೆಯುವುದು, ಮಗ್ಗಿ ಓದುವುದು, ನಮ್ಮ ತಂಗಿಯರ ಜೊತೆಗೆ ಆಟ ಆಡುವುದು ಮಾಡಿದೆ. ನನ್ನ ಅಣ್ಣನ ಹತ್ತಿರ ಕೆಲವು ಪುಸ್ತಕಗಳು ಇದ್ದವು. ಅವುಗಳನ್ನು ಓದಿದೆನು. ಅದರಲ್ಲಿ ರಜೆಯನ್ನು ನಾನು ತುಂಬಾ ಸಂತೋಷದಿಂದ ಕಳೆದೆನು.

- ಎಸ್. ಚನ್ನವೀರಮ್ಮ, ಜಿ. ಕೋಡಿಹಳ್ಳಿ

ಹಂಪೆ-ಬಿಜಾಪುರ

ನಾವು ಈ ಸಲ ಏಪ್ರಿಲ್ ಹಾಗೂ ಮೇ ತಿಂಗಳ ರಜಾದಿನ ಹಂಪೆ ಹಾಗೂ ಬಿಜಾಪುರಕ್ಕೆ ಹೋಗಿ ಕಳೆದೆವು. ನಾವು ಮೊಟ್ಟಮೊದಲು ವಿರೂಪಾಕ್ಷ ದೇವಾಲಯಕ್ಕೆ ಹೋದೆವು. ಹೊಸಪೇಟೆಯಿಂದ ಹೊರಟ ಬಸ್ಸು ನೇರ ವಾಗಿ ಹಂಪೆಗೆ ವಿರೂಪಾಕ್ಷ ದೇವಾಲಯಕ್ಕೆ ಸ್ವಲ್ಪ ದೂರದಲ್ಲಿ ನಿಲ್ಲುತ್ತದೆ. ಬಸ್ಸನ್ನು ಇಳಿದು ಪಶ್ಚಿಮ ದಿಕ್ಕಿನತ್ತ ತಿರುಗಿದರೆ ಭವ್ಯಗೋಪುರ.

ಈ ಗೋಪುರ ಸುಮಾರು ೧೬೫ ಅಡಿ ಎತ್ತರವಿದ್ದು, ಹನ್ನೊಂದು ಅಂತಸ್ತುಗಳಿಂದ ಕೂಡಿವೆ. ಇದಕ್ಕೆ 'ಬಿಟ್ಟಿಪ್ಪಯ್ಯನ ಗೋಪುರ' ವೆಂದು ಕರೆಯುವುದು ರೂಢಿಯಲ್ಲಿದೆ. ಈ ಗೋಪುರ ಯಾವಾಗ ಯಾರ ಕಾಲದಲ್ಲಿ ನಿರ್ಮಾಣಗೊಂಡಿತೆಂಬುದು ನಿರ್ದಿಷ್ಟವಾಗಿ ಗೊತ್ತಿಲ್ಲ. ಆದರೆ ಈ ಗೋಪುರ ಅನೇಕಬಾರಿ ಜೀರ್ಣೋದ್ಧಾರವಾದ ಬಗ್ಗೆ ಮಾಹಿತಿಗಳು ಇವೆ. ಅಲ್ಲಿದ್ದ ನಾವು ಕಡ್ಲೆಕಾಳು ಗಣಪತಿ ಹಾಗೂ ಬಡವಿಲಿಂಗ ನೋಡಲು ಹೋದೆವು.ಅಂತೆಯೆ ನಂತರ ಬಿಜಾಪುರಕ್ಕೆ ಹೋದೆವು.

ಬಿಜಾಪುರದ ಸುಪ್ರಸಿದ್ದ ಗೋಲಗುಮ್ಮಟ್ಟವನ್ನು ನೋಡಿದೆವು.

ಎಷ್ಟೋ ಎಕರೆಗಳ ವಿಶಾಲವಾದ ಮೈದಾನದ ನಡುವೆ ಗೋಲಗುಮ್ಮಟ ರಮಣೀಯವಾಗಿ ಕಾಣುತ್ತವೆ. ಗೇಟು ದಾಟಿ ಹೋಗುತ್ತಿದ್ದಂತೆ ಎರಡು ಬದಿಗೆ ಅಚ್ಚುಕಟ್ಟಾಗಿ ಬೆಳೆಸಿದ ವಿವಿಧ ಬಗೆಯ ಗಿಡ ಹೂಬಳ್ಳಿಗಳು ಮನಸ್ಸಿಗೆ ತಂಪು ನೀಡುತ್ತವೆ. ಸುಮಾರು ದೂರ ನಡೆಯುವರಲ್ಲಿ ಪೌಳಿಯತ್ತಿರುವ ಒಂದು ಪ್ರಾಚೀನ ಕಟ್ಟಡವಿದೆ. ಅದಕ್ಕೆ ಹೊಂದಿಕೊಂಡು ಹಿಂದಿನ ಕಾಲದಲ್ಲಿ ಯುದ್ಧದಲ್ಲಿ ಬಳಸುತ್ತಿದ್ದ ಎರಡು ತೋಪುಗಳಿವೆ.ಕರ್‍ರಗೆ ಭಯಾನಕ ಭೂತಗಳಂತೆ ತೋರುತ್ತವೆ.

ಬಿಜಾಪುರದ ಇನ್ನಿತರ ಕಟ್ಟಡಗಳನ್ನು ನೋಡಿಕೊಂಡು ಮನೆಗೆ ಮರಳಿದೆವು.

- ಸರಿತಾ ಎಸ್. ಎಚ್, ಕೊಪ್ಪಳ

ಮನೆಯಲ್ಲಿಯೇ ಓದು

ನಾನು ಏಪ್ರಿಲ್ ತಿಂಗಳ ಬೇಸಿಗೆ ರಜೆಯನ್ನು ಅಲ್ಲೇ ಉಪಯುಕ್ತ ರೀತಿಯಲ್ಲಿ ಉಪಯೋಗಿಸಿಕೊಂಡೆ. ಹೇಗೆಂದರೆ, ನಾನು ಏಪ್ರಿಲ್ ತಿಂಗಳಲ್ಲಿ ಅಜ್ಜಿಯ ಊರಿಗೆ ಹೋಗಿ ಅಲ್ಲಿ ನನ್ನ ಮುಂದಿನ ತರಗತಿಯ ಅಂದರೆ ೯ನೇ ತರಗತಿಯ ಪುಸ್ತಕವನ್ನು ಓದಿದೆನು. ಹಾಗು ಕ್ರಿಕೆಟ್ ಮತ್ತಿತರ ಖುಷಿ ಕೊಡುವ ಆಟಗಳನ್ನು ಆಡಿದೆನು. ಇವೆಲ್ಲದರ ಜೊತೆಗೆ ನಾನು 'ಬಿಸಿಲ ಬದುಕು' ಮಾಸ ಪತ್ರಿಕೆಯನ್ನು ಓದಿ ನನ್ನ ಜ್ಞಾನಭಂಡಾರವನ್ನು ಹೆಚ್ಚಿಸಿಕೊಳ್ಳಲು ಮರೆಯಲಿಲ್ಲ.

-ಪ್ರವೀಣ ಕುಮಾರ(೯ನೇ ತರಗತಿ)
ಆಚಾರ ನರಸಾಪುರ

ಉಪನಯನ

ಈ ವರ್ಷದ ರಜಾದಿನಗಳಲ್ಲಿ ನನಗೆ ಸದಾ ನೆನಪಿನಲ್ಲಿ ಉಳಿಯುವ ಎರಡು ಸಂಗತಿಗಳು ನಡೆದವು.

ನಾವು ಹೊಸದಾಗಿ ಕಟ್ಟಿಸಿದ ಮನೆ 'ಪ್ರಣವಃ' ದ ನೂತನ ಗೃಹಪ್ರವೇಶ ಮತ್ತು ನನಗೆ ಬ್ರಹ್ಮೋಪದೇಶ ಮಂಗಳ ಕಾರ್ಯಗಳು ೧೫-೪-೯೮ರಂದು ನಡೆದವು.

ಉಪನಯನದ ನಂತರ ಕೆಲವೇ ದಿನಗಳು

ಊರಿಗೆ ಹೋಗಿ ಸುಬ್ರಹ್ಮಣ್ಯ ಕ್ಷೇತ್ರ, ಸೌತಡ್ಕ ಕ್ಷೇತ್ರ, ಧರ್ಮಸ್ಥಳ ಕ್ಷೇತ್ರಗಳಿಗೂ ಭೇಟಿ ನೀಡಿದ್ದೆವು. ಅಬ್ಬಾ! ಅಲ್ಲಿಯ ಸೆಕೆಯನ್ನು ಹೇಳಲು ಸಾಧ್ಯವಿಲ್ಲ.

ಏಳನೇ ತರಗತಿ ಮುಗಿಸಿ ಎಂಟನೇ ತರಗತಿಗೆ ಸೇರಲು ಮೈಸೂರಿನ ರಾಮಕೃಷ್ಣಾಶ್ರಮಕ್ಕೆ ಅರ್ಜಿಸಲ್ಲಿಸಿದ್ದೇನೆ. ಆಯ್ಕೆಯಾದರೆ ಮೈಸೂರಿನಲ್ಲಿ ವಸತಿಶಾಲೆಯಲ್ಲೇ ಓದಬೇಕು.

ಹಾಂ! ಆರು ಘಂಟೆಯಾಗುತ್ತಿದೆ. ಸ್ನಾನ ಮಾಡಿ ಸಂಧ್ಯಾವಂದನೆಗೆ ತಯಾರಾಗಬೇಕು. ಇಲ್ಲಿಗೆ ನಿಲ್ಲಿಸುತ್ತೇನೆ.

- ವಿನಯಕೃಷ್ಣ ಮಂಡ್ಯ

ಕಾಸರಗೋಡಿನಲ್ಲಿ

ಈ ಸಲದ ಬೇಸಿಗೆ ರಜದಲ್ಲಿ ನಾನು ನಮ್ಮ ಅಜ್ಜಿ ಮನೆ ಕಾಸರಗೋಡು ತಾ॥ (ಪೈವಳಿಕೆ) ಮಂಜಲ್ತೊಡಿಗೆ ಹೋಗಿದ್ದೆ. ನಮ್ಮ ಭಾವ ನನ್ನ ಉಳ್ಳಾಳ ಬೀಚ್‌ಗೆ ಕರದೊಯ್ದಿದ್ದರು. ಅಲ್ಲಿಯ ಅರಬೀಸಮುದ್ರದಲ್ಲಿ ಮಿಂದೆವು. ನೀರು ತುಂಬಾಗಡಸು ಅಲ್ಲದೆ ಉಪ್ಪು. ಸಮುದ್ಧ್ರದಲ್ಲಿ ಮೊಗವೀರರು ದೋಣಿಗಳಲ್ಲಿ ಮೀನು ಹಿಡಿಯುವ ದೃಶ್ಯ, ಕಣ್ಣಿಗೆ ರಮ್ಯ, ರಾಣಿ ಅಬ್ಬಕ್ಕೆಯು ಪೋರ್ಚುಗೀಸರನ್ನು ಓಡಿಸಿದ ಸ್ಥಳ ಅಲ್ಲೇ ಇದೆ. ದೂರದ ಹಡಗುಗಳು ತುಂಬಿದ ತೇರಿನಂತೆ ಮೇಲೆಮೇಲೆ ಬರುವುದು ಸ್ವರ್ಗವೇ ಭೂಮಿಗಿಳಿದಂತೆ ಕಾಣುತ್ತದೆ. ಉಳ್ಳಾಳದ ಮಸೀದಿ ದಕ್ಷಿಣ ಭಾರತದಲ್ಲೇ ಪ್ರಸಿದ್ದಿ. ಅನೇಕ ಪವಾಡಗಳನ್ನು ತೋರಿಸಿದ ಸ್ಥಳ. ಅಲ್ಲಿಂದ ಮಂಜೇಶ್ವರಕ್ಕೆ ಒಂಭತ್ತು ಕಿ.ಮೀ.ಇಲ್ಲಿ ರಾಷ್ಟ್ರಕವಿ ಗೋವಿಂದ ಪೈಯವರ ಸ್ಮಾರಕ. ಪುಸ್ತಕ ಭಂಡಾರ, ಅನಂತೇಶ್ವರ ದೇವಸ್ಥಾನ ಕಣ್ಣಿಗೆ ಹಬ್ಬವನ್ನೇ ಉಂಟುಮಾಡಿದೆ. ಇಲ್ಲಿ ಸಮುದ್ರದ ಕಿನಾರೆಯ ಮರಳಿನಲ್ಲಿ ಶ್ರೀರಾಮ ಎಂದು ಬರೆದರೆ ಕೂಡಲೇ ಸಮುದ್ರದ ಅಲೆ ಬಂದು ಅಳಿಸಿ ಹಾಕುತ್ತದೆ. ಗೋಡಂಬಿ ಬೆಳೆ. ಗೇರುಹಣ್ಣು ತಿಂದು ತಿಂದು ಸುಸ್ತಾದೆ.

-ಎಸ್.ರಮೇಶ್ (೮ನೇ ತರಗತಿ) ಮಂಡ್ಯ

ಭರತನಾಟ್ಯ ಕಲಿತೆ

ನಾನು ಏಪ್ರಿಲ್ ತಿಂಗಳ ಬೇಸಿಗೆ ರಜೆಯಲ್ಲಿ ' ಭರತನಾಟ್ಯ ತರಬೇತಿ ಕೇಂದ್ರಕ್ಕೆ ಸೇರಿದೆನು. ಅರಣ್ಯ ಇಲಾಖೆಗೆ ಹೋಗಿ ಸಸಿ ತಂದು ನೆಟ್ಟೆನು. ನಮ್ಮ ಹಳ್ಳಿಗೆ ಹೋಗಿ ಜನರು ಹಾಡುವ ಜಾನಪದ ಹಾಡುಗಳನ್ನು ಸುಗ್ಗಿಯ ಕಾಲದಲ್ಲಿ ಹಾಡುವ ಹಾಡುಗಳನ್ನು ಕಲಿತುಕೊಂಡೆನು. ಈಜುವುದನ್ನು ಕಲಿತೆನು. ಏಪ್ರಿಲ್ ತಿಂಗಳ 'ಬಿಸಿಲ ಬದುಕು' ಓದಿದೆನು.

- ನಂದಿನಿ. ಮ. ನಾಗನೂರ, ಹುನಗುಂದ

ಏಪ್ರಿಲ್ ತಿಂಗಳ ರಜೆ

ಏಪ್ರಿಲ್ ತಿಂಗಳ ರಜೆಯಲ್ಲಿ ನಾನು ಪ್ರವಾಸಕ್ಕೆ ಹೋಗಿದ್ದೆ. ಬೆಂಗಳೂರಿನಲ್ಲಿ ಮೇನ್ ಆಗಿ ವಿಧಾನಸೌಧ ನೋಡಿದೆ ಮತ್ತು ಮೈಸೂರಿನಲ್ಲಿ ಅರಮನೆಯನ್ನು ನೋಡಿದೆ. ನೀವು ಏಪ್ರಿಲ್ ತಿಂಗಳಿನಲ್ಲಿ 'ಬಿಸಿಲ ಬದುಕು'ನ ಕಳಸಲೇ ಇಲ್ಲಾ. ನನಗೆ ಬಹಳ ದುಃಖ ವಾಯಿತು. ರಜೆಯಲ್ಲಿ ಹೇಗೆ ವೇಳೆಯನ್ನು ಕಳೆಯುತ್ತಾರೆ. ಹೇಗೆ ವೇಳೆಯನ್ನು ಕಳೆಯಬಾರದು, ಓದಬೇಕು ಜೊತೆಯಲ್ಲಿ ಬರೆಯಬೇಕು.

-ಸರವತ್ತಜಂಹಾ. ಎಮ್, ಬಷೆ.

ಊರಿನ ಜಾತ್ರೆಗೆ

ನಾನು 6ನೇ ತರಗತಿಯಲ್ಲಿನ ಉತ್ತಮ ಫಲಿತಾಂಶದಿಂದ ಖುಷಿಯಲ್ಲಿ ತೇರ್ಗಡೆ ಹೊಂದಿದ್ದೇನೆ. ನನ್ನ ಏಪ್ರಿಲ್ ತಿಂಗಳ ರಜೆಯಲ್ಲಿ ಸ್ವಲ್ಪ ದಿನಗಳನ್ನು ಆರಾಮ ಮತ್ತು ಸುಖಮಯವಾಗಿ ಕಳೆದಿದ್ದೇನೆ. ಇನ್ನು ಉಳಿದ ದಿವಸಗಳನ್ನು 7ನೇ ತರಗತಿ ಪಬ್ಲಿಕ್ ಪರೀಕ್ಷೆಯ ನಿಮಿತ್ತ ಚನ್ನಾಗಿ ಅಭ್ಯಾಸದಲ್ಲಿ ಈಗಿಂದಲೇ ತೊಡಗಿದ್ದೇನೆ ಮತ್ತು ಇತರ ಟ್ಯುಷನ್‌ಗೆ ಹೋಗುತ್ತಿದ್ದೇನೆ. ಅಭ್ಯಾಸಕ್ಕೆ ಸಂಬಂಧ ಪಟ್ಟ ಐತಿಹಾಸಿಕ ಸ್ಥಳಕ್ಕೆ ಪಿಕನಿಕ್‌ಗೆ ಹೋಗುತ್ತೇನೆ. ಬುದ್ದಿವಂತಿಕೆಗೆ ಕ್ವಿಜ್ ಆಡುತ್ತೇನೆ. ಕೆರಮ್ ಕೂಡಾ ಆಡುತ್ತೇನೆ. ಇನ್ನು ರಜೆ ಮುಗಿಯುವ ನಾಲ್ಕು ದಿನಕ್ಕೆ ಮುಂಚಿತವಾಗಿ ನಮ್ಮ ಚಿಕ್ಕಮ್ಮನವರ ಊರಿಗೆ ಜಾತ್ರೆಗೆ ಹೋಗಿದ್ದೆನು. ಈ ರೀತಿಯಾಗಿ ನನ್ನ ರಜಾ ದಿನಗಳನ್ನು ಕಳೆದೆನು.

-ರಾಜೇಂದ್ರಪ್ರಸಾದ ಸಂಗನಾಳ, ಕೊಪ್ಪಳ

ಪತ್ರಿಕೆ ಓದಿದೆ

ನಮ್ಮೂರಿನಲ್ಲಿ ಬಹಳ ಬಿಸಿಲು ಇದ್ದುದರಿಂದ ಯಾವುದೇ ಆಟಗಳನ್ನಾಡದೆ, ದಿನಂಪ್ರತಿ ಪ್ರಜಾವಾಣಿ, ಸಂಜೆವಾಣಿ, ಸುಧಾ, ಚಂದನ, ತುಷಾರ ಮತ್ತು ಬದುಕನ್ನು ಓದುತ್ತಾ ಏಪ್ರಿಲ್ ತಿಂಗಳ ರಜೆಯನ್ನು ಕಳೆದೆನು.

- ಎಂ ವೀರೇಶ, ಹೊಸಮೋಕಾ

ಬೇಸಿಗೆ ಶಿಬಿರ

ಈ ರಜಾದಿನಗಳಲ್ಲಿ ಬೇಸಿಗೆ ಶಿಬಿರಕ್ಕೆ ಸೇರಿಕೊಂಡೆ. ಅಲ್ಲಿ ನಾನು ವಿಧವಾದ ಡ್ರಾಯಿಂಗ್ಸ್ ಪೈಟಿಂಗ್ಸ್‌ಗಳನ್ನು ಕಲಿತು ಕೊಂಡೆ. ಬೇಸಿಗೆ ಶಿಬಿರವು ದಿನಾ 10.00ರಿಂದ ಮಧ್ಯಾಹ್ನ 12.00ರವರೆಗೆ ನಡೆಯುತ್ತಿತ್ತು.

ಅಲ್ಲಿಂದ ಬಂದ ಮೇಲೆ ಊಟ ಮಾಡಿ ಟಿ.ವಿ. ನೋಡುತ್ತಾ ಕಾಲ ಕಳೆಯುತ್ತಿದ್ದೆ.

-ಎಂ ನಾಗಶ್ರೀ. ಬೆಂಗಳೂರು.

ಬೇಸಿಗೆಯಲ್ಲಿ ನಾ ಕಂಡ ತಂಪು

ನನ್ನ ಊರು ಹರಪನಹಳ್ಳಿ, ಆದರೆ ನಾನು ಈ ಸಲ ನನ್ನ ರಜಾದಿನಗಳನ್ನು ನನ್ನ ಅಜ್ಜ ಅಜ್ಜಿ ಊರಿನಲ್ಲಿ ಕಳೆದೆ. ಅದು ಕಂಪ್ಲಿ. ಅದು ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿಗೆ ಸೇರಿದೆ. ಕಂಪ್ಲಿ ಬಹಳ ತಂಪಾದ ಪ್ರದೇಶವಾಗಿದೆ. ಏಕೆಂದರೆ ಅಲ್ಲಿ ತುಂಗಭದ್ರಾ ನದಿಯ ನೀರನ್ನು ಹೊಸಪೇಟೆ ಕಾಲುವೆಗಳ ಮೂಲಕ ಹರಿಯ ಬಿಡುತ್ತಾರೆ. ಆದ್ದರಿಂದ ಇಲ್ಲಿಯ ಪ್ರದೇಶವು ಹಚ್ಚಹಸಿರಾಗುತ್ತದೆ. ಬಹಳ ತಂಪಾಗಿಯೂ ಇರುತ್ತದೆ. ಹಾಗಾಗಿ ನಾನು ನನ್ನ ಅಜ್ಜ, ಅಜ್ಜಿ ಜೊತೆ ಹೊಲ, ತೋಟಗಳನ್ನು ಸುತ್ತಾಡುತ್ತಾ, ಕುಣಿಯುತ್ತಾ, ಸಂತೋಷವಾಗಿ ನನ್ನ ರಜಾ ದಿನಗಳನ್ನುಕಳೆದೆ.

-ಕೆ. ಉಷಾರಾಣಿ, ಹರಪನಹಳ್ಳಿ,



ಕನ್ನಡ ಚಿತ್ರರಂಗದ ಅಸಲಿ ನಾಯಕಿ ಯಾರು?

○ ಎಂ. ಮೊಹ್ಮೆದ್ ಬಾಷಾ ಗೂಳ್ಯಂ

ಕನ್ನಡ ಚಿತ್ರರಂಗವು ಈಗ ಹಲವಾರು ಸಮಸ್ಯೆಗಳಲ್ಲಿ ಸಿಕ್ಕಿ ಹಾಕಿಕೊಂಡಿದೆ. ಔಟ್‌ಡೋರ್ ಕಾರ್ಮಿಕರ ಸಮಸ್ಯೆ, ನಾಯಕ ನಟರ ಸಮಸ್ಯೆ; ಪರಭಾಷಾ ನಟ/ನಟಿಯರ ಸಮಸ್ಯೆ; ಸಿನಿಮಾ ಸಬ್ಸಿಡಿಯ ಸಮಸ್ಯೆ; ಪಟ್ಟಿ ಮಾಡುತ್ತಲೇ ಹೋಗಬಹುದು. ಆದರೆ ಇವೆಲ್ಲ ಮೂಲಭೂತ ಸಮಸ್ಯೆಗಳೇ ಅಲ್ಲ. ಕನ್ನಡ ಚಿತ್ರರಂಗಕ್ಕೆ ಕಾಡುತ್ತಿರುವುದು ಮುಖ್ಯವಾಗಿ ನಾಯಕಿಯರ ಸಮಸ್ಯೆ. ಅಂದರೆ, ಬದಲಾಗುತ್ತಿರುವ ಹವಾಗುಣ ಸ್ಥಿರವಾಗಿನಿಲ್ಲದ ನಾಯಕಿಯರ ಬಣ್ಣ ಚಿಂತಿಸುವಂತೆ ಮಾಡುತ್ತಿದೆ. ಯಾರಾದರೂ ಸಿನಿಮಾ ಮಾಡಬೇಕೆಂದರೆ, 'ನಾಯಕಿ ಯಾರು?' ಎಂಬ ಪ್ರಶ್ನೆ ಬೃಹದಾಕಾರವಾಗಿ ಬೆಳೆದು, ತಲೆ ಕೆರೆದುಕೊಳ್ಳುವಂತೆ ಮಾಡಿದೆ; ಆ ಪ್ರಶ್ನೆಗೆ ಥಟ್ಟನೆ ಉತ್ತರಿಸುವುದು ಕೂಡ ಕಷ್ಟದ ಕೆಲಸ.

ಪ್ರಮುಖ ನಾಯಕ/ನಾಯಕಿಯರು ನಟಿಸಿದ್ದ ಕುರುಬನ ರಾಣಿ, ನಮ್ಮೂರ ಹುಡುಗ, ಲೇಡೀ ಟೈಗರ್, ಜೈಹಿಂದ್, ಪ್ರೇಮರಾಗ ಹಾಡು ಗೆಳತಿ, ಮುಂತಾದ ಚಿತ್ರಗಳು ನೆಲ ಕಚ್ಚಿವೆ. ಇದರಿಂದ ಜನರ ಅಭಿರುಚಿಯ ಮೇರೆಗೆ ಸಿನಿಮಾ ಮಾಡಬೇಕೋ, ನಿರ್ದೇಶಕನ ಆಶಯಕ್ಕೆ ತಕ್ಕಂತೆ ಸಿನಿಮಾ ನಿರ್ಮಿಸಬೇಕೋ ಎಂಬುದರ್ಥವಾಗದೆ, ನಿರ್ಮಾಪಕರಿಗಂತೂ ಮತಿಭ್ರಮಣೆ ಉಂಟಾಗಿದೆ.

ಹೀಗಾಗಲು ಕಾರಣಗಳೇನು? ನಾಯಕಿಯೇ ಸೋಲು, ಗೆಲುವಿಗೆ ಕಾರಣಳೇ? ಎಂದು ಪ್ರಶ್ನಿಸಿಕೊಳ್ಳುವ ಮುನ್ನ ಕೆಲವೇ ವರ್ಷಗಳ ಹಿಂದೆ, ಅಗ್ರ ನಾಯಕಿ ನಟಿಯಾಗಿದ್ದ ಮಾಲಾಶ್ರೀ ''ನನ್ನ ಜೊತೆ ನಾಯಿ ನಟಿಸಿದರೂ ಚಿತ್ರ ಹಿಟ್ ಆಗುತ್ತದೆ' ಎಂಬ ಸ್ಟೇಟ್‌ಮೆಂಟ್ ಕೊಟ್ಟಿದ್ದಳು. ಇದರಿಂದ ಆಕೆ ಅತಲ, ವಿತಲ ಪಾತಾಳಕ್ಕೆ ಕಾಲಿಟ್ಟಿದ್ದು ಈಗ ಇತಿಹಾಸ; ಆದರೆ, 'ನಾಯಕಿಯೇ ಚಿತ್ರದ ಜೀವಾಳ' ಎಂಬಂತಹ ನಿಲುವು ಮಾಲಾಶ್ರೀಯವರಿಂದ ಬಂದದ್ದು ಈಗಲೂ ಚಿಂತಿಸುವಂತೆ ಮಾಡುತ್ತಿದೆ.

ಈ ಹಿಂದಿನ ಕಾಲದಲ್ಲಿ ನಾಯಕಿಯರ ಬಗ್ಗೆ ಗೊಂದಲವೇ ಇರಲಿಲ್ಲ. ಒಂದರ್ಥದಲ್ಲಿ ನಾಯಕಿಯರ ಸಮಸ್ಯೆಯೇ ಉದ್ಭವಿಸಿರಲಿಲ್ಲ.

ಉದಾಹರಣೆಗೆ : ಎಂ.ವಿ. ರಾಜಮ್ಮ, ಪಂಡರಿಬಾಯಿಯಂಥವರ ವಿಚಾರವನ್ನ ಗಮನಿಸಿ, ನಾಟಕ ಹಾಗೂ ಸಿನಿಮಾವನ್ನು ಜೊತೆ ಜೊತೆಯಾಗಿಯೇ ತೊಡಗಿಸಿಕೊಂಡ ಈ ನಟಿಯರು, ನಾಟಕರಂಗದಲ್ಲಿಯೂ, ಸಿನಿಮಾದ ಸೆಲ್ಯುಲಾಯಿಡ್ ಮೇಲೆಯೂ ನಾಯಕಿನಟಿಯರ ರಾಗಿದ್ದರು. ಸಂದರ್ಭ ಬಂದಾಗ ಪೋಷಕ ಪಾತ್ರ ಮಾಡಿದರೂ ಕೂಡ ಸಣ್ಣ ಪಾತ್ರದಲ್ಲೂ ನಾಯಕಿಯರ ವರ್ಚಸ್ಸು ತೋರಿಸುತ್ತಿದ್ದರು.

ಇದು ನಾಯಕಿಯರ ಮೊದಲ ಹಂತ ಎನ್ನಬಹುದು.

ಎರಡನೆಯ ಪೀಳಿಗೆಯವರಾದ ಲೀಲಾವತಿ, ಭಾರತಿ, ಕಲ್ಪನ, ಮಂಜುಳ ಆರತಿ ಮುಂತಾದ ನಾಯಕಿಮಣಿಯರು ಸುಮಾರು ವರ್ಷಗಳವರೆಗೆ ಸಾಟಿ ಇಲ್ಲದ ನಾಯಕಿಯರಾಗಿಯೇ ಮೆರೆದರು.

ಗುಣ, ರೂಪ, ಬಣ್ಣ ಯೌವನದ ಜೊತೆಗೆ ಲಾವಣ್ಯಪೂರ್ಣ ನಟನೆಯಿಂದ ಪ್ರೇಕ್ಷಕ ಮಹಾಶಯನ ಮನ ಗೆದ್ದಿದ್ದರು. ನಿರ್ದೇಶಕ/ನಿರ್ಮಾಪಕರ ಹುಡುಕಾಟಕ್ಕೆ ಎಡೆಮಾಡಿಕೊಡದೆ, ನಾಯಕಿಯರೆಂದರೆ 'ನಾವೇ, ಎಂಬಂತಹ ಕ್ರೇಜ್ ಬೆಳಸಿಕೊಂಡಿದ್ದರು. ಒಂದು ವೇಳೆ ಗಾಸಿಪ್‌ಗಳು ಇದ್ದುವೇ ಹೊರತು, 'ನಾಯಕಿ ಯಾರು?' ಎಂಬಂತಹ ಸಮಸ್ಯೆಗಳಿರಲಿಲ್ಲ ಎನ್ನಬಹುದು. ಆದರೆ, ಪ್ರಥಮ ನಾಯಕಿ ಪಟ್ಟಕ್ಕೆ ಪೈಪೋಟಿ ಮಾತ್ರ ನಡೆಯುತ್ತಲೇ ಇದ್ದಿತು.

ಈ ನಟಿಯರು ಅಳುವ ಪಾತ್ರಗಳಲ್ಲಿ ತಾವೂ ಸಹಜವಾಗಿ ಅಳುತ್ತಿದ್ದರು. ಕಂಗಳಿಗೆ ಗ್ಲಿಸರಿನ್, ಅಮೃತಾಂಜನ್ ಹಚ್ಚುವ ಅಗತ್ಯವಿರಲಿಲ್ಲ. ಪೌರಾಣಿಕ ಪಾತ್ರಗಳಲ್ಲಿ ಲೀಲಾವತಿ, ಸರೋಜಾದೇವಿಯಂಥವರು ರಾಣಿಯರ ಹಾಗೇ ಇದ್ದರು. 'ಇದು ರಾಣಿಯರ ಕಾಲವೇ? ಅರಸು ಯುಗವೇ?'ಎನ್ನುವ ಭ್ರಮೆ ಮೂಡಿಸುತ್ತಿದ್ದರು.

ಭಾವ ಪ್ರಧಾನ ಪಾತ್ರಗಳಲ್ಲಿ ಭಾರತಿ, ಕಲ್ಪನ, ಆರತಿ, ಮಂಜುಳ ಮುಂತಾದವರು ಮಿಂಚಿ, ಭಾವುಕ ಪ್ರೇಕ್ಷಕ ವರ್ಗವನ್ನೇ ಸೃಷ್ಟಿಸಿ, ಸೆಲ್ಯುಲಾಯಿಡ್ ಮೇಲೂ, ಸಮಾಜದಲ್ಲೂ ಭಾವಾಭಿನಯದ ನಾಯಕಿ ನಟಿಯರೆನಿಸಿ ಕೊಂಡಿದ್ದರು.

ಹರಿಣಿ, ಅಂಬಿಕಾರಂಥ ನಟಿಯರು ನಯನಗಳ ನೀಳ ನೋಟ, ಸೆಂಟಿಮೆಂಟಲ್ ಪಾತ್ರ ಅಪೂರ್ವವಾದ ಹಾವ, ಭಾವಗಳಿಂದ ಮಾದಕ ನಟಿಯರೆನಿಸಿಕೊಂಡಿದ್ದರು.

ಹೀಗೆ ನಟನೆ ಮತ್ತು ಜೀವನ ಬೇರೆ ಎಂಬ ಭೇದ ಕಲ್ಪಿಸದೆ ಪ್ರತಿದಿನ ನಟನೆಯಲ್ಲಿರುವ ಕೌಶಲ್ಯ ಕಲಿಯುತ್ತಿದ್ದರು. ಸಹಜಾಭಿನಯ ಗಳಿಂದ ನೋಡುಗನ ನೂರಾರು ಕನಸುಗಳನ್ನು ಅರಳಿಸುತ್ತಿದ್ದರು. ಇವರೆಲ್ಲ ನಿಜವಾದ ನಾಯಕಿಯರಾಗಿದ್ದರು. ಅದೊಂದು ಪರಿಪೂರ್ಣ ಸುವರ್ಣಸಮಯ. ವೈವಿಧ್ಯಮಯ ಸಿನಿಮಾ, ವಿಭಿನ್ನ ಪಾತ್ರಗಳು ಸೃಷ್ಟಿಯಾಗುವ ಆರೋಗ್ಯಪೂರ್ಣ ವಾತಾವರಣ. ಅಪವಾದವೆಂಬಂತೆ ಆಗಲೂ ಅಲ್ಲೊಂದು ಇಲ್ಲೊಂದು ಕೆಟ್ಟ ಸಿನಿಮಾ ಬರುತ್ತಿದ್ದವು, ಈಗಲೂ ಬರುತ್ತಿವೆ. ಕಾಲಗಣತಿ, ಜನರ ಅಭಿರುಚಿಯ ಮೇರೆಗೆ ನಿರ್ದೇಶಕ/ ನಿರ್ಮಾಪಕರು ಹಾಗೆ ಮಾಡಿರಬಹುದು.

ಈಗ ಕಾಲ ಬದಲಾಗಿದೆ. ಸಿನಿಮಾ ರಂಗಕ್ಕೆ ದಿಢೀರನೆ ನಾಯಕಿಯರಾಗಿ ಬಂದು ಅಷ್ಟೇ ವೇಗದಿಂದ ನಟಿಯರು ವಾಪಸ್ ಹೋಗುತ್ತಾರೆ. ಇದೊಂಥರ ಫ್ಯಾಷನ್ ಕೂಡ. ಹಾಗಾದರೆ, ಸ್ಥಿರವಾಗಿ ನಿಂತು ನೆಲೆಯೂರದೆ, ಮರೀಚಿಕೆ ಹಾಗೆ ಮಾಯವಾಗಿ ಹೋಗುವುದರ ಕಾರಣಗಳೇನು? ನಾಯಕಿಯರು ಇಂಥ ಚಟಕ್ಕೇಕೆ ಬಲಿಯಾಗುತ್ತಾರೆ? ಪ್ರಶ್ನೆ ಪ್ರಶ್ನೆಗಳಾಗಿಯೇ ಉಳಿಯುತ್ತವೆ. ಸಿಕ್ಕರೂ ಸಮಂಜಸವಲ್ಲದ ಉತ್ತರ ಸಿಗಬಹುದು.






ಸುಧಾರಾಣಿ, ಶ್ರುತಿ, ಮುಂತಾದ ನಾಯಕಿಯರವರೆಗೆ ಹಿಂದಿನ ನಾಯಕಿನಟಿಯರ ಪರಂಪರೆ, ಮುಂದುವರೆದದ್ದು ಎಲ್ಲರಿಗೂ ತಿಳಿದ ಸಂಗತಿ. ಒಂದು ರೀತಿ ಅದೂ ಕೂಡ, ಅಲ್ಪ ಸ್ವಲ್ಪ ಗಾಸಿಪ್‌ಗಳನ್ನು ಬಿಟ್ಟರೆ ನೆಮ್ಮದಿಯ ಕಾಲವೇ ಎನ್ನಬಹುದು. ಆದರೆ ಅದೇಕೋ...! ನಿರ್ದೇಶಕನ ಕೋರಿಕೆಯ ಮೇರೆಗೋ, ನಿರ್ಮಾಪಕನ ಹಣದ ಥೈಲಿಗಾಗಿಯೋ ಪ್ರೇಕ್ಷಕನ ಮನ ತಣಿಸುವುದಕ್ಕೋ ಗೊತ್ತಿಲ್ಲ! 'ಬಿಚ್ಚಮ್ಮನವರ' ದಂಡು ಸಿನಿಮಾ ರಂಗಕ್ಕೆ ಲಗ್ಗೆ ಹಾಕಿತು. ಆಮದು ನಟಿಯರಾಗಿ ಬಂದ 'ಬಿಚ್ಚಮ್ಮ'ನವರ ಕಾರಣದಿಂದ -ಸಿನಿಮಾ ಪ್ರೇಕ್ಷಕನಿಗೂ, ಗಾಂಧೀ ಬಜಾರಿನ ಜನರಿಗೂ, ರೋಮ ರೋಮಗಳು ನಿಮಿರಿದವು. ಮೈ ಮನದೊಳಗೆ ವಿದ್ಯುತ್ ಸಂಚಾರವಾಯಿತು.

ಅವರು ಬಿಚ್ಚಿದರೆ ನಾವು ಕಡಿಮೆಯೇ ಅಂತ ನಮ್ಮ ಕನ್ನಡದ ಹುಡುಗಿಯರೂ ಸ್ಪರ್ಧೆಗೆ ಇಳಿದರು. ಚಾರುಲತ 'ಜೈದೇವ್'ನಲ್ಲಿ ಹೊಕ್ಕಳದವರೆಗೆ ಬಿಚ್ಚಿದರೆ, 'ಮೈಡಿಯರ್ ಟೈಗರ್'ನ ಪ್ರಿಯ ಮೊಳಕಾಲಿನ ಮೇಲಕ್ಕೆ ಮಿಡಿ ಉಟ್ಟಳು. ಕಂಡೂ ಕಾಣದಂತೆ ಇದ್ದ ಪೂಜಾಲೋಕೇಶ್, ಅಖಿಲಾ, ಅರ್ಚನಾ, ಅಭಿನಯ ಮುಂತಾದವರು ಸಿಟ್ಟಿಗೆದ್ದು ಅರೆಬರೆ ಬಟ್ಟೆ ತೊಟ್ಟು ಬಯಲಿಗೆ ಬರತೊಡಗಿದರು. 'ರಂಗಣ್ಣ', 'ಲೇಡೀಟೈಗರ್'ವರೆಗೂ ಬಿಚ್ಚುವ ವರಸೆ ಮುಂದುವರೆಯುತ್ತಿರುವಾಗ 'ಟೈಗರ್'ನ ಕೈಚಳಕದಿಂದಾಗಿ 'ಮೈಡಿಯರ್ ಟೈಗರ್' ಚಿತ್ರದಲ್ಲೂ ಬೆತ್ತಲ ಬಯಲು ಇನ್ನೂ ಅಗಲವಾಗುತ್ತಲೇ ಇದೆ.

ಸಾಕ್ಷಿ ಶಿವಾನಂದ್, ಲಾಲಿ, ಚೈತ್ಯಾಲಿ, ಇತ್ಯಾದಿ ನಟಿಯರು ಮರ್ಯಾದೆಯ ಸೀರೆಯನ್ನು ತೊಡೆಯವರೆಗೂ ಮೇಲೆತ್ತಿದರೆ, 'ನಮ್ಮೂರ ಹುಡುಗ, ಜೋಡಿಸಿಂಹಗಳು, ಸಿಂಹದ ಮರಿ, ಚಿತ್ರಗಳಲ್ಲಿ ನಡುವಿಗೆ ಸುತ್ತುವ ಸೀರೆಯನ್ನು ಎಲ್ಲೆಲ್ಲೊ ಬಿಗಿದು-ಕುಣಿದು ಕುಪ್ಪಳಿಸಿ ಕಣ್ಮರೆಯಾದ ನಟಿಯರ ಇತಿಹಾಸವೇ ಇದೆ.

ಇಂಥ ನಾಯಕಿ ನಟಿಯರೆಲ್ಲ 'ರಾತ್ರಿರಾಣಿ ಹೂವಿನ ಹಾಗೆ ರಾತ್ರಿಯಷ್ಟೇ ಅರಳಿ ನೆಲಕ್ಕುರುಳಿಬಿಡುತ್ತಾರೆ. ಹಾಗಾದರೆ ಇವರೆಲ್ಲರಿಗಿಂತ ಭಿನ್ನವಾಗಿ ಬಿಚ್ಚುತ್ತ ಆಗಾಗ ಜೆಸ್ಟ್ ಭಾವಾಭಿನಯ ಮಾಡುತ್ತಿರುವ ಪ್ರೇಮ, ವಿಜಯಲಕ್ಷ್ಮಿ, ನಿವೇದಿತಾ ಜೈನ್ ಇದೀಗ ಕೀರ್ತಿಯ ತುತ್ತತುದಿಯಲ್ಲಿರುವ ಚಾಂದಿನಿಯಂಥ



ವರನ್ನು 'ನಾಯಕಿ' ಎನ್ನೋಣವೆ? ಸಂಶಯವಿದೆ. ಉಪೇಂದ್ರರ ಕೃಪೆಯಿಂದ ತಾರಾಪಟ್ಟಗಿಟ್ಟಿಸಿ ಕೊಂಡಿರುವ ಚಾಂದಿನಿ ಮುಂದಿನ ಚಿತ್ರಗಳಲ್ಲಿ ಮುಗ್ಗರಿಸಬಹುದು. 'ಓಂ', 'ನಮ್ಮೂರ ಮಂದಾರ ಹೂವೇ' ಚಿತ್ರಗಳಲ್ಲಿ ಮಿಂಚಿದ ಪ್ರೇಮ ತುತ್ತಾ-ಮುತ್ತಾ, ಶಾಂತಿ ಶಾಂತಿಯಲ್ಲಿ ನೆಲಕಚ್ಚಬಹುದು ಅಥವಾ ಯಶಸ್ವಿಯಾಗ ಬಹುದು. ಹಾಗಾಗಿ ಇವರಲ್ಲಿ ನಂಬರ್‌ವನ್ ನಾಯಕಿ ಪಟ್ಟಕ್ಕೆ ಗೊಂದಲವಿದೆ.

ಬೇರೆ ಕೆಲವು ನಟಿಯರ ವಿಚಿತ್ರ ಸಮಸ್ಯೆಯನ್ನು ಅವಲೋಕಿಸಬಹುದು. ಕರ್ನಾಟಕದಲ್ಲೇ ಹುಟ್ಟಿ ಇದೇ ನಾಡಲ್ಲಿ ಬೆಳೆದು ಕಾವೇರಿ ತುಂಗೆ ಭದ್ರೆಯರ ನೀರು ಕುಡಿದ ಸೌಂದರ್ಯ, ನಿವೇದಿತಾರಂಥ ನಟಿಯರು ಮೈಸೂರ ಮಲ್ಲಿಗೆಗಳಾಗಿ ಅರಳಲೇ ಇಲ್ಲ.

ಸೌಂದರ್ಯ, ಆಂಧ್ರ, ತಮಿಳು, ಚಿತ್ರರಂಗ–ದಲ್ಲಿ ಅಗ್ರಮಾನ್ಯ ನಟಿಯಾದಳು. ಪ್ರೇಮ ಕೂಡ, ಎರಡು ಕಡೆಗೂ ಚಲಾವಣೆಯಾದಳು. ನಿವೇದಿತಾ ಜೈನ್ ನಟಿಸಿರುವ ಚಿತ್ರಗಳು ನೆಲಕಚ್ಚುತ್ತಿರು ವುದರಿಂದ ಆಕೆ ಚಿಂತಾಕ್ರಾಂತಳಾಗಿದ್ದಾಳೆ. ಇತ್ತೀಚೆಗೆ ಬಂದ ಯಾಮಿನಿ, ಸಿತಾರ, ಉಪಾಸನಾ ಸಿಂಗ್, ಅಖಿಲಾ, ಮುಂತಾದ ನಟಿಯರು ಉಳಿಯುವಿಕೆಗಾಗಿ ಹೋರಾಡುತ್ತಲೇ ಇದ್ದಾರೆ.

ಬಣ್ಣ ಬಣ್ಣದ ನಗರಿಯೊಳಗೆ ಎಂತಹ ಸಣ್ಣ ವಿಷಯಗಳೂ ಇಲ್ಲಿ ಸೀರಿಯಸ್ ಆಗುತ್ತವೆ. ದೊಡ್ಡ ವಿಷಯಗಳೆಲ್ಲ ಸೀರಿಯಸ್ ಆಗುವದಿಲ್ಲ. ಇದು ವಿಚಿತ್ರ. ಆಯೋಷಾ ಜುಲ್ಕಾ, ನಗ್ಮ, ಸಾಕ್ಷಿ ಶಿವಾನಂದ್ ಮುಂತಾದ ಬಿಚ್ಚಮ್ಮನವರು ಮತ್ತೆ ಮತ್ತೆ ನಾಯಕಿಯರಾಗುವುದಕ್ಕೆ ಹೆಣಗಿ ಯಶಸ್ಸು ಕಾಣದೆ, ಮಸಣದ ಹೂಗಳಾಗಿ ಉದುರುತ್ತಿರು ವುದು ವಿಪರ್ಯಾಸವಾಗಿದೆ.

ಅಭಿಜಾತ ಕಲಾವಿದೆ ಸರೋಜಾದೇವಿ ಯಂಥವರು ನಟಿಸಿದೆಡೆಯೆಲ್ಲೆಲ್ಲಾ ನಾಯಕಿ ಯರಾಗಿಯೇ ಮೆರೆದರು. ತಮಿಳು ಚಿತ್ರರಂಗದಲ್ಲೂ ರಾಜಕೀಯದಲ್ಲೂ ದೊಡ್ಡ ಅಲೆಯಾಗಿರುವ ಜಯಲಲಿತಳೂ ಅಷ್ಟೇ!

ಶ್ವೇತಾ, ಕಸ್ತೂರಿ, ಪಂಚಮಿ, ಚೈತ್ಯಾಲಿಯಂಥ ನಟೀಮಣಿಯರು ಇತ್ತೀಚೆಗೆ ಅರಳುತ್ತಿರುವ ಕುಸುಮಗಳಾದರೂ, ಸುಹಾಸಿನಿ, ಗೀತ, ಲಕ್ಷ್ಮಿಯರ ಹಾಗೆ ನಿರ್ಮಾಪಕ/ನಿರ್ದೇಶಕರ ಗಮನ ಸೆಳೆಯುವಂಥ ಸಾಮರ್ಥ್ಯ ಪಡೆದಿಲ್ಲ.

ಚಿತ್ರರಂಗದ ದುರಂತಗಳು ವಿಚಿತ್ರ ವಾಗಿರುತ್ತವೆ. 'ಬಿಂದಿಯಾ' ಬಂದಳು ಅಲ್ಪಸ್ವಲ್ಪ ವಿವಾದವೆಬ್ಬಿಸಿ ಪುನಃ ಬರಿಗೈಯಿಂದಲೇ ಹೊರಟಳು. ಆದರೆ, 'ತಾರಾ' ಕೊನೆಗೂ ತಾರೆಯಾಗಲೇ ಇಲ್ಲ. ವಾಣಿಶ್ರೀಯಂತೂ ತಂಗಿ ಪಾತ್ರಗಳನ್ನು ಬಿಟ್ಟು ಹೊರಬರಲೇ ಇಲ್ಲ. ಈಗಲೂ, ಉತ್ಸಾಹದಿಂದ ನಟಿಸುತ್ತಿರುವ ಈ ನಟಿಯರ ವಿಧಿ ಲಿಖಿತದಲ್ಲಿ 'ತಾರಾಪಟ್ಟ' ವಿಲ್ಲವೇನೋ?! ಈ ಹಿನ್ನೆಲೆಯಲ್ಲಿ ನಮ್ಮ ಸದ್ಯದ ನಾಯಕಿಯರಿಗೂ ಯಾಕೀ ಅವಸ್ಥೆ ಬಂತೋ!- ವಿಧಿ ಈ ರೀತಿ ಅವರ ಜೊತೆ ಸರಸವಾಡುವುದಕ್ಕೆ ಕಾರಣಗಳೇನೋ ಅರಿಯುವುದರ ಜೊತೆಗೆ ತಮ್ಮ ಮಾನಮರ್ಯಾದೆಯ ಬಗ್ಗೆಯೂ ಆತ್ಮಾವ



ಲೋಕನ ಮಾಡಿಕೊಳ್ಳಬೇಕಿದೆ. 'ಅವರು ಹಣ ಕೊಡ್ತಾರೆ. ನಾವು ನಟಿಸ್ತೀವಿ. ಮುಂದುವರೆದು ಬಿಚ್ಚೆಂದ್ರೆ ಬಿಚ್ತೀವಿ, ಕುಣಿದು ಕುಪ್ಪಳಿಸ್ತೀವಿ. ಇದಿಷ್ಟೇ ನಮ್ಮ ಕೆಲಸ. ಸೋಲುಗೆಲುವು ಡೋಂಟ್‌ಕೇರ್' ಎಂದು ಕ್ಯಾಜುವಲ್ ಆಗಿ ಹೇಳುವವರು ಇಂದು ಬೀದಿಯಲ್ಲಿ ಬಟಾಣಿ ಮಾರುವವರಿಗಿಂತ ಕಳಪೆಯಾಗಿದ್ದಾರೆ.

ನಟನೆ ಎಂದರೆ, ಬರೀ ಬಣ್ಣದ ಬದುಕಲ್ಲ, ಪ್ರೇಮ, ನಿವೇದಿತಾ ವಿನಯಪ್ರಸಾದ್‌ರಂತೆ, ಗಾಸಿಪ್‌ಗಳನ್ನು ಏಳಿಸುವುದಲ್ಲ. ನಟನೆ ಎಂಬುದು ಪೂಜಾರ್ಹ ವೇದಿಕೆ. ಇಲ್ಲಿ ಪ್ರೇಕ್ಷಕನೇ ಪೂಜಾರಿ. ನಟೀಮಣಿಗಳೆಲ್ಲ ಪೂಜಿಸಲ್ಪಡುವ ಮೂರ್ತಿ ಗಳಾಗಬೇಕು ಎನ್ನುವ ಮಾತು ಒಣ ಸ್ಟೇಟ್‌ಮೆಂಟ್ ಥರ ಅನಿಸಬಹುದು ಅಥವಾ ಅದು ಸತ್ಯವಾಗಿರಲೂ ಬಹುದು.

ಆದರೆ, ನೈಜತೆ ಮತ್ತು ಭ್ರಮೆ ನಡುವಿನ ಕಂದರ ಅರಿತರೆ, ಅತ್ತ ನಟನೆಯಲ್ಲಿ ಇತ್ತ ಸಮಾಜದಲ್ಲಿ ನಟಿಯರು ಗೌರವದಿಂದ ತುಂಬು ಜೀವನ ನಡೆಸಬಹುದು. ಇಂಥ ಫಿಲಾಸಫಿಗಿಂತ ಮುಂದುವರೆದು ನಾಯಕಿ ನಟಿಯರು ಯಾರು? ಅಂತ ಪ್ರಶ್ನಿಸಿ ಕೊಂಡರೆ, ಪ್ರಸ್ತುತಕ್ಕೆ ವಿಜಯಲಕ್ಷ್ಮಿ, ನಿವೇದಿತಾ, ಪ್ರೇಮಾ ಮುಂತಾದವರು ಕಣ್ಮುಂದೆ ಬರುತ್ತಾರೆ. ಆದರೆ, ಕಲೆಕ್ಷನ್ ದೃಷ್ಟಿಯಿಂದ ಕಮರ್ಷಿಯಲ್ ಆಗಿ ಯಶಸ್ವಿಯಾಗಿರುವ ಚಾರುಲತ ಅಗ್ರಮಾನ್ಯ ನಟಿಯೆನಿಸಿದ್ದಾಳೆ.

ಕಲಾತ್ಮಕ ಚಿತ್ರಗಳಲ್ಲಿ ನಟಿಸಿದ ಶಿಲ್ಪ, ಪ್ರೇಮ, ವಿಜಯಲಕ್ಷ್ಮಿ, ಮುಂತಾದವರು ವಿರ್ಮಶಕರ ಮನ ಗೆದ್ದಿರುವರಾದರೂ ಕಮರ್ಷಿಯಲ್ ಆಗಿ ಯಶಸ್ವಿಯಾಗಿ ಚಲಾವಣೆಯಲ್ಲಿಲ್ಲ. ಇದೆಂತಹ ವಿಪರ್ಯಾಸ?



Z ಸಿನಿಮಾ ZERO ಆದ ಕಥೆ

'Z' ಸಿನಿಮಾದ ನಿರ್ದೇಶಕ ಕಂ ನಟ ಪ್ರವೀಣ್ ನಾಯಕ್ ಕಂಠೀರವ ಸ್ಟುಡಿಯೋದಲ್ಲಿ ಉತ್ಸಾಹದಿಂದ ಮಾತನಾಡುತ್ತಿದ್ದರು. 'A' ಗಿಂತ ಡಿಫ್ರೆಂಟ್ ಆದ ಫಿಲಮ್ Z. ಇದರಲ್ಲಿ ಭಿನ್ನತೆ ಇದೆ. ವಸ್ತು ವೈವಿಧ್ಯತೆ ಇದೆ. ನಾಯಕಿಯ ದುರಂತತೆ. "A' ನಲ್ಲಿದೆ. ಅದು ಪ್ರೇಮಳ ಕತೆಯಾಗಿದೆ. ಹಾಗೇಂತ ಒತ್ತಿ ಒತ್ತಿ ಕೇಳಿದಾಗ ಆಕೆಯೇ ಹೇಳಿದ್ದಾಳೆ. ಒಂದರ್ಥದಲ್ಲಿ 'Z' ಸಿನಿಮಾ ತೆಗೆಯಲು ನಟಿ ಪ್ರೇಮಳೇ ಕಾರಣ. ಉಪೇಂದ್ರ ನನಗೆ ಗುರುವು. ಎಷ್ಟೋ ತೋಪು ಚಿತ್ರಗಳು ಬರುತ್ತವೆ. ಹೋಗುತ್ತವೆ. ಆದರೆ, ಜನರ ಮನದಲ್ಲಿ ಚಿರಸ್ಥಾಯಿಯಾಗುವಂತಹ ಚಿತ್ರವೇ 'Z'. ಹಾಗಾಗುತ್ತೇಂತ ನಂಬಿರುವೆ. ಯಶಸ್ಸು ಸಾಧಿಸುವೆನೆಂಬ ಭರವಸೆಯಲ್ಲಿರುವೆ. It's totally Different.

'A' ಚಿತ್ರದಲ್ಲಿ ಎಲ್ಲಾ Speed; ಆರ್ಭಟವಿದೆ. "Z'ನಲ್ಲಿ ಹಾಗಲ್ಲ. ಎಲ್ಲವೂ ಪ್ರಶಾಂತ. 'Z'ನ ಇನ್ನೊಂದು ವಿಶೇಷವೆಂದರೆ, ೫ಜನ ಸಂಗೀತಗಾರರಿದ್ದಾರೆ. ಕೊನೆಯದಾಗಿ 'Z' ಅಂದರೆ, ZERO ಜೆನಿತ್ ಎಂದು ಅರ್ಥೈಸಿಕೊಳ್ಳಬಹುದು.'

ಹೇಳುತ್ತಲೇ ಹೋದರು 'ಜ' ನಿರ್ದೇಶಕ ಪ್ರವೀಣ್‌ನಾಯಕ್.

ನಿದ್ದೆ ಗೆಟ್ಟಿರುವ ನಿವೇದಿತಾ ಜೈನ್

ಬೆಂಗಳೂರಿನ ಬೆಡಗಿ, ಅಚ್ಚು ಕನ್ನಡತಿ, ಹಾಲ್ದುಟಿಯಾ ಚೆಲುವೆ, ಎಂದೆಲ್ಲಾ ಹೊಗಳಿಸಿಕೊಂಡವಳು. ಈಜು ಕೊಳದ ಉಡುಪು ಧರಿಸಿ ವಯ್ಯಾರಿಯಂತೆ ನಡೆದಾಡಿದವಳು. ಈಗ ನಿದ್ದೆಗೆಟ್ಟು ಕಂಗಾಲಾಗಿದ್ದಾಳೆ. ಆಕೆ ನಟಿಸಿದ ಚಿತ್ರಗಳೆಲ್ಲ ಗೋತಾ ಹೊಡೆಯುತ್ತಿವೆ. ಪತ್ರಿಕೆಗಳೂ ಪರಿಪರಿಯಾಗಿ ಬರೆಯುತ್ತಿವೆ. ಅವರ ತಾಯಿಯ ಅಧಿಕ ಪ್ರಸಂಗವೂ, ಊಟ ವಸತಿಯ ವಿಷಯವೂ ಮಾನಭಂಗ ಮಾಡುತ್ತಿವೆ. ಒಮ್ಮೆ ಮಿಸ್ ಇಂಡಿಯಾಕ್ಕೆ ಸ್ಪರ್ಧಿಸುವೆ ಅನ್ನುತ್ತಾಳಂತೆ. ಇನ್ನೊಮ್ಮೆ ಪ್ರದೇಶ ಕಾಂಗ್ರೆಸ್‌ನ ಕಾರ್ಯದರ್ಶಿ ಅಂತ ಗಾಸಿಪ್ ಹುಟ್ಟಿಸುತ್ತಿದ್ದಾಳಂತೆ! ಇವೆಲ್ಲಕ್ಕೆ ಕಳಶಪ್ರಾಯವೆಂಬಂತೆ 'ನಿವೇದಿತಾಗೆ ಪಟೇಲ್ರು ಕಾಯ್ತಿದ್ದಾರೆ' ಎಂಬ ಪೇಜರ್ ಸುದ್ದಿ ಬೇರೆ. ಒಂದು ಕಡೆ ಗಾಂಧಿನಗರವೂ, ಮತ್ತೊಂದು ಕಡೆ ನಿರ್ಮಾಪಕ/ನಿರ್ದೇಶಕರ ಪಂಗಡವೂ ಕುತೂಹಲದಿಂದ ಕುಡಿ ನೋಟ ಬೀರುತ್ತಿರುವಾಗ

'ಹೀಗೇಕೆ ನಿವೇದಿತಾ?' ಪ್ರಶ್ನಿಸಿದರೆ,

'ನೋಡಿ, I am all right' ಬೇಕಾದಾಗ ಹೊಗಳಿ ಬರೀತಾರೆ! ಬೇಡವಾದರೆ ತೆಗಳುತ್ತಾರೆ. ಸಿನಿಮಾದಲ್ಲಿ ಇದೆಲ್ಲ ಕ್ಯಾಜುವಲ್'' ಅನ್ನುತ್ತಾಳೆ. (ಈ ಬರಹ ಅಚ್ಚಿಗೆ ಹೋಗುವ ಸಮಯದಲ್ಲಿ ಈ ನಟಿ ಮಹಡಿಯಿಂದ ಬಿದ್ದ ಸುದ್ದಿ ಬಂದಿದೆ.)

ಯು ಆರ್ ಎ ಚೀಟ್!

ಪ್ರಕಾಶ್ ರೈ ಕೆಂಡ ಮಂಡಲವಾಗಿದ್ದರು.

ಸೊಕ್ಕಿನ ಹುಡುಗ, ಗರ್ವಿಷ್ಠ; ಮುಂಗೋಪಿ ಮುಂತಾದ ಬಿರುದಾಂಕಿತನಾದ ರೈ, 'ದಳವಾಯಿ ಮುದ್ದಣ್ಣ'ನ ಬ್ರೇಕ್‌ನಿಂದ ಕಂಗಾಲಾಗಿದ್ದರು. Z ಸಿನಿಮಾ ಮುಹೂರ್ತಕ್ಕೆ ಬಂದಿದ್ದ ರೈ ಸಿನಿಮಾ ಫೋಟೋಗ್ರಾಫರ್ ಕೆ. ಎಂ. ವೀರೇಶರ ಮೇಲೆ ಕಾರ್ಮುಗಿಲಾಗಿ ಮುರಿದು ಬಿದ್ದರು.

'ಹೇಳೋ ನಮ್ಮ ಟೀಮನ್ನ ಯಾಕೆ ಒಡೆದೆ?'

'ಗ್ರೂಪ್ Photo ಯಾಕೆ ಪ್ರೆಸ್‌ಗೆ ಕೊಟ್ಟೆ?'

'ನನ್ನ ಕರ್ತವ್ಯ ನಾನು ಮಾಡಿದ್ದೇನೆ' ಎಂದರು ವೀರೇಶ.

'ಅಲ್ವೋ ಗೆಳೆಯನಾಗಿ ಬಂದು ಬೆನ್ನಿಗೆ ಚೂರಿ ಹಾಕಿದೆಯಲ್ಲೋ ನಿನ್ನ ಸ್ನೇಹಿತಾಂತ ಹೇಗೆ ಕರೆಯಲಿ. ವಿಶ್ವಾಸ ಘಾತಕ! ಯು ಆರ್ ಎ ಚೀಟ್.' ರೈ ಚೀರುತ್ತಲೇ ಸಿಗರೇಟು ಚೀಪುತ್ತಿದ್ದರು. ವೀರೇಶ್ ಸಮರ್ಥಿಸಿಕೊಳ್ಳುತ್ತಲೇ ಇದ್ದರು.

ಇವರಿಬ್ಬರ ಕದನ ಕಣದಲ್ಲಿ ಪತ್ರಕರ್ತರೂ ಹಿತೈಷಿಗಳೂ ಮೂಕ ಪ್ರೇಕ್ಷಕರಾಗಿದ್ದರು.

ಮುರಿದ ಹೃದಯ

ರವಿಚಂದ್ರನ್-ಹಂಸಲೇಖ: ಒಂದು ಹೃದಯದಲ್ಲಿ ಎರಡಾತ್ಮ ದಂತಿದ್ದರು. ಒಬ್ಬರು ಉಂಡರೆ, ಇನ್ನೊಬ್ಬರು ನೀರು ಕುಡಿಯುತ್ತಿದ್ದರು. ಒಬ್ಬರು ಎದ್ದರೆ, ಇನ್ನೊಬ್ಬರು ಮುಖ ತೊಳೆಯುತ್ತಿದ್ದರು. ಇಬ್ಬರೂ ಹತ್ತು ವರ್ಷಗಳವರೆಗೆ ಕಂಠಸ್ನಗಳಸ್ಯ!

ಆದರೆ, ಈಗ ಋತುಮಾನಗಳು ಬದಲಾಗುತ್ತಿವೆ. ಬದಲಾವಣೆಯ ಚಕ್ರ ತಿರುಗುತ್ತಲೇ ಇದೆ.

ಇಬ್ಬರಲ್ಲೂ ಈಗ ಭೇದ ಭಿನ್ನಾಭಿಪ್ರಾಯ ಉಂಟಾಗಿದೆ. ಆದ್ದರಿಂದಲೇ 'ಮಾಂಗಲ್ಯ ತಂತು ನಾನೇನ' ಚಿತ್ರಕ್ಕೆ ವಿ. ಮನೋಹರನ ಸಂಗೀತ ಬಳಸಿಕೊಳ್ಳಲಾಗಿದೆ. ಇಬ್ಬರ ದಾರಿ-ಭಾವನೆಗಳ ಪರಿ ಬೇರೆ ಬೇರೆ: ಎಷ್ಟು ವಿಚಿತ್ರ!

ಮೇಲು ನೋಟಕ್ಕೆ 'ರವಿ ಕುಟುಂಬದಲ್ಲಿ ನಾನೊಬ್ಬ ಸದಸ್ಯ' ಅಂತ ಹಂಸಲೇಖ ಹೇಳಿದರೆ,

'ನಾವಿಬ್ಬರೂ ಪ್ರಾಣ ಸ್ನೇಹಿತರು! ಅಗಲಿಕೆ ಎಂಬುದು ಸುಳ್ಳು' ಅಂತ ಇಬ್ಬರೂ ಇಷ್ಟಾನುಸಾರ ಸಮಜಾಯಿಷಿ ಹೇಳುಕೊಳ್ಳುತ್ತಿದ್ದಾರೆ. ಇಬ್ಬರ ಹೃದಯ ಮುರಿದಿದೆ.

ಮುಖಾ ಮುಖಿ...

S.N. ಪೋಲ್ಲೇಶಿ



ನಿಮ್ಮ ಕಲ್ಪನೆಯಲ್ಲಿ ಪರಮಸುಖ ಯಾವುದು ?
ದೇಶ ಏನಾದರಾಗಲಿ ನಾನು ಸದಾ ಅಧಿಕಾರದಲ್ಲಿರುವುದು
ನಿಮಗೆ ಅತ್ಯಂತ ಆತಂಕ ತರುವ ಸಂಗತಿ ?
ನಾನು ಸನ್ನ ಆಸ್ತಿ ಸಂಪಾದನೆಯ ಗುರಿಯನ್ನು ತಲುಪದೇ ಇರುವದು
ನಿಮಗೆ ನಗು ತರುವ ಸಂಗತಿ ?
ನನ್ನ ಸುಳ್ಳು ಆಶ್ವಾಸನೆಗಳನ್ನು ನಂಬಿ ಚುನಾಯಿಸಿ ಕಳುಹಿಸುವ ಮತದಾರರನ್ನು ಕಂಡಾಗ
ದೇವರಲ್ಲಿ ನಿಮ್ಮ ಪ್ರಾರ್ಥನೆ ?
ಮುಂದಿನ ಜನ್ಮಗಳಲ್ಲೂ ನನ್ನನ್ನು ಭಾರತದ ರಾಜಕಾರಣಿಯನ್ನಾಗಿ ಮಾಡು

BISILA BADUKU Kannada Monthly JUNE 1998 RNI No. 67406 / 97 Regd. BGW / 394